ಶುಕ್ರವಾರ, ಫೆಬ್ರುವರಿ 13, 2026| ₹ 7.00
prajavani.net prajavani
www.prajavani.net
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

‘ಖಾಸಗೀಕರಣ ಬೇಡ’



ವಿದ್ಯುತ್ ವಲಯದ ಖಾಸಗೀಕರಣ ವಿರೋಧಿಸಿ ಕರ್ನಾಟಕ ವಿದ್ಯುತ್ ಪ್ರಸರಣಾ ನೌಕರರ ಸಂಘದ ಪದಾಧಿಕಾರಿಗಳು ಮೈಸೂರಿನ ಸೆಸ್ಕ್ ಪ್ರಧಾನ ಕಚೇರಿ ಎದುರು ಪ್ರತಿಭಟನೆ ನಡೆಸಿದರು

ಮತದಾನದ ಸಂಭ್ರಮ



ಬಾಂಗ್ಲಾದೇಶದಲ್ಲಿ ಗುರುವಾರ ನಡೆದ ಮತದಾನದ ವೇಳೆ ಮತ ಚಲಾಯಿಸಿ ಸಂಭ್ರಮಿಸಿದ ಮಹಿಳೆಯರು

‘ಶಕ್ತಿ’: ಆಧಾರ್ ಬದಲು ಸ್ಮಾರ್ಟ್ ಕಾರ್ಡ್

ಪ್ರಯಾಣಿಸುವ ಮಹಿಳೆಯರು, ಲಿಂಗತ್ವ ಅಲ್ಪಸಂಖ್ಯಾತರಿಗೆ ಉಚಿತವಾಗಿ ವಿತರಣೆ • ಸಚಿವ ಸಂಪುಟ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸುವ ‘ಶಕ್ತಿ’ ಯೋಜನೆಯಡಿ ಸ್ಮಾರ್ಟ್ ಕಾರ್ಡ್ ವಿತರಿಸಲು ಸರ್ಕಾರ ನಿರ್ಧರಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಈ ವಿಷಯ ತಿಳಿಸಿದರು.

‘ನಾಲ್ಕು ಸಾರಿಗೆ ನಿಗಮಗಳ ಮೂಲಕ ಸ್ಮಾರ್ಟ್ ಕಾರ್ಡ್ ವಿತರಿಸಲಾಗುವುದು. ಆಧಾರ ಕಾರ್ಡ್ ಬದಲು ಈ ಕಾರ್ಡ್ ತೋರಿಸಿ ಮಹಿಳೆಯರು ಉಚಿತವಾಗಿ ಪ್ರಯಾಣ ಮಾಡಬಹುದು’ ಎಂದೂ ವಿವರಿಸಿದರು.

‘ನಿಗಮಗಳ ಪರವಾಗಿ ಶಕ್ತಿ ಸ್ಮಾರ್ಟ್ ಕಾರ್ಡ್ ಯೋಜನೆಯ ಅನುಷ್ಠಾನಕ್ಕೆ ಸ್ಪರ್ಧಾತ್ಮಕ ಬಿಡ್ಡಿಂಗ್ ಪ್ರಕ್ರಿಯೆಯ ಮೂಲಕ ಅರ್ಹ ಸಿಸ್ಟಂ ಇಂಟಿಗ್ರೇಟರ್ (ಎಸ್.ಐ) ಆಯ್ಕೆಗೆ ಟೆಂಡರ್ ಆಹ್ವಾನಿಸಲಾಗುವುದು. ಉಚಿತ ಮತ್ತು ಶುಲ್ಕ ಪಾವತಿಸುವ ಪ್ರಯಾಣಿಕರಿಗೆ ಏಕೀಕೃತ, ಸಂಪರ್ಕರಹಿತ ಮತ್ತು ಪರಸ್ಪರ ಕಾರ್ಯ ನಿರ್ವಹಿಸಬಹುದಾದ ಶುಲ್ಕ ಸಂಗ್ರಹಣ ವ್ಯವಸ್ಥೆಯನ್ನು ಸುಗಮಗೊಳಿಸಲು ಶಕ್ತಿ ಸ್ಮಾರ್ಟ್ ಕಾರ್ಡ್ ಅನುಷ್ಠಾನಕ್ಕೆ ಅನುಮೋದನೆ ನೀಡಲಾಗಿದೆ’ ಎಂದರು.

‘ಈ ಯೋಜನೆಯ ಅನುಷ್ಠಾನ, ಹಣಕಾಸು ನಿರ್ವಹಣೆ, ಆಡಳಿತ ಮತ್ತು ಸುಸ್ಥಿರತೆಗಾಗಿ ನಾಲ್ಕು ವಿಶೇಷ ಉದ್ದೇಶದ ವಾಹನ (ಎಸ್‌ಪಿವಿ) ರಚಿಸಲಾಗುವುದು. ಅಲ್ಲದೆ, ಈ ಕಾರ್ಡ್ ಮೂಲಕ ವ್ಯವಹರಿಸಲು ಪೂರಕವಾಗಿ ಎಸ್ಕ್ರೊ ಖಾತೆ ತೆರೆಯಲು ಕೂಡಾ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ. ಯೋಜನೆಯನ್ನು ಸಮನ್ವಯಗೊಳಿಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವನ್ನು ರಾಜ್ಯ ನೋಡಲ್ ಸಂಸ್ಥೆಯಾಗಿ ನೇಮಿಸಲಾಗುವುದು’ ಎಂದೂ ಅವರು ವಿವರಿಸಿದರು.

ಶಕ್ತಿ ಯೋಜನೆಯಡಿ ಇದೇ ಜನವರಿ ಅಂತ್ಯದವರೆಗೆ 660 ಕೋಟಿಗೂ ಹೆಚ್ಚು ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದಾರೆ. ನಾಲ್ಕು ಸಾರಿಗೆ ನಿಗಮಗಳ ಅಡಿ ಪ್ರತಿದಿನ ಸರಾಸರಿ 75.68 ಲಕ್ಷ ಮಹಿಳೆಯರು ಉಚಿತ ಬಸ್ ಸೇವೆ ಬಳಸುತ್ತಿದ್ದಾರೆ.

ಚಿಟಿಕೆ ಸುದ್ದಿ

ದತ್ತಗೆ ‘ಶಾಂತವೇರಿ ಗೋಪಾಲಗೌಡ ಪ್ರಶಸ್ತಿ’

ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರ ನೀಡುವ 2026ನೇ ಸಾಲಿನ ‘ಶಾಂತವೇರಿ ಗೋಪಾಲಗೌಡ ಪ್ರಶಸ್ತಿ’ಗೆ ಮಾಜಿ ಶಾಸಕ ವೈ.ಎಸ್.ವಿ. ದತ್ತ ಆಯ್ಕೆಯಾಗಿದ್ದಾರೆ.


ವೈ.ಎಸ್.ವಿ. ದತ್ತ

ಪ್ರಶಸ್ತಿಯು ₹25 ಸಾವಿರ, ಪ್ರಶಸ್ತಿ ಪತ್ರ ಹಾಗೂ ಕಂಚಿನ ಫಲಕ ಒಳಗೊಂಡಿದೆ. ಮಾರ್ಚ್ 14ರಂದು ಸಂಜೆ 5 ಗಂಟೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಮಾಜಿ ಸಚಿವೆ ಮೋಟಮ್ಮ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸುತ್ತಾರೆ ಎಂದು ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ತಿಳಿಸಿದ್ದಾರೆ.

ಕಾನೂನು ಇಲಾಖೆ ಅಭಿಪ್ರಾಯಕ್ಕೆ ಎಸ್‌ಐಆರ್: ಪಾಟೀಲ


ಎಚ್.ಕೆ. ಪಾಟೀಲ

ಬೆಂಗಳೂರು: ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತಂತೆ ಕಾನೂನು ಇಲಾಖೆಯಿಂದ ಅಭಿಪ್ರಾಯ ಪಡೆಯಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ, ‘ಎಸ್‌ಐಆರ್ ಕುರಿತು ಸಭೆಯಲ್ಲಿ ಗಂಭೀರ ಚರ್ಚೆ ನಡೆಯಿತು’ ಎಂದರು.

‘ಪಶ್ಚಿಮ ಬಂಗಾಳ, ಉತ್ತರಪ್ರದೇಶ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಎಸ್‌ಐಆರ್ ನಡೆಯುತ್ತಿರುವ ರೀತಿ ಮತ್ತು ಕೆಲವು ಕಾನೂನಾತ್ಮಕ ಅಂಶಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಎಸ್‌ಐಆರ್‌ನ ಸಾಧಕ ಬಾಧಕಗಳೂ ಸೇರಿದಂತೆ ಎಲ್ಲ ವಿಷಯಗಳ ಕುರಿತು ಕಾನೂನು ಇಲಾಖೆ ಸಮಗ್ರವಾಗಿ ಅಧ್ಯಯನ ಮಾಡಿ ಶಿಫಾರಸು ಸಲ್ಲಿಸಲಿದೆ. ಈ ಶಿಫಾರಸುಗಳ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಮುಂದಿನ ತೀರ್ಮಾನ ತೆಗೆದುಕೊಳ್ಳಲಾಗುವುದು’ ಎಂದು ಅವರು ತಿಳಿಸಿದರು.

ಸುದ್ದಿ 2 ನಿಮಿಷ

ರಾಹುಲ್ ವಿರುದ್ಧ ಆಕ್ಷೇಪಾರ್ಹ ಪೋಸ್ಟ್ ಶಾಸಕರ ಆಪ್ತ ಸಹಾಯಕ ಬಂಧನ

ಹೊಸನಗರ (ಶಿವಮೊಗ್ಗ): ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಕುರಿತು ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಮಾಡಿದ್ದ ಆರೋಪ ಕುರಿತು ತೀರ್ಥಹಳ್ಳಿ ಶಾಸಕ ಆರಗ ಜ್ಞಾನೇಂದ್ರ ಅವರ ಆಪ್ತ ಸಹಾಯಕ ಬಂಧನಕ್ಕೆ ಒಳಗಾಗಿದ್ದಾರೆ.

ಮಳಲಿ ಗ್ರಾಮದ ನಿವಾಸಿ, ರಾಜೇಶ್ ಹಿರೇಮನೆ ಬಂಧಿತ. ಬುಧವಾರ ಮಧ್ಯಾಹ್ನ ಬಂಧನಕ್ಕೆ ಒಳಗಾಗಿದ್ದ ಇವರಿಗೆ ಗುರುವಾರ ಜಾಮೀನು ದೊರೆತಿದೆ. ಆರೋಪಿಯು ರಾಹುಲ್ ಗಾಂಧಿಯವರ ಮುಖದ ಅರ್ಧ ಭಾಗ ಹಾಗೂ ಪಾಕಿಸ್ತಾನ ಸೇನಾಧಿಕಾರಿ ಮುಖದ ಅರ್ಧ ಭಾಗವಿರುವ ಫೋಟೊ ಎಡಿಟ್ ಮಾಡಿ ಸೇರಿಸಿ, ‘ಒನ್ ಅಜೆಂಡಾ’ ಎಂಬ ಟ್ಯಾಗ್‌ಲೈನ್ ಅಡಿ ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿದ್ದರು.

ಈ ಕುರಿತಂತೆ 2025ರ ಮೇ 20ರಂದು ನಗರ ಠಾಣೆ ಪೊಲೀಸರು ಬಿಎನ್‌ಎಸ್ ಕಾಯ್ದೆಯ ಸೆಕ್ಷನ್ 353 (2) ರ ಅಡಿ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಹೊಸನಗರ ಜೆ.ಎಂ.ಎಫ್.ಸಿ ಕೋರ್ಟ್‌ನ ನ್ಯಾಯಾಧೀಶರು ಆರೋಪಿ ಬಂಧಿಸಲು ಆದೇಶ ನೀಡಿದ್ದರು.

ಯರ್ಸಗುಂಬ ಅಣಬೆಗೆ ₹15 ಲಕ್ಷ!



ಕೊಪ್ಪಳ: ಮಹಾಶಿವರಾತ್ರಿ ಅಂಗವಾಗಿ ಕೊಪ್ಪಳ ತೋಟಗಾರಿಕಾ ಇಲಾಖೆಯು ಹಣ್ಣು, ಜೇನು, ಅಣಬೆ ಪ್ರದರ್ಶನ ಹಾಗೂ ಮಾರಾಟ ಮೇಳ ಹಮ್ಮಿಕೊಂಡಿದೆ. ವಿಶ್ವದ ಅತ್ಯಂತ ದುಬಾರಿ ಅಣಬೆಗಳಲ್ಲಿ ಒಂದು ಎನ್ನಲಾದ ‘ಯರ್ಸಗುಂಬ’ ಈ ಮೇಳದ ಪ್ರಮುಖ ಆಕರ್ಷಣೆಯಾಗಿದೆ.

ಒಂದು ಕೆ.ಜಿ. ಯರ್ಸಗುಂಬ ಅಣಬೆಯ ಬೆಲೆ ₹15 ಲಕ್ಷ ಇದೆ. ಜನರ ಗಮನ ಸೆಳೆಯಲು ಐದು ಗ್ರಾಂ ತೂಕದ ಯರ್ಸಗುಂಬ ಅಣಬೆಯನ್ನು ಖರೀದಿಸಿ ತಂದು ಮೇಳದಲ್ಲಿ ಇರಿಸಲಾಗಿದೆ. ಈ ತಳಿಯು ಹಿಮಾಲಯದಲ್ಲಿ ಕಂಡುಬರುತ್ತದೆ. ರೋಗ ನಿರೋಧಕ ಶಕ್ತಿಯ ಇದು, ಮೆದುಳಿನ ಚಟುವಟಿಕೆ ಚುರುಕುಗೊಳಿಸಲಿದೆ.

‘ಯರ್ಸಗುಂಬ ಅಣಬೆಯನ್ನು ನೇಪಾಳದ ವ್ಯಾಪಾರಿ ಮೂಲಕ ಖರೀದಿಸಲಾಗಿದೆ. ಇದು ನೈಸರ್ಗಿಕವಾಗಿಯೇ ಬೆಳೆಯುತ್ತದೆ. ಪ್ರತಿ ವರ್ಷದ ಮೇಳದ ಸಂದರ್ಭದಲ್ಲಿ ವಿಶ್ವದ ದುಬಾರಿ ತಳಿಯ ಮಾವು, ದ್ರಾಕ್ಷಿ ಹೀಗೆ ಒಂದೊಂದು ಹಣ್ಣು ಜನರಿಗೆ ಪರಿಚಯಿಸುತ್ತಿರುವ ಕಾರಣ ತೋಟಗಾರಿಕಾ ಕ್ಷೇತ್ರದತ್ತ ಜಿಲ್ಲೆಯ ರೈತರ ಒಲವು ಹೆಚ್ಚಾಗುತ್ತಿದೆ’ ಎಂದು ತೋಟಗಾರಿಕಾ ಇಲಾಖೆಯ ಜಂಟಿ ನಿರ್ದೇಶಕ ಕೃಷ್ಣ ಸಿ.ಉಕ್ಕುಂದ ತಿಳಿಸಿದರು.

ಕುಣಿಗಲ್ ಸ್ಟಡ್ ಫಾರ್ಮ್‌ಗೆ ರೇಸ್ ಕೋರ್ಸ್

‘ಬೆಂಗಳೂರು ಟರ್ಫ್ ಕ್ಲಬ್’ ಅನ್ನು ಕುಣಿಗಲ್‌ನ ಸ್ಟಡ್ ಫಾರ್ಮ್‌ಗೆ ಸ್ಥಳಾಂತರಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಇದಕ್ಕಾಗಿ ‘ಕುಣಿಗಲ್ ಸ್ಟಡ್ ಫಾರ್ಮ್’ನಲ್ಲಿ 110 ಎಕರೆ ಜಮೀನು ನೀಡಲಾಗುವುದು. ಸ್ಥಳಾಂತರಿಸುವುದಕ್ಕೆ ಸಂಬಂಧಿಸಿದಂತೆ ಆದೇಶ ಹೊರಡಿಸಲಾಗುವುದು. ಎಷ್ಟು ಅವಧಿಯೊಳಗೆ ಸ್ಥಳಾಂತರಿಸಬೇಕು ಎಂಬ ಮಾಹಿತಿ ಅದರಲ್ಲಿ ಇರಲಿದೆ ಎಂದು ಎಚ್.ಕೆ.ಪಾಟೀಲ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹಾಲಿ ಟರ್ಫ್ ಕ್ಲಬ್ ಜಾಗವನ್ನು ನಗರದ ಶ್ವಾಸಕೋಶ (ಲಂಗ್ ಸ್ಪೇಸ್) ಪ್ರದೇಶವನ್ನಾಗಿ ಉಳಿಸಿಕೊಳ್ಳಲಾಗುವುದು. ಕಟ್ಟಡ ಮತ್ತು ಕ್ಲಬ್ ಹೌಸ್‌ಗಳನ್ನು ಪಾರಂಪರಿಕ ಕಟ್ಟಡವನ್ನಾಗಿ ಉಳಿಸಿಕೊಳ್ಳಲಾಗುವುದು. ಕಟ್ಟಡಗಳು ಒಟ್ಟು ನಾಲ್ಕು ಎಕರೆಯಲ್ಲಿದೆ. ಅದನ್ನು ಟರ್ಫ್ ಕ್ಲಬ್‌ನವರಿಗೆ ನೀಡಲಾಗುವುದು ಎಂದರು.

2010 ರ ಜನವರಿ 1 ರಿಂದ ಟರ್ಫ್ ಕ್ಲಬ್‌ನ ಬಾಡಿಗೆ ಪರಿಷ್ಕರಿಸಿಲ್ಲ. ಈ ಬಗ್ಗೆ ಆಡಿಟ್ ಆಕ್ಷೇಪಣೆ ಜತೆಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದಲೂ ಆಕ್ಷೇಪಣೆ ವ್ಯಕ್ತವಾಗಿತ್ತು. ಟರ್ಫ್ ಕ್ಲಬ್ ತೆರವುಗೊಳಿಸುವಂತೆ ಸೂಚಿಸಿತ್ತು. ಆದ್ದರಿಂದ 2010 ರಿಂದ ಹಿಡಿದು ಸ್ಥಳಾಂತರಗೊಳ್ಳುವ ಅವಧಿವರೆಗೆ ವಾರ್ಷಿಕ ಆದಾಯದಲ್ಲಿ ಶೇ 2 ರಷ್ಟನ್ನು ಲೋಕೋಪಯೋಗಿ ಇಲಾಖೆಗೆ ಪಾವತಿಸಬೇಕು. ಸ್ಥಳಾಂತರಕ್ಕೆ ಸಂಬಂಧಿಸಿದ ಆದೇಶವನ್ನು ಸದ್ಯವೇ ಹೊರಡಿಸಲಾಗುವುದು ಎಂದು ಪಾಟೀಲ ಹೇಳಿದರು.

ಮಾರ್ಚ್ 6 ರಂದು ಬಜೆಟ್ ಮಂಡನೆ



ಹಣಕಾಸು ಖಾತೆಯನ್ನು ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ 17ನೇ ಬಜೆಟ್ ಅನ್ನು ಮಾರ್ಚ್ 6 ರಂದು ಮಂಡಿಸಲಿದ್ದಾರೆ. ಅದೇ ಆರಂಭವಾಗಲಿರುವ ಬಜೆಟ್ ಅಧಿವೇಶನ ಮಾರ್ಚ್ 27ರವರೆಗೆ ಒಟ್ಟು 14 ದಿನಗಳು ನಡೆಯಲಿದೆ ಎಂದು ಎಚ್.ಕೆ.ಪಾಟೀಲ ತಿಳಿಸಿದರು.

ಪಶು ವೈದ್ಯಾಧಿಕಾರಿಗಳ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು: ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಗ್ರೂಪ್ ‘ಎ’ ವೃಂದದ 58 ಬ್ಯಾಕ್‌ಲಾಗ್ ಸೇರಿ ಒಟ್ಟು 400 ಪಶು ವೈದ್ಯಾಧಿಕಾರಿಗಳ ಹುದ್ದೆಗಳಿಗೆ ನಡೆದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಒಟ್ಟು 621 ಅಭ್ಯರ್ಥಿಗಳ ಪಟ್ಟಿಯನ್ನು ಕೆಪಿಎಸ್‌ಸಿ ಪ್ರಕಟಿಸಿದೆ.

ಈ ಹುದ್ದೆಗಳ ನೇಮಕಾತಿಗೆ ಇದೇ ಜ. 9ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಸಿದ್ದ ಕೆಪಿಎಸ್‌ಸಿ, ತ್ವರಿತವಾಗಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದೆ. 600 ಅಂಕಗಳಿಗೆ ನಡೆದ ಈ ಪರೀಕ್ಷೆಯಲ್ಲಿ ಅರ್ಹತೆ ಗಳಿಸಲು ಕನಿಷ್ಠ 210 (ಶೇ 35) ಅಂಕ ಪಡೆಯಬೇಕಿತ್ತು. ಆದರೆ, ಈ ಅಂಕ ಗಳಿಸಲು ಅಭ್ಯರ್ಥಿಗಳು ವಿಫಲರಾದ ಕಾರಣ 1:3 ಅನುಪಾತದಲ್ಲಿ ಅರ್ಹರು ಲಭ್ಯರಾಗಿಲ್ಲ ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

ಬೆಂಗಳೂರು ನಗರದ ಮೂರು ಕೇಂದ್ರಗಳಲ್ಲಿ ಜ. 8ರಂದು ನಡೆದ ಕನ್ನಡ ಭಾಷಾ ಪರೀಕ್ಷೆಗೆ 629 ಹಾಗೂ 9ರಂದು ನಡೆದ ಸಾಮಾನ್ಯ ಪತ್ರಿಕೆ ಮತ್ತು ನಿರ್ದಿಷ್ಟ ಪತ್ರಿಕೆಯ ಪರೀಕ್ಷೆಗೆ 1,447 ಅಭ್ಯರ್ಥಿಗಳಿಗೆ ಪರೀಕ್ಷೆ ಬರೆಯಲು ಕೆಪಿಎಸ್‌ಸಿ ಅವಕಾಶ ಕಲ್ಪಿಸಿತ್ತು.

ರಾಹುಲ್ ಸದಸ್ಯತ್ವ ರದ್ದತಿಗೆ ಆಗ್ರಹ

‘ದೇಶ ವಿರೋಧಿ ಶಕ್ತಿ’ಗಳ ನೆರವಿನಿಂದ ವಿದೇಶಗಳಿಗೆ ಭೇಟಿ: ದುಬೆ ಆರೋಪ

ಪ್ರಜಾವಾಣಿ ವಾರ್ತೆ

ನವದೆಹಲಿ(ಪಿಟಿಐ): ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಸದಸ್ಯತ್ವವನ್ನು ರದ್ದು ಮಾಡಬೇಕು ಹಾಗೂ ಅವರು ಚುನಾವಣೆಗೆ ಸ್ಪರ್ಧಿಸದಂತೆ ನಿಷೇಧ ಹೇರಬೇಕು ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಆಗ್ರಹಿಸಿದ್ದಾರೆ.

ಈ ಸಂಬಂಧ, ತಮ್ಮ ಬೇಡಿಕೆಗಳನ್ನು ಒಳಗೊಂಡ ‘ಸ್ವತಂತ್ರ ನಿರ್ಣಯ’ದ ನೋಟಿಸ್ ಸಲ್ಲಿಸಿದ್ದಾಗಿ ದುಬೆ ಗುರುವಾರ ಹೇಳಿದ್ದಾರೆ.

‘ರಾಹುಲ್ ಗಾಂಧಿ ವಿರುದ್ಧ ಹಕ್ಕುಚ್ಯುತಿ ನೋಟಿಸ್ ನೀಡಿಲ್ಲ. ಆದರೆ, ಅವರ ಸದಸ್ಯತ್ವವನ್ನು ಯಾಕೆ ರದ್ದುಗೊಳಿಸಬೇಕು ಎಂಬ ಕಾರಣ ಸಹಿತ ಈ ಸ್ವತಂತ್ರ ನಿರ್ಣಯದ ನೋಟಿಸ್ ಸಲ್ಲಿಸಿರುವೆ’ ಎಂದಿದ್ದಾರೆ.

ಸಂಸತ್ ಭವನ ಸಂಕೀರ್ಣದಲ್ಲಿ ಪಿಟಿಐ ವಿಡಿಯೊಸ್ ಜೊತೆ ಮಾತನಾಡಿದ ಅವರು, ‘ಸೊರೋಸ್ ಫೌಂಡೇಷನ್, ಯುಎಸ್‌ಏಡ್, ಫೋರ್ಡ್ ಫೌಂಡೇಷನ್ ನೆರವಿನೊಂದಿಗೆ ರಾಹುಲ್ ಗಾಂಧಿ ಅವರು ವಿದೇಶಗಳಿಗೆ ಭೇಟಿ ನೀಡುತ್ತಾರೆ. ಇದು ದೇಶ ವಿರೋಧಿ ಶಕ್ತಿಗಳೊಂದಿಗೆ ಸೇರಿ ಪಿತೂರಿ ನಡೆಸಿದಂತೆ’ ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಿರುವುದಾಗಿ ಹೇಳಿದ್ದಾರೆ.


ನಿಶಿಕಾಂತ್ ದುಬೆ

‘ರಾಹುಲ್ ಗಾಂಧಿ ಥಾಯ್ಲೆಂಡ್, ವಿಯೆಟ್ನಾಂ, ಕಾಂಬೋಡಿಯಾಗೆ ಭೇಟಿ ನೀಡುತ್ತಾರೆ. ಅವರು ಕೈಗೊಳ್ಳುವ ಈ ಪ್ರವಾಸಗಳಿಗೆ ಮೇಲೆ ತಿಳಿಸಿದ ಸಂಸ್ಥೆ/ಸಂಘಟನೆಗಳು ನೆರವು ನೀಡುತ್ತವೆ’ ಎಂದು ಆರೋಪಿಸಿದರು.

‘ನೇಣು ಹಾಕುತ್ತೀರಾ?.. ನಾವು ಸಿದ್ಧ’


ವೇಣುಗೋಪಾಲ್

‘ನಮ್ಮ ವಿರುದ್ಧ ಸಲ್ಲಿಸುವ ಯಾವುದೇ ನೋಟಿಸ್‌ಗಳ ಬಗ್ಗೆ ನಾವು ತಲೆ ಕೆಡಿಸಿಕೊಳ್ಳುವುದಿಲ್ಲ. ನೀವು ನಮ್ಮನ್ನು ನೇಣಿಗೇರಿಸಲು ಬಯಸುತ್ತೀರಾ? ಅದಕ್ಕೂ ನಾವು ಸಿದ್ಧರಿದ್ದೇವೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಗುರುವಾರ ಹೇಳಿದರು.

ಬಿಜೆಪಿಯ ಸಂಸದ ನಿಶಿಕಾಂತ್ ದುಬೆ ಅವರು ರಾಹುಲ್ ಗಾಂಧಿಯವರ ಲೋಕಸಭಾ ಸದಸ್ಯತ್ವ ರದ್ದುಗೊಳಿಸಬೇಕು ಎಂಬ ಬೇಡಿಕೆಯ ನೋಟಿಸ್ ಸಲ್ಲಿಸಿರುವ ಕುರಿತು ಅವರು ಹೀಗೆ ಪ್ರತಿಕ್ರಿಯಿಸಿದ್ದಾರೆ. ರಾಹುಲ್ ಗಾಂಧಿ ಅವರು ಸದನದಲ್ಲಿ ನೀಡಿದ ಕೆಲ ಹೇಳಿಕೆಗಳನ್ನು ಕಡತದಿಂದ ತೆಗೆದು ಹಾಕಿರುವುದನ್ನು ಪ್ರಸ್ತಾಪಿಸಿ, ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ವೇಣುಗೋಪಾಲ್,‘ನಾವು ಎತ್ತಿದ ಪ್ರಶ್ನೆಗಳಿಗೆ ಸ್ಪೀಕರ್ ಅವರಿಂದ ಸಮರ್ಪಕ ಉತ್ತರ ಸಿಗದ ಕಾರಣ ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವ ನೋಟಿಸ್ ಸಲ್ಲಿಸಿದ್ದೇವೆ’ ಎಂದರು.

‘ರಾಹುಲ್ ಗಾಂಧಿ ಅವರ ಹೇಳಿಕೆಗಳನ್ನು ಸಂಪೂರ್ಣವಾಗಿ ಕಡತದಿಂದ ತೆಗೆದು ಹಾಕಲಾಗಿದೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಮಾತುಗಳನ್ನು ಕಡತದಿಂದ ತೆಗೆದು ಹಾಕಿಲ್ಲ. ಇದು ಕೇಂದ್ರ ಸರ್ಕಾರದ ದ್ವಂದ್ವ ನೀತಿಯಲ್ಲವೇ?’ ಎಂದರು.

‘ಬಂಗಾಳಿಯಲ್ಲಿ ಮಾತನಾಡಿದ್ದಕ್ಕೆ ಹತ್ಯೆ’

ಕೋಲ್ಕತ್ತ (ಪಿಟಿಐ): ಬೆಂಗಾಲಿ ಭಾಷೆಯಲ್ಲಿ ಮಾತನಾಡಿದ್ದಕ್ಕೆ 24 ವರ್ಷದ ವಲಸೆ ಕಾರ್ಮಿಕನನ್ನು ಮಹಾರಾಷ್ಟ್ರದಲ್ಲಿ ಹತ್ಯೆ ಮಾಡಲಾಗಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

‘ಕೃತ್ಯವು ದ್ವೇಷ ಅಪರಾಧವಾಗಿದ್ದು, ಕೂಡಲೇ ಆರೋಪಿಗಳನ್ನು ಬಂಧಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಶಾಸಕ ವೀರೇಂದ್ರ ಜಾಮೀನು ರದ್ದು ಕೋರಿ ಅರ್ಜಿ

ಬೆಂಗಳೂರು: ‘ಹಣ ಅಕ್ರಮ ವರ್ಗಾವಣೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಬಂಧಿತರಾಗಿದ್ದ ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ.ವೀರೇಂದ್ರ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮಂಜೂರು ಮಾಡಿರುವ ಜಾಮೀನು ರದ್ದುಪಡಿಸಬೇಕು’ ಎಂದು ಕೋರಿ ಜಾರಿ ನಿರ್ದೇಶನಾಲಯ (ಇ.ಡಿ) ಹೈಕೋರ್ಟ್ ಮೆಟ್ಟಿಲೇರಿದೆ.

ಈ ಕುರಿತಂತೆ ಬೆಂಗಳೂರು ಇ.ಡಿ ವಲಯದ ಸಹಾಯಕ ನಿರ್ದೇಶಕ ಅಜಯ ವೈದ್ಯ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಇ.ಡಿ ಪರ ವಕೀಲರು, ‘ಪ್ರತಿವಾದಿ ವೀರೇಂದ್ರ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮಂಜೂರು ಮಾಡಿರುವ ಜಾಮೀನು ರದ್ದುಪಡಿಸಬೇಕು’ ಎಂದು ಕೋರಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ, ಪ್ರತಿವಾದಿ ವೀರೇಂದ್ರ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಇದೇ 26ಕ್ಕೆ ಮುಂದೂಡಿತು.

‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು 2025ರ ಡಿ.3ರಂದು ಆರೋಪಿ ವೀರೇಂದ್ರ ಅವರಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದ್ದರು. ಪಿಎಂಎಲ್‌ಎ ಕಾಯ್ದೆ–2002ರ ಕಲಂ 3 ಮತ್ತು 4ರ ಅಡಿಯಲ್ಲಿ ವೀರೇಂದ್ರ ವಿರುದ್ಧ ಪ್ರಕರಣ ದಾಖಲಾಗಿದೆ.

ಮಹಾರಥೋತ್ಸವ

ಪ್ರಜಾವಾಣಿ ಚಿತ್ರ: ಲವ ಕೆ.


ವಿಜಯನಗರ ಜಿಲ್ಲೆ ಕೊಟ್ಟೂರಿನ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿ ಮಹಾರಥೋತ್ಸವವು ಅಪಾರ ಸಂಖ್ಯೆ ಭಕ್ತರ ಸಮ್ಮುಖದಲ್ಲಿ ಗುರುವಾರ ಅದ್ದೂರಿಯಾಗಿ ನೆರವೇರಿತು

₹4 ಲಕ್ಷ ನೀಡದ್ದಕ್ಕೆ ಪೋಷಕರ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೌಕಾಪಡೆಯ ನಿವೃತ್ತ ಕ್ಯಾಪ್ಟನ್ ನವೀನ್‌ಚಂದ್ರ ಭಟ್ (60) ಹಾಗೂ ದಂತ ವೈದ್ಯೆ ಶ್ಯಾಮಲಾ ಭಟ್(55) ಕೊಲೆ ಪ್ರಕರಣದ ಆರೋಪಿ ರೋಹನ್‌ಚಂದ್ರ ಭಟ್ (33) ಅವರನ್ನು ಬಂಧಿಸಿ, ಕಸ್ಟಡಿಗೆ ಪಡೆದುಕೊಂಡಿರುವ ಎಚ್‌ಎಎಲ್ ಠಾಣೆಯ ಪೊಲೀಸರು, ವಿಚಾರಣೆ ತೀವ್ರಗೊಳಿಸಿದ್ದಾರೆ.

ನವೀನ್ ಚಂದ್ರ ಭಟ್ ಹಾಗೂ ಶ್ಯಾಮಲಾ ಭಟ್ ದಂಪತಿಯ ಪುತ್ರ ರೋಹನ್‌ಚಂದ್ರ ಭಟ್. ಪೋಷಕರ ಜತೆಗೆ ಎಚ್‌ಎಎಲ್ ಪೊಲೀಸ್ ಠಾಣಾ ವ್ಯಾಪ್ತಿಯ ವಿಜ್ಞಾನ ನಗರದ ಆದರ್ಶ ವಿಸ್ತಾ ಅಪಾರ್ಟ್‌ಮೆಂಟ್‌ನ ವಿಲ್ಲಾ ಸಂಖ್ಯೆ 112ರಲ್ಲಿ ವಾಸವಿದ್ದರು. ಆರು ವರ್ಷಗಳ ಹಿಂದೆ ನೌಕಾಪಡೆಯಿಂದ ನಿವೃತ್ತರಾಗಿದ್ದ ನವೀನ್ ಭಟ್ ಅವರು, ವಿಲ್ಲಾ ಖರೀದಿಸಿ ನೆಲಸಿದ್ದರು. ಪುತ್ರಿ ಅಮೆರಿಕದಲ್ಲಿ ಕೆಲಸ ಮಾಡುತ್ತಿದ್ದಾರೆ. ಕೊಲೆಯಾದ ದಂಪತಿ ಮಂಗಳೂರಿನವರು.

‘ಅಮೆರಿಕದಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿದ್ದ ರೋಹನ್ ಚಂದ್ರ ಭಟ್ ಅವರು ನಗರದ ಕಂಪನಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲವು ವರ್ಷ ಕೆಲಸ ಮಾಡಿದ್ದರು. ಕೆಲವು ತಿಂಗಳ ಹಿಂದಷ್ಟೇ ಕೆಲಸ ಬಿಟ್ಟು ಹೊಸ ಯೋಜನೆ ಆರಂಭಿಸಲು ನಿರ್ಧರಿಸಿದ್ದರು. ಹೊಸ ಯೋಜನೆ ಆರಂಭಿಸಲು ₹4 ಲಕ್ಷ ಬೇಕೆಂದು ಪೋಷಕರ ಬಳಿ ಕೇಳಿದ್ದರು’ ಎಂದು ಪೊಲೀಸರು ಹೇಳಿದರು.

‘ಕೆಲಸ ಬಿಟ್ಟು ಸುಮ್ಮನೆ ಓಡಾಟ ನಡೆಸುತ್ತಿದ್ದೀಯಾ? ಸಹೋದರಿ ಅಮೆರಿಕದಲ್ಲಿ ಕೆಲಸ ಮಾಡುತ್ತಿದ್ದಾಳೆ. ನಿನಗೆ ಸ್ವಲ್ಪವೂ ಜವಾಬ್ದಾರಿ ಇಲ್ಲ. ಹೊಸ ಯೋಜನೆಗೆ ಆರ್ಥಿಕ ನೆರವು ಕೊಡುವುದಿಲ್ಲ’ ಎಂದು ಪೋಷಕರು ಹೇಳಿದ್ದರು. ಅದರಿಂದ ಸಿಟ್ಟಾಗಿದ್ದ ರೋಹನ್, ಪೋಷಕರ ಜತೆಗೆ ಪ್ರತಿನಿತ್ಯ ಗಲಾಟೆ ಮಾಡುತ್ತಿದ್ದರು. ಬುಧವಾರ ಬೆಳಿಗ್ಗೆ ನಡೆದ ಗಲಾಟೆಯು ವಿಕೋಪಕ್ಕೆ ಹೋಗಿ, ಪೋಷಕರಿಗೆ ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾರೆ ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದರು.

ಮನೆ ತೊರೆದಿದ್ದ ರೋಹನ್: ‘ಪೋಷಕರ ಜತೆಗೆ ಗಲಾಟೆ ನಡೆದ ಬಳಿಕ ರೋಹನ್ ಪ್ರತ್ಯೇಕ ಬಾಡಿಗೆ ಮನೆ ಪಡೆದು ನೆಲಸಿದ್ದರು. ಹದಿನೈದು ದಿನಗಳ ಹಿಂದೆ ಬಾಡಿಗೆ ಮನೆ ಬಿಟ್ಟು ವಿಲ್ಲಾಕ್ಕೆ ಬಂದು ಪೋಷಕರ ಜತೆಗೆ ನೆಲಸಿದ್ದರು. ಕೊಲೆಯಾದ ದಂಪತಿಯ ಪುತ್ರಿ ಅಮೆರಿಕದಿಂದ ನಗರಕ್ಕೆ ಬಂದ ಮೇಲೆ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹ ಹಸ್ತಾಂತರಿಸಲಾಗುವುದು’ ಎಂದು ಪೊಲೀಸರು ಹೇಳಿದರು.

ತಂದೆ ಹೇಳಿಕೆಯಿಂದ ಬೇಸತ್ತು ಕೃತ್ಯ

‘ಅಮ್ಮ ನನಗೆ ಹಾಲಿನಲ್ಲಿ ನಿದ್ರೆ ಮಾತ್ರೆ ಬೆರೆಸಿ ಕೊಡುತ್ತಿದ್ದರು. ಕೆಲಸಕ್ಕೆ ಹೋಗದ ಕಾರಣ ಪದೇ ಪದೇ ತಂದೆ ನಿಂದನೆ ಮಾಡುತ್ತಿದ್ದರು. ನೀನು ನಮ್ಮ ಕುಟುಂಬದ ಮರ್ಯಾದೆ ಕಳೆಯುವುದಕ್ಕೇ ಹುಟ್ಟಿದ್ದೀಯಾ ಎಂದು ಹೀಯಾಳಿಸುತ್ತಿದ್ದರು. ಅವರ ಮಾತಿನಿಂದ ನೋವಾಗಿತ್ತು’ ಎಂಬುದಾಗಿ ವಿಚಾರಣೆ ವೇಳೆ ಆರೋಪಿ ಹೇಳಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದರು.

‘ವಿಲ್ಲಾಕ್ಕೆ ಬರುತ್ತಿದ್ದ ಕೆಲಸದವರ ಮುಂದೆಯೂ ನನಗೆ ಬೈದು ಅವಮಾನ ಮಾಡುತ್ತಿದ್ದರು. ಹಣ ಕೇಳಿದಾಗಲೆಲ್ಲಾ ಜಗಳ ತೆಗೆಯುತ್ತಿದ್ದರು ಎಂಬುದಾಗಿ ರೋಹನ್ ಹೇಳಿಕೆ ನೀಡಿದ್ದಾನೆ’ ಎಂದು ಮೂಲಗಳು ಹೇಳಿವೆ.


ನವೀನ್ ಚಂದ್ರ


ಶ್ಯಾಮಲಾ


ರೋಹನ್

‘ಕುಲಕಸುಬು, ಗಣಿಗಾರಿಕೆಗೆ ಅಡ್ಡಿಪಡಿಸಿದರೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭೋವಿ (ವಡ್ಡರ) ಜನಾಂಗ ಪಾರಂಪರಿಕ ಕುಲಕಸುಬು ಮುಂದುವರಿಸಲು, ಗಣಿಗಾರಿಕೆ ಮಾಡಲು ಅಡ್ಡಿಪಡಿಸುವವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕು’ ಎಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಪ್ರಧಾನ ಕಾರ್ಯದರ್ಶಿ ರೋಹಿಣಿ ಸಿಂಧೂರಿ ಸಮ್ಮುಖದಲ್ಲಿ ಸಮುದಾಯದ ಮುಖಂಡರ ಜೊತೆ ಗುರುವಾರ ಸಭೆ ನಡೆಸಿದ ಸಚಿವರು, ‘ಭೋವಿ ಜನಾಂಗದವರು ಒರಳಕಲ್ಲು, ಬೀಸುವ ಕಲ್ಲು, ದಿಂಡು, ಜಲ್ಲಿಕಲ್ಲು, ಮೂರ್ತಿಗಳು, ದೇವರ ವಿಗ್ರಹಗಳ ಕೆತ್ತನೆ ಸೇರಿದಂತೆ ಕುಲಕಸುಬು ಮುಂದುವರಿಸಲು ಅನುಕೂಲ ಆಗುವಂತೆ ಕಾನೂನುಗಳನ್ನು ಸರಳೀಕರಿಸಬೇಕು’ ಎಂದು ಸಲಹೆ ನೀಡಿದರು.

‘ಭೋವಿ ಜನಾಂಗದ ಮೇಲೆ ದಬ್ಬಾಳಿಕೆ, ಹಲ್ಲೆ, ಕೊಲೆ ಬೆದರಿಕೆ ನಡೆಯುತ್ತಿವೆ. ಕೆಲವು ಕಡೆ ಅಧಿಕಾರಿಗಳು ಬಂಡವಾಳಶಾಹಿಗಳ ಜೊತೆ ಸೇರಿ ಜನಾಂಗಕ್ಕೆ ಸಿಗಬೇಕಾದ ಗಣಿಗಾರಿಕೆ ತಪ್ಪಿಸುತ್ತಿದ್ದು, ಅಂಥವರ ವಿರುದ್ಧ ಆಯಾ ವ್ಯಾಪ್ತಿಯ ಜಿಲ್ಲಾಧಿಕಾರಿಗಳು, ತಹಶೀಲ್ದಾರ್‌ಗಳು, ಉಪನಿರ್ದೇಶಕರು ಕ್ರಮ ತೆಗೆದುಕೊಳ್ಳಬೇಕು’ ಎಂದು ಸಚಿವರು ನಿರ್ದೇಶನ ನೀಡಿದರು.


ಶಿವರಾಜ ತಂಗಡಗಿ

ರೋಹಿಣಿ ಸಿಂಧೂರಿ ಮಾತನಾಡಿ, ‘ಭೋವಿ ಜನಾಂಗದವರ ಕುಲಕಸುಬಿಗೆ ತೊಂದರೆ ಆಗದಂತೆ ನಿಗಾ ವಹಿಸಲಾಗುವುದು. ಜಾತಿ ಪ್ರಮಾಣಪತ್ರ ನೀಡಿದ ಮೇಲೆ ಪರವಾನಗಿ ನೀಡಲು ಯಾವುದೇ ಅಧಿಕಾರಿ ತೊಂದರೆ ನೀಡಿದರೆ ಕ್ರಮ ಕೈಗೊಳ್ಳಲಾಗುವುದು. ಗಣಿಗಾರಿಕೆಗೆ ಜಿಲ್ಲಾಮಟ್ಟದಲ್ಲಿಯೇ ಅನುಮತಿ ನೀಡಲಾಗುವುದು. ಕೆಲಸ ಮಾಡುವ ಸ್ಥಳಗಳಲ್ಲಿ ಅರ್ಜಿ ಸಲ್ಲಿಸುವ ಭೋವಿ ಜನಾಂಗದವರಿಗೆ ಆದ್ಯತೆ ನೀಡಲಾಗುವುದು’ ಎಂದು ಭರವಸೆ ನೀಡಿದರು.

ಸಮುದಾಯದ ಬೇಡಿಕೆಗಳ ಮನವಿ ಪತ್ರವನ್ನು ಭೋವಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಜಿ.ವಿ. ಸೀತಾರಾಮು ನೀಡಿದರು. ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಎಂ.ವಿ. ಕೃಷ್ಣಪ್ಪ, ಮೈಸೂರು ಜಿಲ್ಲಾ ಭೋವಿ ಸಂಘದ ಅಧ್ಯಕ್ಷ ಎಸ್. ವಿಜಯಕುಮಾರ್ ಮತ್ತಿತರರು ಇದ್ದರು.

‘ನಮ್ಮದು ಮನುಷ್ಯ ಜಾತಿ’ ಎನ್ನುತ್ತಿದೆ ಮಹಾರಾಷ್ಟ್ರದ ಸೌಂದಾಳಾ • ಪಂಚಾಯಿತಿ ಸಭೆಯಲ್ಲಿ ಸರ್ವಾನುಮತದ ನಿರ್ಣಯ

ಮಹಾರಾಷ್ಟ್ರದ ಈ ಊರು ಜಾತಿಯಿಂದ ಮುಕ್ತ ಮುಕ್ತ...

• ಮೃತ್ಯುಂಜಯ ಬೋಸ್

ಮುಂಬೈ: ಜಾತಿ ವಿಚಾರವಾಗಿ ನಡೆಯುತ್ತಿರುವ ರಾಜಕಾರಣ, ಸಂಘರ್ಷ ಭಾರತೀಯ ಸಮಾಜವನ್ನು ವಿಭಜಿಸುವುದು ಈಗಲೂ ನಿಂತಿಲ್ಲ. ಜಾತಿ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಪ್ರಯತ್ನಗಳೂ ಮುಂದುವರಿದಿವೆ.

ಆದರೆ, ಮಹಾರಾಷ್ಟ್ರದ ಪುಟ್ಟ ಗ್ರಾಮವೊಂದಲ್ಲಿ ಸಣ್ಣ ಪ್ರಮಾಣದಲ್ಲಿ ಆದರೆ, ಗಮನಾರ್ಹ ಸಾಮಾಜಿಕ ಕ್ರಾಂತಿಯೊಂದು ನಡೆಯುತ್ತಿದೆ. ಅಹಿಲ್ಯಾನಗರ (ಈ ಹಿಂದಿನ ಅಹ್ಮದ್‌ನಗರ) ಜಿಲ್ಲೆಯ ನೆವಾಸ ತಾಲ್ಲೂಕಿನ ಪುಟ್ಟ ಗ್ರಾಮ ಸೌಂದಾಳಾ ಇಂತಹ ಪ್ರಗತಿಪರ ಸಾಮಾಜಿಕ ಸುಧಾರಣೆಗಳಿಗೆ ತನ್ನನ್ನು ತೆರೆದುಕೊಂಡಿದೆ. ‘ಸೌಂದಳಾ ಈಗ ಜಾತಿ ಮುಕ್ತ ಗ್ರಾಮ’ ಎಂದು ಗ್ರಾಮಸ್ಥರು ಘೋಷಿಸಿಕೊಂಡಿದ್ದಾರೆ. ಈ ಮೂಲಕ, ಜಾತಿಗಿಂತ ಮಾನವೀಯತೆಯೇ ದೊಡ್ಡದು ಎಂಬ ಸಂದೇಶವನ್ನು ಸಾರಿದ್ದಾರೆ.

‘ಅಮ್ಚಿ ಜಾತ್... ಮಾನವ್’(ನಮ್ಮದು ಮನುಷ್ಯ ಜಾತಿ) ಎಂಬುದು ನಮ್ಮ ಮಾರ್ಗದರ್ಶಿ ತತ್ವ ಎಂದು ಗ್ರಾಮಸ್ಥರು ಘೋಷಿಸಿಕೊಂಡಿದ್ದಾರೆ. ‘ಈ ರೀತಿ ಜಾತಿ ಮುಕ್ತ ಗ್ರಾಮವೊಂದು ಇರುವುದು ಮಹಾರಾಷ್ಟ್ರದಲ್ಲಿ ಮಾತ್ರವಲ್ಲ, ದೇಶದಲ್ಲಿಯೇ ಮೊದಲು ಇರಬಹುದು’ ಎಂದೂ ಹೇಳಿಕೊಂಡಿದ್ದಾರೆ. ಫೆಬ್ರುವರಿ 5ರಂದು ನಡೆದ ಗ್ರಾಮ ಪಂಚಾಯಿತಿ ಸಭೆಯಲ್ಲಿ ಈ ಕುರಿತ ನಿರ್ಣಯವನ್ನು ಸರ್ವಾನುಮತದಿಂದ ಅನುಮೋದಿಸಲಾಗಿದೆ.

‘ಇದು ಸಣ್ಣ ಪ್ರಯತ್ನವಾದರೂ, ದೂರಗಾಮಿ ಪರಿಣಾಮ ಬೀರುವಂಥದ್ದು’ ಎಂದು ಗ್ರಾಮ ಪಂಚಾಯಿತಿ ಸದಸ್ಯ ಶರದ್ ಅರ್ಗಾಡೆ ‘ಪ್ರಜಾವಾಣಿ’ಗೆ ತಿಳಿಸಿದರು. ‘ಜಾತಿ ಮುಕ್ತ ಗ್ರಾಮ ಎಂಬ ನಿರ್ಣಯ ಕೈಗೊಳ್ಳುವ ಸಂಬಂಧ ನಡೆದ ಸಭೆಯಲ್ಲಿ ವಿವಿಧ ಜಾತಿಗಳಿಗೆ ಸೇರಿದ ಜನರು ಪಾಲ್ಗೊಂಡಿದ್ದರು. ಮುಸ್ಲಿಂ ಸಮುದಾಯದವರು ಕೂಡ ಹಾಜರಿದ್ದರು. ಎಲ್ಲರೂ ಈ ನಿರ್ಣಯದ ಪರವಾಗಿ ಮತ ಚಲಾಯಿಸಿದರು’ ಎಂದು ಶರದ್ ತಿಳಿಸಿದರು.



ಮಹಾರಾಷ್ಟ್ರದ ಅಹಿಲ್ಯಾನಗರ ಜಿಲ್ಲೆಯ ಸೌಂದಾಳಾ ಗ್ರಾಮದ ಗ್ರಾಮ ಪಂಚಾಯಿತಿ ಕಚೇರಿ ಮುಂದೆ ಗ್ರಾಮಸ್ಥರು ನಿಂತಿರುವುದು

ಒಳ್ಳೆ ಸುದ್ದಿ

‘ದಂಡಕ್ಕೂ ಅವಕಾಶ’

ಗ್ರಾಮದಲ್ಲಿ ಯಾರಾದರೂ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ನಡೆದುಕೊಂಡಿದ್ದು ಕಂಡುಬಂದಲ್ಲಿ ಅವರಿಗೆ ದಂಡ ವಿಧಿಸುವುದಕ್ಕೂ ನಿರ್ಣಯದಲ್ಲಿ ಅವಕಾಶ ಕಲ್ಪಿಸಲಾಗಿದೆ.

ಖ್ಯಾತ ಸಮಾಜ ಸೇವಕ ಹಾಗೂ ಮಹಾತ್ಮ ಫುಲೆ ಸಮಾಜ ಸೇವಾ ಮಂಡಲದ ಸಂಸ್ಥಾಪಕ ಅಧ್ಯಕ್ಷ ಪ್ರಮೋದ್ ಝಿಂಜಾಡೆ ಅವರ ಸಲಹೆಯಂತೆ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಗ್ರಾಮಸ್ಥರು ಹೇಳುತ್ತಾರೆ. ಸೊಲ್ಲಾಪುರದಲ್ಲಿರುವ ಪ್ರಮೋದ್ ಅವರು ‘ಪ್ರಜಾವಾಣಿ’ಯೊಂದಿಗೆ ಮಾತನಾಡಿ,‘ನನಗೆ ಜಾತಿ ಪದ್ಧತಿಯಲ್ಲಿ ನಂಬಿಕೆ ಇಲ್ಲ. ಮಾನವೀಯತೆಯೇ ದೊಡ್ಡ ಜಾತಿ ಹಾಗೂ ಧರ್ಮ’ ಎಂದು ಹೇಳಿದರು.

‘ಸಮಾಜದಲ್ಲಿ ಜಾತಿ ಪದ್ಧತಿಯನ್ನು ನಿರ್ಮೂಲನೆ ಮಾಡಲು ಶ್ರಮಿಸಬೇಕು ಎಂದು ಎಲ್ಲ ಗ್ರಾಮ ಪಂಚಾಯಿತಿ ಸದಸ್ಯರಿಗೆ ನಾನು ಮನವಿ ಮಾಡಿದ್ದೆ. ಈ ನಿಟ್ಟಿನಲ್ಲಿ ಸೌಂದಾಳಾ ಗ್ರಾಮಸ್ಥರು ಹಾಗೂ ಗ್ರಾಮ ಪಂಚಾಯಿತಿ ಮುಂದಡಿ ಇಟ್ಟಿದೆ’ ಎಂದರು.

ಸಂವಿಧಾನ ಪೀಠಿಕೆ ಉಲ್ಲೇಖ...



ಗ್ರಾಮ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು, ಸಂವಿಧಾನ ಪೀಠಿಕೆ ಉಲ್ಲೇಖಿಸುವುದರೊಂದಿಗೆ ಆರಂಭಿಸಲಾಗಿದೆ. ಮುಖ್ಯವಾಗಿ ಸಮಾನತೆ, ಸ್ವಾತಂತ್ರ್ಯ ಹಾಗೂ ಭ್ರಾತೃತ್ವದಂತಹ ಮೌಲ್ಯಗಳನ್ನು ಉಲ್ಲೇಖಿಸಲಾಗಿದೆ.

‘ಗ್ರಾಮದಲ್ಲಿ ಯಾರೊಬ್ಬರೂ ಜಾತಿ ಪದ್ಧತಿ ಅನುಸರಿಸಬಾರದು ಅಥವಾ ಜಾತಿ ಆಧಾರಿತ ಪದ್ಧತಿಗಳನ್ನು ಪಾಲನೆ ಮಾಡಬಾರದು ಎಂಬ ಸರ್ವಾನುಮತದ ನಿರ್ಧಾರ ಕೈಗೊಳ್ಳಲಾಗಿದೆ. ‘ಮಾನವೀಯತೆಯೇ ನಮ್ಮ ಜಾತಿ’ ಎಂಬ ತತ್ವವೇ ನಮಗೆ ಮಾರ್ಗದರ್ಶಿಯಾಗಬೇಕು’ ಎಂದು ನಿರ್ಣಯಿಸಲಾಗಿದೆ

ಶರದ್ ಅರ್ಗಾಡೆ, ಸೌಂದಾಳಾ ಗ್ರಾಮ ಪಂಚಾಯಿತಿ ಸದಸ್ಯ

ಹಲವು ಪ್ರಗತಿಪರ ನಿರ್ಣಯ ಕೈಗೊಂಡ ಗ್ರಾಮವಿದು



ಜಾತಿ ಮುಕ್ತ ಗ್ರಾಮವನ್ನಾಗಿ ಘೋಷಿಸುವ ಮೂಲಕ ಗಮನ ಸೆಳೆದಿರುವ ಸೌಂದಾಳಾ, ಈ ಹಿಂದೆಯೇ ಹಲವು ಪ್ರಗತಿಪರ ನಿರ್ಣಯಗಳನ್ನು ಸಹ ಕೈಗೊಂಡಿದೆ.

ಲಿಂಗತ್ವ ಸಂದೇದನಾಶೀಲತೆ, ಬಾಲ್ಯ ವಿವಾಹ ಪದ್ಧತಿ ನಿಷೇಧ, ವಿಧವೆಯರ ಮರುವಿವಾಹ, ಕೌಟುಂಬಿಕ ದೌರ್ಜನ್ಯ ಹಾಗೂ ವರದಕ್ಷಿಣೆ ಕಿರುಕುಳದ ವಿರುದ್ಧ ಕ್ರಮ, ಬಾಲಕಿಯರ ಶಿಕ್ಷಣಕ್ಕೆ ಪ್ರೋತ್ಸಾಹ ಹಾಗೂ ಮಹಿಳೆಯರು ಕೂಡ ರಾಜಕೀಯದಲ್ಲಿ ಸಕ್ರಿಯವಾಗಿ ತೊಡಗುವುದನ್ನು ಪ್ರೋತ್ಸಾಹಿಸುವಂತಹ ಕ್ರಮಗಳನ್ನು ಗ್ರಾಮಸ್ಥರು ಕೈಗೊಂಡಿರವುದು ವಿಶೇಷ.

ಹತ್ತಕ್ಕೂ ಅಧಿಕ ಗ್ರಾಮಗಳು ಜಾತಿ ಪದ್ಧತಿಯಿಂದ ಮುಕ್ತವಾಗಲು ಆಸಕ್ತಿ ತೋರಿವೆ. ಈ ಚಳವಳಿಯನ್ನು ಮುಂದಕ್ಕೆ ಕೊಂಡೊಯ್ಯುವುದಕ್ಕಾಗಿ ಏಪ್ರಿಲ್‌ನಲ್ಲಿ ಈ ಗ್ರಾಮ ಪಂಚಾಯಿತಿಗಳ ಸದಸ್ಯರ ಸಭೆ ಕರೆಯಲಾಗಿದೆ

ಪ್ರಮೋದ್ ಝಿಂಜಾಡೆ, ಸಮಾಜ ಸೇವಕ, ಸೊಲ್ಲಾಪುರ

ಶುಕ್ರವಾರ, ಫೆಬ್ರುವರಿ 13, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 44 | ಪುಟ 22

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ

ಸ್ಕ್ಯಾನ್ ಮಾಡಿ

ಇಶಾನ್ ಕಿಶನ್ ಬೀಸಾಟ

ನವದೆಹಲಿಯಲ್ಲಿ ಗುರುವಾರ ನಡೆದ ಐಸಿಸಿ ಟಿ20 ವಿಶ್ವಕಪ್ ಕ್ರಿಕೆಟ್ ಪಂದ್ಯದಲ್ಲಿ ನಮೀಬಿಯಾ ಎದುರು ಭಾರತದ ಇಶಾನ್ ಕಿಶನ್ (61; 24ಎಸೆತ, 4X6, 6X5) ಅರ್ಧಶತಕ ಗಳಿಸಿದರು



ಸೆನ್ಸೆಕ್ಸ್ 83,674 | ನಿಫ್ಟಿ 25,807 | $/₹ 90.61 | ಚಿನ್ನ (Std. 10g) ₹1,63,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,76,000 (ಬೆಂಗಳೂರು)

114 ರಫೇಲ್ ಖರೀದಿಗೆ ಅಸ್ತು

ಭಾರತಕ್ಕೆ ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರನ್ ಭೇಟಿಗೂ ಮುನ್ನ ಮಹತ್ವದ ಬೆಳವಣಿಗೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ದೇಶದ ರಕ್ಷಣಾ ಪಡೆಗಳ ಯುದ್ಧ ಸನ್ನದ್ಧತೆ ವೃದ್ಧಿಸುವ ನಿಟ್ಟಿನಲ್ಲಿ 114 ರಫೇಲ್ ಯುದ್ಧ ವಿಮಾನಗಳನ್ನು ಖರೀದಿಸುವುದಕ್ಕೆ ರಕ್ಷಣಾ ಸಚಿವಾಲಯ ಗುರುವಾರ ಅನುಮೋದನೆ ನೀಡಿದೆ.

ಫ್ರಾನ್ಸ್‌ನ ಡಾಸೊ ಏವಿಯೇಷನ್ ಕಂಪನಿ ತಯಾರಿಸುವ ಈ ಯುದ್ಧ ವಿಮಾನಗಳನ್ನು ಖರೀದಿಸುವ ಪ್ರಸ್ತಾವಕ್ಕೆ ಬಹಳ ವರ್ಷಗಳಿಂದ ಅನುಮೋದನೆ ಸಿಕ್ಕಿರಲಿಲ್ಲ. ಈಗ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದ ರಕ್ಷಣಾ ಖರೀದಿ ಪರಿಷತ್ತು(ಡಿಎಸಿ) ಈ ಖರೀದಿಗೆ ಅನುಮೋದನೆ ನೀಡಿದೆ. ಪ್ರಸ್ತಾವಕ್ಕೆ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯ ಭದ್ರತೆ ಕುರಿತ ಸಂಪುಟ ಸಮಿತಿ (ಸಿಸಿಎಸ್) ಅಂತಿಮ ಮುದ್ರೆ ಒತ್ತುವುದು ಬಾಕಿ ಇದೆ.

ಯುದ್ಧ ವಿಮಾನಗಳ ಖರೀದಿಗೆ ತಗಲುವ ವೆಚ್ಚದ ಕುರಿತು ರಕ್ಷಣಾ ಸಚಿವಾಲಯ ಮಾಹಿತಿ ನೀಡಿಲ್ಲ. ಆದರೆ, ಇವುಗಳಿಗೆ ತಗಲುವ ವೆಚ್ಚ ₹2.90 ಲಕ್ಷ ಕೋಟಿಯಿಂದ ₹3.15 ಲಕ್ಷ ಕೋಟಿಯಷ್ಟು ಇರಲಿದೆ ಎಂದು ಅಂದಾಜಿಸಲಾಗಿದೆ.

‘ಮಿಲಿಟರಿ ಸಾಮಗ್ರಿಗಳ ಖರೀದಿಗಾಗಿ ರಕ್ಷಣಾ ಪಡೆಗಳು ಸಲ್ಲಿಸಿದ್ದ ಪ್ರಸ್ತಾವಕ್ಕೆ ಡಿಎಸಿ ಅನುಮೋದನೆ ನೀಡಿದೆ. ಈ ಮಿಲಿಟರಿ ಸಾಮಗ್ರಿಗಳ ಮೌಲ್ಯ ₹3.60 ಲಕ್ಷ ಕೋಟಿ ಎಂಬುದಾಗಿ ಅಂದಾಜಿಸಲಾಗಿದೆ’ ಎಂದು ಸಚಿವಾಲಯ ಹೇಳಿದೆ.

ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರು ಫೆ. 17ರಿಂದ 19ರ ವರೆಗೆ ಭಾರತಕ್ಕೆ ಭೇಟಿ ನೀಡಲಿದ್ದು, ಅದಕ್ಕೂ ಮೊದಲು ರಫೇಲ್ ಖರೀದಿಗೆ ಡಿಎಸಿ ಅನುಮೋದನೆ ನೀಡಿದೆ.

▶7



ಪ್ರಮುಖ ಅಂಶಗಳು

- ಇದು ಭಾರತ ಮತ್ತು ಫ್ರಾನ್ಸ್ ಸರ್ಕಾರಗಳ ನಡುವಿನ ಖರೀದಿ ಒಪ್ಪಂದವಾಗಿದೆ. ಯುದ್ಧವಿಮಾನಗಳ ದರ ಹಾಗೂ ಇತರ ಶಸ್ತ್ರಾಸ್ತ್ರ ಕುರಿತು ಡಾಸೊ ಏವಿಯೇಷನ್ ಹಾಗೂ ರಕ್ಷಣಾ ಸಚಿವಾಲಯದ ನಡುವೆ ಮಾತುಕತೆ ನಡೆಯಬೇಕಿದೆ. ಹೀಗಾಗಿ, ವರ್ಷಾಂತ್ಯಕ್ಕೂ ಮೊದಲು ಒಪ್ಪಂದ ಏರ್ಪಡುವ ಸಾಧ್ಯತೆ ಕಡಿಮೆ
- ಈ ಖರೀದಿ ಕಾರ್ಯಕ್ರಮದಡಿ, 18 ರಫೇಲ್ ಯುದ್ಧವಿಮಾನಗಳನ್ನು ಡಾಸೊ ಏವಿಯೇಷನ್ ಪೂರೈಕೆ ಮಾಡಲಿದೆ. ಉಳಿದ ಯುದ್ಧವಿಮಾನಗಳನ್ನು ಭಾರತದಲ್ಲಿ ತಯಾರಿಸಲಾಗುತ್ತದೆ
- 114 ಯುದ್ಧವಿಮಾನಗಳ ಪೈಕಿ 88 ಸಿಂಗಲ್ ಸೀಟರ್ ಹಾಗೂ 26 ಟ್ವಿನ್ ಸೀಟರ್ ಆವೃತ್ತಿಯ ರಫೇಲ್ ಇರಲಿವೆ
- ಭಾರತೀಯ ವಾಯುಪಡೆಗೆ ಮಂಜೂರಾದ ಯುದ್ಧವಿಮಾನಗಳ ಸ್ಕ್ವಾಡ್ರನ್‌ಗಳ ಸಂಖ್ಯೆ 42. ಈಗ, ಅವುಗಳ ಸಂಖ್ಯೆ 31ಕ್ಕೆ ಇಳಿದಿದೆ. ಈ ಸಂದರ್ಭದಲ್ಲಿ ರಫೇಲ್ ಖರೀದಿಗೆ ಮುಂದಾಗಿರುವುದು ಗಮನಾರ್ಹ. ಒಂದು ಸ್ಕ್ವಾಡ್ರನ್ 16–18 ಯುದ್ಧವಿಮಾನಗಳನ್ನು ಒಳಗೊಂಡಿರುತ್ತದೆ
- ನೌಕಾಪಡೆಗೆ ಹೆಚ್ಚುವರಿಯಾಗಿ ಬೋಯಿಂಗ್ ಕಂಪನಿಯಿಂದ 6 ಪಿ8ಐ ಯುದ್ಧವಿಮಾನಗಳ ಖರೀದಿಗೆ ಅನುಮೋದನೆ ನೀಡಲಾಗಿದೆ. ಇದಕ್ಕೆ ತಗಲುವ ವೆಚ್ಚ ₹28 ಸಾವಿರ ಕೋಟಿ ಆಗಿದೆ
- ₹15 ಸಾವಿರ ಕೋಟಿ ವೆಚ್ಚದಲ್ಲಿ ಎಎಸ್–ಎಚ್‌ಎಪಿಎಸ್ ಖರೀದಿಗೆ ಒಪ್ಪಿಗೆ ನೀಡಲಾಗಿದೆ

8 ಡಾರ್ನಿಯರ್ ಖರೀದಿ: ಎಚ್‌ಎಎಲ್ ಜೊತೆ ಒಪ್ಪಂದ

ಭಾರತೀಯ ಕರಾವಳಿ ರಕ್ಷಣಾ ಪಡೆಗೆ(ಐಸಿಜಿ) ₹2,300 ಕೋಟಿಗೂ ಅಧಿಕ ವೆಚ್ಚದಲ್ಲಿ 8 ಡಾರ್ನಿಯರ್–228 ಯುದ್ಧವಿಮಾನಗಳನ್ನು ಖರೀದಿಸಲು ಸಾರ್ವಜನಿಕ ವಲಯದ ಪ್ರಮುಖ ಕಂಪನಿ ಹಿಂದೂಸ್ತಾನ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಜೊತೆ ರಕ್ಷಣಾ ಸಚಿವಾಲಯ ಗುರುವಾರ ಒಪ್ಪಂದಕ್ಕೆ ಸಹಿ ಹಾಕಿದೆ.

▶7

ಲೋಕಾ ದಾಳಿ: ಕ್ರೈಸ್ ಎಸ್‌ಇ ಬಳಿ ₹1.70 ಕೋಟಿ ನಗದು

₹20 ಕೋಟಿ ಅಕ್ರಮ ಆಸ್ತಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಇಲಾಖೆಗಳ ನಾಲ್ವರು ಅಧಿಕಾರಿಗಳ ಮನೆಗಳ ಮೇಲೆ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ಸೂಪರಿಂಟೆಂಡೆಂಟ್ ಎಂಜಿನಿಯರ್ ಎಚ್‌.ಎಂ.ಜನಾರ್ದನ ಅವರ ಆಪ್ತರ ಮನೆಯಲ್ಲಿ ₹1.70 ಕೋಟಿ ನಗದು ಸೇರಿ ಒಟ್ಟು ₹19.71 ಕೋಟಿಯಷ್ಟು ಅಕ್ರಮ ಆಸ್ತಿ ಪತ್ತೆ ಮಾಡಿದ್ದಾರೆ.


ರಾಜ್ಯದ ವಿವಿಧ ಲೋಕಾಯುಕ್ತ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ, ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ದೂರುಗಳ ಆಧಾರದಲ್ಲಿ ಒಟ್ಟು 29 ಸ್ಥಳಗಳಲ್ಲಿ ಏಕಕಾಲಕ್ಕೆ ದಾಳಿ ನಡೆದಿತ್ತು.

ಗುರುವಾರದ ದಾಳಿಯಲ್ಲಿ ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಎಂಜಿನಿಯರ್ (ಕೆ–ಶಿಪ್) ಪುರುಷೋತ್ತಮ ದಾಸ್ ಹೆಗಡೆ ಅವರ ಬಳಿ ಅತಿಹೆಚ್ಚು ₹12.84 ಕೋಟಿ ಮೌಲ್ಯದ ಆಸ್ತಿ ಪತ್ತೆಯಾಗಿದ್ದರೆ, ಕ್ರೈಸ್‌ನ ಜನಾರ್ದನ ಅವರ ಬಳಿ ಅತಿಹೆಚ್ಚು ನಗದು ಸಿಕ್ಕಿದೆ. ಪುರುಷೋತ್ತಮ ದಾಸ್ ಅವರು ಎರಡು ಶಿಕ್ಷಣ ಸಂಸ್ಥೆಗಳನ್ನೂ ನಡೆಸುತ್ತಿದ್ದಾರೆ ಎಂಬುದಕ್ಕೆ ದಾಖಲೆಗಳು ದೊರೆತಿವೆ.

ಜನಾರ್ದನ ಅವರಿಗೆ ಸೇರಿದ ಆರು ಸ್ಥಳಗಳಲ್ಲಿ ದಾಳಿ ನಡೆಸಲಾಗಿತ್ತು. ಜನಾರ್ದನ ಅವರ ಸ್ನೇಹಿತ ಸುಜಯ್ ಶೆಟ್ಟಿ ಎಂಬವರ ಮನೆಯಲ್ಲಿ ₹1.70 ಕೋಟಿ ನಗದು ಪತ್ತೆಯಾಯಿತು. ಈಚಿನ ವರ್ಷಗಳಲ್ಲಿ ನಡೆದಿರುವ ದಾಳಿಗಳಲ್ಲಿ ಒಂದೇ ಕಡೆ ಅತಿ ಹೆಚ್ಚು ನಗದು ದೊರೆತಿದ್ದು ಈ ಪ್ರಕರಣದಲ್ಲೇ ಎಂದು ಲೋಕಾಯುಕ್ತ ಪೊಲೀಸ್ ಮೂಲಗಳು ತಿಳಿಸಿವೆ. ಶೋಧ ಮುಂದುವರೆದಿದ್ದು, ಆಸ್ತಿಯ ಮೊತ್ತ ಇನ್ನಷ್ಟು ಹೆಚ್ಚಾಗಬಹುದು ಎಂದು ಮೂಲಗಳು ಹೇಳಿವೆ.

ಗಳಿಕೆಯಲ್ಲಿ ಅಕ್ರಮದ್ದೇ ಸಿಂಹಪಾಲು


(ಕೋಟಿ ₹ ಗಳಲ್ಲಿ)



ಎಚ್‌.ಎಂ.ಜನಾರ್ದನ್ ಅವರ ಸ್ನೇಹಿತ ಸುಜಯ್ ಶೆಟ್ಟಿ ಅವರ ಮನೆಯಲ್ಲಿ ಸಿಕ್ಕ ನೋಟುಗಳು

ಇನ್ನೊಂದು ಸುದ್ದಿ ▶6

ಚಿನಕುರುಳಿ ಪ್ರಕಾಶ್ ಶೆಟ್ಟಿ



ಶಾಸಕ ಬೈರತಿ ಕೊನೆಗೂ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿ ಶೀಟರ್ ಬಿಕ್ಲು ಶಿವು ಅಲಿಯಾಸ್ ಶಿವಕುಮಾರ್ ಕೊಲೆ ಪ್ರಕರಣದ ಐದನೇ ಆರೋಪಿ, ಕೆ.ಆರ್. ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ ಅವರನ್ನು ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪೊಲೀಸರು, ಗುರುವಾರ ರಾತ್ರಿ ಬಂಧಿಸಿದರು.

ನಿರೀಕ್ಷಣಾ ಜಾಮೀನು ಕೋರಿ ಎರಡನೇ ಬಾರಿಗೆ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಮಂಗಳವಾರ ತಿರಸ್ಕರಿಸಿದ್ದರಿಂದ ಜಾಮೀನಿಗಾಗಿ ಬೈರತಿ ಬಸವರಾಜ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.



ಬೈರತಿ ಬಸವರಾಜ

ಸುಪ್ರೀಂ ಕೋರ್ಟ್‌ನಲ್ಲೂ ಜಾಮೀನು ಅರ್ಜಿ ಗುರುವಾರ ಬೆಳಿಗ್ಗೆ ವಜಾಗೊಂಡಿತ್ತು. ಅದರ ಬೆನ್ನಲ್ಲೇ ಶಾಸಕರ ಬಂಧನಕ್ಕೆ ಸಿಐಡಿ ವಿಶೇಷ ತಂಡಗಳು ಮಹಾರಾಷ್ಟ್ರ, ಆಂಧ್ರಪ್ರದೇಶ ರಾಜ್ಯಗಳಲ್ಲದೆ, ಬೆಂಗಳೂರು ಹೊರವಲಯದಲ್ಲಿ ಹುಡುಕಾಟ ನಡೆಸಿದ್ದವು.

ಅಹಮದಾಬಾದ್‌ನಿಂದ ವಿಮಾನದ ಮೂಲಕ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬೈರತಿ ಬಸವರಾಜ ಅವರು ಬರುತ್ತಿರುವ ಮಾಹಿತಿ ತಿಳಿದಿದ್ದ ಸಿಐಡಿ ಪೊಲೀಸರು, ದೇವನಹಳ್ಳಿ ಪೊಲೀಸರಿಗೆ ಮಾಹಿತಿ ನೀಡಿದ್ದರು. ಎಸಿಪಿ ಹರ್ಷ ಅವರ ನೇತೃತ್ವದಲ್ಲಿ ಪೊಲೀಸರು, ವಿಮಾನ ನಿಲ್ದಾಣದ ಟರ್ಮಿನಲ್–1ರಲ್ಲಿ ಕಾದಿದ್ದರು. ವಿಮಾನದಿಂದ ಇಳಿದು ಹೊರಕ್ಕೆ ಬರುತ್ತಿದ್ದಂತೆಯೇ ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದು ಸಿಐಡಿ ಕಚೇರಿಗೆ ಕರೆ ತಂದು, ತನಿಖಾಧಿಕಾರಿಗೆ ಹಸ್ತಾಂತರಿಸಿದರು ಎಂದು ಮೂಲಗಳು ತಿಳಿಸಿವೆ.

ಕಚೇರಿಯಲ್ಲಿ ವಿಚಾರಣೆ: ಬೈರತಿ ಅವರನ್ನು ಪ್ರಾಥಮಿಕ ವಿಚಾರಣೆ ನಡೆಸಿದ ಸಿಐಡಿ ಪೊಲೀಸರು, ಹೇಳಿಕೆ ದಾಖಲಿಸಿಕೊಂಡರು. ಬೈರತಿ ಅವರನ್ನು ಹೆಚ್ಚಿನ ವಿಚಾರಣೆಗೆ ತಮ್ಮ ಕಸ್ಟಡಿಗೆ ಪಡೆದುಕೊಳ್ಳಲಾಗುವುದು ಎಂದು ಮೂಲಗಳು ತಿಳಿಸಿವೆ.

▶6

ಶಿವಕುಮಾರ್‌ಗೆ ರಾಹುಲ್ ‘ಅಭಯ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಅಧಿಕಾರ ಹಂಚಿಕೆ ಸೂತ್ರ’ದಂತೆ ಕರ್ನಾಟಕ ಸರ್ಕಾರದ ನಾಯಕತ್ವಕ್ಕಾಗಿ ಕಾಯುತ್ತಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್‌ನ ವರಿಷ್ಠ ನಾಯಕ ರಾಹುಲ್ ಗಾಂಧಿ ಹಾಗೂ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರನ್ನು ಗುರುವಾರ ಇಲ್ಲಿ ಭೇಟಿ ಮಾಡಿ ಹಕ್ಕೊತ್ತಾಯ ಮಂಡಿಸಿದರು.


ಅಸ್ಸಾಂ ವಿಧಾನಸಭಾ ಚುನಾವಣೆಗೆ ಕಾರ್ಯತಂತ್ರ ಹೆಣೆಯಲು ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ನಿವಾಸದಲ್ಲಿ ನಡೆದ ಸಭೆಯಲ್ಲಿ ಶಿವಕುಮಾರ್ ಭಾಗಿಯಾದರು. ಈ ವೇಳೆ, ರಾಹುಲ್ ಹಾಗೂ ಪ್ರಿಯಾಂಕಾ ಅವರೊಂದಿಗೆ ರಾಜ್ಯ ಕಾಂಗ್ರೆಸ್‌ನ ಅಧಿಕಾರ ಹಸ್ತಾಂತರ ಬಿಕ್ಕಟ್ಟಿನ ಬಗ್ಗೆ ಪ್ರಸ್ತಾಪಿಸಿದರು. ‘ಶೀಘ್ರದಲ್ಲೇ ಇಬ್ಬರಿಗೂ (ಸಿದ್ದರಾಮಯ್ಯ ಹಾಗೂ ಶಿವಕುಮಾರ್) ಬುಲಾವ್ ನೀಡಿ ಗೊಂದಲ ನಿವಾರಿಸುತ್ತೇವೆ’ ಎಂದು ರಾಹುಲ್ ಅಭಯ ನೀಡಿದರು ಎಂದು ಮೂಲಗಳು ತಿಳಿಸಿವೆ.

▶6

ಯಶಸ್ಸಿಗೆ ಸ್ವಲ್ಪ ಶ್ರಮ ಬೇಕಾಗುತ್ತದೆ: ಡಿಕೆಶಿ

‘ನಾವು ರಾಜಕಾರಣದಲ್ಲಿದ್ದೇವೆ, ರಾಜಕಾರಣ ಮಾಡಲೇಬೇಕು. ನನಗೆ ಸದಾ ಯಶಸ್ಸು ಸಿಗುತ್ತದೆ. ಸ್ವಲ್ಪ ಶ್ರಮ ಬೇಕಾಗುತ್ತದೆ ಅಷ್ಟೇ’ ಎಂದು ಡಿ.ಕೆ.ಶಿವಕುಮಾರ್ ಮಾರ್ಮಿಕವಾಗಿ ಹೇಳಿದರು.

‘ಅಧಿಕಾರ ಹಂಚಿಕೆ ವಿಷಯವಾಗಿ ಹೈಕಮಾಂಡ್ ನಾಯಕರೊಂದಿಗೆ ಚರ್ಚೆ ನಡೆಸಿಲ್ಲ. ಪಕ್ಷ ತನ್ನದೇ ಆದ ಗುರಿ ಹೊಂದಿದ್ದು, ಪಕ್ಷದ ಯಶಸ್ಸು ಹಾಗೂ ಪಕ್ಷದ ಹಿತಾಸಕ್ತಿ, ಕರ್ನಾಟಕ ಹಾಗೂ ದೇಶದ ಹಿತದೃಷ್ಟಿ ಆಧಾರದ ಮೇಲೆ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರು ಸೂಕ್ತ ಸಮಯದಲ್ಲಿ ತೀರ್ಮಾನ ಮಾಡುತ್ತಾರೆ. ಮಾಧ್ಯಮಗಳು ಹಾಗೂ ಬೇರೆಯವರು ಈ ಭೇಟಿಗೆ ಹೊಸ ರೂಪ, ಬೇರೆ ಬಣ್ಣ ನೀಡುತ್ತಿದ್ದೀರಿ. ನಮಗೆ ಈ ಭೇಟಿಯಲ್ಲಿ ವಿಶೇಷವೇನಿಲ್ಲ’ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



▶6


ಜನುಮದಿನದ ಶುಭಾಶಯಗಳು
ಬಡವರ ಬಂಧು, ಎಲ್ಲಾ ವರ್ಗಗಳ ಹಿತ ಚಿಂತಕರು, ನಮ್ಮ ನಿಮ್ಮೆಲ್ಲರ ನೆಚ್ಚಿನ
ನಾಯಕರು, ಅಭಿವೃದ್ಧಿಗಳ ಹರಿಕಾರರು ಪುಲಕೇಶಿನಗರ ವಿಧಾನಸಭಾ ಕ್ಷೇತ್ರದ ಜನಪ್ರಿಯ
ಮಾಜಿ ಶಾಸಕರಾದ ಶ್ರೀ ಆರ್. ಅಖಂಡ ಶ್ರೀನಿವಾಸಮೂರ್ತಿ ರವರಿಗೆ
ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು
ಶುಭಕೋರುವವರು:
ಪುಲಕೇಶಿನಗರದ ವಿಧಾನಸಭಾ ಕ್ಷೇತ್ರದ
ಪದಾಧಿಕಾರಿಗಳು ಮತ್ತು ಕಾರ್ಯಕರ್ತರು
ಅಖಂಡ ಶ್ರೀನಿವಾಸಮೂರ್ತಿಯವರ ಅಭಿಮಾನಿಗಳ ಬಳಗ

ಚಿಟಿಕೆ ಸುದ್ದಿ

ಡಿ.ಆರ್ ನಾಗರಾಜ್ ಪ್ರತಿಷ್ಠಾನಕ್ಕೆ ಆಗ್ರಹ: ಸಿ.ಎಂಗೆ ಪತ್ರ


ಡಿ.ಆರ್. ನಾಗರಾಜ್

ಬೆಂಗಳೂರು: ಸಾಂಸ್ಕೃತಿಕ ಚಿಂತಕ ಡಿ.ಆರ್. ನಾಗರಾಜ್ ಅವರ ಹೆಸರಿನಲ್ಲಿ ಪ್ರತಿಷ್ಠಾನ ಆರಂಭಿಸಬೇಕು ಎಂದು ಕೋರಿ ವಿಧಾನ ಪರಿಷತ್ ಮಾಜಿ ಸದಸ್ಯ ಮೋಹನ್ ಕೊಂಡಜ್ಜಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ಪ್ರತಿಷ್ಠಾನ ಸ್ಥಾಪನೆಗೆ ರಾಜ್ಯದ ಚಿಂತಕರು, ಸಾಹಿತಿಗಳು, ಹೋರಾಟಗಾರರು ಸಹಿ ಮಾಡುವ ಮೂಲಕ ಬೆಂಬಲ ವ್ಯಕ್ತಪಡಿಸಿದ್ದಾರೆ. ಇಂತಹ ಮಹತ್ವದ ಸಾಂಸ್ಕೃತಿಕ, ಸಾಮಾಜಿಕ ಹಾಗೂ ರಾಜಕೀಯ ಚಿಂತಕರಾದ ಡಿ.ಆರ್.ಎನ್ ಪ್ರತಿಷ್ಠಾನ ಮಾಡಬೇಕಾದದ್ದು ಅತ್ಯಂತ ಅರ್ಥಪೂರ್ಣವಾದ ಕೆಲಸ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ವಾಹನಗಳ ಹರಾಜು

ಬೆಂಗಳೂರು: ವಾರಸುದಾರರು ಇಲ್ಲದ 24 ವಾಹನಗಳನ್ನು ಕೊತ್ತನೂರು ಪೊಲೀಸ್ ಠಾಣೆ ಆವರಣದಲ್ಲಿ ಇದೇ 15ರಂದು ಬೆಳಿಗ್ಗೆ 10ಕ್ಕೆ ಹರಾಜು ಹಾಕಲಾಗುತ್ತದೆ.

ನ್ಯಾಯಾಲಯದ ಆದೇಶದಂತೆ ಸದರಿ ವಾಹನಗಳನ್ನು ಹರಾಜು ಹಾಕುತ್ತಿದ್ದು, ಆಸಕ್ತರು ಹರಾಜಿನಲ್ಲಿ ಭಾಗವಹಿಸಿ ವಾಹನಗಳನ್ನು ಖರೀದಿಸಬಹುದು ಎಂದು ಕೊತ್ತನೂರು ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗೆ ಸಂಪರ್ಕ ಸಂಖ್ಯೆ: 080–22943694

ಪ್ರೇಕ್ಷಕರ ಸ್ಟ್ಯಾಂಡ್‌ಗೆ ಶಾಂತಾ ರಂಗಸ್ವಾಮಿ ನಾಮಕರಣ ಇಂದು

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಹೆಗ್ಗುರುತು ಎಂ. ಚಿನ್ನಸ್ವಾಮಿ ಕ್ರೀಡಾಂಗಣವು (1974–75 ರಿಂದ 2025–26) 50 ವರ್ಷ ಪೂರೈಸಿದ ಪ್ರಯುಕ್ತ ಇದೇ 13ರಂದು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇದೇ ವೇಳೆ ಭಾರತ ಮಹಿಳಾ ಕ್ರಿಕೆಟ್ ತಂಡದ ಮಾಜಿ ನಾಯಕಿ ಶಾಂತಾ ರಂಗಸ್ವಾಮಿ ಅವರ ಹೆಸರನ್ನು ಪ್ರೇಕ್ಷಕರ ಸ್ಟ್ಯಾಂಡ್‌ಗೆ ನಾಮಕರಣ ಮಾಡಲಾಗುತ್ತದೆ.


ಶಾಂತಾ ರಂಗಸ್ವಾಮಿ

ಕ್ರೀಡಾಂಗಣದಲ್ಲಿ ಸಂಜೆ 6.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಕೆಎಸ್‌ಸಿಎ ಕ್ರಿಕೆಟ್ ಅಕಾಡೆಮಿಯ ಅನಾವರಣ, 2026-27ರ ಋತುವಿನ ಸಮಗ್ರ ಮಾರ್ಗಸೂಚಿ ಮತ್ತು ಅಭಿವೃದ್ಧಿ ಯೋಜನೆಗಳ ಪ್ರಸ್ತುತಿ, 2026-27ರ ಋತುವಿನ ಕ್ರಿಕೆಟ್ ಟೂರ್ನಿಗಳ ಉದ್ಘಾಟನೆ, ಸ್ಪರ್ಧಾತ್ಮಕ ಕ್ರಿಕೆಟ್ ಕ್ಯಾಲೆಂಡರ್‌ನ ಘೋಷಣೆ ನಡೆಯಲಿದೆ. ಕ್ರಿಕೆಟ್ ದಿಗ್ಗಜರಾದ ಅನಿಲ್ ಕುಂಬ್ಳೆ ಹೆಸರನ್ನು 'ಪೆವಿಲಿಯನ್ ಎಂಡ್'ಗೆ, ರಾಹುಲ್ ದ್ರಾವಿಡ್ ಹೆಸರನ್ನು 'ಉತ್ತರ ಎಂಡ್'ಗೆ ಇಡಲಾಗುತ್ತದೆ ಎಂದು ಕೆಎಸ್‌ಸಿಎ ಪ್ರಕಟಣೆ ತಿಳಿಸಿದೆ.

ಏಪ್ರಿಲ್ 26ಕ್ಕೆ ಟಿಸಿಎಸ್ ವಿಶ್ವ ಟೆನ್ ಕೆ ಓಟ

ಬೆಂಗಳೂರು: 18ನೇ ಆವೃತ್ತಿಯ ಟಿಸಿಎಸ್ ವಿಶ್ವ ಟೆನ್ ಕೆ ಓಟವು ಏಪ್ರಿಲ್ 26ರ ಭಾನುವಾರ ನಡೆಯಲಿದೆ. ವಿವಿಧ ವಿಭಾಗಗಳಲ್ಲಿ ನಡೆಯಲಿರುವ ಸ್ಪರ್ಧೆಗಳಿಗೆ ನೋಂದಣಿ ಆರಂಭವಾಗಿದೆ.

'ಪ್ರತಿ ಬಾರಿಯಂತೆ ಕಬ್ಬನ್ ರಸ್ತೆಯಲ್ಲಿ ಓಟ ಆರಂಭವಾಗಲಿದ್ದು, ಮಾಣೆಕ್ ಶಾ ಪರೇಡ್ ಮೈದಾನದ ಮುಂಭಾಗದಲ್ಲಿ ಸಂಪನ್ನಗೊಳ್ಳಲಿದೆ. ಈ ಓಟವು ವಿಶ್ವ ಅಥ್ಲೆಟಿಕ್ಸ್ ಗೋಲ್ಡ್ ಲೇಬಲ್ ರೋಡ್ ರೇಸ್ ದರ್ಜೆ ಹೊಂದಿದೆ. ವಿಜೇತರಿಗೆ ಒಟ್ಟು ₹1.9 ಕೋಟಿ ಬಹುಮಾನ ನೀಡಲಾಗುವುದು' ಎಂದು 'ಪ್ರೊಕ್ಯಾಮ್ ಇಂಟರ್‌ನ್ಯಾಷ-ನಲ್'ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ವಿವೇಕ್ ಸಿಂಗ್ ಶುಕ್ರವಾರ ತಿಳಿಸಿದರು.

'ಎಂದೆಂದಿಗೂ ಬೆಂಗಳೂರು' ಥೀಮ್ ಅಡಿಯಲ್ಲಿ ಈ ವರ್ಷದ ಓಟವನ್ನು ಆಯೋಜಿಸಲಾಗಿದೆ. ಜನಪ್ರಿಯ ಮಜಾ ರನ್ ಸ್ಪರ್ಧೆಯು ಈ ಬಾರಿಯೂ ಇರಲಿದೆ. ಓಟದಲ್ಲಿ ಪಾಲ್ಗೊಳ್ಳಲು ಇಚ್ಛಿಸುವವರು https://tcsworld10k.procam.in/ಗೆ ಭೇಟಿ ನೀಡಿ ನೋಂದಾಯಿಸಿಕೊಳ್ಳಬೇಕು ಎಂದು ಹೇಳಿದರು.

ನಿಧನ ವಾರ್ತೆ

ಪಾಪಣ್ಣ

ಬೆಂಗಳೂರು: ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್‌ನ (ಟಿಪಿಎಂಎಲ್) ಪ್ರಸರಣ ವಿಭಾಗದಲ್ಲಿ ಕಾರ್ಯನಿರ್ವಹಿಸಿ, ನಿವೃತ್ತರಾಗಿದ್ದ ಪಾಪಣ್ಣ (72) ಗುರುವಾರ ನಿಧನರಾದರು. ಅಟ್ಟೂರು ಲೇಔಟ್‌ನಲ್ಲಿ ವಾಸವಿದ್ದ ಅವರಿಗೆ ಪತ್ನಿ ಹಾಗೂ ಮೂವರು ಪುತ್ರಿಯರಿದ್ದಾರೆ.



ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಅಟ್ಟೂರು ಲೇಔಟ್‌ನ ರುದ್ರಭೂಮಿಯಲ್ಲಿ ಪಾಪಣ್ಣ ಅವರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಟೆಂಡರ್‌ಗೆ ಆಕ್ಷೇಪ: ನೋಟಿಸ್

ಬೆಸ್ಕಾಂ ವ್ಯವಸ್ಥಾಪಕ ಮತ್ತು ತಾಂತ್ರಿಕ ನಿರ್ದೇಶಕರ ವಿರುದ್ಧ ಭ್ರಷ್ಟಾಚಾರ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಸ್ಕಾಂ (ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ) ಅಧಿಕಾರಿಗಳ ಕಾರ್ಯ ನಿರ್ವಹಣೆಗಾಗಿ ಬಾಡಿಗೆ ವಾಹನ ಪಡೆದುಕೊಳ್ಳಲು ಕರೆಯಲಾಗಿದ್ದ ಟೆಂಡರ್‌ಗಳನ್ನು ಕಾರಣವಿಲ್ಲದೆ ರದ್ದುಪಡಿಸಿ ಹೊಸ ಟೆಂಡರ್ ಕರೆಯಲಾಗಿದೆ' ಎಂದು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಬೆಸ್ಕಾಂಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಆರ್.ಟಿ.ನಗರ ಮನೋರಾಯನ ಪಾಳ್ಯದ ಅಶ್ವತ್ಥ ಕುಮಾರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಕೆಲ ಕಾಲ ವಿಚಾರಣೆ ಆಲಿಸಿದ ನ್ಯಾಯಪೀಠ, ರಾಜ್ಯ ಇಂಧನ ಇಲಾಖೆ ಸೇರಿದಂತೆ ಇತರೆ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಏಪ್ರಿಲ್ 15ಕ್ಕೆ ಮುಂದೂಡಿತು.



ಏನಿದು ಅರ್ಜಿ?: ಬೆಸ್ಕಾಂ ಅಧಿಕಾರಿಗಳ ಸಂಚಾರಕ್ಕೆ 2 ವರ್ಷದ ಅವಧಿಗೆ 593 ವಾಹನಗಳನ್ನು ಬಾಡಿಗೆ ಸೇವೆ ಪಡೆದುಕೊಳ್ಳಲು ₹52.28 ಕೋಟಿ ಮೊತ್ತದ ಟೆಂಡರ್ ಹಾಗೂ ಬೆಸ್ಕಾಂ ವ್ಯಾಪ್ತಿಯ ಸರ್ವಿಸ್ ಸ್ಟೇಷನ್‌ಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ 531 ವಾಹನಗಳನ್ನು ಬಾಡಿಗೆ ಪಡೆದುಕೊಳ್ಳಲು ₹63.08 ಕೋಟಿ ಮೊತ್ತದ ಪ್ರತ್ಯೇಕ ಟೆಂಡರ್ ಅನ್ನು 2021-22ರಲ್ಲಿ ಕರೆಯಲಾಗಿತ್ತು.

'ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರು ಹಾಗೂ ತಾಂತ್ರಿಕ ನಿರ್ದೇಶಕರು ತಮ್ಮವರಿಗೆ ಅನುಕೂಲ ಮಾಡಿಕೊಡಲು 19 ಪ್ಯಾಕೇಜ್‌ಗಳಲ್ಲಿ ಈ ಟೆಂಡರ್ ಕರೆದಿದ್ದರು. ಉದ್ದೇಶ ಈಡೇರದೇ ಹೋದಾಗ ಕರೆಯಲಾಗಿದ್ದ ಟೆಂಡರ್ ಅನ್ನು ವಿನಾಕಾರಣ ರದ್ದುಪಡಿಸಿ 2025ರ ಜೂನ್‌ನಿಂದ ಡಿಸೆಂಬರ್ ತನಕ 5 ಬಾರಿ ಹೊಸದಾಗಿ ಟೆಂಡರ್ ಕರೆಯಲಾಗಿದೆ. ಇದು ರಾಜ್ಯದ ಬೊಕ್ಕಸಕ್ಕೆ ಹೊರೆಯಾಗಲಿದೆ. ಆದ್ದರಿಂದ, ಟೆಂಡರ್ ಪ್ರಕ್ರಿಯೆಗೆ ತಡೆ ನೀಡಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

'ದೂರು ತಿರಸ್ಕೃತವಾದರೆ ನೇರ ಹೈಕೋರ್ಟ್'

ಬೆಂಗಳೂರು: 'ಪೊಲೀಸ್ ಠಾಣೆಯಲ್ಲಿ ದೂರನ್ನು ತಿರಸ್ಕರಿಸಿದರೆ ದೂರುದಾರರು ನೇರವಾಗಿ ಹೈಕೋರ್ಟ್ ಮೊರೆಹೋಗಬಹುದು' ಎಂದು ಪ್ರಕರಣವೊಂದರಲ್ಲಿ ಹೈಕೋರ್ಟ್ ಆದೇಶಿಸಿದೆ.

'ನಮ್ಮ ದೂರನ್ನು ಪರಿಗಣಿಸಲು ಹುಳಿಮಾವು ಪೊಲೀಸ್ ಠಾಣೆ ಅಧಿಕಾರಿಗೆ ನಿರ್ದೇಶಿಸಬೇಕು' ಎಂದು ಕೋರಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು ಹೋಬಳಿಯ ಬಿ.ಎಚ್.ನಾಗರಾಜು ಸಲ್ಲಿಸಿದ್ದ ರಿಟ್ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ–2023ರ (ಬಿಎನ್‌ಎಸ್‌ಎಸ್) ಕಲಂ 173(4)ರ ಅಡಿಯಲ್ಲಿ ಸೂಚಿಸಲಾದ ಉನ್ನತ ಅಧಿಕಾರಿ ಮತ್ತು ಮ್ಯಾಜಿಸ್ಟ್ರೇಟ್ ಅವರನ್ನು ಸಂಪರ್ಕಿಸುವ ವಿಧಾನವು ಮಾಹಿತಿಯನ್ನು ದಾಖಲಿಸಲು ನಿರಾಕರಿಸುವ ಪ್ರಕರಣಗಳಿಗೆ ಮಾತ್ರವೇ ಅನ್ವಯಿಸುತ್ತದೆ. ಹೊರತಾಗಿ ತರ್ಕಬದ್ಧ ಅನುಮೋದನೆಯ ಮೂಲಕ ದೂರನ್ನು ತಿರಸ್ಕರಿಸುವ ಪ್ರಕರಣಗಳಿಗೆ ವಿಸ್ತರಿಸುವುದಿಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಚ್.ಪವನಚಂದ್ರ ಶೆಟ್ಟಿ ವಾದ ಮಂಡಿಸಿದ್ದರು.

ಜಮೀರ್ ಆಪ್ತನ ವಿರುದ್ಧದ ಪ್ರಕರಣಕ್ಕೆ ತಡೆ

ಬೆಂಗಳೂರು: ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರ ಆಪ್ತ ಕಾರ್ಯದರ್ಶಿ ಸರ್ಫರಾಜ್ ಖಾನ್ ವಿರುದ್ಧದ ಲೋಕಾಯುಕ್ತ ತನಿಖೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

'ಲೋಕಾಯುಕ್ತ ಪೊಲೀಸರು ನನ್ನ ವಿರುದ್ಧ ದಾಖಲಿಸಿರುವ ಎಫ್‌ಐಆರ್ ಹಾಗೂ ವಿಚಾರಣಾ ನ್ಯಾಯಾಲಯದ ವಿಚಾರಣೆ ರದ್ದುಪಡಿಸಬೇಕು' ಎಂದು ಕೋರಿ ಸರ್ಫರಾಜ್ ಖಾನ್ (60) ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

'ಅರ್ಜಿದಾರರು ಸಲ್ಲಿಸಿರುವ ಮಾಹಿತಿಗಳನ್ನು ಗಮನಿಸಿದಾಗ ಎಲ್ಲವೂ ಆದಾಯ ತೆರಿಗೆ ಇಲಾಖೆಯಲ್ಲಿ ಘೋಷಿಸಿಕೊಂಡ ವಿವರಗಳೇ ಆಗಿವೆ. ಇದನ್ನು ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಥವಾ ಆದಾಯ ಮೀರಿ ಆಸ್ತಿ ಗಳಿಸಿದ ಆರೋಪದಡಿ ಪರಿಗಣಿಸಲು ಆಗದು' ಎಂಬ ಅಭಿಪ್ರಾಯಪಟ್ಟಿತು.

ಲೋಕಾಯುಕ್ತ ಪೊಲೀಸರು ಅನುಮಾನ ವ್ಯಕ್ತಪಡಿಸಿರುವ ₹2.84 ಕೋಟಿ ಬಗ್ಗೆ ಸ್ಪಷ್ಟನೆ ನೀಡಿ ಎಂದು ಸರ್ಫರಾಜ್ ಖಾನ್ ಪರ ವಕೀಲರಿಗೆ ಸೂಚಿಸಿ, ವಿಚಾರಣೆಯನ್ನು ಇದೇ 27ಕ್ಕೆ ಮುಂದೂಡಿತು.

ಕುಮಾರಸ್ವಾಮಿ–ಚಂದ್ರಶೇಖರ್‌ಗೆ ಹೈಕೋರ್ಟ್ ಸಲಹೆ

ಸ್ವಪ್ರತಿಷ್ಠೆ ಬಿಡಿ; ರಾಜಿ ಮಾಡಿಕೊಳ್ಳಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬೆದರಿಕೆ ಹಾಕಿದ ಪ್ರಕರಣ
- ಪ್ರಕರಣದಿಂದ ಇಬ್ಬರಿಗೂ ಲಾಭ ಆಗುವುದಿಲ್ಲ: ಹೈಕೋರ್ಟ್

ಬೆಂಗಳೂರು: 'ಲೋಕಾಯುಕ್ತ ಎಡಿಜಿಪಿ ಮತ್ತು ಎಸ್‌ಐಟಿ ಮುಖ್ಯಸ್ಥ ಎಂ.ಚಂದ್ರಶೇಖರ್ ಅವರಿಗೆ ಬೆದರಿಕೆ ಹಾಕಿದ ಪ್ರಕರಣವನ್ನು ರಾಜಿ ಸಂಧಾನದ ಮೂಲಕ ಬಗೆಹರಿಸಿಕೊಳ್ಳಿ' ಎಂದು ಹೈಕೋರ್ಟ್, ಪ್ರಕರಣದ ಆರೋಪಿಯಾದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮತ್ತು ಫಿರ್ಯಾದುದಾರ ಚಂದ್ರಶೇಖರ್ ಅವರಿಗೆ ಮೌಖಿಕವಾಗಿ ಸೂಚಿಸಿದೆ.

'ನಮ್ಮ ವಿರುದ್ಧ ಸಂಜಯನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ ಮತ್ತು ಸುರೇಶ್ ಬಾಬು ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕುಮಾರಸ್ವಾಮಿ ಪರ ಪದಾಂಕಿತ ಹಿರಿಯ ವಕೀಲ ಹಷ್ಮತ್ ಪಾಷ ಅವರು, 'ಚಂದ್ರಶೇಖರ್ ಅವರಿಗೆ ಕುಮಾರಸ್ವಾಮಿ ಬೆದರಿಕೆ ಹಾಕಿಲ್ಲ. ಅವರಿಬ್ಬರ ನಡುವೆ ಯಾವುದೇ ಸಂಭಾಷಣೆಯೇ ನಡೆದಿಲ್ಲ. ಕುಮಾರಸ್ವಾಮಿ ಮಾಧ್ಯಮದವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ್ದನ್ನೇ ಆಧರಿಸಿ ಚಂದ್ರಶೇಖರ್ ದೂರು ದಾಖಲಿಸಿದ್ದಾರೆ' ಎಂದು ಪ್ರಕರಣಕ್ಕೆ ಸಂಬಂಧಿಸಿದ ಬೆಳವಣಿಗೆಗಳನ್ನು ನ್ಯಾಯಪೀಠಕ್ಕೆ ವಿವರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ, 'ಕುಮಾರಸ್ವಾಮಿ ಮತ್ತು ಚಂದ್ರಶೇಖರ್ ಇಬ್ಬರೂ ಸಾರ್ವಜನಿಕ ವ್ಯವಸ್ಥೆಯಲ್ಲಿ ಇರುವವರು. ಸಾರ್ವಜನಿಕ ಜೀವನದಲ್ಲಿ ಇಂತಹ ಸಂದರ್ಭಗಳು ಎದುರಾಗುವುದು ಸಹಜ. ಮುಂದೆ ಎಲ್ಲಿಯಾದರೂ ಇಬ್ಬರೂ ಮುಖಾಮುಖಿ ಭೇಟಿಯಾಗುವ ಸಾಧ್ಯತೆ ಇದ್ದೇ ಇರುತ್ತದೆ. ಹಾಗಾಗಿ, ಇಬ್ಬರೂ ಸ್ವ-ಪ್ರತಿಷ್ಠೆ ಕೈಬಿಟ್ಟು, ಪರಸ್ಪರ ಚರ್ಚಿಸಿ, ರಾಜಿ ಸಂಧಾನ ಮಾಡಿಕೊಂಡು ಪ್ರಕರಣ ಹಿಂಪಡೆಯುವುದು ಸೂಕ್ತ' ಎಂದರು.

'ಪ್ರಕರಣ ಮುಂದುವರಿಸುವುದರಿಂದ ಇಬ್ಬರಿಗೂ ಯಾವುದೇ ಲಾಭವಾಗುವುದಿಲ್ಲ. ಕೇವಲ ಮಾಧ್ಯಮಗಳಿಗೆ ಸುದ್ದಿಯಾಗುತ್ತದೆ ಅಷ್ಟೇ. ಹಾಗಾಗಿ, ಪ್ರಕರಣವನ್ನು ಚರ್ಚೆಯ ಮೂಲಕ ಇತ್ಯರ್ಥಪಡಿಸಿಕೊಳ್ಳುವ ಬಗ್ಗೆ ದೂರುದಾರರು ಮತ್ತು ಅರ್ಜಿದಾರರು ಮುಕ್ತ ಮನಸ್ಸಿನಿಂದ ಮಾತನಾಡಿಕೊಳ್ಳಲಿ' ಎಂದರು. ಇದಕ್ಕೆ ಹಷ್ಮತ್ ಪಾಷ ಸಮ್ಮತಿ ಸೂಚಿಸಿದರಲ್ಲದೆ, ಕುಮಾರಸ್ವಾಮಿ ಅವರಿಗೆ ನ್ಯಾಯಾಲಯದ ಸಲಹೆಯನ್ನು ತಿಳಿಸುವುದಾಗಿ ಭರವಸೆ ನೀಡಿದರು.

ಇದಕ್ಕೆ ನ್ಯಾಯಮೂರ್ತಿ ಅವರು, 'ಕುಮಾರಸ್ವಾಮಿ ಮತ್ತು ಚಂದ್ರಶೇಖರ್ ಪ್ರಕರಣ ಹಿಂಪಡೆಯುವ ಕುರಿತು ಪರಸ್ಪರ ಚರ್ಚಿಸಿ ನ್ಯಾಯಾಲಯಕ್ಕೆ ತಮ್ಮ ತೀರ್ಮಾನ ಏನೆಂಬುದನ್ನು ತಿಳಿಸಬೇಕು. ಒಂದೊಮ್ಮೆ ಪ್ರಕರಣವನ್ನು ಮುಂದುವರಿಸಲು ತೀರ್ಮಾನಿಸಿದರೆ ನ್ಯಾಯಾಲಯ ಮೆರಿಟ್ ಆಧಾರದಲ್ಲಿ ವಿಚಾರಣೆ ನಡೆಸಿ ಕಾನೂನು ಪ್ರಕಾರ ತನ್ನ ನಿರ್ಧಾರ ಕೈಗೊಳ್ಳಲಿದೆ' ಎಂದ ತಿಳಿಸಿ ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಿದರು.

ದೂರು: 'ಕುಮಾರಸ್ವಾಮಿ ನನ್ನ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿ ಬೆದರಿಕೆ ಹಾಕಿದ್ದಾರೆ' ಎಂದು ಆರೋಪಿಸಿ ಚಂದ್ರಶೇಖರ್, ಸಂಜಯನಗರ ಪೊಲೀಸ್ ಠಾಣೆಯಲ್ಲಿ 2024ರಲ್ಲಿ ದೂರು ದಾಖಲಿಸಿದ್ದರು. ಈ ದೂರನ್ನು ಆಧರಿಸಿ ಭಾರತೀಯ ನ್ಯಾಯ ಸಂಹಿತಾ–2023ರ (ಬಿಎನ್‌ಎಸ್) ಕಲಂ 224 (ಸರ್ಕಾರಿ ನೌಕರರಿಗೆ ಅವರ ಅಧಿಕೃತ ಕರ್ತವ್ಯಗಳ ಮೇಲೆ ಪ್ರಭಾವ ಬೀರಲು ಬೆದರಿಕೆ ಹಾಕಿದ) ಆರೋಪದಡಿ ಎಫ್‌ಐಆರ್ ದಾಖಲಿಸಲಾಗಿದೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಎಂ.ಜಿ. ರಸ್ತೆ ಮೆಟ್ರೊ ನಿಲ್ದಾಣ: ಬ್ಯಾರಿಕೇಡ್ ಅಳವಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ನೇರಳೆ ಮಾರ್ಗದ ಎಂ.ಜಿ. ರಸ್ತೆ ನಿಲ್ದಾಣದಲ್ಲಿ ಬಿಎಂಆರ್‌ಸಿಎಲ್ ಸ್ಟೀಲ್ ಬ್ಯಾರಿಕೇಡ್‌ಗಳನ್ನು ಅಳವಡಿಸುವ ಕಾರ್ಯ ಆರಂಭಿಸಿದೆ.

ಜನದಟ್ಟಣೆ ವಿಪರೀತ ಆಗಿರುವುದರಿಂದ ಅಪಾಯ ಎದುರಾಗುವ ಸಾಧ್ಯತೆ ಇರುವುದರಿಂದ ಬ್ಯಾರಿಕೇಡ್‌ಗಳನ್ನು ಅಳವಡಿಸಿದೆ. ಅಲ್ಲದೇ ಗುಲಾಬಿ ಮಾರ್ಗವು ಇಲ್ಲಿಂದಲೇ ಹಾದು ಹೋಗುತ್ತಿರುವುದರಿಂದ ಮೆಟ್ರೊ ಸಂಚಾರ ಆರಂಭಗೊಂಡಾಗ ಪ್ರಯಾಣಿಕರ ಸಂಖ್ಯೆ ಇನ್ನಷ್ಟು ಹೆಚ್ಚಳ ಆಗಲಿದೆ. ಅದಕ್ಕಾಗಿ ಈ ಕ್ರಮ ವಹಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.


ಎಂ.ಜಿ. ರಸ್ತೆ ನಿಲ್ದಾಣದಲ್ಲಿ ಸ್ಟೀಲ್ ಬ್ಯಾರಿಕೇಡ್‌ಗಳನ್ನು ಅಳವಡಿಸಿರುವುದು

'ಎಂ.ಜಿ. ರಸ್ತೆ ನಿಲ್ದಾಣದಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗುತ್ತಿದ್ದು, ಅಂತಿಮ ಹಂತಕ್ಕೆ ಬಂದಿದೆ. ಇದೇ ರೀತಿ ಎಲ್ಲೆಲ್ಲಿ ಅಗತ್ಯವಿದೆ ಎಂದು ನೋಡಿಕೊಂಡು ಮುಂದಿನ ದಿನಗಳಲ್ಲಿ ಸ್ಟೀಲ್ ಬ್ಯಾರಿಕೇಡ್ ಅಳವಡಿಸಲಾಗುವುದು' ಎಂದು ಮಾಹಿತಿ ನೀಡಿದ್ದಾರೆ.

ಬಿಲ್ ಕೇಳಿದ ಕ್ಯಾಂಟೀನ್ ಸಿಬ್ಬಂದಿ ಮೇಲೆ ಪೊಲೀಸರ ಹಲ್ಲೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿರುವ ಅಲ್ಲಾ ಕ್ಯಾಂಟೀನ್‌ನಲ್ಲಿ ಕಾಫಿ ಸೇವಿಸಿದ ಕಾರಣಕ್ಕೆ ಬಿಲ್ ಕೇಳಿದ ಸಿಬ್ಬಂದಿ ಮೇಲೆ ಮೂವರು ಪೊಲೀಸ್ ಕಾನ್‌ಸ್ಟೆಬಲ್‌ಗಳು ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ. ಈಚೆಗೆ ರಾತ್ರಿ ಬೀಟ್‌ನಲ್ಲಿ ಇದ್ದ ಗಂಗಾರಾಜು, ಬಾಳಪ್ಪ ಹಾಗೂ ಕುಮಾರ್ ಅವರು ಕ್ಯಾಂಟೀನ್‌ನಲ್ಲಿ ಕಾಫಿ ಕುಡಿದಿದ್ದರು. ನಂತರ ಸಿಬ್ಬಂದಿ ಬಿಲ್ ಕೇಳಿದ್ದಾರೆ. ಈ ವೇಳೆ 'ನಾವು ಪೊಲೀಸರು. ನಮಗೆ ಬಿಲ್ ಏಕೆ?' ಎಂದು ದರ್ಪದಿಂದ ವರ್ತಿಸಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಘಟನೆ ದೃಶ್ಯಗಳು ಕ್ಯಾಂಟೀನ್ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ.

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

ಬಿ.ಹೆಚ್. ರಸ್ತೆ, ತುಮಕೂರು – 572103

ಫ್ಯಾಕ್ಸ್ : 0816-2255761 ದೂರವಾಣಿ : 2272280

ಸಂಖ್ಯೆ: ಟಿಯುಡಿಎ/ತಾಂತ್ರಿಕ/ಇ/ಮರು ಟೆಂಡರ್-01/2025-26 ದಿನಾಂಕ: 11-02-2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಅಧ್ಯಾದೇಶ 1999-2000 ರ ಪ್ರಕಾರ ಹಾಗೂ KW-2, ಸ್ಟಾಂಡರ್ಡ್ ಬಿಡ್ ಡಾಕ್ಯುಮೆಂಟ್ ರೀತ್ಯಾ ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆ ಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (ವೆಬ್ ವಿಳಾಸ : https//kppp.karnataka.gov.in) ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕವೇ ನಿಗಧಿಪಡಿಸಿದ ದಿನಾಂಕ ಹಾಗೂ ಸಮಯದೊಳಗೆ ಸಲ್ಲಿಸುವುದು.

ಖಾಲಿ ಟೆಂಡರ್ ಫಾರಂಗಳಿಗೆ ಅರ್ಜಿ ಸಲ್ಲಿಸುವ ದಿನಾಂಕ	ದಿನಾಂಕ: 11-02-2026 ರಿಂದ ದಿ. 26-02-2026 ವೇಳೆ 17-00 ಗಂಟೆಯವರೆಗೆ
ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ	ದಿ. 26-02-2026 ವೇಳೆ 17-30 ಗಂಟೆಯವರೆಗೆ
ತಾಂತ್ರಿಕ ಬಿಡ್ ತೆರೆಯುವ ಸಮಯ ಮತ್ತು ದಿನಾಂಕ	ದಿ.02-03-2026 ಬೆಳಿಗ್ಗೆ 11.00 ಗಂಟೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ	ತಾಂತ್ರಿಕ ಬಿಡ್ ಅನುಮೋದನೆಯ ನಂತರ

ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಬಹುದು.


ಸಹಿ/– ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು

DIPR/TUM/RO-256/25-26/Oysters

ವಿಲಾಸಿ ಜೀವನಕ್ಕಾಗಿ ₹7.11 ಕೋಟಿ ದರೋಡೆ

ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ ಸಿದ್ದಾಪುರ ಠಾಣೆಯ ಪೊಲೀಸರು

ಪ್ರಜಾವಾಣಿ ವಾರ್ತೆ



ಅಣ್ಣಪ್ಪ ನಾಯ್ಕ

ಬೆಂಗಳೂರು: ಸಿದ್ದಾಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಾಲ್ಕು ತಿಂಗಳ ಹಿಂದೆ ನಡೆದಿದ್ದ ₹7.11 ಕೋಟಿ ದರೋಡೆ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಪೊಲೀಸರು, 56ನೇ ಸಿಸಿಎಚ್ ನ್ಯಾಯಾಲಯಕ್ಕೆ 1,328 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಪೊಲೀಸ್ ಕಾನ್‌ಸ್ಟೆಬಲ್ ಅಣ್ಣಪ್ಪ ನಾಯ್ಕ ಸೇರಿದಂತೆ 9 ಮಂದಿಯ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ ಎಂದು ಗೊತ್ತಾಗಿದೆ.

'ಪ್ರಕರಣದ ಎಲ್ಲಾ ಆರೋಪಿಗಳು ಪರಸ್ಪರ ಸಂಚು ರೂಪಿಸಿ ಸಿಎಂಎಸ್ ವಾಹನದಲ್ಲಿ ಎಟಿಎಂ ಕೇಂದ್ರಕ್ಕೆ ತುಂಬಲು ಕೊಂಡೊಯ್ಯುತ್ತಿದ್ದ ಹಣವನ್ನು ದರೋಡೆ ಮಾಡಿರುವುದು ತನಿಖೆ ವೇಳೆ ಕಂಡುಬಂದಿದೆ. ಆರೋಪಿಗಳು ಮಾಡಿದ್ದ ಸಾಲ ತೀರಿಸಲು ಹಾಗೂ ಐಷಾರಾಮಿ ಜೀವನಕ್ಕಾಗಿ ಹಣ ದರೋಡೆ ಮಾಡಿರುವುದು ತನಿಖೆಯಲ್ಲಿ ಪತ್ತೆಯಾಗಿದೆ' ಎಂದು ಮೂಲಗಳು ತಿಳಿಸಿವೆ.

2025ರ ನ.19ರಂದು ಆರ್‌ಬಿಐ ಅಧಿಕಾರಿ ಸೋಗಿನಲ್ಲಿ ಬಂದ ವ್ಯಕ್ತಿಗಳು ಮಲ್ಲೇಶ್ವರದಲ್ಲಿ ಎಟಿಎಂಗೆ ಸಾಗಿಸುವ ವಾಹನ ಅಡ್ಡಗಟ್ಟಿದ ಆರೋಪಿಗಳು, ಅದರಲ್ಲಿದ್ದ ಹಣ ದರೋಡೆ ಮಾಡಿ ಪರಾರಿ ಆಗಿದ್ದರು.

ಚಿತ್ತೂರು, ಆಂಧ್ರ ಪ್ರದೇಶ ಸೇರಿದಂತೆ ವಿವಿಧೆಡೆ ಕಾರ್ಯಾಚರಣೆ ನಡೆಸಿದ್ದ ಪೊಲೀಸರು, ಪ್ರಕರಣದ ಪ್ರಮುಖ ಆರೋಪಿ ಗೋವಿಂದಪುರ ಠಾಣೆ ಕಾನ್‌ಸ್ಟೆಬಲ್ ಅಣ್ಣಪ್ಪನಾಯ್ಕ, ಸಿಎಂಎಸ್ ಏಜೆನ್ಸಿ ಮಾಜಿ ಉದ್ಯೋಗಿ ಕ್ಸೇವಿಯರ್, ಸಹಚರರಾದ ರವಿ, ನೆಲ್ಸನ್, ಗೋಪಾಲ್, ಮಂಜುನಾಥ್ ಸೇರಿದಂತೆ 9 ಮಂದಿಯನ್ನು ಬಂಧಿಸಿದ್ದರು.

ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಜಗಲಾಸರ್ ಮತ್ತು ಜಯನಗರ ಎಸಿಪಿ ವಿ. ನಾರಾಯಣಸ್ವಾಮಿ ನೇತೃತ್ವದಲ್ಲಿ ವಿಶೇಷ ತಂಡಗಳನ್ನು ರಚಿಸಲಾಗಿತ್ತು. ಇದೀಗ ತನಿಖೆ ಪೂರ್ಣಗೊಂಡು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.



ಆರೋಪಿಗಳ ವಿರುದ್ಧ ದರೋಡೆ, ಅಕ್ರಮ ತಡೆ, ಸಾಕ್ಷ್ಯ ನಾಶಪಡಿಸುವುದು, ಅಪರಾಧದ ಒಳಸಂಚು, ಬೆದರಿಕೆ ಹಾಕುವುದು ಸೇರಿ ಬಿಎನ್‌ಎಸ್‌ನ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಪ್ರತ್ಯಕ್ಷ ಸಾಕ್ಷಿಗಳ ಹೇಳಿಕೆ, ತಾಂತ್ರಿಕ ಸಾಕ್ಷ್ಯ ಹಾಗೂ ಬೆರಳಚ್ಚು ಸೇರಿದಂತೆ ಇತರೆ ವೈಜ್ಞಾನಿಕ ಸಾಕ್ಷ್ಯ ಒಳಗೊಂಡಂತೆ ಒಟ್ಟು 129 ಸಾಕ್ಷ್ಯಾಧಾರಗಳನ್ನು ದೋಷಾರೋಪ ಪಟ್ಟಿಯಲ್ಲಿ ನಮೂದಿಸಲಾಗಿದೆ.

ಆರೋಪಿಗಳ ನಡುವೆ ನಡೆದ ಫೋನ್ ಕರೆಗಳ ವಿವರ, ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಸೇರಿದಂತೆ ಇತರ ತಾಂತ್ರಿಕ ಹಾಗೂ ವೈಜ್ಞಾನಿಕ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿತ್ತು ಎಂದು ಡಿಸಿಪಿ ಲೋಕೇಶ್ ಜಗಲಾಸರ್ ಹೇಳಿದರು.

ಮಿಠಾಯಿ, ಕ್ಯಾಂಡಿ ಪ್ಯಾಕೆಟ್‌ನಲ್ಲಿ ಹಶೀಶ್ ಸಾಗಣೆ



ದೇವನಹಳ್ಳಿ: ಕ್ಯಾಂಡಿ ಪ್ಯಾಕೆಟ್‌ಗಳಲ್ಲಿ ಹಶೀಶ್ ಸಾಗಣೆ ಮಾಡುತ್ತಿದ್ದ ಆರೋಪಿಗಳನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಬುಧವಾರ ಮುಂಜಾನೆ ವಶಕ್ಕೆ ಪಡೆದು, 1.70 ಕೆ.ಜಿ.ಹಶೀಶ್ (ಚರಸ್) ವಶಪಡಿಸಿಕೊಂಡಿದ್ದಾರೆ.

ಬ್ಯಾಂಕಾಕ್‌ನಿಂದ ಆಗಮಿಸಿದ್ದ ಪ್ರಯಾಣಿಕರನ್ನು ಕೆಲವು ಸಂಶಯದಿಂದ ತೀವ್ರ ತಪಾಸಣೆ ನಡೆಸಿದಾಗ, ಮಿಠಾಯಿ ಮತ್ತು ಕ್ಯಾಂಡಿ ಪ್ಯಾಕೆಟ್‌ನೊಳಗೆ ಮಾದಕ ವಸ್ತು ಪತ್ತೆಯಾಗಿದೆ ಎಂದು ಕಸ್ಟಮ್ಸ್ ಅಧಿಕಾರಿಗಳು ತಿಳಿಸಿದ್ದಾರೆ.

ವಶಪಡಿಸಿಕೊಂಡ ಹಶೀಶ್ ಮೌಲ್ಯ ₹4.25 ಲಕ್ಷ ಎಂದು ಅಂದಾಜಿಸಲಾಗಿದೆ. ಆರೋಪಿಯನ್ನು ಮಾದಕ ವಸ್ತುಗಳ ನಿಷೇಧ ಕಾಯ್ದೆ (ಎನ್‌ಡಿಪಿಎಸ್) ಅಡಿಯಲ್ಲಿ ಬಂಧಿಸಿ ತನಿಖೆ ಕೈಗೊಳ್ಳಲಾಗಿದೆ.

9ಕೆ.ಜಿ. ಹೈಡ್ರೋ ಪೋನಿಕ್ ಗಾಂಜಾ ವಶ: ವಿಮಾನ ನಿಲ್ದಾಣ ಬುಧವಾರ ರಾತ್ರಿ ಬ್ಯಾಂಕಾಕ್‌ನಿಂದ ಬಂದಿದ್ದ ಪ್ರಯಾಣಿಕನೊಬ್ಬನಿಂದ 9.7ಕೆ.ಜಿ ಹೈಡ್ರೋಪೋನಿಕ್ ಗಾಂಜಾ ವಶಪಡಿಸಿಕೊಳ್ಳಲಾಗಿದೆ.

ಬೆಂಗಳೂರಿನ ಕಸ್ಟಮ್ಸ್ ಅಧಿಕಾರಿಗಳು ಬುಧವಾರ ತಡರಾತ್ರಿ ತಪಾಸಣೆ ನಡೆಸಿದ ವೇಳೆ, ಬ್ಯಾಗ್‌ನೊಳಗೆ ಅಡಗಿಸಿದ್ದ ಮಾದಕ ವಸ್ತು ಪತ್ತೆಯಾಗಿದೆ. ಗಾಂಜಾದ ಮೌಲ್ಯ ₹3.39 ಕೋಟಿ ಎಂದು ಅಂದಾಜಿಸಲಾಗಿದೆ.

ಆರೋಪಿಯನ್ನು ಮಾದಕ ವಸ್ತುಗಳು ನಿಷೇಧ ಕಾಯ್ದೆ(ಎನ್‌ಡಿ-ಪಿಎಸ್) ಅಡಿಯಲ್ಲಿ ಬಂಧಿಸಲಾಗಿದೆ.

ನಗರಸಭಾ ಕಾರ್ಯಾಲಯ, ಶಿರಾ

ನಸಶಿ/ಟೆಂಡರ್/ತಾಂಶಾ/ಸಿ.ಆರ್/21/2025–26 ದಿನಾಂಕ:–11–02–2026

ಪತ್ರಿಕಾ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕತೆಯ ಆದ್ಯಾದೇಶ 1999–2000 ಪ್ರಕಾರ ಆಕ್ಟ್ 2000ರನ್ವಯ ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ (CMIDP) ಮತ್ತು ಎಸ್.ಎಫ್.ಸಿ ವಿಶೇಷ ಅನುದಾನದಡಿಯಲ್ಲಿ ಕಾಮಗಾರಿಗಳ ಇಂಡೆಂಟ್ ಸಂಖ್ಯೆ 1)DMA/2025- 26/RD/WORK_INDENT47623 2)DMA/2025-26/OW/WORK_INDENT53798/CALL-2 ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟಿನ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು / ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ **http://kppp.karnataka.gov.in** ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ. ಟೆಂಡರ್ ನಲ್ಲಿ ಯಾವುದೇ ಬದಲಾವಣೆ ಅಥವಾ ತಿದ್ದುಪಡಿ ಇದ್ದಲ್ಲಿ KPPP portal ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು.

1) ಕಾಮಗಾರಿಗೆ ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕ್ರಸಂ 01ರ ಕೊನೆಯ **ದಿನಾಂಕ:– 20–02–2026ರ ಸಂಜೆ 5:00** ಗಂಟೆಗೆ ಮತ್ತು ಕ್ರಸಂ 02ರ ಕಾಮಗಾರಿಯ ಕೊನೆಯ **ದಿನಾಂಕ:–02–03–2026ರ ಸಂಜೆ 5:00 ಗಂಟೆಗೆ**

2) ಕ್ರ.ಸಂ 01ರ ಕಾಮಗಾರಿಯ ಸ್ವೀಕರಿಸಿದ ಟೆಂಡರ್‌ಗಳನ್ನು ತೆರೆಯುವ **ದಿನಾಂಕ:– 21–02–2026 ಸಂಜೆ 5:30 ಗಂಟೆಗೆ** ಮತ್ತು ಕ್ರಸಂ 02ರ ಕಾಮಗಾರಿಯ ತೆರೆಯುವ **ದಿನಾಂ:–03–03–206ರ ಸಂಜೆ 5:30 ಗಂಟೆಗೆ**

3) ಟೆಂಡರ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ನಗರಸಭೆ,ಶಿರಾ. ಕಾಯ್ದಿರಿಸಿಕೊಂಡಿದೆ.

ಸಹಿ/– ಅಧ್ಯಕ್ಷರು	ಸಹಿ/– ಉಪಾಧ್ಯಕ್ಷರು	ಸಹಿ/– ಸ್ಥಾಯಿ ಸಮಿತಿ ಅಧ್ಯಕ್ಷರು	ಸಹಿ/– ಪೌರಾಯುಕ್ತರು
ನಗರಸಭೆ, ಶಿರಾ	ನಗರಸಭೆ, ಶಿರಾ	ನಗರಸಭೆ, ಶಿರಾ	ನಗರಸಭೆ, ಶಿರಾ

DIPR/TUM/RO-262/25-26/Oysters

IN THE COURT OF THE XXXIII ADDITIONAL CHIEF METROPOLITAN MAGISTRATE, MAYOHALL AT BENGALURU

C.C. No. 55616 of 2019

BETWEEN: MR. SWAMY N.C, Son of Chikkanna, aged about 38 years, Residing at No. 20, B.M.P. Ranganath Building, G.M. Palya, Byrasandra Main Road, Bengaluru-560 075. ... **COMPLAINANT**

AND: MR. JAGADEESH G.D, Yelahanka Post Office, B.B. Road, Near More Supermarket, Yelahanka, Bengaluru 560 064. ... **ACCUSED**

PROCLAMATION REQUIRING THE APPEARANCE OF THE ACCUSED UNDER SECTION 82 OF THE CODE OF CRIMINAL PROCEDURE

WHEREAS a complaint has been made before me that MR. JAGADEESH G.D, Major, residing at Yelahanka Post Office, B.B. Road, Near More Supermarket, Yelahanka, Bengaluru-560 064, has committed (or is suspected to have committed) the offence of dishonour of cheque punishable under Section 138 of the Negotiable Instruments Act, 1881, and it has been returned to a warrant of arrest thereupon issued that the said MR. JAGADEESH G.D. cannot be found;

AND WHEREAS it has been shown to my satisfaction that the said MR. JAGADEESH G.D. has absconded (or is concealing himself to avoid the service of the said warrant);

Proclamation is hereby made that the said MR. JAGADEESH G.D. is required to appear before the XXXIII Additional Chief Metropolitan Magistrate, Mayo hall at Bengaluru, on **01/04/2026** at **11:00 A.M** to answer the said complaint.

Given under my hand and seal of the Court on this 04/02/2026

By order of the Court, Senior Sheristedar, XXXIII Addl. Chief Judicial Magistrate Court, Bengaluru City

ಕೊಲೆಗೆ ಯತ್ನ: ಕಾರು ಚಾಲಕ ಸೆರೆ

ಬಾನೆಟ್ ಮೇಲೆ ಹತ್ತಿದ್ದ ವ್ಯಕ್ತಿಯನ್ನು ಎಳೆದೊಯ್ದು ಕೃತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರಿನ ಬಾನೆಟ್ ಮೇಲೆ ಹತ್ತಿದ್ದ ಸರಕು ಸಾಗಣೆ ಆಟೊದ ಚಾಲಕನನ್ನು ಎಳೆದೊಯ್ದು ಕೊಲೆಗೆ ಯತ್ನಿಸಿದ್ದ ಪ್ರಕರಣದ ಆರೋಪಿಯನ್ನು ಹಲಸೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ.



ಸುರೇಶ್

ಸುರೇಶ್ ಬಂಧಿತ ಆರೋಪಿ.

ತ್ಯಾಗರಾಜ-ನಗರದ ನಿವಾಸಿ ನಂಜುಂಡ ಅವರು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು. ನಂಜುಂಡ ಅವರು ಹೂವಿನ ವ್ಯಾಪಾರದ ಜತೆಗೆ ಆಟೊ ಚಾಲಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದರು.



ಬಾನೆಟ್ ಮೇಲೇರಿದ ವ್ಯಕ್ತಿಯನ್ನು ಎಳೆದೊಯ್ದ ದೃಶ್ಯ

'ತಮ್ಮ ಅಕ್ಕನ ಮಗ ಮನೋಜ್ ಜತೆಗೆ ಬುಧವಾರ ಮಧ್ಯಾಹ್ನ ನಂಜುಂಡ ಅವರು ಹೊಸಕೋಟೆಗೆ ತೆರಳಿ ಹೂವು ಖರೀದಿಸಿಕೊಂಡು ನಗರಕ್ಕೆ ವಾಪಸ್ ಬರುತ್ತಿದ್ದರು. ಮನೋಜ್ ಅವರು ಕಾರು ಚಾಲನೆ ಮಾಡುತ್ತಿದ್ದರೆ, ನಂಜುಂಡ ಅವರು ಪಕ್ಕದ ಸೀಟಿನಲ್ಲಿ ಕುಳಿತಿದ್ದರು. ಮಧ್ಯಾಹ್ನ 12.30ರ ಸುಮಾರಿಗೆ ಟ್ರಿನಿಟಿ ಜಂಕ್ಷನ್ ದಾಟಿ, ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆಯ ಸಿಗ್ನಲ್‌ನತ್ತ ಸರಕು ಸಾಗಣೆಯ ಆಟೊ ತೆರಳುತ್ತಿತ್ತು. ಆಟೊ ಹಿಂದೆಯೇ ಆರೋಪಿ ಸುರೇಶ್ ಅವರು ಕಾರಿನಲ್ಲಿ ಬರುತ್ತಿದ್ದರು. ಕಾರು ಚಾಲಕ ಜೋರಾಗಿ ಹಾರ್ನ್ ಮಾಡಿದ್ದರು. ಆಗ ಇಬ್ಬರ ನಡುವೆ ವಾಗ್ವಾದ ನಡೆದಿತ್ತು' ಎಂದು ಪೊಲೀಸರು ಹೇಳಿದರು.

'ನಂಜುಂಡ ಅವರು ಆಟೊದಿಂದ ಕೆಳಕ್ಕೆ ಇಳಿದು ಪ್ರಶ್ನಿಸಲು ಮುಂದಾಗಿದ್ದರು. ಸುರೇಶ್ ಅವರು ಕಾರು ನಿಲುಗಡೆ ಮಾಡದೆ ಮುಂದಕ್ಕೆ ಚಲಾಯಿಸಿದ್ದರು. ನಂಜುಂಡ ಅವರು ಬಾನೆಟ್ ಏರಿದಾಗ, ಕೊಲ್ಲುವ ಉದ್ದೇಶದಿಂದ ಕಾರನ್ನು ಸಿ.ಬಿ. ಜಂಕ್ಷನ್ ಸಿಗ್ನಲ್‌ನಿಂದ ಸಿಎಸ್‌ಸಿ ಸೆಂಟರ್ ಕಾಲೇಜುವರೆಗೂ ಕಾರನ್ನು ವೇಗವಾಗಿ ಚಲಾಯಿಸಿಕೊಂಡು ಹೋಗಿದ್ದರು. ಕಾರು ನಿಲುಗಡೆ ಮಾಡುವಂತೆ ಸಾರ್ವಜನಿಕರು ಮನವಿ ಮಾಡಿದರೂ ಸುರೇಶ್ ಅವರು ಸ್ಪಂದಿಸಲಿಲ್ಲ' ಎಂದು ಮೂಲಗಳು ತಿಳಿಸಿವೆ.

ವೈದ್ಯಕೀಯ ಪಿ.ಜಿ. ಆಯ್ಕೆ ದಾಖಲಿಗೆ ಮತ್ತೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನಾತಕೋತ್ತರ ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ 3ನೇ ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹರು, ತಮ್ಮ ಆಯ್ಕೆಗಳನ್ನು ದಾಖಲಿಸಲು ಫೆ.16ರಿಂದ 17ರ ಬೆಳಿಗ್ಗೆ 11ರವರೆಗೆ ಅವಕಾಶ ನೀಡಲಾಗಿದೆ.

ಫೆ.17ರವರೆಗೆ ಸೀಟು ಹಂಚಿಕೆ ಫಲಿತಾಂಶ ಪ್ರಕಟಿಸದಂತೆ ಹೈಕೋರ್ಟ್ ಆದೇಶ ನೀಡಿದ ಕಾರಣ ಈ ತೀರ್ಮಾನ ಮಾಡಲಾಗಿದೆ. ಇದುವರೆಗೂ ಆಯ್ಕೆಗಳನ್ನು ದಾಖಲಿಸದೇ ಇರುವವರು ಇದರ ಪ್ರಯೋಜನ ಪಡೆಯಬಹುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ಹೇಳಿದ್ದಾರೆ.

ಸೇವಾ ನಿರತರಿಗೆ ಅವಕಾಶ: ವೈದ್ಯಕೀಯ ಸ್ನಾತಕೋತ್ತರ ಪದವಿಗೆ 3ನೇ ಸುತ್ತಿನಲ್ಲಿ ಪ್ರವೇಶ ಬಯಸುವ ಸೇವಾ ನಿರತ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಫೆ.12ರಿಂದ 14ರವರೆಗೆ ಅವಕಾಶ ನೀಡಲಾಗಿದೆ. ಅರ್ಹತಾ ಅಂಕಗಳನ್ನು ಕಡಿಮೆ ಮಾಡಿರುವ ಕಾರಣಕ್ಕೆ ಹೊಸದಾಗಿ ಇದುವರೆಗೂ ಅರ್ಜಿ ಸಲ್ಲಿಸದೆ ಇರುವ ಅರ್ಹರು ಅರ್ಜಿ ಸಲ್ಲಿಸಬಹುದು. ಮೂಲ ದಾಖಲೆಗಳ ಪರಿಶೀಲನೆಗೆ ಫೆ.16ರಂದು ಕೆಇಎ ಕಚೇರಿಯಲ್ಲಿ ಹಾಜರಾಗಬೇಕು. ಬಳಿಕ ಅರ್ಹರಾದವರಿಗೆ ಫೆ.17ರಂದು ಬೆಳಿಗ್ಗೆ 11ರವರೆಗೆ ಆಯ್ಕೆಗಳನ್ನು ದಾಖಲಿಸಲು ಅವಕಾಶ ನೀಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಕೆಐಒಸಿಎಲ್ ಲಿಮಿಟೆಡ್

KIOCL LIMITED

(ಭಾರತ ಸರ್ಕಾರದ ಒಂದು ಉದ್ಯಮ)

KUDREMUKH

CIN-L13100KA1976GO1002974
ದೂ. & ಫ್ಯಾಕ್ಸ್ ನಂ. 080-25531525
ಇಮೇಲ್: cs@kioclltd.in
ವೆಬ್‌ಸೈಟ್: www.kioclltd.in

ಡಿಸೆಂಬರ್ 31, 2025 ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳುಗಳ ಲೆಕ್ಕಪರಿಶೋಧನೆಯಾಗದ ಹಣಕಾಸು ಫಲಿತಾಂಶಗಳ ವರದಿ

12.02.2026 ರಂದು ನಡೆದ ಸಭೆಯಲ್ಲಿ ಕಂಪನಿಯ ನಿರ್ದೇಶಕರ ಮಂಡಳಿಯು ಡಿಸೆಂಬರ್ 31, 2025 ಕ್ಕೆ ಕೊನೆಗೊಂಡ ಮೂರನೆ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳ ಸ್ವತಂತ್ರ ಪರಿಶೀಲಿಸಲಾಗದ ಹಣಕಾಸು ಫಲಿತಾಂಶಗಳನ್ನು ಅನುಮೋದಿಸಿದೆ.

ಸೀಮಿತ ವರದಿಯ ವಿಮರ್ಶೆಯೊಂದಿಗೆ ಫಲಿತಾಂಶಗಳನ್ನು ಕಂಪನಿಯ ವೆಬ್‌ಸೈಟ್ https://www.kioclltd.in/table.php?id=267 ನಲ್ಲಿ ಪ್ರಕಟಿಸಲಾಗಿದೆ.

ತ್ವರಿತ ಪ್ರತಿಕ್ರಿಯೆ (QR) ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಇದನ್ನು ಪ್ರವೇಶಿಸಬಹುದು.

ಸ್ಥಳ : **ಬೆಂಗಳೂರು, ಭಾರತ**
ದಿನಾಂಕ : **12.02.2026**

ಮಂಡಳಿಯ ಆದೇಶದ ಮೇರೆಗೆ
ಕೆ.ಐ.ಒ.ಸಿ.ಎಲ್ ಲಿಮಿಟೆಡ್ ಗಾಗಿ
ಸಹಿ/– **ಗಂಟಿ ವೆಂಕಟ್ ಕಿರಣ್**
ನಿರ್ದೇಶಕರು (ಹಣಕಾಸು–ಹೆಚ್ಚುವರಿ ಜವಾಬ್ದಾರಿ)
DIN: 07605925

ಗಮನಿಸಿ: ಮೇಲಿನ ಬಹಿರಂಗಪಡಿಸುವಿಕೆಯು SEBI (ಪಟ್ಟಿ ಮಾಡುವ ಬಾಧ್ಯತೆಗಳು ಹಾಗೂ ಬಹಿರಂಗಪಡಿಸುವಿಕೆಯ ಅವಶ್ಯಕತೆ) ನಿಯಮಗಳು, 2015 ರ ನಿಯಮ 47(1) ರೊಂದಿಗೆ ಓದಲಾದ ನಿಯಮ 33 ರ ಪ್ರಕಾರವಾಗಿದೆ.

ಮಕ್ಕಳ ಕ್ಯಾನ್ಸರ್: 1,882 ಪ್ರಕರಣ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳಲ್ಲಿಯೂ ಕ್ಯಾನ್ಸರ್ ಪ್ರಕರಣ ಹೆಚ್ಚಿನ ಸಂಖ್ಯೆಯಲ್ಲಿ ದೃಢ-ಪಡುತ್ತಿದ್ದು, ಕಳೆದ ವರ್ಷ ರಾಜ್ಯದಲ್ಲಿ 1,882 ಪ್ರಕರಣಗಳು ದೃಢಪಟ್ಟಿವೆ' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ತಿಳಿಸಿದೆ.

ಇದೇ 15ರಂದು ಅಂತರ-ರಾಷ್ಟ್ರೀಯ ಮಕ್ಕಳ ಕ್ಯಾನ್ಸರ್ ದಿನ ಆಚರಿಸುತ್ತಿರುವ ಪ್ರಯುಕ್ತ ಮಾಧ್ಯಮ ಪ್ರಕಟಣೆ ಹೊರಡಿಸಿರುವ ಸಂಸ್ಥೆ, 'ಕಳೆದ ವರ್ಷ ಕ್ಯಾನ್ಸರ್ ಪೀಡಿತರಲ್ಲಿ 312 ಮಕ್ಕಳು ಮೃತಪಟ್ಟಿದ್ದಾರೆ. ಸಂಸ್ಥೆಯ ಮಕ್ಕಳ ಗಂಥಿ ವಿಜ್ಞಾನ ವಿಭಾಗದಲ್ಲಿ ಕಳೆದ ವರ್ಷ 590 ಪ್ರಕರಣಗಳು ವರದಿಯಾಗಿವೆ. ಮಕ್ಕಳ ಚಿಕಿತ್ಸೆಗಾಗಿಯೇ 65 ಹಾಸಿಗೆಗಳ ಪ್ರತ್ಯೇಕ ವಾರ್ಡ್ ಹೊಂದಲಾಗಿದೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಟಿ.ನವೀನ್ ಮಾಹಿತಿ ನೀಡಿದ್ದಾರೆ.

'ಯಾವುದೇ ಶಂಕಿತ ಕ್ಯಾನ್ಸರ್ ಗಡ್ಡೆ, ತೀವ್ರ ಜ್ವರ, ರಕ್ತಸ್ರಾವ, ವಾಂತಿಯೊಂದಿಗೆ ಆಗಾಗ ತಲೆನೋವು, ರಾತ್ರಿ ಸಮಯ ಬೆವರುವಿಕೆ, ತೂಕನಷ್ಟ ಸೇರಿ ಕ್ಯಾನ್ಸರ್‌ನ ವಿವಿಧ ಲಕ್ಷಣಗಳು ಕಾಣಿಸಿಕೊಂಡರೆ ಮಕ್ಕಳನ್ನು ತಪಾಸಣೆಗೆ ಒಳಪಡಿಸಬೇಕು. ಸಂಸ್ಥೆಗೆ ಚಿಕಿತ್ಸೆಗಾಗಿ ರಾಜ್ಯದ ವಿವಿಧೆಡೆಯಿಂದ ಮಾತ್ರವಲ್ಲದೆ, ತಮಿಳುನಾಡು, ಆಂಧ್ರ ಪ್ರದೇಶ, ಪಶ್ಚಿಮ ಬಂಗಾಳ ಹಾಗೂ ಈಶಾನ್ಯ ರಾಜ್ಯಗಳಿಂದಲೂ ಬರುತ್ತಿದ್ದಾರೆ. ಕ್ಯಾನ್ಸರ್‌ನಿಂದ ಬಳಲುತ್ತಿರುವ ಮಕ್ಕಳ ಆರೈಕೆಗೆ ಪೂರಕವಾದ ವೈದ್ಯಕೀಯ ಸೌಲಭ್ಯ ಅಳವಡಿಸಿಕೊಳ್ಳ-ಲಾಗಿದೆ' ಎಂದು ತಿಳಿಸಿದ್ದಾರೆ.

ನಿವೃತ್ತ ನ್ಯಾಯಮೂರ್ತಿ ಮರು ನೇಮಕ ಸಲ್ಲ: ಎಎಬಿ

ಬೆಂಗಳೂರು: 'ನ್ಯಾಯಾಂಗದ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಭರದಲ್ಲಿ ನಿವೃತ್ತ ನ್ಯಾಯಮೂರ್ತಿಗಳನ್ನು ಆಶ್ರಯಿಸುವುದರಿಂದ ಹೊಸ ಪೀಳಿಗೆಯ ನ್ಯಾಯಮೂರ್ತಿಗಳ ನೇಮಕಾತಿ ಪ್ರಕ್ರಿಯೆಗೆ ಲಕ್ವ ಹೊಡೆಯಲಿದೆ' ಎಂದು 'ಬೆಂಗಳೂರು ವಕೀಲರ ಸಂಘ' (ಎಎಬಿ) ಆತಂಕ ವ್ಯಕ್ತಪಡಿಸಿದೆ.



ಎಎಬಿ ಲಾಂಛನ

ಈ ಕುರಿತಂತೆ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ, ಉಪಾಧ್ಯಕ್ಷ ಸಿ.ಎಸ್. ಗಿರೀಶ್ ಕುಮಾರ್, ಪ್ರಧಾನ ಕಾರ್ಯದರ್ಶಿ ಎಚ್.ವಿ.ಪ್ರವೀಣ್ ಗೌಡ ಮತ್ತು ಖಜಾಂಚಿ ಶ್ವೇತಾ ರವಿಶಂಕರ್ ಅವರು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ಕೇಂದ್ರ ಕಾನೂನು ಸಚಿವ ಅರ್ಜುನ ಸಿಂಗ್ ಮೇಘವಾಲ್ ಅವರಿಗೆ ಎರಡು ಪುಟಗಳ ಪತ್ರ ಬರೆದಿದ್ದಾರೆ.

'ನಿವೃತ್ತ ನ್ಯಾಯಮೂರ್ತಿಗಳ ಪುನರ್ ನೇಮಕಾತಿ ಸಲ್ಲ' ಎಂದು ಪತ್ರದಲ್ಲಿ ಆಕ್ಷೇಪ ವ್ಯಕ್ತಪಡಿಸಲಾಗಿದೆ.

ಪತ್ರದಲ್ಲಿ ಏನಿದೆ?:

'ಸುಪ್ರೀಂ ಕೋರ್ಟ್ ಕೊಲಿಜಿಯಂ ಇತ್ತೀಚೆಗೆ ಅಲಹಾಬಾದ್ ಹೈಕೋರ್ಟ್‌ನ ಐವರು ನಿವೃತ್ತ ನ್ಯಾಯಮೂರ್ತಿಗಳನ್ನು ಹಂಗಾಮಿ ನ್ಯಾಯಮೂರ್ತಿಗಳ-ನ್ನಾಗಿ ನೇಮಕ ಮಾಡಲು ಕೇಂದ್ರಕ್ಕೆ ಶಿಫಾರಸುವ ಮಾಡಿರುವ ಹಠಾತ್ ಕ್ರಮ ವಕೀಲ ವೃಂದವನ್ನು ಕಳವಳಕ್ಕೆ ದೂಡಿದೆ.

ನೇಮಕಗೊಂಡಿರುವ ನ್ಯಾಯ-ಮೂರ್ತಿಗಳ ಸಾಮರ್ಥ್ಯದ ಬಗ್ಗೆ ನಮಗೆ ಯಾವುದೇ ಸಂದೇಹವಿಲ್ಲ. ಕರ್ನಾಟಕವೂ ಸೇರಿದಂತೆ ದೇಶದ ಇತರೆ ಹೈಕೋರ್ಟ್‌ಗಳ ವಕೀಲರು ಈ ಕ್ರಮವನ್ನು ವಿರೋಧಿಸಿದ್ದರು ಎಂಬುದನ್ನು ಮರೆಯಬಾರದು. ಈ ಪ್ರವೃತ್ತಿ ದೇಶದ ಇತರೆ ಹೈಕೋರ್ಟ್‌ಗಳಿಗೂ ವ್ಯಾಪಿಸಬಾರದು. ಇಂತಹ ನಡೆ ಭವಿಷ್ಯದಲ್ಲಿ ಉತ್ತಮ ನ್ಯಾಯಮೂರ್ತಿಗಳಾಗಿ ಹೊರ ಹೊಮ್ಮಬಹುದಾದ ಸಮರ್ಥ ಮತ್ತು ಪ್ರತಿಭಾನ್ವಿತ ಯುವ ಸಮೂಹಕ್ಕೆ ಆಘಾತ ಉಂಟುಮಾಡಬಲ್ಲದು ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ನಮ್ಮ ಕಕ್ಷೀದಾರರು, ಇಲ್ಲಿ ಇನ್ನುಮುಂದೆ ಸಮಗ್ರವಾಗಿ **'ಷೆಡ್ಯೂಲ್ ಸ್ವತ್ತು'** ಎನ್ನಲಾಗುವ, ಸರಿಸುಮಾರು 100 ಎಕರೆ ವಿಸ್ತೀರ್ಣವುಳ್ಳ ಜಮೀನನ್ನು ಜಂಟಿ ಅಭಿವೃದ್ಧಿ ಒಪಂದ ಮಾಡಿಕೊಳ್ಳಲು ಮತ್ತು ಸರಿಸುಮಾರು 60 ಎಕರೆ ವಿಸ್ತೀರ್ಣವುಳ್ಳ ಜಮೀನನ್ನು ಖರೀದಿಸಲು ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕು, ಕಸಬಾ ಹೋಬಳಿ, ವೀರ್ಲಗೊಲ್ಲಹಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ ಸಂಯೋಜಿತವಾದ ಸುಮಾರು 154 ಎಕರೆ 26 ಗುಂಟೆ ವಿಸ್ತೀರ್ಣವುಳ್ಳ ಜಮೀನುಗಳನ್ನು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕು, ತೊಂಡೆಭಾವಿ ಹೋಬಳಿ, ಅಲಕಾಪುರ ಗ್ರಾಮದ ಎರಡು ಸರ್ವೆ ನಂಬರ್‌ಗಳಲ್ಲಿ ಸಂಯೋಜಿತವಾದ ಸುಮಾರು 5 ಎಕರೆ 3 ಗುಂಟೆ ವಿಸ್ತೀರ್ಣವುಳ್ಳ ಜಮೀನುಗಳನ್ನು ಖರೀದಿಸಲು ಅವುಗಳ ಪ್ರಸಕ್ತ ಮಾಲೀಕರಾದ ಎನ್.ಎಸ್.ಎಲ್ ಶುಗರ್ಸ್ (ತುಂಗಭದ್ರಾ) ಲಿಮಿಟೆಡ್ ಇವರಲ್ಲಿ ಪ್ರಸ್ತಾಪಿಸುತ್ತಿದ್ದಾರೆ. ಸದರಿ ಷೆಡ್ಯೂಲ್ ಸ್ವತ್ತಿನ ವಿವರಗಳನ್ನು ಕೆಳಕಂಡ **'ಷೆಡ್ಯೂಲ್'**ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿದೆ.

ಈ ಮೇಲ್ಕಂಡ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ/ವ್ಯಕ್ತಿಗಳಿಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಅಥವಾ ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಅಥವಾ ಸ್ವತ್ತಿನ ಮಾಲೀಕರಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಕ್ಲೇಮ್ ಅಥವಾ ಬೇಡಿಕೆ ಹೊಂದಿದ್ದಲ್ಲಿ, ಅಂತವರು ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ **21 (ಇಪ್ಪತ್ತೊಂದು) ದಿನಗಳೊಳಗೆ,** ಕೆಳ ಸಹಿದಾರರಿಗೆ ತಮ್ಮ ಆಕ್ಷೇಪಣೆಗಳನ್ನು ಮತ್ತು/ ಅಥವಾ ಅವನ/ ಅವಳ/ಅವರ ಹೇಳಿಕೆಗಳು/ ಕ್ಲೇಮ್‌ಗಳನ್ನು ಲಿಖಿತ ರೂಪದಲ್ಲಿ ಪೂರಕ ದಾಖಲಾತಿ ಪುರಾವೆಗಳೊಂದಿಗೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗದಿತ ವಾಯಿದೆಯೊಳಗೆ ಯಾವುದೇ ಅಸಲಿ /ಅಥವಾ ಬಾಧ್ಯಸ್ಥ ಆಕ್ಷೇಪಣೆಗಳು ಅಥವಾ ಕ್ಲೇಮ್‌ಗಳು ಸಲ್ಲಿಕೆಯಾಗದಿದ್ದಲ್ಲಿ, ಯಾವುದೇ ಕ್ಲೇಮುಗಳು ಅಥವಾ ಆಕ್ಷೇಪಣೆಗಳಾಗಲಿ ಇರುವುದಿಲ್ಲವೆಂದು ಪರಿಗಣಿಸಿ ನಮ್ಮ ಕಕ್ಷೀದಾರರು ತಮ್ಮ ವ್ಯವಹಾರವನ್ನು ಪೂರ್ಣಗೊಳಿಸಿಕೊಳ್ಳಲು ಮುಂದಾಗುತ್ತಾರೆ ಮತ್ತು ಪ್ರಸಕ್ತ ಮಾಲೀಕರಿಂದ ಸ್ವತ್ತನ್ನು ಖರೀದಿಸುವ ಮೂಲಕ, ತಮ್ಮ ಉದ್ದೇಶಿತ ಷೆಡ್ಯೂಲ್ ಸ್ವತ್ತಿನ ಖರೀದಿ ವ್ಯವಹಾರವನ್ನು ಇತ್ಯರ್ಥ ಮಾಡಿಕೊಳ್ಳುತ್ತಾರೆ ಹಾಗೂ ಆನಂತರ ಬಂದ ಯಾವುದೇ ಕ್ಲೇಮ್‌ಗಳನ್ನು ವಿವೇಚನಾಪೂರ್ವಕವಾಗಿ ಕೈಬಿಡಲಾಗುತ್ತದೆ ಮತ್ತು ಅಂತಹ ಕ್ಲೇಮ್ /ಹಕ್ಕುಗಳನ್ನು ಆಯಾ ವ್ಯಕ್ತಿಗಳು ಶಾಶ್ವತವಾಗಿ ಕಳೆದುಕೊಳ್ಳುತ್ತಾರೆ.

ಷೆಡ್ಯೂಲ್

ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, ಕಸಬಾ ಹೋಬಳಿ, ವೀರ್ಲಗೊಲ್ಲಹಳ್ಳಿ ಗ್ರಾಮದಲ್ಲಿರುವ ಕೆಳಕಂಡ ಸರ್ವೆ ನಂಬರ್‌ಗಳಲ್ಲಿ ಸಂಯೋಜಿತವಾದ ಸುಮಾರು **154 ಎಕರೆ 26 ಗುಂಟೆ** ವಿಸ್ತೀರ್ಣವುಳ್ಳ ಜಮೀನಿನ ವಿವರಗಳು ಕೆಳಕಂಡತ್ತಿವೆ. ಸದರಿ ಸ್ವತ್ತಿಗೆ ಚಕ್ಕುಬಂದಿ:

ಕ್ರ. ಸಂ	ಸರ್ವೆ ನಂ.	ವಿಸ್ತೀರ್ಣ (ಖರಾಬು ಹೊರತುಪಡಿಸಿ)		ಖರಾಬು		ಚಕ್ಕುಬಂದಿ			
		ಎಕರೆ	ಗುಂಟೆ	ಎಕರೆ	ಗುಂಟೆ	ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ
1	30	4	00	3	29	ಸರ್ಕಾರಿ ಮಣ್ಣಿನ ರಸ್ತೆ	ಸರ್ವೆ ನಂ. 31 ರಲ್ಲಿನ ಜಮೀನು	ಸರ್ವೆ ನಂ. 34/3 ರಲ್ಲಿನ ಜಮೀನು	ಸರ್ವೆ ನಂ. 31 ರಲ್ಲಿನ ಜಮೀನು ಮತ್ತು ಸರ್ಕಾರಿ ಮಣ್ಣಿನ ರಸ್ತೆ
2	31	12	27	2	07	ಸರ್ವೆ ನಂ. 30 ರಲ್ಲಿನ ಜಮೀನು ಮತ್ತು ಸರ್ಕಾರಿ ಮಣ್ಣಿನ ರಸ್ತೆ	ಸರ್ವೆ ನಂ. 32 ಮತ್ತು 33 ರಲ್ಲಿನ ಜಮೀನು	ಸರ್ವೆ ನಂ. 30 ರಲ್ಲಿನ ಜಮೀನು	ಸರ್ವೆ ನಂ. 61 ರಲ್ಲಿನ ಜಮೀನು
3	32	11	22	-	-	ಸರ್ವೆ ನಂ. 31 ರಲ್ಲಿನ ಜಮೀನು	ಸರ್ವೆ ನಂ. 51 ರಲ್ಲಿನ ಜಮೀನು	ಸರ್ವೆ ನಂ. 33 ರಲ್ಲಿನ ಜಮೀನು	ಸರ್ವೆ ನಂ. 60 ರಲ್ಲಿನ ಜಮೀನು
4	33	13	00	0	16	ಸರ್ವೆ ನಂ. 31 ರಲ್ಲಿನ ಜಮೀನು	ಸರ್ವೆ ನಂ. 50 ರಲ್ಲಿನ ಜಮೀನು	ಸರ್ವೆ ನಂ. 34/1 ಮತ್ತು 34/2 ರಲ್ಲಿನ ಜಮೀನು	ಸರ್ವೆ ನಂ. 32 ರಲ್ಲಿನ ಜಮೀನು
5	48	44	05	-	-	ಸರ್ವೆ ನಂ. 35 ಮತ್ತು 34/1 ರಲ್ಲಿನ ಜಮೀನು	ಸರ್ವೆ ನಂ. 49, 47 ಮತ್ತು 55 ರಲ್ಲಿನ ಜಮೀನು	ಸರ್ವೆ ನಂ. 45 ಮತ್ತು 37 ರಲ್ಲಿನ ಜಮೀನು	ಸರ್ವೆ ನಂ. 34/1 ರಲ್ಲಿನ ಜಮೀನು
6	49	12	04	-	-	ಸರ್ವೆ ನಂ. 48 ರಲ್ಲಿನ ಜಮೀನು	ಸರ್ವೆ ನಂ. 53 ರಲ್ಲಿನ ಜಮೀನು	ಸರ್ವೆ ನಂ. 55 ರಲ್ಲಿನ ಜಮೀನು	ಸರ್ವೆ ನಂ. 50 ರಲ್ಲಿನ ಜಮೀನು
7	50	13	13	-	-	ಸರ್ವೆ ನಂ. 48 ಮತ್ತು 33 ರಲ್ಲಿನ ಜಮೀನು	ಸರ್ವೆ ನಂ. 53 ರಲ್ಲಿನ ಜಮೀನು	ಸರ್ವೆ ನಂ. 49 ರಲ್ಲಿನ ಜಮೀನು	ಸರ್ವೆ ನಂ. 51 ರಲ್ಲಿನ ಜಮೀನು
8	51	20	32	-	-	ಸರ್ವೆ ನಂ. 32 ರಲ್ಲಿನ ಜಮೀನು	ಸರ್ವೆ ನಂ. 52 ರಲ್ಲಿನ ಜಮೀನು	ಸರ್ವೆ ನಂ. 50 ರಲ್ಲಿನ ಜಮೀನು	ಸರ್ವೆ ನಂ. 59 ರಲ್ಲಿನ ಜಮೀನು
ಕ್ರಮ ಸಂಖ್ಯೆ	ಖಾತೆದಾರರ ಹೆಸರು ಪಹಣಿಯಂತೆ ಶ್ರೀಯುತರು/ಶ್ರೀಮತಿ	ಸರ್ವೆ ನಂಬರ್	ಹಿಸ್ಸಾ ನಂಬರ್	ಭೂಸ್ವಾಧೀನಕ್ಕೆ ಒಳಪಡುವ ವಿಸ್ತೀರ್ಣ			ಚಕ್ಕುಬಂದಿ			
				ಒಟ್ಟು ಕ್ಷೇತ್ರ ಎ-ಗುಂ-ಆ	ಖರಾಬು ಎ-ಗುಂ-ಆ	ಬಾಕಿ ಎ-ಗುಂ-ಆ	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
130	N.ಅಶ್ವಥಮ್ಮ ಕೋಂ R.N.ಬಳಾರೆಡ್ಡಿ	64	1	0.00.04	–	0.00.04	ಸ.ನಂ. 64/2	ಸ.ನಂ. 64/1 ರ ಉಳಿದ ಭಾಗ	ಸ.ನಂ. 64/1 ರ ಉಳಿದ ಭಾಗ	ರಸ್ತೆ
131	M.ಆನಂದ ಕುಮಾರ್ ಬಿನ್ ಲೇಟ್ K.T.ಮುನಿರೆಡ್ಡಿ ಅನಿಕ ತೇಜ ರೆಡ್ಡಿ ಬಿನ್ ಲೇಟ್ ಚಂದ್ರಶೇಖರ್ ರೆಡ್ಡಿ ಬಾಲಕೃಷ್ಣ ರೆಡ್ಡಿ ಬಿನ್ ಲೇಟ್ ಚಂದ್ರಶೇಖರ್ ರೆಡ್ಡಿ	64	2	0.03.12	–	0.03.12	ಸ.ನಂ. 64/3	ಸ.ನಂ. 64/1	ಸ.ನಂ. 64/2 ರ ಉಳಿದ ಭಾಗ	ರಸ್ತೆ
132	ನಾಗೇಶ ಬಿನ್ ಲೇಟ್ ಮರಿಯಪ್ಪ	64	3	0.02.12	–	0.02.12	ಸ.ನಂ. 64/18	ಸ.ನಂ. 64/2	ಸ.ನಂ. 64/3 ರ ಉಳಿದ ಭಾಗ	ರಸ್ತೆ
133	M.ಮುನಿಕೃಷ್ಣಯ್ಯ ಬಿನ್ ಲೇಟ್ ಕೊಳತೂರು ಮುನಿಶಾಮಪ್ಪ	64	18	0.01.04	–	0.01.04	ಸ.ನಂ. 64/4	ಸ.ನಂ. 64/3	ಸ.ನಂ. 64/18 ರ ಉಳಿದ ಭಾಗ	ರಸ್ತೆ

ಪುಟ. 5 ರಲ್ಲಿ ಮುಂದುವರಿವುದು

ಕ್ರಮ ಸಂಖ್ಯೆ	ಖಾತೆದಾರರ ಹೆಸರು ಪಹಣಿಯಂತೆ ಶ್ರೀಯುತರು/ಶ್ರೀಮತಿ	ಸರ್ವೆ ನಂಬರ್	ಹಿಸ್ಸಾ ನಂಬರ್	ಭೂಸ್ವಾಧೀನಕ್ಕೆ ಒಳಪಡುವ ವಿಸ್ತೀರ್ಣ			ಚಕ್ಕುಬಂದಿ			
				ಒಟ್ಟು ಕ್ಷೇತ್ರ ಎ–ಗುಂ–ಆ	ಖರಾಬು ಎ–ಗುಂ–ಆ	ಬಾಕಿ ಎ–ಗುಂ–ಆ	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
134	M.ಮುನಿರಾಜು ಬಿನ್ ಲೇಟ್ ಕೊಳತೂರು ಮುನಿಶಾಮಪ್ಪ	64	4	0.01.04	–	0.01.04	ಸ.ನಂ. 62	ಸ.ನಂ. 64/18	ಸ.ನಂ. 64/4ರ ಉಳಿದ ಭಾಗ	ರಸ್ತೆ
135	ಪುಷ್ಪಲತಾ ಕೋಂ ಸುಬ್ಬಾರಾವ್	64	5	0.03.12	–	0.03.12	ಸ.ನಂ. 64/6	ಸ.ನಂ. 64/4	ಸ.ನಂ. 64/5ರ ಉಳಿದ ಭಾಗ	ರಸ್ತೆ
136	ಅಪ್ಪಯ್ಯ ಬಿನ್ ಚೊಕ್ಕಪ್ಪ	64	6	0.05.08	–	0.05.08	ಸ.ನಂ. 64/7	ಸ.ನಂ. 64/5	ಸ.ನಂ. 64/6ರ ಉಳಿದ ಭಾಗ	ರಸ್ತೆ
137	ವೆಂಕಟರಾಮಯ್ಯ ಬಿನ್ ಲೇಟ್ ಗುಂಡಪ್ಪ	64	7	0.03.00	–	0.03.00	ಸ.ನಂ. 64/32	ಸ.ನಂ. 64/6	ಸ.ನಂ. 64/7ರ ಉಳಿದ ಭಾಗ	ರಸ್ತೆ
138	ಮಂಜುನಾಥ ಸಿ ಬಿನ್ ಎಂ ಚಂದ್ರಪ್ಪ	64	32	0.02.04	–	0.02.04	ಸ.ನಂ. 64/13	ಸ.ನಂ. 64/7	ಸ.ನಂ. 64/32ರ ಉಳಿದ ಭಾಗ	ರಸ್ತೆ
139	ಪ್ರಮೋದ್ ಎಸ್.ವಿ. ಬಿನ್ ಲೇಟ್ಎಸ್ ಎಂ ವೆಂಕಟಪತಿ ರಾಜೀವ್ ವೆಂಕಟ ಪತಿಗೌಡ ಬಿನ್ ಲೇಟ್ ಎಸ್ ಎಂ ವೆಂಕಟಪತಿ	64	13	0.02.00	–	0.02.00	ಸ.ನಂ. 64/9	ಸ.ನಂ. 64/32	ಸ.ನಂ. 64/13 ರ ಉಳಿದ ಭಾಗ	ರಸ್ತೆ
140	ನಾಗೇಶ ಬಿ ಎನ್. ಬಿನ್ ಲೇಟ್ ನಾರಾಯಣಪ್ಪ	64	9	0.00.04	–	0.00.04	ಸ.ನಂ. 64/25	ಸ.ನಂ. 64/13	ಸ.ನಂ. 64/9 ರ ಉಳಿದ ಭಾಗ	ರಸ್ತೆ
141	ನಾಗೇಶ್ ಬಿ.ಎನ್. ಬಿನ್ ಲೇಟ್ ನಾರಾಯಣಪ್ಪ	64	25	0.00.04	–	0.00.04	ಸ.ನಂ. 64/20	ಸ.ನಂ. 64/9	ಸ.ನಂ. 64/25 ರ ಉಳಿದ ಭಾಗ	ರಸ್ತೆ
142	ಎಸ್ ರಾಜ ಬಿನ್ ಟಿ ಶ್ರೀನಿವಾಸರೆಡ್ಡಿ ಆರ್ ಕುಶಾಲ್ ಬಿನ್ ಎಸ್ ರಾಜ	64	20	0.00.08	–	0.00.08	ಸ.ನಂ. 64/10	ಸ.ನಂ. 64/25	ಸ.ನಂ. 64/20 ರ ಉಳಿದ ಭಾಗ	ರಸ್ತೆ
143	ಬಿ ಕೆ ರಾಜಣ್ಣ ಬಿನ್ ಕೃಷ್ಣಪ್ಪ	64	10	0.01.04	–	0.01.04	ಸ.ನಂ. 64/31	ಸ.ನಂ. 64/20	ಸ.ನಂ. 64/10 ರ ಉಳಿದ ಭಾಗ	ರಸ್ತೆ
144	ರೇಣುಕಾ ಕೋಂ ಬೈರೇಗೌಡ	64	31	0.01.00	–	0.01.00	ಸ.ನಂ. 64/30	ಸ.ನಂ. 64/10	ಸ.ನಂ. 64/31 ರ ಉಳಿದ ಭಾಗ	ರಸ್ತೆ
145	ರಾಜೇಶ್ವರಿ ಸಿ ಎಂ . ಕೋಂ ಹೆಚ್ ಎಸ್ ರವಿ	64	30	0.02.08	–	0.02.08	ಗ್ರಾಮ ಗೊಣಕನ ಹಳ್ಳಿ ಗಡಿಯು	ಸ.ನಂ. 64/31	ಸ.ನಂ. 64/30 ರ ಉಳಿದ ಭಾಗ	ರಸ್ತೆ
146	ಪಿ ವಿ ಮಾಧುರಿ . ಕೋಂ ಚಂದ್ರಶೇಖರ್	64	22	0.00.04	–	0.00.04	–	–	–	–
147	ಎನ್ ಅರುಣ . ಬಿನ್ ಲೇಟ್ ನಾರಾಯಣಪ್ಪ ಮಂಜುಳ . ಬಿನ್ ಲೇಟ್ ನಾರಾಯಣಪ್ಪ	64	21	0.00.04	–	0.00.04	–	–	–	–
148	ಆರ್.ಟಿ.ಸಿ. ಲಭ್ಯವಿಲ್ಲ	64	26	0.00.04	–	0.00.04	–	–	–	–
149	ಆರ್.ಟಿ.ಸಿ. ಲಭ್ಯವಿಲ್ಲ	64	27	0.00.04	–	0.00.04	–	–	–	–
150	ಡಿ.ಕೃಷ್ಣೇಗೌಡ K.M.ಸೋಮಯ್ಯ ಬಿನ್ ಮಾರಪ್ಪ ಗೋಮಾಳ ಬೈರಪ್ಪ ಬಿನ್ ಕರಿಯಪ್ಪ ಬಿ.ಕೃಷ್ಣಪ್ಪ ಬಿನ್ ಕೋಟೆ ಬೈರಪ್ಪ ಸರ್ಕಾರಿ ಫಡ ನಾರಾಯಣಪ್ಪ ಬಿನ್ ಚಿಕ್ಕವೆಂಕಟಶಾಮಪ್ಪ ಮರಿಯಪ್ಪ ಶೆಟ್ಟಿ ಬಿನ್ ಚಿಕ್ಕವೆಂಕಟಶಾಮಪ್ಪ ರಾಮಚಂದ್ರ ಶೆಟ್ಟಿ ಬಿನ್ ಚಿಕ್ಕವೆಂಕಟಶಾಮಪ್ಪ ಲಕ್ಷ್ಮಮ್ಮ ಕೋಂ ಲೇಟ್ ಮುನಿಶೆಟ್ಟಪ್ಪ ವೆಂಕಟೇಶಪ್ಪ ಬಿನ್ ಚಿಕ್ಕವೆಂಕಟಶಾಮಪ್ಪ ಸರ್ಕಾರಿ ಫಡ ಸರ್ಕಾರಿ ಫಡ ನಾರಾಯಣಪ್ಪ ಬಿನ್ ಚಿಕ್ಕವೆಂಕಟಶಾಮಪ್ಪ ಮರಿಯಪ್ಪ ಶೆಟ್ಟಿ ಬಿನ್ ಚಿಕ್ಕವೆಂಕಟಶಾಮಪ್ಪ ರಾಮಚಂದ್ರ ಶೆಟ್ಟಿ ಬಿನ್ ಚಿಕ್ಕವೆಂಕಟಶಾಮಪ್ಪ ಲಕ್ಷ್ಮಮ್ಮ ಕೋಂ ಲೇಟ್ ಮುನಿಶೆಟ್ಟಪ್ಪ ವೆಂಕಟೇಶಪ್ಪ ಬಿನ್ ಚಿಕ್ಕವೆಂಕಟಶಾಮಪ್ಪ ಕೃಷ್ಣಪ್ಪ ಬಿನ್ ಚಿಕ್ಕವೆಂಕಟಶಾಮಪ್ಪ ಭಾಗ್ಯಮ್ಮ ಕೋಂ ಲೇಟ್ ಕೆ ಸಿ ಗೋವಿಂದಪ ರಾಜಪ್ಪ ಬಿನ್ ಚಿಕ್ಕವೆಂಕಟಶಾಮಪ್ಪ ನಾರಾಯಣಗೌಡ ಬಿನ್ ಲೇಟ್ K.M.ಸೋಮಯ್ಯ ಅಮೃತಮ್ಮ ಬಿನ್ ಲೇಟ್ K.M.ಸೋಮಯ್ಯ ಲಲಿತಮ್ಮ ಬಿನ್ ಲೇಟ್ K.M.ಸೋಮಯ್ಯ ಮುನಿರತ್ನಮ್ಮ ಬಿನ್ ಲೇಟ್ K.M.ಸೋಮಯ್ಯ K.B.ಪ್ರಕಾಶ್ ಬಿನ್ ಲೇಟ್ ಬೈರಪ್ಪ ಭಾಗ್ಯಮ್ಮ ಬಿನ್ ಲೇಟ್ ಬೈರಪ್ಪ ನಾರಾಯಣಸ್ವಾಮಿ ಬಿನ್ ಲೇಟ್ ಬೈರಪ್ಪ ಶ್ರೀನಿವಾಸ ಬಿನ್ ಲೇಟ್ ಬೈರಪ್ಪ ಮಂಜುಳ ಬಿನ್ ಲೇಟ್ ಬೈರಪ್ಪ ಮಾಲಮ್ಮ ಬಿನ್ ಲೇಟ್ ಕರಿಯಪ್ಪ ಉರುಫ್ ಅಬ್ಬಪ್ಪ K.A. ಮಾರಪ್ಪ ಬಿನ್ ಲೇಟ್ ಕರಿಯಪ್ಪ ಉರುಫ್ ಅಬ್ಬಪ್ಪ ವೆಂಕಟಪ್ಪ ಬಿನ್ ಮುನಿಶಾಮಪ್ಪ ಗೌರಮ್ಮ ಕೋಂ N.V.ನಾರಾಯಣಪ್ಪ ಗೌರಮ್ಮ ಕೋಂ N.V.ನಾರಾಯಣಪ್ಪ ಮುನಿಶಾಮಿ ಗೌರಮ್ಮ ಕೋಂ N.V.ನಾರಾಯಣಪ್ಪ ಮುನಿಯಪ್ಪ ಬಿನ್ ಮುತ್ತಪ್ಪ ನಂಜುಂಡಪ್ಪ ಬಿನ್ ಮುತ್ತಪ್ಪ ನಾರಾಯಣಪ್ಪ ಬಿನ್ ಮುತ್ತಪ್ಪ ಮುನಿರಾಜು ಬಿನ್ ನಾಗಪ್ಪ ಅಣ್ಣಯ್ಯಪ್ಪ ಬಿನ್ ಗಿರಿಯಪ್ಪ	65	–	0.03.00	–	0.03.00	ಸ.ನಂ. 65 ರ ಉಳಿದ ಭಾಗ	ಸ.ನಂ. 65 ರ ಉಳಿದ ಭಾಗ	ರಸ್ತೆ	ಸ.ನಂ. 65 ರ ಉಳಿದ ಭಾಗ
	K.N.ರಮೇಶ್ ಬಿನ್ ನಾರಾಯಣಪ್ಪ ಮುನಿರಾಜು ಬಿನ್ ನಾಗಪ್ಪ ಅಣ್ಣಯ್ಯಪ್ಪ ಬಿನ್ ಗಿರಿಯಪ್ಪ ಹೆಚ್.ಕರೇಗೌಡ ಬಿನ್ ದೊಡ್ಡಬ್ಬಯ್ಯ ಕೆ.ಪಿ.ಕರಿಯಪ್ಪ ಬಿನ್ ಪಿಳ್ಳ ಮಾರಪ್ಪ ಜೆ.ಚಿನ್ನಪ್ಪ ಬಿನ್ ಮುನಿಯಪ್ಪ ಕೆಂಚಮ್ಮ ಕೋಂ ಮಾರಪ್ಪ ಆನಂದ ಬಿನ್ ನಾಗಯ್ಯ ನಾರಾಯಣಪ್ಪ ಬಿನ್ ಮುಕ್ಕಡಪ್ಪ ವೆಂಕಟಮ್ಮ ಕೋಂ ಲೇಟ್ ನಾರಾಯಣಪ್ಪ ಈರಮ್ಮ ಕೋಂ ಲೇಟ್ ಪಿಳ್ಳಪ್ಪ ಎಂ ವೆಂಕಟೇಶ್ ಬಿನ್ ಮುನಿಯಪ್ಪ ಸರ್ಕಾರ, ಸರ್ಕಾರ ಸರ್ಕಾರ, ಸರ್ಕಾರ ಸರ್ಕಾರ, ಸರ್ಕಾರ ಆಶ್ರಯ ಯೋಜನೆಗಾಗಿ ಆಶ್ರಯ ಯೋಜನೆಗಾಗಿ ಸರೋಜಮ್ಮ ಕೋಂ ಲೇಟ್ ಬಿ ಕೃಷ್ಣಪ್ಪ ಹೆಚ್ ಕೆ ಮಹೇಶ್ ಬಿನ್ ಲೇಟ್ ಬಿ ಕೃಷ್ಣಪ್ಪ ಪ್ರಭಾವತಿ ಉರುಫ್ ಪ್ರಭಾ ಬಿನ್ ಲೇಟ್ ಕೃಷ್ಣಪ್ಪ ರತ್ನಮ್ಮ ಬಿನ್ ಲೇಟ್ ಕೃಷ್ಣಪ್ಪ ಕೆ ಟಿ ಗೋಪಾಲಪ್ಪ ಬಿನ್ ಲೇಟ್ ತಿಪ್ಪಯ್ಯ ರಾಷ್ಟ್ರಪತಿಗಳು ಭಾರತ ಸರ್ಕಾರ ಎಂ .ಓ ಆರ್ ಟಿ ಹೆಚ್ (ಎನ್ ಹೆಚ್ ಎ ಐ) ರಾಷ್ಟ್ರಪತಿಗಳು ಭಾರತ ಸರ್ಕಾರ ಎಂ .ಓ ಆರ್ ಟಿ ಹೆಚ್ (ಎನ್ ಹೆಚ್ ಎ ಐ) ರಾಷ್ಟ್ರಪತಿಗಳು ಭಾರತ ಸರ್ಕಾರ ಎಂ.ಓ ಆರ್ ಟಿ ಹೆಚ್ (ಎನ್ ಹೆಚ್ ಎ ಐ) ರಾಷ್ಟ್ರಪತಿಗಳು ಭಾರತ ಸರ್ಕಾರ ಎಂ .ಓ ಆರ್ ಟಿ ಹೆಚ್ (ಎನ್ ಹೆಚ್ ಎ ಐ) ರಾಷ್ಟ್ರಪತಿಗಳು ಭಾರತ ಸರ್ಕಾರ ಎಂ .ಓ ಆರ್ ಟಿ ಹೆಚ್ (ಎನ್ ಹೆಚ್ ಎ ಐ) ಜಯಮ್ಮ ಕೋಂ ಲೇಟ್ ಕೃಷ್ಣಪ್ಪ ವೆಂಕಟಾಚಲ ಬಿನ್ ಲೇಟ್ ನಾರಾಯಣಪ್ಪ ಚಂದ್ರಪ್ಪ ಬಿನ್ ಲೇಟ್ ಕೋಟೆಬೈರಪ್ಪ ಕಾಕಣ್ಣ ಬಿನ್ ಲೇಟ್ ಕೋಟೆಬೈರಪ್ಪ ಕೃಷ್ಣಮ್ಮ ಕೋಂ ಲೇಟ್ ಎನ್ ವಿ ಕೃಷ್ಣಪ್ಪ ಕೃಷ್ಣಮ್ಮ ಕೋಂ ಲೇಟ್ ಎನ್ ವಿ ಕೃಷ್ಣಪ್ಪ ಸರಸ್ವತಮ್ಮ ಲೇಟ್ ಡಿ.ಕೃಷ್ಣೇಗೌಡ ರವಿಚಂದ್ರ ಕೆ.ಕೆ. ಬಿನ್ ಲೇಟ್ ಡಿ. ಕೃಷ್ಣೇಗೌಡ ಮನೋಹರ ಕೆ.ಕೆ. ಬಿನ್ ಲೇಟ್ ಡಿ. ಕೃಷ್ಣೇಗೌಡ ಕೆ.ಕೆ. ಮಂಜುಳಾದೇವಿ ಬಿನ್ ಲೇಟ್ ಡಿ. ಕೃಷ್ಣೇಗೌಡ ಆಂಜನೇಯಗೌಡ ಬಿನ್ ಲೇಟ್ ಡಿ. ಕೃಷ್ಣೇಗೌಡ ಕೆ.ಎಂ. ಸೋಮಯ್ಯ ಬಿನ್ ಮಾರಪ್ಪ ಮಹಾಲಕ್ಷ್ಮಮ್ಮ ಹೆಚ್.ವಿ. ಕೋಂ ಆನಂದ									
	ಒಟ್ಟು			**0.35.08**	–	**0.35.08**				

–: ಷೆಡ್ಯೂಲ್:–

ಗ್ರಾಮ : ಗೊಣಕನಹಳ್ಳಿ
ಹೋಬಳಿ : ಜಡಿಗೇನಹಳ್ಳಿ
ತಾಲ್ಲೂಕು : ಹೊಸಕೋಟೆ
ಜಿಲ್ಲೆ : ಬೆಂಗಳೂರು ಗ್ರಾಮಾಂತರ

ಕ್ರಮ ಸಂಖ್ಯೆ	ಖಾತೆದಾರರ ಹೆಸರು ಪಹಣಿಯಂತೆ ಶ್ರೀಯುತರು/ಶ್ರೀಮತಿ	ಸರ್ವೆ ನಂಬರ್	ಹಿಸ್ಸಾ ನಂಬರ್	ಭೂಸ್ವಾಧೀನಕ್ಕೆ ಒಳಪಡುವ ವಿಸ್ತೀರ್ಣ			ಚಕ್ಕುಬಂದಿ			
				ಒಟ್ಟು ಕ್ಷೇತ್ರ ಎ–ಗುಂ–ಆ	ಖರಾಬು ಎ–ಗುಂ–ಆ	ಬಾಕಿ ಎ–ಗುಂ–ಆ	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
151	ಸರ್ಕಾರಿ ಗೋಮಾಳ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆಶ್ರಯ ಯೋಜನೆಗಾಗಿ – ಪಂಚಾಯತಿ ಅಭಿವೃದ್ದಿ ಅಧಿಕಾರಿ ಓರೋಹಳ್ಳಿ ಗ್ರಾಮ ಪಂಚಾಯಿತಿ ವೆಂಕಟೇಶ್ ಬಿನ್ ಮುನಿಯಪ್ಪ ನಾಗರಾಜ ಬಿ ಬಿನ್ ಭಂಗಿ ಮುನಿಯಪ್ಪ	49	–	0.10.12	–	0.10.12	ವಿಜಯ ಪುರ ಗಡಿ	ಸ.ನಂ. 49 ರ ಉಳಿದ ಭಾಗ	ರಸ್ತೆ	ಸ.ನಂ. 49 ರ ಉಳಿದ ಭಾಗ
152	ಸರ್ಕಾರಿ ಗೋಮಾಳ ಮುನಿಯಪ್ಪ ಬಿನ್ ಬುಡ್ಡಪ್ಪ ಎ.ಕೆ. ಮುನಿಶಾಮಿ ಬಾರೇಖಾನ್ ಬಿನ್ ಹುಸೇನ್ ಖಾನ್ ಚಿಕ್ಕನಾರಾಯಣಪ್ಪ ಬಿನ್ ಲೇ ಚಿಕ್ಕಸಿದ್ದಪ್ಪ ನಾರಾಯಣಸ್ವಾಮಿ ಬಿನ್ ವೆಂಕಟಪ್ಪ ವಿ.ಅಮುದಾ ಕೋಂ ವಿ.ಸಿ.ವಿಜಯ ಕುಮಾರ್ ದೊಡ್ಡವೆಂಕಟಪ್ಪ ಮುಸ್ತಾನ್ ಖಾನ್ ಬಿನ್ ಹುಸೇನ್ ಖಾನ್ ಸುರೇಶ್ ಬಿನ್ ರಾಜಣ್ಣ ರಮೇಶ ಬಿನ್ ನಾರಾಯಣಪ್ಪ ರಮೇಶ ಬಿನ್ ನಾರಾಯಣಪ್ಪ ಬಾರೇಖಾನ್ ಬಿನ್ ಹುಸೇನ್ ಖಾನ್ ಸುನ್ನಾಸಾಬಿ ಬಿನ್ ಷೇಖ್ ಅಲ್ಲಿಸಾಬಿ ಚಿಕ್ಕೀರಪ್ಪ ಉ.ಚಿಕ್ಕವೀರಪ್ಪ ಬಿನ್ ಲೇಟ್ ಮುನಿಶಾಮಪ್ಪ ವಿ. ಅಮುದಾ ಕೋಂ ವಿ.ಪಿ. ವಿಜಯಕುಮಾರ್ ಚಿಕ್ಕೀರಪ್ಪ ಉ.ಚಿಕ್ಕವೀರಪ್ಪ ಬಿನ್ ಲೇಟ್ ಮುನಿಶಾಮಪ್ಪ ನಾರಾಯಣಪ್ಪ ಬಿನ್ ಅಪ್ಪಾಜಪ್ಪ ಮೋಸಿನಾ ಬೇಗಂ ಕೋಂ ಅಸ್ಲಂಪಾಷಾ ಅನ್ವರ್ ಸಾಬಿ ಬಿನ್ ನನ್ನೂಸಾಬಿ ಸರ್ ದಾರ್ ಪಾಷ ಬಿನ್ ನನ್ನೂಸಾಬಿ ಖಾಸಿಂಖಾನ್ ಬಿನ್ ಬಾರೇಖಾನ್ ಮುನಿವೆಂಕಟಪ್ಪ ಬಿನ್ ಅಪ್ಪಯ್ಯಣ್ಣ ಮುನಿಯಪ್ಪ ಬಿನ್ ಬಚ್ಚಣ್ಣ ಮೋಟಮ್ಮ ಬಿನ್ ವೆಂಕಟಪ್ಪ ಅಪ್ಪಯ್ಯ ಬಿನ್ ಬೈರಪ್ಪ ವೆಂಕಟಪ್ಪ ಬಿನ್ ಪಿಳ್ಳಪ್ಪ ಇಲಿಯಾಜ್ ಖಾನ್ ಬಿನ್ ಖಾಲೇಖಾನ್ ಇಮ್ತಿಯಾಜ್ ಪಾಷ ಬಿನ್ ಖಾಲೆಖಾನ್ ಹುಸೇನ್ ಖಾನ್ ಬಿನ್ ಖಾಲೆಖಾನ್ ಚಿಕ್ಕವೆಂಕಟಪ್ಪ ಬಿನ್ ಕುರಿ ಮುನಿಯಪ್ಪ ದೇವರಾಜು ಬಿನ್ ರಾಜಣ್ಣ ಸುನೀತಾ ರೆಡ್ಡಿ ಕೋಂ ಎಂ ವಿ ಪವನ್ ಕುಮಾರ್ ರೆಡ್ಡಿ ಸುಶೀಲ ಕೋಂ ನಾಗರಾಜ ಇಲಿಯಾಜ ಖಾನ್ ಇಮ್ತಿಯಾಜ ಖಾನ್ ಹುಸೇನ್ ಖಾನ್ ಬಿನ್ ಖಾಲೇಖಾನ್ ಗೀತಾ ಜಿ ಡಿ ಬಿನ್ ದೊಡ್ಡಮುನಿವೆಂಕಟಪ್ಪ	50	–	0.04.04	–	0.04.04	ಸ.ನಂ. 50 ರ ಉಳಿದ ಭಾಗ	ಸ.ನಂ. 50 ರ ಉಳಿದ ಭಾಗ	ರಸ್ತೆ 50 ರ ಉಳಿದ ಭಾಗ	ಸ.ನಂ.
	ಒಟ್ಟು			**0.15.00**	–	**0.15.00**				

ಸಹಿ/–
ವಿಶೇಷ ಜಿಲ್ಲಾಧಿಕಾರಿ (ಭೂಸ್ವಾ),
ಯೋ.ಅ.ಘ., ಕ.ರಾ.ಹೆ.ಅ.ಯೋ
ಕೆ.ಆರ್.ವೃತ್ತ, ಬೆಂಗಳೂರು.


ವಾ.ಸಾ.ಸಂ.ಇ/ವಾಪ್ರ/5620/ಆಕಾರ್/2025–26

ಡಬಲ್ ಡೆಕರ್ ಮಾರ್ಗ: ಕೇಂದ್ರ ಆಕ್ಷೇಪ

ಹೆಬ್ಬಾಳ– ಸರ್ಜಾಪುರ ಕೆಂಪು ಮಾರ್ಗ ಯೋಜನೆ ಮರುಪರಿಶೀಲಿಸಲು ಸೂಚನೆ

36.59 ಕಿ.ಮೀ 'ಕೆಂಪು' ಮಾರ್ಗದ ಒಟ್ಟು ಉದ್ದ | **22.14** ಕಿ.ಮೀ. ಎತ್ತರಿಸಿದ ಮಾರ್ಗ | **14.45** ಕಿ.ಮೀ. ಸುರಂಗ ಮಾರ್ಗ | **17** ಎತ್ತರಿಸಿದ ಮಾರ್ಗದಲ್ಲಿ ನಿಲ್ದಾಣಗಳ ಸಂಖ್ಯೆ | **11** ಸುರಂಗ ಮಾರ್ಗದಲ್ಲಿ ನಿಲ್ದಾಣಗಳ ಸಂಖ್ಯೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಮ್ಮ ಮೆಟ್ರೊ ಹೆಬ್ಬಾಳ–ಸರ್ಜಾಪುರ ಡಬಲ್ ಡೆಕರ್ ಕಾರಿಡಾರ್ ಯೋಜನೆಗೆ ಅನುಮೋದನೆ ನೀಡಲು ಕೇಂದ್ರ ಸರ್ಕಾರ ಮತ್ತೆ ನಿರಾಕರಿಸಿದ್ದು, ಈ ಯೋಜನೆ ಬಗ್ಗೆ ಮರುಪರಿಶೀಲನೆ ನಡೆಸುವಂತೆ ಬಿಎಂಆರ್‌ಸಿಎಲ್‌ಗೆ ಸೂಚನೆ ನೀಡಿದೆ.

ಈ ಬಗ್ಗೆ ಸಂಸದ ಪಿ.ಸಿ.ಮೋಹನ್ ತನ್ನ 'ಎಕ್ಸ್' ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದು, 'ಹೆಬ್ಬಾಳ-ಸರ್ಜಾಪುರ ಮೆಟ್ರೊ ಕಾರಿಡಾರ್‌ಗೆ ಕೇಂದ್ರದ ಅನುಮತಿ ಪಡೆಯುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಈ ಯೋಜನೆಯಿಂದ ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಧಕ್ಕೆ ಉಂಟಾಗಲಿದೆ ಎಂದು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಎಚ್ಚರಿಸಿದೆ' ಎಂದು ಹೇಳಿದ್ದಾರೆ.

ಮೆಟ್ರೊ ಸಂಚರಿಸುವ ಮಾರ್ಗ ಪೂರ್ತಿ ಡಬಲ್ ಡೆಕರ್ ಯಾಕೆ ಮಾಡಬೇಕು? ಇದರಿಂದ ಮೆಟ್ರೊದಲ್ಲಿ ಸಂಚರಿಸುವವರ ಸಂಖ್ಯೆ ಕಡಿಮೆಯಾಗುವುದಿಲ್ಲವೇ? ಅಗತ್ಯ ಇರುವಲ್ಲಿ ಮಾತ್ರ ಡಬಲ್ ಡೆಕರ್ ಮಾಡುವುದು ಸಮಂಜಸವಲ್ಲವೇ? ಎಂದು ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಕೇಳಿದೆ ಎಂದು ಸಂಸದರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದ್ದಾರೆ.

2024ರಲ್ಲಿ ರಾಜ್ಯ ಸರ್ಕಾರ ಈ ಯೋಜನೆಗೆ ಅನುಮೋದನೆ ನೀಡಿತ್ತು. ಯೋಜನೆಯ ಅಂದಾಜು ವೆಚ್ಚ ಅಧಿಕವಾಗಿದೆ. ಈ ಬಗ್ಗೆ ವಿವರ ನೀಡುವಂತೆ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಬಿಎಂಆರ್‌ಸಿಎಲ್‌ಗೆ ಸೂಚನೆ ನೀಡಿತ್ತು. ಸಚಿವಾಲಯದ ಸೂಚನೆಯಂತೆ ಬಿಎಂಆರ್‌ಸಿಎಲ್ ಸ್ವತಂತ್ರ ಸಮಿತಿ ನೇಮಕ ಮಾಡಿತ್ತು. ಈ ಸಮಿತಿ ನೀಡಿದ್ದ ವರದಿಯನ್ನು ಕೇಂದ್ರಕ್ಕೆ ಕಳುಹಿಸಲಾಗಿತ್ತು. ಇದೀಗ ಡಬಲ್ ಡೆಕರ್ ಯಾಕೆ ಎಂದು ಪ್ರಶ್ನಿಸಿ ಅನುಮೋದನೆ ನೀಡಲು ನಿರಾಕರಿಸಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಸರ್ಜಾಪುರದ ಐಟಿ ಹಬ್, ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಟ್ ಮತ್ತು ಹೆಬ್ಬಾಳ ನಡುವೆ ಸಂಪರ್ಕಕ್ಕಾಗಿ ಹೆಬ್ಬಾಳ-ಸರ್ಜಾಪುರ ಮೆಟ್ರೊ ಯೋಜನೆ ರೂಪಿಸಲಾಗಿತ್ತು. ಎತ್ತರಿಸಿದ ಮಾರ್ಗ ಇರುವಲ್ಲಿ ಮೆಟ್ರೊ ಜೊತೆಗೆ ರಸ್ತೆಯನ್ನೂ ಒಳಗೊಂಡ ಡಬಲ್ ಡೆಕರ್ ಯೋಜನೆಯನ್ನು ಒಳಗೊಂಡಿತ್ತು. ಇದಕ್ಕೆ ಅನುಮತಿ ನೀಡಲು ಕೇಂದ್ರ ಸರ್ಕಾರ ಹಿಂದೇಟು ಹಾಕಿದೆ. ಇನ್ನು ಐದು ವರ್ಷಗಳಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕಿದ್ದ ಯೋಜನೆ ಮತ್ತಷ್ಟು ಮುಂದಕ್ಕೆ ಹೋಗುವಂತಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಕೇಂದ್ರ ಸಚಿವರ ಜತೆ ಚರ್ಚೆ: ಡಿಸಿಎಂ

'ಹೆಬ್ಬಾಳ–ಸರ್ಜಾಪುರ ಡಬಲ್ ಡೆಕರ್ ಮೆಟ್ರೊ ಯೋಜನೆಗೆ ಕೇಂದ್ರ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿರುವ ವಿಚಾರ ನನಗೆ ತಿಳಿದಿಲ್ಲ. ಕೇಂದ್ರ ಸರ್ಕಾರವೇ ಈ ಯೋಜನೆ ಮಾಡಬೇಕು ಎಂದು ಹೇಳಿದ್ದರಿಂದ ಮುಂದುವರಿಸಿದ್ದೇವೆ. ತಾಂತ್ರಿಕ ವಿಚಾರವದಲ್ಲಿ ಮರುಪರಿಶೀಲನೆಗೆ ಸಲಹೆ ನೀಡಿರಬಹುದು. ಈ ಬಗ್ಗೆ ಕೇಂದ್ರ ಸಚಿವರೊಂದಿಗೆ ಚರ್ಚೆ ನಡೆಸಲಾಗುವುದು' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದರು.

'ಬೆಂಗಳೂರಿನಲ್ಲಿ ಈಗಾಗಲೇ ನಿರ್ಮಾಣವಾಗಿರುವ ಡಬಲ್ ಡೆಕರ್ ಮೇಲ್ಸೇತುವೆಯನ್ನು ಸ್ವತಃ ಪ್ರಧಾನಮಂತ್ರಿ ಅವರು ನೋಡಿದ್ದಾರೆ. ಹೆಬ್ಬಾಳ–ಸರ್ಜಾಪುರ ಯೋಜನೆಯ ವೆಚ್ಚದಲ್ಲಿ ಬಿಎಂಆರ್‌ಸಿಎಲ್ ಶೇ 50 ಭರಿಸಿದರೆ, ಕರ್ನಾಟಕ ಸರ್ಕಾರವು ಜಿಬಿಎ ಮೂಲಕ ಶೇ 50ರಷ್ಟು ನೀಡಲಿದೆ. ರಸ್ತೆ ವಿಸ್ತರಣೆ ಕಷ್ಟವಾಗಿರುವುದರಿಂದ ಈ ಯೋಜನೆ ಮಾಡುತ್ತಿದ್ದೇವೆ' ಎಂದು ತಿಳಿಸಿದರು.

'ರಸ್ತೆಯಲ್ಲಿ ಓಡಾಡುವ ಪ್ರಯಾಣಿಕರೇ ಬೇರೆ, ಮೆಟ್ರೊ ಬಳಸುವ ಪ್ರಯಾಣಿಕರೇ ಬೇರೆ. ಹಾಗಾಗಿ ಪ್ರಯಾಣಿಕರ ಕೊರತೆ ಉಂಟಾಗದು. ಈ ಯೋಜನೆಯಲ್ಲಿ ಏನಾದರೂ ಸಮಸ್ಯೆ ಇದ್ದರೆ ಕೇಂದ್ರ ಸಚಿವರನ್ನು ಭೇಟಿ ಮಾಡಿ ಚರ್ಚೆ ಮಾಡುತ್ತೇನೆ' ಎಂದು ಹೇಳಿದರು.



ಭೇಟಿಯ ವೇಳೆ ಸಿದ್ದರಾಮಯ್ಯ ಅವರು ಸಂಯುಕ್ತ ಕಿಸಾನ್ ಮೋರ್ಚಾ ನಾಯಕರ ಜತೆ ಮಾತುಕತೆ ನಡೆಸಿದರು

ಹೋರಾಟಕ್ಕೆ ಬೆಂಬಲ ಕೋರಿ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಂಬಲ ಬೆಲೆ, 2013ರ ಭೂಸ್ವಾಧೀನ ಕಾಯ್ದೆಯ ಮರುಜಾರಿಗೆ ಒತ್ತಾಯಿಸಿ ತಾವು ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ಸೂಚಿಸಬೇಕು ಎಂದು ಸಂಯುಕ್ತ ಕಿಸಾನ್ ಮೋರ್ಚಾವು (ರಾಜಕೀಯೇತರ) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೋರಿದೆ.

ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಂಬಲ ಬೆಲೆ (ಎಂಎಸ್‌ಪಿ) ನೀಡಬೇಕು, ಎಂಎಸ್‌ಪಿಗೆ ಕಾನೂನಿನ ಖಾತರಿ ಒದಗಿಸಬೇಕು, ಶೇ 75ರಷ್ಟು ರೈತರು ಒಪ್ಪಿದರಷ್ಟೇ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಬೇಕು ಎನ್ನುವ 2013 ಭೂಸ್ವಾಧೀನ ಕಾಯ್ದೆಯನ್ನು ಮರುಜಾರಿ ಮಾಡಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಸಂಯುಕ್ತ ಕಿಸಾನ್ ಮೋರ್ಚಾವು (ಎಸ್‌ಕೆಎಂ) ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ರೈತ ಜಾಗೃತಿ ಯಾತ್ರೆ ನಡೆಸುತ್ತಿದೆ.

ತಮಿಳುನಾಡಿನಿಂದ ಚಾಮರಾಜನಗರ ಪ್ರವೇಶಿಸಿದ್ದ ಯಾತ್ರೆಯು ಗುರುವಾರ ಬೆಂಗಳೂರು ತಲುಪಿತು. ಯಾತ್ರೆಯ ಭಾಗವಾಗಿ ಎಸ್‌ಕೆಎಂನ ರಾಷ್ಟ್ರೀಯ ಸಂಚಾಲಕ ಜಗಜಿತ್ ಸಿಂಗ್ ಡಲ್ಲೇವಾಲ್, ರಾಷ್ಟ್ರೀಯ ಸಹಸಂಚಾಲಕ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ರೈತ ಮುಖಂಡರು ಸಿದ್ದರಾಮಯ್ಯ ಅವರನ್ನು ಅವರ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಭೇಟಿ ಮಾಡಿದರು.

'ನಮ್ಮ ಬೇಡಿಕೆಗಳ ಈಡೇರಿಕೆಗೆ ನಿಮ್ಮ ಸರ್ಕಾರದ ಮಟ್ಟದಲ್ಲಿ ಸಾಧ್ಯವಿರುವ ಕ್ರಮಗಳನ್ನು ತೆಗೆದುಕೊಳ್ಳಬೇಕು. ನಮ್ಮ ಹೋರಾಟಕ್ಕೆ ಬೆಂಬಲ ಸೂಚಿಸಬೇಕು' ಎಂದು ಕೋರಿದ್ದಾರೆ.

ಚಿತ್ರಾವಳಿ



ಬಿ.ಎಂ.ಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್ ವತಿಯಿಂದ ಯುವಕ ಸಂಘದ ಕ್ಯಾಂಪಸ್–2 ಕಮ್ಯೂನಿಟಿ ಯೋಜನೆ ಅಡಿಯಲ್ಲಿ ಆಯೋಜಿಸಿದ್ದ ವಿಜ್ಞಾನ ಮಾದರಿಗಳ ಅಂತಿಮ ಪ್ರದರ್ಶನ ಹಾಗೂ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ವಿಜ್ಞಾನ ಮಾದರಿಗಳನ್ನು ಪ್ರದರ್ಶಿಸಿದರು. ಈ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಎನ್‌ಎಸ್‌ಎಸ್ ರಾಜ್ಯ ಅಧಿಕಾರಿ ಪ್ರತಾಪ್ ಲಿಂಗಯ್ಯ, ಭೀಮಶಾ ಆರ್ಯ, ಎಲ್. ರವಿಕುಮಾರ್, ಶೇಷಾಚಲಂ, ಸುಜಾತಾ ಎನ್. ಪಾಲ್ಗೊಂಡಿದ್ದರು



ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ದೈಹಿಕ ಶಿಕ್ಷಣ ನಿರ್ದೇಶಕರ ಹುದ್ದೆಗಳನ್ನು ಭರ್ತಿ ಮಾಡುವಂತೆ ಆಗ್ರಹಿಸಿ ಉದ್ಯೋಗ ಆಕಾಂಕ್ಷಿಗಳು ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು

'ಅರಾವಳಿ ಮುಟ್ಟಲು ಯಾರಿಗೂ ಅವಕಾಶ ಕೊಡುವುದಿಲ್ಲ'

ನವದೆಹಲಿ: 'ಅರಾವಳಿಯನ್ನು ಮುಟ್ಟಲು ಯಾರಿಗೂ ಅವಕಾಶ ಕೊಡುವುದಿಲ್ಲ. ವೈಜ್ಞಾನಿಕವಾದ ತಳಮಟ್ಟದ ವರದಿ ಆಧರಿಸಿ ಮಾತ್ರ ತಜ್ಞರ ಸಮಿತಿಯು ಯೋಜನೆಗಳನ್ನು ಪರಿಗಣಿಸಬಹುದು' ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ಅರಾವಳಿಯು ಪೂರ್ಣ ಶ್ರೇಣಿಯನ್ನು ಹೊಂದಿದೆ. ಎಲ್ಲಾ ಅಂಶಗಳನ್ನು ಪರಿಗಣಿಸಿ, ಸಮಗ್ರ ದೃಷ್ಟಿಯನ್ನು ಪರಿಗಣಿಸಿಯೇ ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದೆ.

ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾ.ಜಾಯ್‌ಮಾಲ್ಯ ಬಾಗ್ಚಿ, ನ್ಯಾ. ವಿಪುಲ್ ಎಂ. ಪಂಚೋಲಿ ಅವರಿದ್ದ ಪೀಠವು, 1995 ಬಾಕಿ ಇರುವ 'ಇನ್ ರೆ– ಟಿಎ.ನ್. ಗೋದವರ್ಮನ್ ಥಿರುಮುಲ್ಪಾಡ್' ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಮಧ್ಯಂತರ ವಿಚಾರಣೆಯಲ್ಲಿ ಈ ವಿಷಯ ಸ್ಪಷ್ಟಪಡಿಸಿದ್ದಾರೆ.

ಅರಾವಳಿಯು ಮೃಗಾಲಯದ ಸಫಾರಿಗೆ ಸಂಬಂಧಿಸಿದ ಯೋಜನೆಯಾಗಿದೆ. ಸಫಾರಿ ಯೋಜನೆಯನ್ನು 3,300 ಎಕರೆಗೆ ಸೀಮಿತಗೊಳಿಸಲಾಗಿದೆ. ಪರಿಷ್ಕೃತ ವಿಸ್ತೃತ ಯೋಜನಾ ವರದಿಯನ್ನು ಇನ್ನಷ್ಟೇ ಪರಿಶೀಲಿಸಬೇಕಾಗಿದೆ ಎಂದು ಹರಿಯಾಣದ ಪರ ವಕೀಲರು ನ್ಯಾಯಾಲಯದ ಗಮನಸೆಳೆದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ನ್ಯಾಯಪೀಠ, 'ನಾವು ನಿಮಗೆ ಇಂದಿನಿಂದ ಒಂದು ಇಂಚಿಗೂ ಅವಕಾಶ ನೀಡುವುದಿಲ್ಲ' ಎಂದಿದೆ.

ಪೀಣ್ಯ 2ನೇ ಹಂತದ ಬಸ್ ನಿಲ್ದಾಣದಲ್ಲಿ ಇನ್ನೂ ಸಿಗದ ಸೌಲಭ್ಯ: ಆಕ್ರೋಶ

ಉದ್ಘಾಟನೆಯಾಗದ ನೀರಿನ ಘಟಕ

• ಪ್ರಸನ್ನಕುಮಾರ್ ಯಾದವ್

ಪೀಣ್ಯ ದಾಸರಹಳ್ಳಿ: ಪೀಣ್ಯ 2ನೇ ಹಂತದ ಬಸ್ ನಿಲ್ದಾಣದಲ್ಲಿರುವ ಬೆಂಗಳೂರು ಜಲಮಂಡಳಿ ಕಚೇರಿಯ ಮುಂಭಾಗದಲ್ಲಿ ನಿರ್ಮಾಣವಾಗಿರುವ ಶುದ್ಧ ಕುಡಿಯುವ ನೀರಿನ ಘಟಕ ಇನ್ನೂ ಉದ್ಘಾಟನೆ ಆಗದೆ ಇರುವುದಕ್ಕೆ ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಶಾಸಕ ಎಸ್. ಮುನಿರಾಜು ಅವರು ಪೀಣ್ಯ 2ನೇ ಹಂತದ ನಿವಾಸಿಗಳಿಗೆ ಉಪಯೋಗವಾಗಲಿ ಎಂದು ಘಟಕ ನಿರ್ಮಾಣ ಮಾಡಲು ಸೂಚಿಸಿದ್ದರು. ಆದರೆ, ಅಧಿಕಾರಿಗಳ ನಿರ್ಲಕ್ಷ್ಯದಿಂದ ಘಟಕಕ್ಕೆ ಉದ್ಘಾಟನಾ ಭಾಗ್ಯ ದೊರೆತಿಲ್ಲ. ಇದರಿಂದಾಗಿ ಶುದ್ಧ ಕುಡಿಯುವ ನೀರಿನ ನಿರೀಕ್ಷೆಯಲ್ಲಿದ್ದ ಜನರಿಗೆ ಬೇಸರವಾಗಿದೆ.

ಪೀಣ್ಯ 2ನೇ ಹಂತದಲ್ಲಿ ಜಲಮಂಡಳಿಯು ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕವು ಜಲಮಂಡಳಿ ಹಾಗೂ ಜಿಬಿಎ (ಹಿಂದಿನ ಬಿಬಿಎಂಪಿ) ಅಧಿಕಾರಿಗಳ ನಡುವಿನ ಗೊಂದಲದಿಂದಾಗಿ ಉದ್ಘಾಟನೆಯ ಭಾಗ್ಯ ಕಾಣದೆ ಹಾಗೆಯೇ ಇದೆ. ಈ ಬಗ್ಗೆ ಅಧಿಕಾರಿಗಳನ್ನು ಪ್ರಶ್ನಿಸಿದರೆ, ಜಿಬಿಎಯಿಂದ ಜಲಮಂಡಳಿಯ ಬೋರ್‌ವೆಲ್ ವಿಭಾಗಕ್ಕೆ ಹಸ್ತಾಂತರಿಸಬೇಕು ಎಂದು ತಿಳಿಸುತ್ತಾರೆ.

ಮುಖ್ಯಾಂಶಗಳು

- ಘಟಕದ ಬಗ್ಗೆ ಅಧಿಕಾರಗಳಲ್ಲೇ ಗೊಂದಲ
- ನೀರಿನ ಘಟಕ ಉದ್ಘಾಟನೆಗೆ ಒತ್ತಾಯ
- ವರ್ಷ ಕಳೆದರೂ ನೀರಿನ ಭಾಗ್ಯ ಸಿಗುತ್ತಿಲ್ಲ– ಸಾರ್ವಜನಿಕರ ಆಕ್ರೋಶ



ಹರೀಶ್



ಶಿಲ್ಪಾರಾಣಿ

ಘಟಕದ ಕಾಮಗಾರಿ ಮುಗಿದಿದ್ದು, ವಿದ್ಯುತ್ ಸಂಪರ್ಕ ನೀಡಲಾಗಿದೆ. ನೀರಿನ ಸಂಪರ್ಕದ ಪೈಪ್ ಅಳವಡಿಕೆಯಾಗಿದೆ. ಜಲ ಮಂಡಳಿಯವರನ್ನು ಕೇಳಿದರೆ, ಬೋರ್‌ವೆಲ್ ವಿಭಾಗಕ್ಕೆ ಬರುವುದರಿಂದ ನಾವು ಶುದ್ಧ ಕುಡಿಯುವ ನೀರಿನ ಘಟಕವನ್ನು ಚಾಲನೆ ನೀಡಲು ಬರುವುದಿಲ್ಲ, ಅವರನ್ನೇ ಕೇಳಬೇಕು' ಎಂದು ತಿಳಿಸಿದರು.



ಪೀಣ್ಯ 2ನೇ ಹಂತದ ಜಲಮಂಡಳಿ ಕಚೇರಿಯ ಆವರಣದಲ್ಲಿ ಇರುವ ಶುದ್ಧ ಕುಡಿಯುವ ನೀರಿನ ಘಟಕ

'ಆರೋಗ್ಯ ಕಾಪಾಡಿಕೊಳ್ಳಲು ಶುದ್ಧ ಕುಡಿಯುವ ನೀರಿನ ಘಟಕದ ಅವಶ್ಯಕತೆ ಇರುವುದನ್ನು ಮನಗಂಡ ಶಾಸಕರು ಕುಡಿಯುವ ನೀರಿನ ಘಟಕದ ನಿರ್ಮಾಣಕ್ಕೆ ಆದೇಶ ನೀಡಿದ್ದರು. ಆದರೆ, ಅಧಿಕಾರಿಗಳ ನಿರ್ಲಕ್ಷ್ಯದಿಂದ ನಮಗೆ ನೀರಿನ ಭಾಗ್ಯ ಸಿಗುತ್ತಿಲ್ಲ' ಎಂದು ಸ್ಥಳೀಯರು ತಿಳಿಸಿದರು.

ಪೀಣ್ಯ 2ನೇ ಹಂತದ ಬಸ್ ನಿಲ್ದಾಣವು ಸದಾ ಜನಜಂಗುಳಿಯಿಂದ ಕೂಡಿದ ಪ್ರದೇಶವಾಗಿದ್ದು, ಈ ಭಾಗಕ್ಕೆ ಕುಡಿಯುವ ನೀರಿನ ಅವಶ್ಯಕತೆ ಇದೆ. ಅಕ್ಕ-ಪಕ್ಕದ ನಿವಾಸಿಗಳು ತುಂಬಾ ದೂರದಿಂದ ನೀರು ತರುವ ಅನಿವಾರ್ಯ ಎದುರಾಗಿದ್ದು, ಪೀಣ್ಯ 2ನೇ ಹಂತದಲ್ಲಿಯೇ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣವಾದರೆ ಸಾರ್ವಜನಿಕರಿಗೆ ಅನುಕೂಲವಾಗಲಿದೆ. ಇದು ಬೇಗ ಆದರೆ ಒಳ್ಳೆಯದು ಎಂದು ಪೀಣ್ಯ 2ನೇ ಹಂತದ ನಿವಾಸಿ ಹರೀಶ್ ತಿಳಿಸಿದರು.

'ಜಿಬಿಎ ಹಾಗೂ ಜಲಮಂಡಳಿ ಅಧಿಕಾರಿಗಳ ಕಿತ್ತಾಟದಿಂದಾಗಿ ನೀರಿನ ಘಟಕ ಉದ್ಘಾಟನೆಯಾಗಿಲ್ಲ. ಇದರಿಂದಾಗಿ ಪೀಣ್ಯ 2ನೇ ಹಂತದ ನಿವಾಸಿಗಳು ದೂರದಿಂದ ಕುಡಿಯುವ ನೀರು ತರುವಂತಾಗಿದೆ' ಎಂದು ಸ್ಥಳೀಯ ನಿವಾಸಿ ಶಿಲ್ಪಾರಾಣಿ ತಿಳಿಸಿದರು.

ಬೋರ್‌ವೆಲ್ ಆ್ಯಂಡ್ ವಾಟರ್‌ಪಂಪ್ ನಿರ್ವಹಣಾ ವಿಭಾಗದ ಎಂಜಿನಿಯರ್ ಆಶಾ ಪ್ರತಿಕ್ರಿಯಿಸಿ, 'ಎರಡು ತಿಂಗಳ ಹಿಂದೆ ಟೆಂಡರ್ ಕರೆದಿದ್ದೇವೆ. ಜಿಬಿಎ ಅವರು ನಮಗೆ ಹಸ್ತಾಂತರ ಮಾಡಬೇಕು' ಎಂದರು.

ಪೊಲೀಸ್ ವಶದಲ್ಲಿದ್ದಾಗಲೇ ಪ್ರತಿಭಟನಾ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ವಿರೋಧಿಸಿ, ನರೇಗಾ ಉಳಿಸಲು ಆಗ್ರಹಿಸಿ ನಗರದ ಪುರಭವನದ ಬಳಿ ಪ್ರತಿಭಟನೆ ನಡೆಸಿದವರನ್ನು ಪೊಲೀಸರು ವಶಕ್ಕೆ ಪಡೆದು ಆಡುಗೋಡಿಯಲ್ಲಿರುವ ಕವಾಯತು ಮೈದಾನಕ್ಕೆ ಕರೆದೊಯ್ದರು. ಕಾರ್ಮಿಕ ನಾಯಕರು ಅಲ್ಲಿಯೇ ಸಭೆ ನಡೆಸಿದರು.

ಮುಖಂಡರ ಭಾಷಣಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಡುತ್ತಿರುವುದನ್ನು ಗಮನಿಸಿದ ಪೊಲೀಸರು ಸಭೆಯನ್ನು ಮೊಟಕುಗೊಳಿಸಿದರು.

ಇಂಟಕ್‌ನ ಲಕ್ಷ್ಮಿ, ವೆಂಕಟೇಶ್, ಶಾಮಣ್ಣ ರೆಡ್ಡಿ, ಎಐಟಿಯುಸಿಯ ವಿಜಯ ಭಾಸ್ಕರ್, ಜಯಮ್ಮ, ಅಮ್ಜದ್, ಸಿಐಟಿಯುಸಿಯ ವರಲಕ್ಷ್ಮಿ, ಮೀನಾಕ್ಷಿ ಸುಂದರಂ, ಗೋಪಾಲಗೌಡ ಮತ್ತಿತರರನ್ನು ಆಡುಗೋಡಿಗೆ ಕರೆದೊಯ್ಯಲಾಗಿತ್ತು. ರೈತ ಸಂಘಟನೆಯ ಬಡಗಲಪುರ ನಾಗೇಂದ್ರ, ಜನಶಕ್ತಿಯ ನೂರ್ ಶ್ರೀಧರ್, ರೈತ ಮುಖಂಡರಾದ ಯಶವಂತ್ ಸಹಿತ ಅನೇಕರನ್ನು ಕೋರಮಂಗಲದಲ್ಲಿರುವ ಸಿ.ಆರ್ ಮೈದಾನಕ್ಕೆ ಕರೆದೊಯ್ಯಲಾಯಿತು.



ಪ್ರತಿಭಟನಕಾರರನ್ನು ಕರೆದೊಯ್ಯಲು ಖಾಸಗಿ ಬಸ್‌ಗೆ ಹತ್ತಿಸಿದ ಪೊಲೀಸರು

ಚಿತ್ರ: ಎಂ. ಎಸ್. ಮಂಜುನಾಥ್

ಸಾಕಾಗದ ಬಸ್: ಮುಷ್ಕರವನ್ನು ಬೆಂಬಲಿಸಿ ಭಾರಿ ಸಂಖ್ಯೆಯಲ್ಲಿ ಕಾರ್ಮಿಕರು ಜಮಾವಣೆಗೊಂಡಿದ್ದರಿಂದ ಅವರನ್ನು ಒಯ್ಯಲು ಸಾಕಷ್ಟು ಬಸ್‌ಗಳು ಇಲ್ಲದೇ ಪೊಲೀಸರು ಪರದಾಡುವಂತಾಯಿತು. ಪ್ರತಿಭಟನಕಾರರನ್ನು ಒಯ್ಯಲೆಂದು ಇದ್ದ ಬಿಎಂಟಿಸಿ ಬಸ್‌ಗಳು ತುಂಬಿ ಹೋದರೂ ಮತ್ತಷ್ಟು ಕಾರ್ಮಿಕರಿದ್ದರು. ಅದೇ ಸಮಯದಲ್ಲಿ 'ಇನ್‌ಫಾಂಟ್' ಎಂಬ ಖಾಸಗಿ ಕಂಪನಿಯ ಖಾಲಿ ಬಸ್ ಒಂದು ಪುರಭವನದ ಮುಂದೆ ಸಾಗುತ್ತಿರುವುದನ್ನು ಕಂಡು ಪೊಲೀಸರು ನಿಲ್ಲಿಸಿದರು. ಪ್ರತಿಭಟನಕಾರರನ್ನು ಕರೆದೊಯ್ಯುವಂತೆ ತಿಳಿಸಿದರು. ಆದರೆ, ಕಂಪನಿಯ ಅನುಮತಿ ಇಲ್ಲದೇ ಬೇರೆಯವರನ್ನು ಕರೆದೊಯ್ಯಲು ಸಾಧ್ಯವಿಲ್ಲ ಎಂದು ಚಾಲಕ ನಿರಾಕರಿಸಿದರು. ಆ ನಂತರ ಕಂಪನಿಯವರೊಂದಿಗೆ ಮಾತನಾಡಿ ಆ ಬಸ್ ಬಳಸಿಕೊಳ್ಳಲಾಯಿತು.

'36 'ಎ' ಮಾರ್ಗದ ಬಿಎಂಟಿಸಿ ಬಸ್ ಒಂದು ಐದಾರು ಪ್ರಯಾಣಿಕರೊಂದಿಗೆ ಸಾಗುತ್ತಿತ್ತು. ಆ ಬಸ್ ಅನ್ನು ನಿಲ್ಲಿಸಿದ ಪೊಲೀಸರು ಪ್ರಯಾಣಿಕರನ್ನು ಇಳಿಸಿ, ಪ್ರತಿಭಟನಕಾರರನ್ನು ಅದರಲ್ಲಿ ಕಳುಹಿಸಿದರು. ಆ ನಂತರ ಆ ಪ್ರಯಾಣಿಕರನ್ನು ಬೇರೆ ಬಸ್‌ಗಳಿಗೆ ಹತ್ತಿಸಿದರು.

ಬ್ಯಾಸ್ಕೆಟ್‌ಬಾಲ್: ಕ್ವಾರ್ಟರ್ ಫೈನಲ್‌ಗೆ ಜೈನ್ ವಿ.ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೈನ್ ವಿಶ್ವವಿದ್ಯಾಲಯ, ಎಸ್‌ಆರ್‌ಎಂ ವಿಶ್ವವಿದ್ಯಾಲಯ ತಂಡಗಳು ಗುರುವಾರ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಮಹಿಳಾ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದವು.

ಕನಕಪುರ ರಸ್ತೆಯಲ್ಲಿರುವ ಜೈನ್ ವಿ.ವಿಯ ಗ್ಲೋಬಲ್ ಕ್ಯಾಂಪಸ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಮೂರನೇ ದಿನದ ಪಂದ್ಯದಲ್ಲಿ ಆತಿಥೇಯ ಜೈನ್ ತಂಡವು 61–32ರಿಂದ ಚಂಡೀಗಢ ವಿರುದ್ಧ; ಎಸ್‌ಆರ್‌ಎಂ ತಂಡವು 88–80ರಿಂದ ರಾಜಸ್ಥಾನ ವಿ.ವಿ ವಿರುದ್ಧ ಗೆಲುವು ಸಾಧಿಸಿದವು.

ಇತರ ಪಂದ್ಯಗಳಲ್ಲಿ ಕ್ರೈಸ್ಟ್ ವಿ.ವಿ 56–36ರಿಂದ ಪಂಡಿತ್ ರವಿಶಂಕರ್ ವಿ.ವಿ ವಿರುದ್ಧ; ಲೈಪ್ ಗ್ವಾಲಿಯರ್ 58–51ರಿಂದ ಲವ್ಲಿ ಪ್ರೊಫೆಷನಲ್ ವಿ.ವಿ ವಿರುದ್ಧ; ಹೇಮಚಂದ್ ಯಾದವ್ ವಿ.ವಿ 53–37ರಿಂದ ಎಂಬಿಎಸ್ ಪಿಎಸ್ ವಿ.ವಿ ವಿರುದ್ಧ; ಪಂಜಾಬ್ ವಿ.ವಿ 71–30ರಿಂದ ಸಂತ ವಿಶ್ವವಿದ್ಯಾಲಯ ವಿರುದ್ಧ ಜಯ ಗಳಿಸಿದವು.

ಶುಕ್ರವಾರ ನಡೆಯುವ ಕ್ವಾರ್ಟರ್ ಫೈನಲ್‌ನಲ್ಲಿ ಜೈನ್ ತಂಡವು ಲವ್ಲಿ ಪ್ರೊಫೆಷನಲ್ ವಿವಿ ತಂಡವನ್ನು ಎದುರಿಸಲಿದೆ.

ವಿವಿಧ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಾಹಿತಿ ಕೆ.ಮರುಳಸಿದ್ದಪ್ಪ ಸರ್ಕಾರಕ್ಕೆ ಆಗ್ರಹ

'ಕಸಾಪ ಚುನಾವಣೆ ವ್ಯವಸ್ಥೆ ಬದಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬದಲಾದ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಏಳು ಕೋಟಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿ ಉಳಿದಿಲ್ಲ. ಈ ಸಂಸ್ಥೆಯನ್ನು ಪುನರುಜ್ಜೀವನಗೊಳಿಸಲು ಅಧ್ಯಕ್ಷ ಸ್ಥಾನಕ್ಕೆ ನಡೆಯುವ ಚುನಾವಣೆ ವ್ಯವಸ್ಥೆಯನ್ನು ಬದಲಾಯಿಸಬೇಕು' ಎಂದು ಸಾಹಿತಿ ಕೆ. ಮರುಳಸಿದ್ದಪ್ಪ ಅವರು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದರು.

ಕಸಾಪ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಪತ್ರಕರ್ತ ಪದ್ಮರಾಜ ದಂಡಾವತಿ ಅವರ 'ಜೈನ ಧರ್ಮ 63 ಒಳನೋಟಗಳು' ಕೃತಿಗೆ 'ಪೂಜ್ಯ ಸ್ವಸ್ತಿಶ್ರೀ ದೇವೇಂದ್ರಕೀರ್ತಿ ದತ್ತಿ', 'ಸುಧಾ' ವಾರಪತ್ರಿಕೆ ಮುಖ್ಯ ಉಪಸಂಪಾದಕಿ ಉಮಾ ಅನಂತ್ ಅವರ 'ಆರೋಗ್ಯ ಮಾಹಿತಿ ಸ್ವಸ್ಥ ಬದುಕಿಗೆ ಸ್ಫೂರ್ತಿ' ಕೃತಿಗೆ 'ಶ್ರೀಮತಿ ಶಾರದಾ ರಾಮಲಿಂಗಪ್ಪ ದತ್ತಿ ಪ್ರಶಸ್ತಿ' ಸೇರಿ 2024ನೇ ಸಾಲಿನ 52 ದತ್ತಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.



ಕಾರ್ಯಕ್ರಮದಲ್ಲಿ (ಮೊದಲ ಸಾಲು) ಗುರುಪ್ರಸಾದ್ ಕಂಟಲಗೆರೆ, ಪದ್ಮರಾಜ ದಂಡಾವತಿ, ಎಚ್.ಡಿ. ಜಯಪದ್ಮ ಕುಮಾರ್, ಕಾರ್ಗಲ್ ಭೋಗರಾಜ್, ಕೆ.ವಿ. ಮುದ್ದುವೀರಪ್ಪ, ಮಧುಸೂದನ ಎನ್. ಅವರಿಗೆ ಕಸಾಪ ದತ್ತಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ಆರ್. ಸುನಂದಮ್ಮ, ಮಾನಸ, ಕೆ.ಎಂ. ಗಾಯಿತ್ರಿ, ಕೆ. ಮರುಳಸಿದ್ದಪ್ಪ, ಗೊಲ್ಲಹಳ್ಳಿ ಶಿವಪ್ರಸಾದ್ ಹಾಗೂ ಪುರುಷೋತ್ತಮ ಬಿಳಿಮಲೆ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಈ ವೇಳೆ ಮಾತನಾಡಿದ ಪ್ರಶಸ್ತಿಗಳ ಆಯ್ಕೆ ಸಮಿತಿಯ ಅಧ್ಯಕ್ಷರೂ ಆಗಿದ್ದ ಮರುಳಸಿದ್ದಪ್ಪ, 'ನೂರಾರು ಸಂಖ್ಯೆಯಲ್ಲಿ ಸದಸ್ಯರಿದ್ದಾಗ ಕಸಾಪ ಇಡೀ ಕರ್ನಾಟಕದ ಪ್ರಾತಿನಿಧಿಕ ಸಂಸ್ಥೆಯಂತೆ ಕೆಲಸ ಮಾಡುತ್ತಿತ್ತು. ಈಗ ಅದು ಪ್ರಾತಿನಿಧಿಕ ಸಂಸ್ಥೆಯಾಗಿ ಉಳಿದಿಲ್ಲ. ಈ ಸಂಸ್ಥೆಗೆ ಅಧ್ಯಕ್ಷರಾಗಿ ಬಂದವರೊಬ್ಬರು, ಪಂಪ ಮಹಾಕವಿ ರಸ್ತೆಯ ಹೆಸರನ್ನು ಸಾಹಿತ್ಯ ಪರಿಷತ್ತು ರಸ್ತೆಯೆಂದು ಬದಲಾಯಿಸುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿದ್ದರು. ಇದು ಪರಿಷತ್ತಿನ ಅವನತಿ ಸೂಚಿಸಲಿದೆ' ಎಂದರು.



ಉಮಾ ಅನಂತ್ ಅವರಿಗೆ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು

'ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಗೆ ಹಣವುಳ್ಳವರು ಮಾತ್ರ ನಿಲ್ಲಬೇಕಾದ ಸ್ಥಿತಿ ನಿರ್ಮಾಣವಾಗಿದೆ. ₹25 ಲಕ್ಷದಿಂದ ₹30 ಲಕ್ಷ ವೆಚ್ಚ ಮಾಡುವವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದಾರೆ. ಜನರಿಂದ ಸಂಗ್ರಹಿಸಿದ ತೆರಿಗೆ ಹಣದಲ್ಲಿ, ವರ್ಷಕ್ಕೆ ₹80 ಕೋಟಿಯಿಂದ ₹100 ಕೋಟಿಯನ್ನು ಸರ್ಕಾರವು ಪರಿಷತ್ತಿಗೆ ಒದಗಿಸುತ್ತಿದೆ. ಇಂತಹ ಸಂದರ್ಭದಲ್ಲಿ ಪರಿಷತ್ತು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಲು, 4.5 ಲಕ್ಷ ಜನ ಮತ ಹಾಕುವ ವ್ಯವಸ್ಥೆ ಕಿತ್ತು ಹಾಕಬೇಕು. ಸರ್ಕಾರ ಪರ್ಯಾಯ ಮಾರ್ಗವನ್ನು ಹುಡುಕಬೇಕು' ಎಂದು ಹೇಳಿದರು.

ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್, 'ಸಾಹಿತ್ಯ ಮತ್ತು ಕಲೆಯು ಕಟ್ಟುವ ಕಡೆ ಹೋಗಬೇಕೆ ಹೊರತು, ಕೆಡವುವ ಕಡೆಗೆ ಹೋಗಬಾರದು. ಮಕ್ಕಳಿಗೆ ಮಣ್ಣಿನ ವಾಸನೆ, ಮಳೆಯ ವಾಸನೆ ಪರಿಚಯಿಸಬೇಕು' ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, 'ಜಾಗತೀಕರಣದ ನಂತರ ಅನೇಕ ಭಾಷೆ ಬಿಕ್ಕಟ್ಟು ಎದುರಿಸಿದವು. ಕನ್ನಡ ಭಾಷೆಗೆ ಸಂಬಂಧಿಸಿದಂತೆ ಕನ್ನಡ ಸಾಹಿತ್ಯ ಪರಿಷತ್ತು, ಲೇಖಕರ ಮೇಲೆ ದೊಡ್ಡ ಜವಾಬ್ದಾರಿಯಿದೆ' ಎಂದು ಹೇಳಿದರು.

ಕಸಾಪ ಆಡಳಿತಾಧಿಕಾರಿ ಕೆ.ಎಂ. ಗಾಯಿತ್ರಿ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಆರ್. ಸುನಂದಮ್ಮ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಅಂತರರಾಷ್ಟ್ರೀಯ ಮಕ್ಕಳ ಕ್ಯಾನ್ಸರ್ ದಿನದ ಅಂಗವಾಗಿ ಅರಿವು ಕಾರ್ಯಕ್ರಮ: ಆಯೋಜನೆ ಮತ್ತು ಸ್ಥಳ: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಳಿಗ್ಗೆ 8.30

ಅಂತರರಾಷ್ಟ್ರೀಯ ಮುಖ ಮತ್ತು ದವಡೆ ಶಸ್ತ್ರಚಿಕಿತ್ಸಕರ ದಿನ: ಡಾ.ಬಿ.ಸಿ. ಭಗವಾನ್, ಅತಿಥಿಗಳು: ಡಾ. ಪ್ರಶಾಂತ್ ಸಿ.ಎಸ್., ಡಾ. ಸುನಿಲ್ ವಾಸುದೇವ್, ಆಯೋಜನೆ: ಮುಖ ಮತ್ತು ದವಡೆ ಶಸ್ತ್ರಚಿಕಿತ್ಸಕರ ಸಂಘ, ಸ್ಥಳ: ಶಿವಾನಂದ ಶರ್ಮ ಕಲಾಕ್ಷೇತ್ರ, ಡಿ.ಎ. ಪಾಂಡು ಸ್ಮಾರಕ ಆರ್.ವಿ. ಡೆಂಟಲ್ ಕಾಲೇಜು, ಬೆಳಿಗ್ಗೆ 10

'ಕಮ್ಯುನಿಕೇಟ್, ಕ್ರಿಯೇಟ್ ಆ್ಯಂಡ್ ಕನೆಕ್ಟ್' ಎರಡು ದಿನಗಳ ರಾಜ್ಯಮಟ್ಟದ ಕಾರ್ಯಕ್ರಮ: ಅತಿಥಿಗಳು: ಎಂ. ವೆಂಕಟೇಶ್, ಶುಭಾ ಎಂ., ಭುವನೇಶ್ವರಿ ಇ., ಪಲ್ಲವಿ ಬಿ.ಕೆ., ಅಧ್ಯಕ್ಷತೆ: ರಘುಕುಮಾರ್ ಎನ್., ಆಯೋಜನೆ ಮತ್ತು ಸ್ಥಳ: ಬಿಎಂಎಸ್ ಕಾಲೇಜ್ ಫಾರ್ ವುಮೆನ್, ಬಸವನಗುಡಿ, ಬೆಳಿಗ್ಗೆ 10

ಕಲಾ ಪ್ರತಿಭೋತ್ಸವ: ಉದ್ಘಾಟನೆ: ಶಿವರಾಜ ಎಸ್. ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಅತಿಥಿಗಳು: ಪುರುಷೋತ್ತಮ ಬಿಳಿಮಲೆ, ಮಾನಸ, ಚನ್ನಪ್ಪ ಕಟ್ಟಿ, ಎಲ್. ಎನ್. ಮುಕುಂದರಾಜ್, ಕೆ.ವಿ. ನಾಗರಾಜಮೂರ್ತಿ, ಶುಭಾ ಧನಂಜಯ, ಪ.ಸ. ಕುಮಾರ್, ಗೊಲ್ಲಹಳ್ಳಿ ಶಿವಪ್ರಸಾದ್, ಕೋಟಗಾನಹಳ್ಳಿ ರಾಮಯ್ಯ, ಯಮುನಾ ಶ್ರೀನಿಧಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ಎಇಡಿಪಿ-ಪ್ರಯೋಗ, ಪ್ರಗತಿ, ಪ್ರಯೋಜನ ಕಾರ್ಯಕ್ರಮದ ಉದ್ಘಾಟನೆ: ಡಾ.ಎಂ.ಸಿ. ಸುಧಾಕರ್, ಆಯೋಜನೆ: ಉನ್ನತ ಶಿಕ್ಷಣ ಇಲಾಖೆ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10



ಉಮಾಶ್ರೀ

ಲ್ಯಾಂಡ್ ಲಾರ್ಡ್–ಒಂದು ಸಂವಾದ: ಭಾಗವಹಿಸುವವರು: ಕೆ.ವೈ. ನಾರಾಯಣಸ್ವಾಮಿ, ಉಮಾಶ್ರೀ, ಸುಬ್ಬು ಹೊಲೆಯಾರ್, ಸಂಜ್ಯೋತಿ ವಿ.ಕೆ., ಪ್ರಕಾಶ್ ಮಂಟೇದ್, ನಾರಾಯಣ್ ಕ್ಯಾಸಂಬಳ್ಳಿ, ವಿ.ಆರ್. ಕಾರ್ಪೆಂಟರ್, ಫಕ್ಕಿರೇಶ್, ವಿನಯ್ ಗುಂಟೆ, ಯತಿರಾಜ್ ಬ್ಯಾಲಹಳ್ಳಿ, ಮಧು ಹೊಲೆಯಾರ್, ಮಂಜುಳಾ ಕಿರುಗಾವಲು, ಅಶ್ವಿನಿ ಬೋಧ್, ಕಾವ್ಯಾ ಕೆ.ಪಿ., ಮಂಜುನಾಥ ಅದ್ದೆ, ದುನಿಯಾ ವಿಜಯ್, ಜಡೇಶ್ ಕೆ. ಹಂಪಿ, ಮಾಸ್ತಿ ಉಪ್ಪಾರಳ್ಳಿ, ಬಿ.ಎಂ. ಗಿರಿರಾಜ್, ರಿತನ್ಯಾ, ಆಯೋಜನೆ: ಸಮಾನಮನಸ್ಕರ ವೇದಿಕೆ, ಸ್ಥಳ: ಚನ್ನಬಸಪ್ಪ ಸಭಾಂಗಣ, ಕರ್ನಾಟಕ ಸರ್ಕಾರದ ಸಚಿವಾಲಯ ಕ್ಲಬ್, ಕಬ್ಬನ್ ಉದ್ಯಾನ, ಸಂಜೆ 4

ವಿಶ್ವ ಕ್ಯಾನ್ಸರ್ ದಿನ: ಆಯೋಜನೆ: ಮಣಿಪಾಲ್ ಹಾಸ್ಪಿಟಲ್ಸ್, ಸ್ಥಳ: ಸ್ಟರ್ಲಿಂಗ್ ಮ್ಯಾಕ್, ಬೆಳಿಗ್ಗೆ 11

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಎಸ್. ಜಿ. ಸುಶೀಲಮ್ಮ ಅವರಿಗೆ ಅಭಿನಂದನಾ ಸಮಾರಂಭ: ಉದ್ಘಾಟನೆ: ಬೈರತಿ ಸುರೇಶ್, ಅಧ್ಯಕ್ಷತೆ: ರಾಮಕೃಷ್ಣಪ್ಪ, ಅತಿಥಿಗಳು: ಆರ್. ಕೃಷ್ಣಪ್ಪ, ಎಂ. ಆನಂದ್ ಕುಮಾರ್, ಸ್ಥಳ: ಶಿರಡಿ ಸಾಯಿಬಾಬಾ ದೇವಸ್ಥಾನ, ಆರ್.ಟಿ. ನಗರ, ಸಂಜೆ 4

ಅನ್ವೇಷಣ–2026: ಅತಿಥಿಗಳು: ಜಿತೇಂದ್ರ ಖನಗಾವಿ, ಪರಮೇಶ್ವರ, ಪ್ರವೀಣ್ ಕುಮಾರ್ ಶೆಟ್ಟಿ, ಅದಿತಿ ಪ್ರಭುದೇವ, ಪೃಥ್ವಿ ಭಟ್, ಆಯೋಜನೆ ಮತ್ತು ಸ್ಥಳ: ಸ್ಟರ್ಲಿಂಗ್ ಇಂಗ್ಲಿಷ್ ರೆಸಿಡೆನ್ಷಿಯಲ್ ಸ್ಕೂಲ್, ಕದರಾಯಪ್ಪನಹಳ್ಳಿ, ಸಂಜೆ 5



ಅದಿತಿ ಪ್ರಭುದೇವ


ಪ್ರೊ.ಎಂಪಿಎಲ್ ಶಾಸ್ತ್ರಿ ಸಂಗೀತೋತ್ಸವ–2026: ಹರಿದಾಸ ದೀಪ್ತಿ–ಮ್ಯೂಸಿಕ್ ಫ್ಯೂಚರ್: ನಿರ್ದೇಶನ: ಮೈಸೂರು ನಾಗಮಣಿ ಶ್ರೀನಾಥ್, ಆಯೋಜನೆ: ಎಂಇಎಸ್ ಕಲಾವೇದಿ, ಸ್ಥಳ: ಎಂಇಎಸ್ ಕಾಲೇಜಿನ ಸಭಾಂಗಣ, ಮಲ್ಲೇಶ್ವರ, ಸಂಜೆ 6

ಸೆಂಟರ್ ಸ್ಟೇಜ್ ಕಪ್ಪಣ್ಣ ಪ್ರಶಸ್ತಿ ಪ್ರದಾನ: ಕೆ.ಸಿ. ರಾಮಮೂರ್ತಿ, ಅತಿಥಿಗಳು: ರಾಣಿ ಸತೀಶ್, ಬಿ. ಸುರೇಶ, ಕೆ.ವಿ. ನಾಗರಾಜಮೂರ್ತಿ, ಅಧ್ಯಕ್ಷತೆ: ಟಿ.ಎಸ್. ನಾಗಾಭರಣ, ಉಪಸ್ಥಿತಿ: ಶ್ರೀನಿವಾಸ್ ಜಿ. ಕಪ್ಪಣ್ಣ, ಗಂಗಾಧರ್, ಪ್ರಶಸ್ತಿ ಸ್ವೀಕರಿಸುವವರು: ಎಂ. ಗಣೇಶ್, ಶಕೀಲ್ ಅಹಮದ್, ಆಯೋಜನೆ: ಶ್ರೀಮಾತಾ ಚಾರಿಟಬಲ್ ಟ್ರಸ್ಟ್, ಸೆಂಟರ್ ಸ್ಟೇಜ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6ರಿಂದ

ನೃತ್ಯ ಸಂಭ್ರಮ: ಅತಿಥಿ: ಐಶ್ವರ್ಯಾ ನಿತ್ಯಾನಂದ, ಆಯೋಜನೆ: ಚಿತ್ಕಲಾ ಸ್ಕೂಲ್ ಆಫ್ ಡ್ಯಾನ್ಸ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 6.30

'ತಾರಾ' ನಾಟಕ ಪ್ರದರ್ಶನ: ನಿರ್ದೇಶನ: ರಾಘವೇಂದ್ರ ಜೆ., ಆಯೋಜನೆ: ಅಭಿನಯ ತರಂಗ, ಸ್ಥಳ: ರಂಗ ಶಂಕರ, ಜೆ.ಪಿ. ನಗರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. garadalli_indu@prajavani.co.in



ತುಂಗಭದ್ರಾ ಅಣೆಕಟ್ಟೆ: 3 ಗೇಟ್ ಅಳವಡಿಕೆ ಪೂರ್ಣ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಯ 19 ಮತ್ತು 32ನೇ ಕ್ರೆಸ್ಟ್‌ಗೇಟ್‌ಗಳನ್ನು ಗುರುವಾರ ಯಶಸ್ವಿಯಾಗಿ ಅಳವಡಿಸಲಾಗಿದೆ. 33 ಗೇಟ್‌ಗಳಲ್ಲಿ ಮೂರು ಗೇಟ್ ಅಳವಡಿಕೆ ಕಾರ್ಯ ಪೂರ್ಣಗೊಂಡಿತು.

‘ಸದ್ಯ ನಂ. 1, 4, 11,17, 20, 24, 26, 27, 28 ಮತ್ತು 33 (ಒಟ್ಟು 10) ಗೇಟ್‌ಗಳ ಅಳವಡಿಕೆ ಕಾರ್ಯ ಪ್ರಗತಿಯಲ್ಲಿದೆ.ಒಟ್ಟು 15 ಹಳೆಗೇಟ್‌ಗಳನ್ನು ಕತ್ತರಿಸಿ ತೆಗೆಯಲಾಗಿದ್ದು, ಇನ್ನೂ ಎರಡು ಗೇಟ್ ಕತ್ತರಿಸುವ ಕೆಲಸ ಪ್ರಗತಿಯಲ್ಲಿದೆ’ ಎಂದು ತುಂಗಭದ್ರಾ ಮಂಡಳಿ ಅಧಿಕಾರಿಯೊಬ್ಬರು ತಿಳಿಸಿದರು.

4 ವಿ.ವಿ ಅಕ್ರಮ: ಸತ್ಯಶೋಧನೆಗೆ ಸಮಿತಿ

ನೇಮಕಾತಿಯಲ್ಲಿ ಭ್ರಷ್ಟಾಚಾರ: ವಿಚಾರಣೆಗೆ ಆದೇಶಿಸಿದ ರಾಜ್ಯಪಾಲ ಗೆಹಲೋತ್

• ಎ.ಎಂ.ಸುರೇಶ

ಬೆಂಗಳೂರು: ರಾಜ್ಯದ ನಾಲ್ಕು ವಿಶ್ವವಿದ್ಯಾಲಯಗಳಲ್ಲಿನ ನೇಮಕಾತಿಗಳಲ್ಲಿ ಭ್ರಷ್ಟಾಚಾರ, ಅವ್ಯವಹಾರಗಳ ಬಗ್ಗೆ ವಿಚಾರಣೆ ನಡೆಸಲು ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಪ್ರತ್ಯೇಕ ಸತ್ಯ ಶೋಧನಾ ಸಮಿತಿಗಳನ್ನು ರಚಿಸಿ ರಾಜ್ಯಪಾಲರು ಆದೇಶ ಹೊರಡಿಸಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ತುಮಕೂರು ವಿಶ್ವವಿದ್ಯಾಲಯ ಹಾಗೂ ಗುಲಬರ್ಗ ವಿಶ್ವವಿದ್ಯಾಲಯದಲ್ಲಿ ಹಣ ದುರುಪಯೋಗ, ನೇಮಕಾತಿ ಅಕ್ರಮ, ನಿಯಮಗಳ ಉಲ್ಲಂಘನೆ, ಆಡಳಿತ ನಿರ್ವಹಣೆಯಲ್ಲಿ ಗಂಭೀರ ಲೋಪಗಳು ಕಂಡುಬಂದಿದ್ದವು. ಇದರ ಬಗ್ಗೆ ನಿಖರ ವರದಿ ಪಡೆಯಲು ಮುಂದಾಗಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ವಿಚಾರಣೆಗೆ ಆದೇಶಿಸಿದ್ದಾರೆ ಎಂದು ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಉನ್ನತ ಶಿಕ್ಷಣ ಇಲಾಖೆ ಹಾಗೂ ಉನ್ನತ ಶಿಕ್ಷಣ ಪರಿಷತ್‌ನ ಅಧಿಕಾರಿಗಳು



ಪ್ರಾಥಮಿಕ ಹಂತದಲ್ಲಿ ನಡೆಸಿದ ವಿಚಾರಣೆ ವೇಳೆ ಲೋಪಗಳು ಆಗಿರುವುದು ಕಂಡುಬಂದಿತ್ತು. ಇದನ್ನು ಆಧರಿಸಿ ಹೆಚ್ಚಿನ ವಿಚಾರಣೆ ನಡೆಸುವ ಅಗತ್ಯವಿದೆ ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಮಾಡಿದ ಮನವಿ ಆಧರಿಸಿ, ರಾಜ್ಯಪಾಲರು ತನಿಖೆಗೆ ಆದೇಶಿಸಿದ್ದಾರೆ ಎಂದು ಗೊತ್ತಾಗಿದೆ.

ಕರ್ನಾಟಕ ಮುಕ್ತ ವಿ.ವಿ.: ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಮಾಜಿ ಕುಲಸಚಿವರ ವಿರುದ್ಧ ಕಳೆದ ವರ್ಷ ಲಂಚ ಹಾಗೂ ಭ್ರಷ್ಟಾಚಾರದ ಆರೋಪ ಎದುರಾಗಿತ್ತು. ಉನ್ನತ ಶಿಕ್ಷಣ ಪರಿಷತ್‌ನ ಆಗಿನ ಉಪಾಧ್ಯಕ್ಷ ಪ್ರೊ.ಎಸ್.ಆರ್. ನಿರಂಜನ್ ಅವರು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ಪ್ರಾಥಮಿಕ ಹಂತದ ವಿಚಾರಣೆ ನಡೆಸಿದ್ದರು.

ಗಂಭೀರ ಪ್ರಮಾದಗಳು ಆಗಿರುವುದನ್ನು ಪತ್ತೆಹಚ್ಚಿದ್ದ ಅವರು, ಇನ್ನೂ ಹೆಚ್ಚಿನ ವಿಚಾರಣೆ ನಡೆಸುವ ಅಗತ್ಯವಿದೆ ಎಂದು ಶಿಫಾರಸು ಮಾಡಿದ್ದರು. ಇದನ್ನು ಆಧರಿಸಿ ಹೈಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿ ಬಿ.ಎ.ಪಾಟೀಲ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದು, ಒಂದು ತಿಂಗಳಲ್ಲಿ ವರದಿ ನೀಡುವಂತೆ ಸೂಚಿಸಲಾಗಿದೆ.

ಮಂಜೂರಾಗಿರುವ ಹುದ್ದೆಗಳಿಗಿಂತ ಅಧಿಕ ಸಂಖ್ಯೆಯಲ್ಲಿ ಬೋಧಕ, ಬೋಧಕೇತರ ಸಿಬ್ಬಂದಿ ನೇಮಕ, ಅನವಶ್ಯಕವಾಗಿ ಪ್ರಾದೇಶಿಕ ಕೇಂದ್ರಗಳ ಸ್ಥಾಪನೆ ಮತ್ತು ತಾತ್ಕಾಲಿಕ ನಿರ್ದೇಶಕರ ನೇಮಕ, ಸರ್ಕಾರದ ಒಪ್ಪಿಗೆ ಇಲ್ಲದೆ ಹುದ್ದೆಗಳ ಸೃಷ್ಟಿ, ಖಾಸಗಿ ಅಧ್ಯಯನ ಕೇಂದ್ರಗಳನ್ನು ತೆರೆಯಲು ಅನುಮತಿ ನೀಡಿರುವುದು ಕಂಡು ಬಂದಿದ್ದು, ಈ ಬಗ್ಗೆ ಸಮಿತಿ ವಿಚಾರಣೆ ನಡೆಸಲಿದೆ.

ತುಮಕೂರು ವಿ.ವಿ.: ಪ್ರಥಮ ದರ್ಜೆ ಸಹಾಯಕರ ಎಂಟು ಹುದ್ದೆಗಳು ನೇರ ನೇಮಕಾತಿಗೆ ಮೀಸಲಾಗಿದ್ದವು. ಆದರೆ, ಈ ಹುದ್ದೆಗಳನ್ನು ವಿಶ್ವವಿದ್ಯಾಲಯದ ಆಡಳಿತವು ಬಡ್ತಿಯಿಂದ ತುಂಬುವ ಮೂಲಕ ನಿಯಮಗಳನ್ನು ಉಲ್ಲಂಘಿಸಿದೆ. ಇದು ಸೇರಿ ನೇಮಕಾತಿ, ಬಡ್ತಿಯಲ್ಲಿ ಆಗಿರುವ ಲೋಪಗಳ ವಿಚಾರಣೆಗೆ ವಿಶ್ರಾಂತ ನ್ಯಾಯಮೂರ್ತಿ ಪಿ.ಕೃಷ್ಣಭಟ್ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದು ಮೂರು ತಿಂಗಳಲ್ಲಿ ವರದಿ ನೀಡುವಂತೆ ಸೂಚಿಸಲಾಗಿದೆ.

ಜಾನಪದ ವಿ.ವಿ.: ಉನ್ನತ ಶಿಕ್ಷಣ ಇಲಾಖೆಯ ಒಪ್ಪಿಗೆ ಇಲ್ಲದೆ ಭದ್ರತಾ ಸಿಬ್ಬಂದಿ ನೇಮಕ, ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಿರುವ ಲ್ಯಾಪ್‌ಟಾಪ್‌ಗಳ ಖರೀದಿಗೆ ಸಂಬಂಧಿಸಿದ ಸೂಕ್ತ ದಾಖಲೆಗಳು ಇಲ್ಲದೆ ಇರುವುದು ಸೇರಿದಂತೆ ಇನ್ನಿತರ ಪ್ರಮಾದಗಳ ವಿಚಾರಣೆಗೆ ವಿಶ್ರಾಂತ ನ್ಯಾಯಮೂರ್ತಿ ಉಮೇಶ್ ಅಡಿಗ ನೇತೃತ್ವದಲ್ಲಿ ಸಮಿತಿ ರಚಿಸಿದ್ದು ವರದಿ ನೀಡಲು ಮೂರು ತಿಂಗಳು ಕಾಲಾವಕಾಶ ನೀಡಲಾಗಿದೆ.

ಗುಲಬರ್ಗ ವಿ.ವಿ.: ಬಿ.ಇಡಿ 2 ಮತ್ತು 4ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಅಂಕಪಟ್ಟಿ ನೀಡದೆ ಇರುವುದು, ವಿ.ವಿ.ಗೆ ಆಗಿರುವ ಆರ್ಥಿಕ ನಷ್ಟ ಇತ್ಯಾದಿಗಳ ಬಗ್ಗೆ ವಿಚಾರಣೆ ನಡೆಸಿ ಎರಡು ತಿಂಗಳಲ್ಲಿ ವರದಿ ನೀಡುವಂತೆ ಸಮಿತಿಗೆ ಸೂಚಿಸಲಾಗಿದೆ.

ಇನ್ನಷ್ಟು ವಿ.ವಿ.ಗಳಲ್ಲಿ ಅವ್ಯವಹಾರ?

ಮಂಗಳೂರು, ಶಿವಮೊಗ್ಗ ಸೇರಿದಂತೆ ಇನ್ನೂ ಹಲವು ವಿಶ್ವವಿದ್ಯಾಲಯಗಳಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ವಿವರಣೆ ನೀಡುವಂತೆ ಸೂಚಿಸಲಾಗಿದೆ. ಈ ಸಂಬಂಧ ವಿಚಾರಣೆ ನಡೆಸಲು ರಾಜ್ಯಪಾಲರು ಸದ್ಯದಲ್ಲೇ ಸತ್ಯಶೋಧನಾ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮಂಗಳೂರು ವಿಶ್ವವಿದ್ಯಾಲಯದಲ್ಲಿ ಕಟ್ಟಡ ನಿರ್ಮಾಣದ ಹೆಸರಿನಲ್ಲಿ ₹11 ಕೋಟಿ ಅವ್ಯವಹಾರ ಆಗಿದೆ. ಶಿವಮೊಗ್ಗ ವಿಶ್ವವಿದ್ಯಾಲಯದ ನೇಮಕಾತಿಗಳಲ್ಲಿ ಅಕ್ರಮಗಳು ನಡೆದಿವೆ ಎನ್ನಲಾಗಿದೆ.

ಯಾವ ವಿ.ವಿ: ಯಾರ ನೇತೃತ್ವ

ಕರ್ನಾಟಕ ಮುಕ್ತ ವಿ.ವಿ.: ನ್ಯಾ. ಬಿ.ಎ.ಪಾಟೀಲ
ತುಮಕೂರು ವಿ.ವಿ.: ನ್ಯಾ. ಪಿ.ಕೃಷ್ಣಭಟ್
ಜಾನಪದ ವಿ.ವಿ.: ನ್ಯಾ. ಉಮೇಶ್ ಅಡಿಗ
ಗುಲಬರ್ಗ ವಿ.ವಿ.: ನ್ಯಾ.ರಾಮಚಂದ್ರ ಡಿ.ಹುದ್ದಾರ್

ಸುದ್ದಿ 2 ನಿಮಿಷ

ಕಸಾಪ: 46 ಸಿಬ್ಬಂದಿಯಲ್ಲಿ 24 ಮಂದಿಗೆ ವೇತನ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ (ಕಸಾಪ) ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯಲ್ಲಿ 24 ಮಂದಿಗೆ ವೇತನ ನೀಡಲು ಆರ್ಥಿಕ ಇಲಾಖೆ ಅನುಮೋದನೆ ನೀಡಿದೆ.

ಪರಿಷತ್ತಿನಲ್ಲಿ ಒಟ್ಟು 46 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರಲ್ಲಿ ಇಬ್ಬರು ಮಾತ್ರ ಕಾಯಂ ನೌಕರರಾಗಿದ್ದು, ಉಳಿದವರನ್ನು ಕಾಲಕಾಲಕ್ಕೆ ಸಂಚಿತ ವೇತನದ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ. ಸಂಚಿತ ವೇತನದಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ಅಕ್ಟೋಬರ್ ತಿಂಗಳಿನಿಂದ ವೇತನ ಪಾವತಿಯಾಗಿರಲಿಲ್ಲ. ಅವರ ವೇತನ ಪಾವತಿಗೆ ಸಂಬಂಧಿಸಿದಂತೆ ಸೂಕ್ತ ಮಾರ್ಗದರ್ಶನಕ್ಕಾಗಿ ಕಸಾಪ ಆಡಳಿತಾಧಿಕಾರಿ ಕೆ.ಎಂ.ಗಾಯಿತ್ರಿ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿಗೆ ಪತ್ರ ಬರೆದಿದ್ದರು.

24 ಸಿಬ್ಬಂದಿ ವೇತನ ಪಾವತಿಗೆ ಅನುಮೋದನೆ ನೀಡಿರುವ ಆರ್ಥಿಕ ಇಲಾಖೆ, ಉಳಿದ 22 ಸಿಬ್ಬಂದಿಯ ನೇಮಕಾತಿಗೆ ಸಂಬಂಧಿಸಿದಂತೆ ಸ್ಪಷ್ಟೀಕರಣ ಕೇಳಿದೆ. ಕಸಾಪದ ಆರ್ಥಿಕ ಸಮಿತಿಯಿಂದಾಗಲಿ, ಕಾರ್ಯಕಾರಿ ಸಮಿತಿಯಿಂದಾಗಲಿ ಅನುಮೋದನೆ ಪಡೆಯದೆ ಸಿಬ್ಬಂದಿ ನೇಮಕ ಮಾಡಿಕೊಳ್ಳಲಾಗಿದೆ. ನಿವೃತ್ತಿ ನಂತರವೂ ಕೆಲ ನೌಕರರನ್ನು ನೇಮಿಸಿಕೊಳ್ಳಲಾಗಿದೆ. ನೌಕರರ ವೇತನವನ್ನು ಯಾವ ಆಧಾರದ ಮೇಲೆ ನಿಗದಿ ಮಾಡಲಾಗಿದೆ? ಯಾವ ಆಧಾರದ ಮೇಲೆ ಹೆಚ್ಚಿಸಲಾಗಿದೆ ಎಂದು ಇಲಾಖೆ ಪ್ರಶ್ನಿಸಿದೆ. ಈ ನೇಮಕಾತಿಯಲ್ಲಿ 13 ವರ್ಷಗಳಿಂದ ಕೆಲಸ ಮಾಡುತ್ತಿರುವ ಸಿಬ್ಬಂದಿಯೂ ಸೇರಿದ್ದಾರೆ. ನೇಮಕಾತಿಗೆ ಸಂಬಂಧಿಸಿದ ಲೋಪಗಳಿಗೆ ಹೊಣೆಗಾರಿಕೆ ನಿರ್ಧರಿಸಿ, ತನಿಖಾ ವರದಿಯ ಅನುಸಾರ ಕ್ರಮಕೈಗೊಳ್ಳಬೇಕೆಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಸೂಚಿಸಲಾಗಿದೆ.

ಧರ್ಮಸ್ಥಳದತ್ತ ಶಿವ ಭಕ್ತರ ದಂಡು



ಚಿಕ್ಕಮಗಳೂರು: ಶಿವರಾತ್ರಿ ಸಂದರ್ಭದಲ್ಲಿ ಮಂಜುನಾಥನ ದರ್ಶನಕ್ಕೆ ಧರ್ಮಸ್ಥಳಕ್ಕೆ ಹಲವು ಜಿಲ್ಲೆಗಳಿಂದ ಭಕ್ತರು ಪಾದಯಾತ್ರೆಯಲ್ಲಿ ತೆರಳುತ್ತಿದ್ದಾರೆ.

ಬೆಂಗಳೂರು, ಹಾಸನ, ಮಂಡ್ಯ, ಚಿತ್ರದುರ್ಗ ಸೇರಿ ರಾಜ್ಯದ ಹಲವೆಡೆಯ ಭಕ್ತರು ಧರ್ಮಸ್ಥಳದತ್ತ ಹೆಜ್ಜೆ ಹಾಕುತ್ತಿದ್ದಾರೆ. ಭಕ್ತರು ಸಾಗುವ ದಾರಿಯುದ್ದಕ್ಕೂ ದಾನಿಗಳು ಊಟ, ಹಣ್ಣು, ನೀರು, ಮಜ್ಜಿಗೆ ವಿತರಿಸುತ್ತಿದ್ದಾರೆ. ರಸ್ತೆಯುದ್ದಕ್ಕೂ ಪ್ಲಾಸ್ಟಿಕ್ ತ್ಯಾಜ್ಯ ಬಿದ್ದಿರುವುದು ಸಾಮಾನ್ಯವಾಗಿದೆ. ‘ಬೇರುಭೂಮಿ’ ಹೆಸರಿನ ತಂಡ ಅಲ್ಲಲ್ಲಿ ಪ್ಲಾಸ್ಟಿಕ್ ಚೀಲಗಳನ್ನು ಇರಿಸಿ ಸ್ವಚ್ಛತೆ ಕಾಪಾಡಲು ಮನವಿ ಮಾಡಿದೆ.

ಚಾರ್ಮಾಡಿ ಘಾಟಿ ಸೇರಿ ರಸ್ತೆಯುದ್ದಕ್ಕೂ ಬಯಲೇ ಶೌಚಾಲಯವಾಗಿದೆ. ಅಲ್ಲಲ್ಲೇ ತಾತ್ಕಾಲಿಕ ಶೌಚಾಲಯ ಇರಿಸಿದರೆ ಮಹಿಳೆಯರಿಗೆ ಅನುಕೂಲವಾಗಲಿದೆ ಎಂದು ಭಕ್ತರು ಅಭಿಪ್ರಾಯ ವ್ಯಕ್ತಪಡಿಸಿದರು.

ಆಗಸದಿಂದ ಕಂಡ ಆನೆಲಾಯ

ಪ್ರಜಾವಾಣಿ ಚಿತ್ರ



ಹಂಪಿ ಉತ್ಸವ ಪ್ರಯುಕ್ತ ಹೆಲಿಕಾಪ್ಟರ್ ಯಾನ ಗುರುವಾರ ಆರಂಭವಾಗಿದ್ದು, ಆನೆಲಾಯ ಪ್ರದೇಶ ಆಗಸದಿಂದ ಹೀಗೆ ಕಾಣಿಸಿತು

ಅಣೆಕಟ್ಟು ಸುರಕ್ಷತಾ ಸಮ್ಮೇಳನ ಇಂದಿನಿಂದ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಕಾಂಗ್ರೆಸ್ ಸರ್ಕಾರವು 1 ಸಾವಿರ ದಿನ ಪೂರೈಸುತ್ತಿರುವ ಸಂದರ್ಭದಲ್ಲೇ ಬೆಂಗಳೂರಿನಲ್ಲಿ 2 ದಿನದ ಅಂತರರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಸಮ್ಮೇಳನ ಏರ್ಪಡಿಸಲಾಗಿದೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ‘ಇದೇ 13 ಹಾಗೂ 14ರಂದು ಭಾರತೀಯ ವಿಜ್ಞಾನ ಸಂಸ್ಥೆಯ ಜೆಜೆ ಟಾಟಾ ಸಭಾಂಗಣದಲ್ಲಿ ಎರಡು ದಿನಗಳ ಸಮ್ಮೇಳನ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮ್ಮೇಳನವನ್ನು ಶುಕ್ರವಾರ ಉದ್ಘಾಟಿಸುವರು’ ಎಂದರು.

‘ನಮ್ಮಲ್ಲಿರುವ ಶೇ 75 ಅಣೆಕಟ್ಟುಗಳು 25 ವರ್ಷಕ್ಕಿಂತ ಹಳೆಯದಾಗಿದ್ದು, ಸುರಕ್ಷತೆ ವಿಚಾರದಲ್ಲಿ ರಾಜಿಯಾಗಲು ನಾವು ಬಯಸುವುದಿಲ್ಲ. ಪ್ರತಿ ವರ್ಷ ಅಣೆಕಟ್ಟುಗಳಲ್ಲಿ ಒಂದಲ್ಲಾ ಒಂದು ಸಮಸ್ಯೆ ಎದುರಾಗುತ್ತಿದೆ. ಕೇಂದ್ರ ಸರ್ಕಾರವು ವಿಶ್ವಬ್ಯಾಂಕ್ ಹಾಗೂ ಎಐಐಬಿಯ ಬಾಹ್ಯ ಬೆಂಬಲದೊಂದಿಗೆ ಅಣೆಕಟ್ಟು ನವೀಕರಣ ಮತ್ತು ಸುಧಾರಣಾ ಯೋಜನೆ (ಡ್ರಿಪ್) 2ನೇ ಹಂತವನ್ನು ಅನುಷ್ಠಾನಗೊಳಿಸುತ್ತಿದೆ. ರಾಜ್ಯದಲ್ಲಿ 58 ಅಣೆಕಟ್ಟುಗಳ ಸುರಕ್ಷತೆಗೆ ₹1,500 ಕೋಟಿ ವೆಚ್ಚ ಮಾಡುತ್ತಿದ್ದೇವೆ. ತುಂಗಭದ್ರಾ ಅಣೆಕಟ್ಟು ಕ್ರೆಸ್ಟ್ ಗೇಟ್‌ಗಳ ಬದಲಾವಣೆ ಕಾರ್ಯ ಆರಂಭವಾಗಿದೆ. ಅದೇ ರೀತಿ ರಾಜ್ಯದ ಎಲ್ಲ ಅಣೆಕಟ್ಟುಗಳ ಸುರಕ್ಷತೆ ಬಗ್ಗೆ ಸಮೀಕ್ಷೆ ನಡೆಸಿದ್ದು, ಆದ್ಯತೆ ಮೇರೆಗೆ ದುರಸ್ತಿ ಕಾಮಗಾರಿ ಕೈಗೊಂಡಿದ್ದೇವೆ’ ಎಂದು ವಿವರಿಸಿದರು.

‘46 ಸಂಶೋಧನಾ ವರದಿಗಳ ಮಂಡನೆ’

‘ಅಣೆಕಟ್ಟು ಸುರಕ್ಷತೆ ವಿಚಾರದಲ್ಲಿ 46 ಸಂಶೋಧನಾ ವರದಿಗಳನ್ನು ಮಂಡಿಸಲಾಗುತ್ತದೆ. ಕೇಂದ್ರ ಸಚಿವರಾದ ವಿ. ಸೋಮಣ್ಣ, ರಾಜ್ ಭೂಷಣ್ ಚೌಧರಿ, ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ಭಾಗವಹಿಸಲಿದ್ದಾರೆ. 10 ದೇಶಗಳ 25 ಅಂತರರಾಷ್ಟ್ರೀಯ ತಜ್ಞರು ಸೇರಿದಂತೆ 400ಕ್ಕೂ ಹೆಚ್ಚು ಜನ ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.



ಬಿ.ಎಸ್‌.ಯಡಿಯೂರಪ್ಪ ಅವರಿಗೆ ಜೀವಮಾನ ಸಾಧನೆಗಾಗಿ ಝೀ ಕನ್ನಡ ನ್ಯೂಸ್ ಸಾಧಕರ ಪ್ರಶಸ್ತಿ–2026 ನೀಡಿ ಗೌರವಿಸಲಾಯಿತು. ಎಸ್‌. ರವಿ, ಎಸ್‌. ನಾರಾಯಣ್‌, ಪಿ.ಎಂ. ನರೇಂದ್ರಸ್ವಾಮಿ, ನಿರ್ಮಲಾನಂದನಾಥ ಸ್ವಾಮೀಜಿ, ಪೂಜಾ ಗಾಂಧಿ, ರಹೀಂ ಖಾನ್ ಮತ್ತು ಪ್ರಮೋದ್ ಶೆಟ್ಟಿ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಝೀ ಕನ್ನಡ ನ್ಯೂಸ್ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರಿಗೆ ‘ಝೀ ಕನ್ನಡ ನ್ಯೂಸ್’ ವಾಹಿನಿ ವತಿಯಿಂದ ‘ಜೀವಮಾನದ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ಅಲ್ಲದೇ ವಿವಿಧ ಕ್ಷೇತ್ರದ 30 ಸಾಧಕರಿಗೆ ಝೀ ಕನ್ನಡ ನ್ಯೂಸ್ ಅಚೀವರ್ಸ್ ಅವಾರ್ಡ್ ಪ್ರದಾನ ಮಾಡಲಾಯಿತು.

ಚಲನಚಿತ್ರ ನಿರ್ದೇಶಕ ಎಸ್. ನಾರಾಯಣ್, ಅಂತರರಾಷ್ಟ್ರೀಯ ಸ್ನೂಕರ್ ಕ್ರೀಡಾಪಟು ಚಿತ್ರಾ ಮಗಿಮೈರಾಜ್ ಹಾಗೂ ಪುಸ್ತಕಗಳ ಸಂಗ್ರಹಕಾರ ಎಂ. ಅಂಕೇಗೌಡ ಅವರಿಗೂ ‘ಜೀವಮಾನ ಸಾಧನೆ’ ಪ್ರಶಸ್ತಿ ನೀಡಲಾಯಿತು. ‘ಪ್ರಜಾವಾಣಿ’ ಮಾಧ್ಯಮ ಸಹಯೋಗ ನೀಡಿತ್ತು.

‘ಐದೂವರೆ ದಶಕದಿಂದ ರಾಜಕೀಯ ಜೀವನದಲ್ಲಿ ಇದ್ದರೂ ನಾನು ಮುಖ್ಯಮಂತ್ರಿಯಾಗಿ ಒಟ್ಟು ಐದು ವರ್ಷವಷ್ಟೇ ಇದ್ದೆ. ಆದರೂ ನಾಡಿನ ಜನರು, ರೈತರು ನನ್ನನ್ನು ನೆನಪು ಇಟ್ಟುಕೊಂಡಿದ್ದಾರೆ. ಈ ಪ್ರಶಸ್ತಿಯನ್ನು ಅವರಿಗೆ ಅರ್ಪಿಸುತ್ತೇನೆ’ ಎಂದು ಯಡಿಯೂರಪ್ಪ ತಿಳಿಸಿದರು.

ಝೀ ವಾಹಿನಿಯ ಸಂಪಾದಕ ಎಸ್. ರವಿ ಮಾತನಾಡಿ, ‘ಬೇರೆ ಬೇರೆ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರು ನಮ್ಮ ಮುಂದೆಯೇ ಇರುತ್ತಾರೆ. ಅವರು ಸಾಧಕರು ಎಂಬುದೇ ನಮಗೆ ಗೊತ್ತಿರುವುದಿಲ್ಲ. ಅವರು ಏನು ಮಾಡಿದ್ದಾರೆ ಎಂಬುದರ ಅರಿವು ಇರುವುದಿಲ್ಲ. ಅವರನ್ನು ಗುರುತಿಸಲು ಸಾಧ್ಯವಾದಾಗ ಸಮಾಜ ಬೇರೆಯವರಿಗೆ ಸ್ಫೂರ್ತಿಯಾಗುತ್ತದೆ’ ಎಂದು ಹೇಳಿದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ನಟಿ ಪೂಜಾಗಾಂಧಿ, ನಟ ಪ್ರಮೋದ್ ಶೆಟ್ಟಿ, ‘ಪ್ರಜಾವಾಣಿ’ಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಸಚಿವ ರಹೀಂ ಖಾನ್, ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ ಸಹಿತ ವಿವಿಧ ಕ್ಷೇತ್ರಗಳ ಗಣ್ಯರು ಉಪಸ್ಥಿತರಿದ್ದರು.

ಶಾಸಕರಿಗೆ ಮುಖ್ಯಮಂತ್ರಿಯಿಂದ ವಿದೇಶ ಪ್ರವಾಸ ಭಾಗ್ಯ: ವಿಜಯೇಂದ್ರ ಟೀಕೆ

‘ಯಾರು, ಎಷ್ಟು ದಿನ ಸಿ.ಎಂ ಗೊತ್ತಿಲ್ಲ’

ಪ್ರಜಾವಾಣಿ ವಾರ್ತೆ

ರಬಕವಿ ಬನಹಟ್ಟಿ/ಬೆಳಗಾವಿ: ‘ಶಾಸಕರನ್ನು ವಿದೇಶಿ ಪ್ರವಾಸಕ್ಕೆ ಕಳುಹಿಸಿ ಯಾರು, ಎಷ್ಟು ದಿನ ಮುಖ್ಯಮಂತ್ರಿ ಆಗುತ್ತಾರೆ ಎಂಬುದು ಗೊತ್ತಿಲ್ಲ. ಮುಖ್ಯಮಂತ್ರಿ ಬದಲಾವಣೆಯಂತೂ ನಿಶ್ಚಿತ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಗುರುವಾರ ಹೇಳಿದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಕುರ್ಚಿ ಉಳಿಸಿಕೊಳ್ಳಲು ಪಕ್ಷದ ಶಾಸಕರಿಗೆ ವಿದೇಶಿ ಭಾಗ್ಯ ಕಲ್ಪಿಸುತ್ತಿದ್ದಾರೆ. ಬಳ್ಳಾರಿಯಲ್ಲಿ ಹತ್ಯೆಯಾದ ತಮ್ಮ ಪಕ್ಷದ ಕಾರ್ಯಕರ್ತೆಗೆ ಸಚಿವ ಜಮೀರ್ ಅಹ್ಮದ್ ₹25 ಲಕ್ಷ ಪರಿಹಾರ ಕೊಟ್ಟಿದ್ದರು. ಯಾವ ಹಣ ಎಂದು ಮುಂದೆ ಬಹಿರಂಗಪಡಿಸುವೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ಡಿಸಿಎಂ ಡಿ.ಕೆ.ಶಿವಕುಮಾರ್ ಜೊತೆಗೆ ಕೈಜೋಡಿಸುವ ದುಸ್ಥಿತಿ ಬಿಜೆಪಿಗೆ ಬಂದಿಲ್ಲ. ಮುಖಂಡರು ಮತ್ತು ಕಾರ್ಯಕರ್ತರ ಶಕ್ತಿ ಮೇಲೆ ಮುಂದಿನ ದಿಗಳಲ್ಲಿ ಪಕ್ಷವನ್ನು ರಾಜ್ಯದಲ್ಲಿ ಅಧಿಕಾರಕ್ಕೆ ತರಲಾಗುವುದು’ ಎಂದರು.

‘ಮುಖ್ಯಮಂತ್ರಿ ಅಥವಾ ಯಾವುದೇ ಸಚಿವರ ಅಕ್ರಮಗಳನ್ನೂ ಬಿಡುವುದಿಲ್ಲ. ಸಚಿವೆ ಲಕ್ಷ್ಮೀ ಹೆಬ್ಬಾಳಕರ ಜತೆಗೆ ಹೊಂದಾಣಿಕೆ ರಾಜಕಾರಣ ಮಾಡುತ್ತಿಲ್ಲ’ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಕೇಂದ್ರಕ್ಕೆ ನಕಲಿ ದಾಖಲೆಗಳನ್ನು ಸಲ್ಲಿಸಿರುವ ವಿರುದ್ಧವೂ ಧ್ವನಿ ಎತ್ತುತ್ತೇವೆ. ತಿಂಗಳ ಗೃಹಲಕ್ಷ್ಮಿ ಯೋಜನೆಯ ಎರಡು ಕಂತುಗಳ ಹಣ (₹5 ಸಾವಿರ ಕೋಟಿ) ಈವರೆಗೆ ಫಲಾನುಭವಿಗಳಿಗೆ ತಲುಪಿಲ್ಲ’ ಎಂದು ಟೀಕಿಸಿದರು.

‘ಗೃಹಲಕ್ಷ್ಮಿ ಯೋಜನೆಯ ₹5 ಸಾವಿರ ಕೋಟಿ ನಿಧಿಯನ್ನು ಕೆಲ ಚುನಾವಣೆಗಳಿಗೆ ಬಳಸಲಾಗಿದೆ ಎಂಬ ಅನುಮಾನವಿದೆ’ ಎಂದೂ ಆರೋಪಿಸಿದರು.

‘2028ರ ವರೆಗೆ ಸಿದ್ದರಾಮಯ್ಯ ಅವರೇ ಸಿ.ಎಂ’

ಬಳ್ಳಾರಿ: ‘ಸಿದ್ದರಾಮಯ್ಯ ಅವರು 2028ರ ವರೆಗೆ ಸಿ.ಎಂ ಆಗಿ ಮುಂದುವರಿಯುವರು. ಆದರೂ, ಹೈಕಮಾಂಡ್ ನಿರ್ಧಾರಕ್ಕೆ ನಾವು ಬದ್ಧ’ ಎಂದು ಸಚಿವ ಬಿ.ಝಡ್.ಜಮೀರ್ ಅಹ್ಮದ್ ಖಾನ್ ಗುರುವಾರ ಇಲ್ಲಿ ಪುನರುಚ್ಚರಿಸಿದರು.

‘ಸಿದ್ದರಾಮಯ್ಯ ಅವರ ಬದಲಾವಣೆ ಹೈಕಮಾಂಡ್‌ಗೆ ಬಿಟ್ಟ ವಿಷಯ. ಸಿದ್ದರಾಮಯ್ಯ ನಮ್ಮ ನಾಯಕರಾಗಿದ್ದಾರೆ. ಹೀಗಾಗಿ ಅವರ ಸಾರಥ್ಯದಲ್ಲೇ 2028ರ ಚುನಾವಣೆಗೆ ಹೋಗುತ್ತೇವೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ವಿದೇಶ ಪ್ರವಾಸ ಹೋಗುವುದಿಲ್ಲ’

ಬೆಂಗಳೂರು: ‘ನಾನು ವಿದೇಶ ಪ್ರವಾಸ ಹೋಗುವುದಿಲ್ಲ. ಇಲಾಖೆ ಕಡೆಯಿಂದಲೂ ಶಾಸಕರನ್ನು ಪ್ರವಾಸಕ್ಕೆ ಕಳುಹಿಸುವುದಿಲ್ಲ’ ಎಂದು ಪಶುಸಂಗೋಪನೆ ಸಚಿವ ಕೆ. ವೆಂಕಟೇಶ್ ಸ್ಪಷ್ಟಪಡಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘ನಮ್ಮ ಇಲಾಖೆ ಹೆಸರು ಏಕೆ ಬಂತೊ ಗೊತ್ತಿಲ್ಲ’ ಎಂದರು.

‘ಪ್ರವಾಸ ಹೋಗಲು ಎನ್‌ಒಸಿಗೆ (ನಿರಾಕ್ಷೇಪಣೆ) ಪತ್ರ ಬರೆದಾಗ ನನ್ನ ಹೆಸರೂ ಇತ್ತು. ಆದರೆ, ನಾನು ಹೋಗುವುದಿಲ್ಲ. ನಾನು 30 ವರ್ಷದಿಂದ ಮುಖ್ಯಮಂತ್ರಿ ಜೊತೆಗೆ ಇದ್ದೇನೆ. ಅವರೊಂದಿಗೆ ಇರುವ ಒಡನಾಟವನ್ನು ಹೀಗೆ ಪ್ರಶ್ನೆ ಮಾಡಿದರೆ, ವ್ಯಾಖ್ಯಾನಿಸಿದರೆ ಏನು ಹೇಳಲಿ? ಪ್ರವಾಸದ ಬಗ್ಗೆ ನನ್ನಿಂದ ವರಿಷ್ಠರು ಮಾಹಿತಿ ಕೇಳಿಲ್ಲ’ ಎಂದರು.

‘ಪ್ರವಾಸಕ್ಕೆ ಕಳುಹಿಸುವಷ್ಟು ದುಡ್ಡು ನಮ್ಮ ಇಲಾಖೆಯಲ್ಲಿ ಇಲ್ಲ. ಶಾಸಕರು ತಮ್ಮ ಖರ್ಚಿನಲ್ಲಿ ವಿದೇಶ ಪ್ರವಾಸ ಹೋಗುವುದಕ್ಕೆ ಯಾಕೆ ಭಯ ಪಡುತ್ತಿದ್ದಾರೆಂದು ಗೊತ್ತಿಲ್ಲ. ಡಿ.ಕೆ. ಶಿವಕುಮಾರ್ ಬಣ, ಮುಖ್ಯಮಂತ್ರಿ ಬಣ ಎಂದು ಯಾಕೆ ಚರ್ಚೆ ಮಾಡಬೇಕು? ನಾಯಕತ್ವ ವಿಚಾರಕ್ಕೂ ಇದಕ್ಕೂ ಏನು ಸಂಬಂಧ? ಕೆಲವರು ಅನುಮತಿ ಕೋರಿ ಪತ್ರ ಬರೆದಿದ್ದು ಹೌದು. ಸ್ನೇಹಿತರ ವಲಯದಲ್ಲಿ ಚರ್ಚೆ ಆಗಿದ್ದೂ ನಿಜ. ಆದರೆ, ಇಲಾಖೆಯಿಂದ ಕಳುಹಿಸುವ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ’ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಟೆಂಡರ್ ಇಲ್ಲದೇ 10 ಸಾವಿರ ಟಿ.ವಿ ಖರೀದಿಸಿರುವ ಬಗ್ಗೆ ಮೃದು ಧೋರಣೆ ಪ್ರಶ್ನೆಯೇ ಇಲ್ಲ. ಸರ್ಕಾರದ ಎಲ್ಲ ಹಗರಣ ಬೀದಿಗೆ ಎಳೆಯುವುದು ಶತಸ್ಸಿದ್ಧ

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

‘ಶಿವಕುಮಾರ್‌ಗೆ ಶುಭಗಳಿಗೆ ಹತ್ತಿರವಾಗಿದೆ’

ಬೆಳಗಾವಿ: ‘ಡಿ.ಕೆ.ಶಿವಕುಮಾರ್ ಅವರಿಗೆ ಶುಭಗಳಿಗೆ ಈಗ ಹತ್ತಿರ ಬಂದಿದೆ ಎಂದು ಅನ್ನಿಸುತ್ತಿದೆ. ದೆಹಲಿಯಲ್ಲಿ ಪಕ್ಷದ ವರಿಷ್ಠರ ಜೊತೆ ಅವರ ಭೇಟಿ ಯಶಸ್ವಿಯಾಗಿದೆ’ ಎಂದು ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಇಲ್ಲಿ ಪ್ರತಿಕ್ರಿಯಿಸಿದರು.

‘ಚುನಾವಣೆಗೆ ಮುನ್ನವೇ ಡಿ.ಕೆ.ಶಿವಕುಮಾರ್ ಅವರು ಪಕ್ಷದಿಂದ 136 ಶಾಸಕರು ಆರಿಸಿಬರುತ್ತಾರೆ ಎಂದಿದ್ದರು. ಅಷ್ಟೊಂದು ಸಂಘಟನೆ, ಸಿದ್ಧತೆ ಮಾಡಿದ್ದರು. ಅವರು ಮುಖ್ಯಮಂತ್ರಿ ಆಗಬೇಕು ಎಂಬುದು ನಮ್ಮ ಮತ್ತು ಕಾಂಗ್ರೆಸ್ ಪಕ್ಷದ ಎಲ್ಲ ಕಾರ್ಯಕರ್ತರ ಬಯಕೆ ಆಗಿದೆ’ ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

‘ಸಿದ್ದರಾಮಯ್ಯ ಅವರ ನೇತೃತ್ವದಲ್ಲೆ ನಾವು 2023ರಲ್ಲಿ ಅಧಿಕಾರಕ್ಕೆ ಬಂದಿದ್ದೇವೆ. ಆದರೆ, ಡಿ.ಕೆ.ಶಿವಕುಮಾರ್ ಅವರು ಎಂತಹ ಪರಿಸ್ಥಿತಿಯಲ್ಲಿ ಪಕ್ಷದ ಚುಕ್ಕಾಣಿ ಹಿಡಿದರು ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ‘ಪ್ರಸ್ತುತ ವಿದ್ಯಮಾನಕ್ಕೆ ತೆರೆ ಎಳೆಯಲು ಹೈಕಮಾಂಡ್ ದಿನಾಂಕ ನಿಗದಿಪಡಿಸಲಿದೆ’ ಎಂದು ಆಶಿಸಿದರು.

ಶಾಸಕ ಬೈರತಿ ಕೊನೆಗೂ ಸೆರೆ

ಒಂದನೇ ಪುಟದಿಂದ...

2025ರ ಜುಲೈ 15ರಂದು ಬಿಕ್ಲು ಶಿವು ಅವರ ಕೊಲೆ ನಡೆದಿತ್ತು. ಈ ಸಂಬಂಧ ಭಾರತಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಕೋಲಾರ, ಹೊಸಕೋಟೆಯಲ್ಲಿ ಕಾರ್ಯಾಚರಣೆ ನಡೆಸಿದ್ದ ಪೊಲೀಸರು, 20 ಆರೋಪಿಗಳನ್ನು ಬಂಧಿಸಿದ್ದರು. ತಲೆಮರೆಸಿಕೊಂಡಿದ್ದ ಪ್ರಕರಣದ ಮೊದಲ ಆರೋಪಿ ಜಗದೀಶ್ ಅಲಿಯಾಸ್ ಜಗ್ಗನನ್ನು ಆಗಸ್ಟ್ 26ರಂದು ಸಿಐಡಿ ಪೊಲೀಸರು ಬಂಧಿಸಿದ್ದರು. ಬಂಧನದ ಭೀತಿಯಿಂದ ಜಗದೀಶ್ ಅವರೂ ವಿದೇಶದಲ್ಲಿ ತಲೆಮರೆಸಿಕೊಂಡು ದುಬೈ, ಮಲೇಷ್ಯಾ, ಶ್ರೀಲಂಕಾ, ಇಂಡೊನೇಷ್ಯಾ ಮತ್ತು ಥಾಯ್ಲೆಂಡ್‌ನಲ್ಲಿ ಸುತ್ತಾಟ ನಡೆಸಿದ್ದರು.

ಎರಡು ಬಾರಿ ವಿಚಾರಣೆ: ಬೈರತಿ ಬಸವರಾಜ ಅವರ ಬಂಧನಕ್ಕೆ ಎಸಿಪಿ ಪ್ರಕಾಶ್ ರಾಥೋಡ್ ನೇತೃತ್ವದ ತಂಡವು ಈ ಹಿಂದೆ ಎರಡು ಬಾರಿ ಸಿದ್ಧತೆ ನಡೆಸಿತ್ತು. ಅಷ್ಟರಲ್ಲಿ ‘ಶಾಸಕರ ವಿರುದ್ಧ ಬಲವಂತದ ಕ್ರಮ ಬೇಡ’ ಎಂದು ನ್ಯಾಯಾಲಯವು ತನಿಖಾಧಿಕಾರಿಗೆ ಸೂಚಿಸಿ, ಜಾಮೀನು ಆದೇಶವನ್ನು ಕಾಯ್ದಿರಿಸಿತ್ತು. ಹೈಕೋರ್ಟ್, ಸುಪ್ರೀಂ ಕೋರ್ಟ್‌ನಲ್ಲಿ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿ ಈಗ ತಿರಸ್ಕೃತವಾಗಿದ್ದು, ಅವರನ್ನು ಬಂಧಿಸಲಾಗಿದೆ.

‘ಜಗದೀಶ್ ಅವರು ಬೈರತಿ ಅವರ ಆಪ್ತ ಎಂಬುದು ಗೊತ್ತಾಗಿದೆ. ಇಬ್ಬರ ನಡುವೆ ಫೋನ್ ಸಂಭಾಷಣೆ ನಡೆದಿರುವುದಕ್ಕೆ ಕೆಲವು ಸಾಕ್ಷ್ಯಗಳು ಸಿಕ್ಕಿದ್ದವು. ಇಬ್ಬರ ನಡುವೆ ಯಾವ ವಿಚಾರಕ್ಕೆ ಸಂಬಂಧಿಸಿದ ಮಾತುಕತೆ ನಡೆದಿತ್ತು ಎಂಬುದನ್ನು ಆಧರಿಸಿ, ಮುಂದಿನ ತನಿಖೆ ನಡೆಯಲಿದೆ’ ಎಂದು ಸಿಐಡಿ ಮೂಲಗಳು ತಿಳಿಸಿವೆ. ಈ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿ ಅಜಿತ್ ಎಂಬುವರನ್ನು ಸಿಐಡಿ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಶಾಸಕರ ಮೇಲಿರುವ ಆರೋಪ ಏನು?

‘ಬೈರತಿ ಬಸವರಾಜ ಅವರ ಕುಮ್ಮಕ್ಕಿನಿಂದ ಕೊಲೆ ನಡೆದಿದೆ’ ಎಂದು ಬಿಕ್ಲು ಶಿವು ಅವರ ತಾಯಿ ವಿಜಯಲಕ್ಷ್ಮಿ ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲಾಗಿತ್ತು.

‘ಕಿತ್ತಗನೂರು ಬಳಿ, ಪುತ್ರ ಶಿವಪ್ರಕಾಶ್ ಜಮೀನು ಖರೀದಿಸಿದ್ದ. ಅವನ ಹೆಸರಿನಲ್ಲಿ ಜಿಪಿಎ ಸಹ ಮಾಡಿಸಿಕೊಂಡಿದ್ದ. ಆ ಜಾಗದಲ್ಲಿ ಶೆಡ್ ನಿರ್ಮಿಸಿ, ಜ್ಯೋತಿ ಹಾಗೂ ಹಂಸ ಅವರನ್ನು ಕಾಯಲು ಇಟ್ಟಿದ್ದ. ಜಗದೀಶ್, ಕಿರಣ್ ಅತಿಕ್ರಮವಾಗಿ ಜಮೀನಿಗೆ ಪ್ರವೇಶಿಸಿ ಹೆಣ್ಣು ಮಕ್ಕಳನ್ನು ಶೆಡ್‌ನಿಂದ ಹೊರಕ್ಕೆ ಹಾಕಿದ್ದರು. ಆರೋಪಿ ಜಗದೀಶ್ ಕರೆ ಮಾಡಿ ಸ್ವತ್ತನ್ನು ತನ್ನ ಹೆಸರಿಗೆ ಜಿಪಿಎ ಮಾಡಿಸಿಕೊಡಬೇಕು. ಇಲ್ಲದಿದ್ದರೆ ಜೀವಸಹಿತ ಬಿಡುವುದಿಲ್ಲ ಎಂದು ಮಗನಿಗೆ ಬೆದರಿಕೆ ಹಾಕಿದ್ದ. ಜೀವಕ್ಕೆ ಅಪಾಯವಿದೆ ಎಂದು ಹೇಳಿ ಜಗದೀಶ್ ಅಲಿಯಾಸ್ ಜಗ್ಗ, ಕಿರಣ್, ಶಾಸಕ ಬೈರತಿ ಬಸವರಾಜ್ ವಿರುದ್ಧ ನನ್ನ ಮಗ ಪೊಲೀಸರಿಗೆ ದೂರು ನೀಡಿದ್ದರು ಎಂದು ವಿಜಯಲಕ್ಷ್ಮಿ ದೂರಿನಲ್ಲಿ ಹೇಳಿದ್ದರು.

‘ಕೃತ್ಯ ನಡೆದ ದಿನ ರಾತ್ರಿ 8 ಗಂಟೆಯ ಸುಮಾರಿಗೆ ಪುತ್ರ ಮನೆಯಿಂದ ಹೊರಗೆ ಹೋಗಿದ್ದ. ಆಗ, ಮನೆಯ ಹೊರಗಡೆ ಯಾರೊ ಕೂಗಾಡುವ ಶಬ್ದ ಕೇಳಿಸಿತ್ತು. ಜಾಗದ ವಿಚಾರಕ್ಕೆ ಜಗದೀಶ್, ಕಿರಣ್, ವಿಮಲ್, ಅನಿಲ್ ಮತ್ತು ಇತರರು ಬೈರತಿ ಬಸವರಾಜ ಅವರ ಕುಮ್ಮಕಿನಿಂದ ಕೊಲೆ ಮಾಡಿದ್ದಾರೆ’ ಎಂದು ಎಫ್‌ಐಆರ್‌ನಲ್ಲಿ ವಿವರಿಸಲಾಗಿತ್ತು.

ಸ್ಥಿರಾಸ್ತಿಗಳಲ್ಲಿ ಅಕ್ರಮ ಗಳಿಕೆ ಹೂಡಿಕೆ

ಬೆಂಗಳೂರು: ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಸಿರುವ ಅಧಿಕಾರಿಗಳು ತಮ್ಮ ಗಳಿಕೆಯ ಬಹುಪಾಲನ್ನು ನಿವೇಶನ, ಮನೆ, ಕೃಷಿಭೂಮಿಯಂತಹ ಸ್ಥಿರಾಸ್ತಿಗಳ ಮೇಲೆಯೇ ಹೂಡಿಕೆ ಮಾಡಿದ್ದಾರೆ ಎಂಬುದು ಲೋಕಾಯುಕ್ತ ಪೊಲೀಸರ ದಾಳಿಯ ವೇಳೆ ಗೊತ್ತಾಗಿದೆ. ಅದರ ಹೊರತಾಗಿ ಚಿನ್ನಾಭರಣ ಮತ್ತು ಇತರ ಹೂಡಿಕೆಗಳಲ್ಲಿ ಅವರ ಆಸ್ತಿ ಅಡಗಿದೆ.

ಪುರುಷೋತ್ತಮ ದಾಸ್ ಹೆಗಡೆ ಕಾರ್ಯಪಾಲಕ ಎಂಜಿನಿಯರ್, ಲೋಕೋಪಯೋಗಿ ಇಲಾಖೆ	
₹11.52 ಕೋಟಿ	ಮೌಲ್ಯದ 1 ನಿವೇಶನ, 2 ಮನೆ, 2 ಶಿಕ್ಷಣ ಸಂಸ್ಥೆ ಮತ್ತು 11 ಎಕರೆ–30 ಗುಂಟೆ ಕೃಷಿ ಜಮೀನು
₹1.32 ಕೋಟಿ	ಮೌಲ್ಯದ ಚಿನ್ನಾಭರಣ, ನಗದು, ಬ್ಯಾಂಕ್ ಠೇವಣಿ
ಎಚ್.ಎಂ.ಜನಾರ್ದನ, ಸೂಪರಿಂಟೆಂಡ್ ಎಂಜಿನಿಯರ್, ಕ್ರೈಸ್	
₹3.20 ಕೋಟಿ	ಮೌಲ್ಯದ 1ನಿವೇಶನ, 3 ಮನೆಗಳು, 34 ಎಕರೆ ಕೃಷಿ ಜಮೀನು
₹2.57 ಕೋಟಿ	ಮೌಲ್ಯದ ನಗದು, ಚಿನ್ನಾಭರಣ, ವಾಹನಗಳು ಮತ್ತು ಗೃಹ ಬಳಕೆ ವಸ್ತುಗಳು
ಅರ್ಜುನ್ ಆರ್.ಎಚ್., ಎಇಇ, ಬೆಸ್ಕಾಂ, ದಾವಣಗೆರೆ	
₹2.17 ಕೋಟಿ	ಮೌಲ್ಯದ 2 ನಿವೇಶನ, 3 ವಾಸದ ಮನೆಗಳು, 2 ಎಕರೆ–20 ಗುಂಟೆ ಕೃಷಿ ಜಮೀನು
₹31.69 ಲಕ್ಷ	ಮೌಲ್ಯದ ಚಿನ್ನಾಭರಣ ಮತ್ತು ಗೃಹ ಬಳಕೆ ವಸ್ತುಗಳು
ಸೋಮಲಿಂಗಪ್ಪ ಫಕೀರಪ್ಪ ಸಿದ್ದನಗೌಡರ್ ಸರ್ವೆ ಸೂಪರ್‌ವೈಸರ್, ಎಡಿಎಲ್‌ಆರ್, ಧಾರವಾಡ	
₹2.08 ಕೋಟಿ	ಮೌಲ್ಯದ 3 ನಿವೇಶನ, 1 ವಾಸದ ಮನೆ, 3 ಎಕರೆ ಕೃಷಿ ಜಮೀನು
₹56.13 ಲಕ್ಷ	ಮೌಲ್ಯದ ಚಿನ್ನಾಭರಣ, ವಾಹನಗಳು ಮತ್ತು ಗೃಹಬಳಕೆ ವಸ್ತುಗಳು

ಔಷಧ ಕೊರತೆಯಾಗದಂತೆ ಕ್ರಮವಹಿಸಿ: ಸಚಿವ ದಿನೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಗಳ ದಾಸ್ತಾನು ಖಚಿತಪಡಿಸಿಕೊಳ್ಳುವ ಜತೆಗೆ, ಯಾವುದೇ ಔಷಧ ಕೊರತೆಯಾಗದಂತೆ ಕ್ರಮವಹಿಸಬೇಕು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

‘ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧವಿಲ್ಲ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಗುರುವಾರ ವಿಶೇಷ ವರದಿ ಪ್ರಕಟವಾಗಿತ್ತು. ಔಷಧ ಕೊರತೆಗೆ ಸಂಬಂಧಿಸಿದಂತೆ ವಿಕಾಸಸೌಧದಲ್ಲಿ ಗುರುವಾರ ಸಭೆ ನಡೆಸಿದ ಸಚಿವರು, ರೋಗಿಗಳಿಗೆ ಸಮಸ್ಯೆಯಾಗದಂತೆ ಅಗತ್ಯ ಔಷಧಗಳನ್ನು ಖರೀದಿಸಿ ಒದಗಿಸುವಂತೆ ಸೂಚಿಸಿದರು.

ವರ್ಚುವಲ್ ವೇದಿಕೆ ನೆರವಿನಿಂದ ಜಿಲ್ಲಾ ಆರೋಗ್ಯಾಧಿಕಾರಿಗಳಿಂದಲೂ ಮಾಹಿತಿ ಪಡೆದು, ಔಷಧಗಳ ಲಭ್ಯತೆ ಹಾಗೂ ಕೊರತೆ ಬಗ್ಗೆ ವಿಚಾರಿಸಿದರು. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಅನುದಾನವನ್ನು ತಕ್ಷಣ ಬಿಡುಗಡೆ ಮಾಡುವಂತೆ ಅಧಿಕಾರಿಗಳಿಗೆ ತಿಳಿಸಿದರು.



ಔಷಧ ಖರೀದಿಗೂ ಹಣವಿಲ್ಲ: ಟೀಕೆ

ರಾಜ್ಯ ಸರ್ಕಾರ ಪಾಪರ್ ಆಗಿರುವ ಕಾರಣದಿಂದಲೇ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿ ಖಾಲಿಯಾಗಿದೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದ್ದಾರೆ.

ಈ ಕುರಿತು ‘ಪ್ರಜಾವಾಣಿ’ಯು ಫೆಬ್ರುವರಿ 12ರಂದು ವಿಶೇಷ ವರದಿ ಪ್ರಕಟಿಸಿತ್ತು. ಅದನ್ನು ಅಶೋಕ ಅವರು ತಮ್ಮ ‘ಎಕ್ಸ್’ ಖಾತೆಯಲ್ಲಿಯೂ ಹಂಚಿಕೊಂಡಿದ್ದರು.

ಅದಾದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಶೋಕ, ‘ಬೆಳಗಾವಿ ವಿಧಾನಮಂಡಲದ ಅಧಿವೇಶನದಲ್ಲೇ ಈ ವಿಷಯ ಪ್ರಸ್ತಾಪಿಸಿದ್ದೆ. ಕೂಡಲೇ ಔಷಧ ಖರೀದಿಸಲಾಗುವುದು ಎಂದು ಆರೋಗ್ಯ ಸಚಿವರು ಭರವಸೆ ನೀಡಿದ್ದರು. ಆದರೆ ಈವರೆಗೂ ಖರೀದಿ ಆಗಿಲ್ಲ ಎಂದು ಟೀಕಿಸಿದರು.

ಡಿಕೆಶಿಗೆ ರಾಹುಲ್ ‘ಅಭಯ’

ಒಂದನೇ ಪುಟದಿಂದ...

ಪಕ್ಷದ ಉನ್ನತ ನಾಯಕರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ರಾಜ್ಯ ನಾಯಕರು ಭೇಟಿಯ ಚಿತ್ರವನ್ನು ಬಿಡುಗಡೆ ಮಾಡುವುದು ಸಾಮಾನ್ಯ. ಆದರೆ, ಗುರುವಾರ ನಡೆದ ಉಭಯ ನಾಯಕರ ಭೇಟಿಯ ಚಿತ್ರವನ್ನು ಶಿವಕುಮಾರ್ ತಂಡ ಅಥವಾ ಕಾಂಗ್ರೆಸ್ ಹೈಕಮಾಂಡ್ ಬಿಡುಗಡೆ ಮಾಡಿಲ್ಲ.

ಕೇಂದ್ರ ಬಜೆಟ್ ಅಧಿವೇಶನದ ಮೊದಲ ಹಂತ ಶುಕ್ರವಾರ ಮುಗಿಯಲಿದೆ. ಎರಡನೇ ಹಂತದ ಅಧಿವೇಶನ ಮಾರ್ಚ್ 9 ರಿಂದ ನಡೆಯಲಿದೆ. ರಾಜ್ಯ ಬಜೆಟ್ ಅಧಿವೇಶನ ಮಾರ್ಚ್ ಮೊದಲ ವಾರದಲ್ಲಿ ಶುರುವಾಗುವ ನಿರೀಕ್ಷೆ ಇದೆ. ಹೀಗಾಗಿ, ಈ ತಿಂಗಳಲ್ಲೇ ಇಬ್ಬರು ನಾಯಕರ ಜತೆಗೆ ವರಿಷ್ಠರು ಚರ್ಚೆ ನಡೆಸಿ ಬಿಕ್ಕಟ್ಟು ಬಗೆಹರಿಸಬಹುದು ಎಂದು ಶಿವಕುಮಾರ್ ಬಣ ವಿಶ್ವಾಸ ವ್ಯಕ್ತಪಡಿಸಿದೆ.

ಮಧ್ಯಪ್ರದೇಶ, ರಾಜಸ್ಥಾನ ಹಾಗೂ ಛತ್ತೀಸಗಢದಲ್ಲಿ ಮುಖ್ಯಮಂತ್ರಿ ಗಾದಿಗಾಗಿ ಸಂಘರ್ಷ ಏರ್ಪಟ್ಟಿತ್ತು. ಅಲ್ಲೂ ಅಧಿಕಾರ ಹಸ್ತಾಂತರದ ಗೊಂದಲ ಸೃಷ್ಟಿಯಾಗಿತ್ತು. ಆದರೆ, ಹೈಕಮಾಂಡ್ ಸ್ಪಷ್ಟ ತೀರ್ಮಾನ ತೆಗೆದುಕೊಳ್ಳದೇ ಯಥಾಸ್ಥಿತಿಯನ್ನು ಮುಂದುವರಿಸಿತ್ತು. ‘ರಾಜ್ಯದಲ್ಲಿ ಕಾಂಗ್ರೆಸ್ ಬೇರುಗಳು ಬಲವಾಗಿವೆ. ಇತರ ರಾಜ್ಯಗಳಂತೆ ಕರ್ನಾಟಕದ ವಿಷಯದಲ್ಲಿ ಹೈಕಮಾಂಡ್ ನಿರ್ಲಕ್ಷ್ಯ ವಹಿಸುವುದಿಲ್ಲ. ಶೀಘ್ರದಲ್ಲೇ ನಾಯಕತ್ವದ ಬ್ಯಾಟನ್ ಹಸ್ತಾಂತರವಾಗುವ ಸುಳಿವು ಸಿಕ್ಕಿದೆ’ ಎಂದು ಬಣದ ನಾಯಕರು ವಾದ ಮಂಡಿಸಿದ್ದಾರೆ.

ಸೋನಿಯಾ ನಿವಾಸದಿಂದ ಹೊರಬಂದ ಬಳಿಕ ಹಸನ್ಮುಖರಾಗಿದ್ದ ಶಿವಕುಮಾರ್, ‘ನಾನು ದೆಹಲಿಯ ಗಾಳಿ ಸೇವಿಸಲು ಇಲ್ಲಿಗೆ ಬಂದಿಲ್ಲ. ರಾಜಕಾರಣ ಮಾಡಲೆಂದೇ ಬಂದಿದ್ದೇನೆ’ ಎಂದು ಹೇಳಿಕೊಂಡರು. ಆ ನಂತರ, ಕರ್ನಾಟಕ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಉಲ್ಲಸಿತರಾಗಿಯೇ ಉತ್ತರ ನೀಡಿದರು.

ನವದೆಹಲಿಗೆ ಬರುವ ಮುನ್ನ ಬೆಂಗಳೂರಿನಲ್ಲಿ ಮಾತನಾಡಿದ್ದ ಶಿವಕುಮಾರ್, ‘ನಾನು ಮತ್ತು ಸಿದ್ದರಾಮಯ್ಯ ಅವರು ಕದ್ದು ಮುಚ್ಚಿ ಮಾತನಾಡಿಲ್ಲ. ನಮ್ಮ ಪಕ್ಷದ ವರಿಷ್ಠರು ಸೇರಿಕೊಂಡೇ ಮಾತನಾಡಿದ್ದೆವು’ ಎಂದು ಹೇಳಿಕೆ ನೀಡಿದ್ದರು. ಪ್ರಿಯಾಂಕಾ ಗಾಂಧಿ ನೇತೃತ್ವದಲ್ಲಿ ಎಐಸಿಸಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಡಿಕೆಶಿ ಭಾಗಿಯಾಗಿದ್ದರು. ರಾಹುಲ್ ಅವರನ್ನು ಭೇಟಿ ಮಾಡಿ ತಮ್ಮ ಮನದಿಂಗಿತ ಹೇಳಿಕೊಳ್ಳಲು ಬುಧವಾರವಿಡೀ ಪ್ರಯತ್ನಿಸಿದ್ದರು. ದಿನವಿಡೀ ಒತ್ತಡದಲ್ಲೇ ಇದ್ದ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ರಾತ್ರಿ 8ರ ನಂತರ ಭೇಟಿ ಮಾಡಿ ಚರ್ಚಿಸಿದ್ದರು. ರಾಹುಲ್ ಹಾಗೂ ಪ್ರಿಯಾಂಕಾ ಭೇಟಿಯ ಬಳಿಕ ಅವರ ಲಹರಿ ಬದಲಾಯಿತು.

ಯಶಸ್ಸಿಗೆ ಸ್ವಲ್ಪ ಶ್ರಮ ಬೇಕು: ಡಿಕೆಶಿ

ಒಂದನೇ ಪುಟದಿಂದ...

‘ನಾನು ದೆಹಲಿಗೆ ಬಂದ ಸಂದರ್ಭದಲ್ಲಿ ಎಲ್ಲರನ್ನೂ ಭೇಟಿ ಮಾಡುತ್ತೇನೆ. ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಕೆ.ಸಿ ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲಾ, ಟಿ.ಬಿ. ಜಯಚಂದ್ರ ಸೇರಿದಂತೆ ಎಲ್ಲರನ್ನು ಭೇಟಿ ಮಾಡಿರುವೆ. ರಾಜಕಾರಣಿಗಳು ಭೇಟಿಯಾದಾಗ ರಾಜಕಾರಣ ಚರ್ಚೆ ಮಾಡದೇ ಇರುತ್ತಾರಾ? ರಾಜಕೀಯ ಚರ್ಚೆ ಮಾಡುತ್ತೇವೆ. ಆದರೆ, ಆ ಚರ್ಚೆಯ ವಿವರವನ್ನು ಮಾಧ್ಯಮಗಳ ಮುಂದೆ ಬಹಿರಂಗಪಡಿಸಲಾರೆ. ಕರ್ನಾಟಕದ ಹಿತ ಸೇರಿದಂತೆ ಅಸ್ಸಾಂ ಹಾಗೂ ದೆಹಲಿಯ ವಿಷಯಗಳ ಬಗ್ಗೆ ಚರ್ಚೆ ಮಾಡಿರುತ್ತೇವೆ’ ಎಂದಷ್ಟೇ ತಿಳಿಸಿದರು.

ಶಾಸಕರ ವಿದೇಶ ಪ್ರವಾಸದ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಈ ವಿಚಾರವಾಗಿ ನಾನು ಏನನ್ನೂ ಮಾತನಾಡುವುದಿಲ್ಲ. ಶಾಸಕರುಂಟು ಹಾಗೂ ಮುಖ್ಯಮಂತ್ರಿಗಳುಂಟು. ಅವರಿಗೆ ಮುಖ್ಯಮಂತ್ರಿಯವರು ಯಾವ ಮಾರ್ಗದರ್ಶನ ನೀಡಿದ್ದಾರೋ ನನಗೆ ಗೊತ್ತಿಲ್ಲ. ಈ ವಿಚಾರ ನನ್ನ ಜತೆ ಚರ್ಚೆಯಾಗಿಲ್ಲ. ಮಾಧ್ಯಮಗಳಿಂದಲೇ ಪ್ರವಾಸದ ವಿಷಯ ಗೊತ್ತಾಯಿತು’ ಎಂದರು.

ಸಾರ್ವತ್ರಿಕ ಮುಷ್ಕರ; ಉತ್ತಮ ಬೆಂಬಲ

ಕೇರಳ, ತಮಿಳುನಾಡಿನಲ್ಲಿ ಕಚೇರಿಗೆ ಗೈರು ಸರ್ಕಾರದ ವಿರುದ್ಧ ಕಾರ್ಮಿಕರ ಆಕ್ರೋಶ

ಪಿಟಿಐ/ ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನಾಲ್ಕು ಕಾರ್ಮಿಕ ಸಂಹಿತೆಗೆ ತೀವ್ರ ವಿರೋಧ
- ತಮಿಳುನಾಡು, ಕೇರಳದಲ್ಲಿ ಬೆಂಬಲ
- ಪರದಾಡಿದ ಪ್ರಯಾಣಿಕರು, ಶಿಕ್ಷಣ ಸಂಸ್ಥೆಗಳು ಬಂದ್

ನವದೆಹಲಿ: ನಾಲ್ಕು ಕಾರ್ಮಿಕ ಸಂಹಿತೆಗಳನ್ನು ವಿರೋಧಿಸಿ ವಿವಿಧ ಕಾರ್ಮಿಕ ಸಂಘಟನೆಗಳು ಗುರುವಾರ ಕರೆ ನೀಡಿದ್ದ ಸಾರ್ವತ್ರಿಕ ಮುಷ್ಕರದಲ್ಲಿ ದೇಶದಾದ್ಯಂತ 30 ಕೋಟಿಗೂ ಅಧಿಕ ಕಾರ್ಮಿಕರು ಹಾಗೂ ರೈತರು ಭಾಗಿಯಾಗಿದ್ದರು ಎಂದು ಕಾರ್ಮಿಕ ಸಂಘಟನೆಗಳು ತಿಳಿಸಿವೆ.

ಕಾರ್ಮಿಕ ವಿರೋಧಿ, ರೈತ ವಿರೋಧಿ ಹಾಗೂ ಕಾರ್ಪೊರೇಟ್ ಸಂಸ್ಥೆಗಳ ಪರವಾದ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಹಿಂದಕ್ಕೆ ಪಡೆಯುವಂತೆ ಒತ್ತಾಯಿಸಿ ದೇಶದಾದ್ಯಂತ ನಡೆದ ಪ್ರತಿಭಟನೆಗೆ ಕೆಲವೆಡೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು.

ಮುಷ್ಕರಕ್ಕೆ ಕೇರಳದಲ್ಲಿ ದೊಡ್ಡ ಮಟ್ಟದ ಬೆಂಬಲ ವ್ಯಕ್ತವಾಯಿತು. ಉಳಿದಂತೆ, ಒಡಿಶಾ, ತಮಿಳುನಾಡು, ಗೋವಾ, ಜಾರ್ಖಂಡ್, ಛತ್ತೀಸ್‌ಗಢ, ಮಧ್ಯಪ್ರದೇಶ, ಪಂಜಾಬ್‌ನಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು. ಹಲವು ಪ್ರದೇಶಗಳಲ್ಲಿ ಸಾರ್ವಜನಿಕ ಸಾರಿಗೆಯು ವಿರಳವಾಗಿತ್ತು. ಮಾರುಕಟ್ಟೆಗಳು, ಶೈಕ್ಷಣಿಕ ಸಂಸ್ಥೆ, ಉದ್ಯಮ ಸಂಸ್ಥೆಗಳ ಮೇಲೂ ಪರಿಣಾಮ ಬೀರಿತು. ನಗರದ ಪ್ರಮುಖ ರಸ್ತೆಗಳು, ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ ವಾಹನಗಳನ್ನು ತಡೆಹಿಡಿಯಲಾಗಿತ್ತು.

ಮುಷ್ಕರ ನಿರತ ಕಾರ್ಮಿಕರು ಹಾಗೂ ರೈತರನ್ನು ಬೆಂಬಲಿಸಿ ವಿರೋಧ ಪಕ್ಷದ ಸಂಸದರು ಸಂಸತ್ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

‘ದೇಶದಾದ್ಯಂತ ರೈತರು, ಔಪಚಾರಿಕ, ಅನೌಪಚಾರಿಕ , ಸರ್ಕಾರಿ, ಸಾರ್ವಜನಿಕ ಸ್ವಾಮ್ಯ, ಕೈಗಾರಿಕೆ, ಗ್ರಾಮೀಣ ಹಾಗೂ ನಗರ ಭಾಗದ ಕಾರ್ಮಿಕರು ಕೈ ಜೋಡಿಸಿದ್ದರಿಂದ ಪ್ರತಿಭಟನೆ ಯಶಸ್ವಿಯಾಗಿದೆ’ ಎಂದು ಕಾರ್ಮಿಕ ಸಂಘಟನೆಗಳು ಬಿಡುಗಡೆಗೊಳಿಸಿರುವ ಪ್ರಕಟಣೆಯಲ್ಲಿ ತಿಳಿಸಿದೆ.

ಒಡಿಶಾದಲ್ಲೂ ಪ್ರತಿಭಟನೆಗೆ ಉತ್ತಮ ಬೆಂಬಲ ವ್ಯಕ್ತವಾಯಿತು. ಜಾರ್ಖಂಡ್‌ನಲ್ಲಿ ಕಾಂಗ್ರೆಸ್ ಹಾಗೂ ಎಡಪಕ್ಷಗಳು ಮುಷ್ಕರಕ್ಕೆ ಬೆಂಬಲ ಸೂಚಿಸಿದ ಕಾರಣ, ಬ್ಯಾಂಕಿಂಗ್, ವಿಮಾ ಹಾಗೂ ಕಲ್ಲಿದ್ದಲು ಕ್ಷೇತ್ರದ ನೌಕರರು ಕರ್ತವ್ಯಕ್ಕೆ ಗೈರಾದರು ಎಂದು ಕಾರ್ಮಿಕ ಸಂಘಟನೆಯ ನಾಯಕರು ತಿಳಿಸಿದ್ದಾರೆ.

ಛತ್ತೀಸಗಢದಲ್ಲಿ ಗಣಿಗಳಲ್ಲಿ ಕೆಲ ಕಾರ್ಮಿಕರು ಕೆಲಸಕ್ಕೆ ಹಾಜರಾಗದೇ, ಮುಷ್ಕರಕ್ಕೆ ಕೈ ಜೋಡಿಸಿದರು. ರಾಷ್ಟ್ರೀಕೃತ ಬ್ಯಾಂಕ್‌ಗಳು, ವಿಮಾ ಕಂಪನಿಗಳು, ಅಂಚೆ ಕಚೇರಿಯ ನೌಕರರು ಕೂಡ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಸಾರಿಗೆ ಬಸ್ ಸೇರಿದಂತೆ ವಾಹನಗಳು ಎಂದಿನಂತೆ ಸಂಚಾರ ನಡೆಸಿದವು.

ತಮಿಳುನಾಡಿನ ತೂತುಕುಡಿ ಹಾಗೂ ಚೆನ್ನೈನ ಬಂದರಿನಲ್ಲಿ ನೌಕರರು ಪ್ರತಿಭಟನೆ ನಡೆಸಿದ್ದರಿಂದ ದೈನಂದಿನ ಚಟುವಟಿಕೆಯ ಮೇಲೂ ಪರಿಣಾಮ ಬೀರಿತು. ರಾಜ್ಯದ ಅತಿ ದೊಡ್ಡ ಕೈಗಾರಿಕಾ ಕೇಂದ್ರವಾದ ಶ್ರೀ ಪೆರಂಬದೂರಿನಲ್ಲಿ ನೌಕರರು ದೊಡ್ಡ ಮಟ್ಟದಲ್ಲಿ ಪ್ರತಿಭಟನೆ ನಡೆಸಿದ್ದರಿಂದ ಉತ್ಪಾದನಾ ಚಟುವಟಿಕೆ ಸ್ಥಗಿತಗೊಂಡಿತ್ತು. ಗೋವಾದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು. ಬ್ಯಾಂಕಿಂಗ್ ಚಟುವಟಿಕೆಗಳು ಸ್ಥಗಿತಗೊಂಡಿದ್ದರೆ, ಅಗತ್ಯ ಸೇವೆಗಳ ಮೇಲೂ ಪರಿಣಾಮ ಬೀರಿತು. ಮಧ್ಯ ಪ್ರದೇಶದ ರಕ್ಷಣಾ ಉತ್ಪನ್ನಗಳ ತಯಾರಿಕಾ ಕೇಂದ್ರಗಳ 25 ಸಾವಿರಕ್ಕೂ ಅಧಿಕ ನೌಕರರು ಒಂದು ತಾಸು ತಡವಾಗಿ ಕೆಲಸ ಆಗಮಿಸುವ ಮೂಲಕ ಪ್ರತಿಭಟನೆಗೆ ಬೆಂಬಲ ಸೂಚಿಸಿದರು.

ರಾಜ್ಯದಾದ್ಯಂತ ಶಾಲಾ, ಕಾಲೇಜುಗಳು, ಬ್ಯಾಂಕ್ ಕಚೇರಿಗಳು ಎಂದಿನಂತೆ ಕಾರ್ಯನಿರ್ವಹಿಸಿದವು. ಪಶ್ಚಿಮ ಬಂಗಾಳ ಹಾಗೂ ತ್ರಿಪುರಾದಲ್ಲಿ ಮುಷ್ಕರಕ್ಕೆ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು. ಬ್ಯಾಂಕಿಂಗ್, ಶಿಕ್ಷಣ ಕಚೇರಿ, ಮಾರುಕಟ್ಟೆಗಳು ಎಂದಿನಂತೆ ತೆರೆದಿತ್ತು. ರೈಲು ಸಂಚಾರದಲ್ಲಿ ಯಾವುದೇ ವ್ಯತ್ಯಯ ಉಂಟಾಗಲಿಲ್ಲ.



ತಮಿಳುನಾಡಿನ ತಿರುಚಿರಾಪಳ್ಳಿಯಲ್ಲಿ ರೈಲು ಸಂಚಾರಕ್ಕೆ ಅಡ್ಡಿಪಡಿಸಲು ಯತ್ನಿಸಿದ ಕಾರ್ಮಿಕರನ್ನು ಪೊಲೀಸರು ತಡೆದರು —ಪಿಟಿಐ ಚಿತ್ರ

ಲಾಠಿ ಪ್ರಹಾರ

ಹೊಸಕೋಟೆ: ನಗರದಲ್ಲಿ ಗುರುವಾರ ಸಾರ್ವತ್ರಿಕ ಮುಷ್ಕರ ದಿನದಂದು ಕಾರ್ಖಾನೆ ಕೆಲಸಕ್ಕೆ ತೆರಳುತ್ತಿದ್ದ ಕಾರ್ಮಿಕರ ಬಸ್ ತಡೆದ ಹೋರಾಟಗಾರರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದರು. ಹೊಸಕೋಟೆ ಪಿಲಗುಂಪೆ ಹಾಗೂ ಕೋಲಾರ ಜಿಲ್ಲೆ ನರಸಾಪುರ, ವೇಮಗಲ್, ಮಾಲೂರು ಕೈಗಾರಿಕಾ ಪ್ರದೇಶಗಳ ಕಾರ್ಖಾನೆಗಳ ಕಾರ್ಮಿಕರು ಮುಂಜಾನೆ ಕಂಪನಿಗಳ ವಾಹನಗಳಲ್ಲಿ ತೆರಳಿದ್ದರು. ಈ ವಾಹನಗಳನ್ನು ಹೊಸಕೋಟೆ–ಕೋಲಾರ ಹೆದ್ದಾರಿಯಲ್ಲಿ ಹೋರಾಟಗಾರರು ತಡೆದಾಗ ಪರಸ್ಪರ ವಾಕ್ಸಮರ ನಡೆಯಿತು. ಪೊಲೀಸರು ಗುಂಪು ಚದುರಿಸಲು ಲಾಠಿ ಪ್ರಹಾರ ನಡೆಸಿದರು. ನಾಲ್ವರಿಗೆ ಗಾಯವಾಗಿದೆ.

ಕೇರಳದಲ್ಲಿ ಜನಜೀವನ ಅಸ್ತವ್ಯಸ್ತ

ತಿರುವನಂತಪುರ (ಪಿಟಿಐ): ಕಾರ್ಮಿಕ ಕಾಯ್ದೆ ವಿರೋಧಿಸಿ ಕೇರಳದ ವಿವಿಧೆಡೆ ಹಿಂಸಾಚಾರ ಸಂಭವಿಸಿದ್ದು, ಜನಜೀವನ ಅಸ್ತವ್ಯಸ್ತಗೊಂಡಿತು.

ಕಚೇರಿಗಳಿಗೆ ಹಾಜರಾಗುವಂತೆ ನೌಕರರಿಗೆ ಕೇರಳ ಸರ್ಕಾರ ಮುಂಚಿತವಾಗಿ ಸೂಚಿಸಿತ್ತು. ಕರ್ತವ್ಯಕ್ಕೆ ಗೈರಾದರೆ ಆ ದಿನದ ವೇತನ ನೀಡುವುದಿಲ್ಲ ಎಂದು ಕೇರಳ ಸರ್ಕಾರವು ಘೋಷಿಸಿತ್ತು. ಹೀಗಿದ್ದರೂ ಕೂಡ ತಿರುವನಂತಪುರದಲ್ಲಿ ವಿಧಾನಸಭೆ ಸೇರಿದಂತೆ ಹಲವು ಕಚೇರಿಗಳಲ್ಲಿ ನೌಕರರ ಹಾಜರಾತಿ ಕಡಿಮೆ ಇತ್ತು. ಸರ್ಕಾರಿ ಬಸ್‌ಗಳ ಸಂಚಾರ ಕಡಿಮೆ ಇದ್ದ ಕಾರಣ, ಜನ ಜೀವನದ ಮೇಲೂ ವ್ಯತ್ಯಯ ಉಂಟಾಯಿತು.

ಉಳಿದಂತೆ ಸರ್ಕಾರಿ ಕಚೇರಿ, ಬ್ಯಾಂಕ್, ಅಂಗಡಿ ಮುಂಗಟ್ಟುಗಳು ಮುಚ್ಚಿದ್ದವು. ಇದರಿಂದ ದೂರ ಊರುಗಳಿಂದ ಪ್ರಯಾಣಿಕರು ಬಸ್ ನಿಲ್ದಾಣದಲ್ಲಿಯೇ ಉಳಿಯುವಂತಾಯಿತು. ಗುರುವಾರದಿಂದ ಶಬರಿಮಲೆಯಲ್ಲಿ ‘ಕುಂಭಮ್’ ಮಾಸಿಕ ಪೂಜೆ ಆರಂಭಗೊಂಡಿದ್ದರಿಂದ ಭಕ್ತಾದಿಗಳಿಗೆ ತಿರುವನಂತಪುರ, ಚೆಂಗನೂರು, ಕೊಟ್ಟಾಯಂ, ಪತ್ತನಂಮಿಟ್ಟ ಪಟ್ಟಣಗಳಿಂದ ವಿಶೇಷ ಬಸ್ ವ್ಯವಸ್ಥೆ ಮಾಡಲಾಗಿತ್ತು.

ಕೊಚ್ಚಿ ಮೆಟ್ರೊ ರೈಲು ಸೇವೆ, ಆನ್‌ಲೈನ್ ಟ್ಯಾಕ್ಸಿ ಸೇವೆಯೂ ಎಂದಿನಂತಿತ್ತು. ರಾಜ್ಯದಾದ್ಯಂತ ಶಿಕ್ಷಣ ಸಂಸ್ಥೆಗಳಿಗೆ ರಜೆ ಘೋಷಿಸಲಾಗಿತ್ತು.

ರಾಹುಲ್ ಗಾಂಧಿ ಬೆಂಬಲ

ಸಾರ್ವತ್ರಿಕ ಮುಷ್ಕರಕ್ಕೆ ಲೋಕಸಭೆಯ ವಿರೋಧ ಪಕ್ಷದ ನಾಯಕ, ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಕೂಡ ಬೆಂಬಲ ಸೂಚಿಸಿದರು.

‘ನಾಲ್ಕು ಕಾರ್ಮಿಕ ಸಂಹಿತೆಗಳು ಹಕ್ಕುಗಳನ್ನು ದುರ್ಬಲಗೊಳಿಸಲಿವೆ ಎಂದು ಕಾರ್ಮಿಕರು ಆತಂಕಗೊಂಡಿದ್ದಾರೆ. ವ್ಯಾಪಾರ ಒಪ್ಪಂದಗಳು ನಮ್ಮ ಜೀವನೋಪಾಯಕ್ಕೆ ಹೊಡೆತ ನೀಡಬಹುದು ಎಂದು ರೈತರು ಆತಂಕಗೊಂಡಿದ್ದಾರೆ. ಭವಿಷ್ಯದ ಕುರಿತು ನಿರ್ಧಾರ ತೆಗೆದುಕೊಳ್ಳುವ ಸಂದರ್ಭದಲ್ಲಿ ಕಾರ್ಮಿಕರ ಧ್ವನಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಮೋದಿ ಅವರೇ ಈಗಲಾದರೂ ಕೂಡ ಕೇಳಿಸಿಕೊಳ್ಳುತ್ತೀರಾ? ಅವರ ‘ಹಿಡಿತ’ ಬಲವಾಗಿದೆಯೇ? ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿರುವ ಕಾರ್ಮಿಕರು ಹಾಗೂ ರೈತರ ಜೊತೆಗೆ ನಾನು ಧೃಡವಾಗಿ ನಿಲ್ಲುತ್ತೇನೆ’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.



ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ನೇತೃತ್ವದಲ್ಲಿ ಬೆಂಗಳೂರಿನ ಪುರಭವನದ ಮುಂಭಾಗ ಗುರುವಾರ ಪ್ರತಿಭಟನೆ ನಡೆಸಿದವರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡರು

ಪ್ರಜಾವಾಣಿ ಚಿತ್ರ: ಎಂ. ಎಸ್ ಮಂಜುನಾಥ್

ಉತ್ಪಾದನೆ ನಿಲ್ಲಿಸಿ ಕಾರ್ಮಿಕರ ಮುಷ್ಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ವಿರೋಧಿಸಿ, ನರೇಗಾ ಉಳಿಸಲು ಆಗ್ರಹಿಸಿ ಕಾರ್ಮಿಕ ಸಂಘಟನೆಗಳು ಗುರುವಾರ ಮುಷ್ಕರ ನಡೆಸಿದವು.

ಐಎನ್‌ಟಿಯುಸಿ, ಎಐಟಿಯುಸಿ, ಎಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಎಐಸಿಸಿಟಿಯು, ಟಿಯುಸಿಸಿ, ಎಚ್‌ಎಂಕೆಪಿ, ಕೆಡಬ್ಲ್ಯುಯು, ಕೆಐಇಎಫ್, ಎನ್‌ಸಿಎಲ್ ಸೇರಿದಂತೆ ದೇಶದ ಕೇಂದ್ರ ಕಾರ್ಮಿಕ ಸಂಘಗಳನ್ನು ಒಳಗೊಂಡ ಕಾರ್ಮಿಕ ಸಂಘಗಳ ಜಂಟಿ ಸಮಿತಿ ಕರೆ ನೀಡಿದ್ದ ಮುಷ್ಕರವನ್ನು ಬೆಂಬಲಿಸಿ ರಾಜ್ಯದ ವಿವಿಧ ಕಾರ್ಖಾನೆಗಳ ಸಾವಿರಾರು ಕಾರ್ಮಿಕರು ಕೆಲಸದಿಂದ ಹೊರಗುಳಿದರು.

ವಿವಿಧ ಕೈಗಾರಿಕಾ ಪ್ರದೇಶಗಳಲ್ಲಿ ಕಾರ್ಮಿಕರು ಪ್ರತಿಭಟನಾ ಮೆರವಣಿಗೆ ನಡೆಸಿದರು. ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಹಿಂತೆಗೆದುಕೊಳ್ಳಬೇಕು. ಮಾತ್ರವಲ್ಲ, ರೈತರ ಹಾಗೂ ಗ್ರಾಮೀಣ ಪ್ರದೇಶದ ಕೂಲಿಕಾರರ ಭವಿಷ್ಯವನ್ನು ಹಾಳು ಮಾಡಲಿರುವ ವಿಬಿ ಜಿ ರಾಮ್ ಜಿ ಕಾನೂನನ್ನು ಹಿಂಪಡೆಯಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘ಬೆಂಗಳೂರಿನ ಪುರಭವನದ ಬಳಿ ಶಾಂತಿಯುತವಾಗಿ ಪ್ರತಿಭಟನೆ ಮಾಡಲು ಹೊರಟ ಕಾರ್ಮಿಕರನ್ನು ಪೊಲೀಸರು ಬಲವಂತವಾಗಿ ವಶಕ್ಕೆ ಪಡೆದು ಆಡುಗೋಡಿಯಲ್ಲಿರುವ ಪೊಲೀಸ್ ಕವಾಯತು ಮೈದಾನಕ್ಕೆ ಒಯ್ದರು. ಅಲ್ಲಿಯೇ ಸಭೆ ಮಾಡಿ ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಮುಖಂಡರು ಚರ್ಚೆ ನಡೆಸಿದರು’ ಎಂದು ಜೆಸಿಟಿಯು ಸಮನ್ವಯಕಾರ ಕೆ.ವಿ. ಭಟ್ ತಿಳಿಸಿದರು.

ರಾಜ್ಯದ ಎಲ್ಲೆಡೆ ಮುಷ್ಕರ ಯಶಸ್ವಿಯಾಗಿದೆ. ಉದ್ಯಮಗಳ ಕಾರ್ಮಿಕರಲ್ಲದೇ ಅಂಗನವಾಡಿ, ಅಕ್ಷರ ದಾಸೋಹ, ಗ್ರಾಮ ಪಂಚಾಯಿತಿ ನೌಕರರು ಕೂಡ ಪ್ರತಿಭಟನೆಗಳಲ್ಲಿ ಭಾಗಿಯಾಗಿದ್ದರು ಎಂದು ಸಿಐಟಿಯು ಅಧ್ಯಕ್ಷ ಮೀನಾಕ್ಷಿ ಸುಂದರಂ, ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮೀ ಮಾಹಿತಿ ನೀಡಿದರು.

ಕೈಗಾರಿಕಾ ಸಂಬಂಧ ಸಂಹಿತೆ ಮಸೂದೆ ಅಂಗೀಕಾರ

ನವದೆಹಲಿ (ಪಿಟಿಐ): ಕೈಗಾರಿಕಾ ಸಂಬಂಧ ಸಂಹಿತೆ (ತಿದ್ದುಪಡಿ) ಮಸೂದೆ– 2026 ಅನ್ನು ಸಂಸತ್ತಿನ ಉಭಯ ಸದನಗಳಾದ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಗುರುವಾರ ಅಂಗೀಕಾರವಾಯಿತು.

2020ರ ಕೈಗಾರಿಕಾ ಸಂಬಂಧ ಸಂಹಿತೆಯಿಂದ ಬದಲಾಯಿಸಲಾದ ಕೆಲ ಕಾನೂನುಗಳ ನಿರಂತರತೆ ಕುರಿತು ಭವಿಷ್ಯದಲ್ಲಿ ಅನಗತ್ಯ ತೊಡಕುಗಳು ಉಂಟಾಗುವುದನ್ನು ತಪ್ಪಿಸಲು ಈ ಮಸೂದೆ ನೆರವಾಗುತ್ತದೆ ಎಂದು ಕಾರ್ಮಿಕ ಸಚಿವ ಮನ್ಸುಖ್ ಮಾಂಡವಿಯಾ ತಿಳಿಸಿದರು.

ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಧ್ವನಿಮತದ ಮೂಲಕ ಈ ಮಸೂದೆ ಅಂಗೀಕಾರವಾಯಿತು.

ಸಮಾಜದ ಒಂದು ವರ್ಗದ ಜನರ ಅವಹೇಳನ; ‘ಸುಪ್ರೀಂ’ ಆಕ್ರೋಶ
‘ಘೂಸಖೋರ್ ಪಂಡಿತ್’ಗೆ ಬೇರೆ ಹೆಸರಿಡಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ‘ನೀರಜ್ ಪಾಂಡೆ ಅವರ ನಿರ್ದೇಶನದ, ನಟ ಮನೋಜ್ ಬಾಜಪೇಯ್ ನಟನೆಯ ‘ಘೂಸಖೋರ್ ಪಂಡಿತ್’ ಸಿನಿಮಾದ ಹೆಸರನ್ನು ಬದಲಾಯಿಸಬೇಕು. ಸಿನಿಮಾಗೆ ಇಂಥ ಹೆಸರಿಟ್ಟು ಸಮಾಜದ ಒಂದು ವರ್ಗದ ಜನರನ್ನು ಅವಹೇಳನ ಮಾಡುವುದನ್ನು ಒಪ್ಪಲು ಸಾಧ್ಯವಿಲ್ಲ’ ಎಂದು ಸುಪ್ರೀಂ ಕೋರ್ಟ್ ಗುರುವಾರ ಆಕ್ರೋಶ ವ್ಯಕ್ತಪಡಿಸಿದೆ.

ನೆಟ್‌ಫ್ಲಿಕ್ಸ್‌ನಲ್ಲಿ ಸಿನಿಮಾ ಬಿಡುಗಡೆ ತಡೆಹಿಡಿಯುವಂತೆ ಭಾರತೀಯ ಬ್ರಾಹ್ಮಣ ಸಮಾಜದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಅತುಲ್ ಮಿಶ್ರಾ ಅವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಉಜ್ವಲ್ ಭುಯಾನ್ ಅವರ ಪೀಠವು ನಡೆಸಿತು. ಅರ್ಜಿ ಕುರಿತು ಪ್ರತಿಕ್ರಿಯಿಸುವಂತೆ ನಿರ್ದೇಶಕ ನೀರಜ್, ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಮತ್ತು ಸಿಬಿಎಫ್‌ಸಿಗೆ ಪೀಠವು ನೋಟಿಸ್ ನೀಡಿತು.

‘ಸಿನಿಮಾಗೆ ಬೇರೆ ಹೆಸರು ಇಡಬೇಕು’ ಎಂದು ಪೀಠ ಸೂಚಿಸಿತು ಮತ್ತು ಯಾವ ಹೆಸರು ಇಡಲಿದ್ದೀರಿ ಎನ್ನುವ ಬಗ್ಗೆ ಪ್ರಮಾಣಪತ್ರ ಸಲ್ಲಿಸಿ. ಶೀರ್ಷಿಕೆ ಬದಲಾವಣೆ ಬಗ್ಗೆ ನಮಗೆ ಮಾಹಿತಿ ನೀಡುವವರೆಗೂ ಚಿತ್ರ ಬಿಡುಗಡೆಗೆ ಅವಕಾಶ ನೀಡುವುದಿಲ್ಲ ಎಂದು ಪೀಠ ಹೇಳಿದೆ.

‘ಬೇರೆ ಯಾವ ಹೆಸರು ಇಡಬೇಕು ಎನ್ನುವ ಬಗ್ಗೆ ಇನ್ನುವರೆಗೂ ತೀರ್ಮಾನ ಮಾಡಿಲ್ಲ. ಯಾವುದೇ ಸಂಘರ್ಷ ಉದ್ಭವಿಸದಂತೆ ಹೆಸರು ಇಡಲಾಗುವುದು’ ಎಂದು ಸಿನಿಮಾ ನಿರ್ದೇಶಕರ ಪರ ವಕೀಲರು ಪೀಠಕ್ಕೆ ತಿಳಿಸಿದರು.ಪೀಠವು ಫೆ.19ಕ್ಕೆ ವಿಚಾರಣೆಯನ್ನು ಮುಂದೂಡಿತು.

‘ಸ್ವಾತಂತ್ರ್ಯದ ದುರುಪಯೋಗ ಸಲ್ಲ’

‘ಯಾರನ್ನಾದರೂ ನೀವು ಯಾಕೆ ಅವಹೇಳನ ಮಾಡುತ್ತೀರಿ? ಇದು ನೈತಿಕತೆ ಮತ್ತು ಸಾರ್ವಜನಿಕ ಸುವ್ಯವಸ್ಥೆಗೆ ವಿರುದ್ಧವಾದುದು. ದೇಶದಲ್ಲಿ ಈಗಾಗಲೇ ಹಲವು ಗೊಂದಲಗಳಿವೆ. ಈ ಹೊತ್ತಿನಲ್ಲಿ ಇನ್ನೊಂದು ರೀತಿಯ ಗೊಂದಲವನ್ನು ಯಾಕೆ ಸೃಷ್ಟಿಸುತ್ತೀರಿ. ಸಿನಿಮಾ ನಿರ್ದೇಶಕರು, ಪತ್ರಕರ್ತರು ಮುಂತಾದವರು ಜವಾಬ್ದಾರಿ ಇರುವವರು ಎಂದು ತಿಳಿದಿದ್ದೇವೆ ಮತ್ತು ವಾಕ್ ಸ್ವಾತಂತ್ರ್ಯದ ಕುರಿತು ತಿಳಿದಿದ್ದೀರಿ ಎಂದುಕೊಂಡಿದ್ದೇವೆ’ ಎಂದು ಪೀಠ ಹೇಳಿತು.

‘ಸಮಾಜದ ಯಾವುದೇ ವರ್ಗವನ್ನು ಅವಹೇಳನ ಮಾಡಬಾರದು. 40ರ ದಶಕದಲ್ಲಿಯೇ ನಮ್ಮ ಸಂವಿಧಾನ ಬರೆದವರಿಗೆ ವಿವಿಧ ಜಾತಿ, ವರ್ಗಗಳ ಬಗ್ಗೆ ಎಚ್ಚರಿಕೆ ಇತ್ತು. ಇದಕ್ಕಾಗಿಯೇ ಭ್ರಾತೃತ್ವ ಪರಿಕಲ್ಪನೆಯನ್ನು ಅವರು ಮುಂದಿಟ್ಟರು. ನಿಮಗೆ ನೀಡಿರುವ ಸ್ವಾತಂತ್ರ್ಯವನ್ನು ಸಮಾಜದ ಒಂದು ವರ್ಗವನ್ನು ಅವಹೇಳನ ಮಾಡಲು ಬಳಸಿಕೊಳ್ಳುತ್ತೀರಿ ಎಂದರೆ, ಅದನ್ನು ಸಹಿಸಲಾಗದು’ ಎಂದು ಪೀಠ ಹೇಳಿತು.

ಬೆಳಿಗ್ಗೆ ಬಂಧನ; ಮಧ್ಯಾಹ್ನ ಬಿಡುಗಡೆ

ಕಾನ್ಪುರ (ಪಿಟಿಐ): ಲ್ಯಾಂಬೋರ್ಗಿನಿ ಕಾರು ಸರಣಿ ಅಪಘಾತ ಪ್ರಕರಣದಲ್ಲಿ ಗುರುವಾರ ಬೆಳಿಗ್ಗೆ ಕಾನ್ಪುರ ಪೊಲೀಸರಿಂದ ಬಂಧಿತನಾಗಿದ್ದ ತಂಬಾಕು ಉದ್ಯಮಿಯ ಪುತ್ರ ಶಿವಂ ಮಿಶ್ರಾ ಮಧ್ಯಾಹ್ನದ ವೇಳೆಗೆ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾನೆ.

ಉದ್ಯಮಿ ಕೆ.ಕೆ.ಮಿಶ್ರಾ ಅವರ ಪುತ್ರ 35 ವರ್ಷದ ಶಿವಂ ಮಿಶ್ರಾನನ್ನು ಕಾನ್ಪುರ ಪೊಲೀಸರು ಬಂಧಿಸಿ ಗುರುವಾರ ಬೆಳಗ್ಗೆ ಎಸಿಜೆಎಂ ನ್ಯಾಯಾಧೀಶರ ಎದುರು ಹಾಜರುಪಡಿಸಿದ್ದರು.

ಪೊಲೀಸರು ವಿಚಾರಣೆಗಾಗಿ ವಶಕ್ಕೆ ಕೋರಿದ್ದರು. ಆದರೆ ವಶಕ್ಕೆ ನೀಡುವ ಅಗತ್ಯ ಏನಿದೆ ಎಂದು ನ್ಯಾಯಾಲಯ ಪ್ರಶ್ನಿಸಿತು. ವಾದ–ಪ್ರತಿವಾದ ಆಲಿಸಿ ₹20 ಸಾವಿರದ ಗ್ಯಾರಂಟಿ ಪತ್ರದೊಂದಿಗೆ ಜಾಮೀನು ಮಂಜೂರು ಮಾಡಿತು ಎಂದು ಸರ್ಕಾರಿ ಅಭಿಯೋಜಕ ದಿಲೀಪ್ ಅಶ್ವತಿ ತಿಳಿಸಿದ್ದಾರೆ.

‘ರಕ್ಷಣೆ, ದಾಳಿ ಸಾಮರ್ಥ್ಯ ಹೆಚ್ಚಳ’
ಭಾರತಕ್ಕೆ ಫ್ರಾನ್ಸ್ ಅಧ್ಯಕ್ಷ ಭೇಟಿಗೂ ಮುನ್ನ ಮಹತ್ವದ ಬೆಳವಣಿಗೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ‘ಬಹು ಕಾರ್ಯ ಯುದ್ಧವಿಮಾನ’ವಾದ (ಎಂಆರ್‌ಎಫ್‌ಎ) ರಫೇಲ್ ಜೊತೆಗೆ, ಕ್ಷಿಪಣಿ ವ್ಯವಸ್ಥೆಗಳು ಹಾಗೂ ಎಎಸ್–ಎಚ್‌ಎಪಿಎಸ್(ಏರ್‌–ಶಿಪ್ ಬೇಸ್ಡ್ ಹೈ ಅಲ್ಟಿಟ್ಯೂಡ್ ಸೂಡೊ ಸೆಟಲೈಟ್) ವ್ಯವಸ್ಥೆ ಖರೀದಿಗೆ ಡಿಎಸಿ ಅನುಮೋದಿಸಿದೆ. ಇವುಗಳನ್ನು ಹೊಂದುವುದರಿಂದ ವಾಯುಪ್ರದೇಶ ರಕ್ಷಣೆ ವಿಚಾರದಲ್ಲಿ ಪ್ರಾಬಲ್ಯ ಸಾಧಿಸಲು ವಾಯುಪಡೆಗೆ ಸಾಧ್ಯವಾಗಲಿದೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ.

‘ಬಹುತೇಕ ರಫೇಲ್ ಯುದ್ಧ ವಿಮಾನಗಳನ್ನು ಭಾರತದಲ್ಲಿಯೇ ತಯಾರಿಸಲಾಗುತ್ತದೆ. ಕ್ಷಿಪಣಿ ವ್ಯವಸ್ಥೆಗಳು ನೆಲದ ಮುಖಾಂತರ ನಡೆಯುವ ದಾಳಿಯನ್ನು ತಡೆಗಟ್ಟುವಲ್ಲಿನ ಸನ್ನದ್ಧತೆಯನ್ನು ಹೆಚ್ಚಿಸಲಿವೆ. ಈ ಆಯುಧಗಳು ಅತ್ಯಂತ ನಿಖರ ಹಾಗೂ ಆಳವಾಗಿ ದಾಳಿ ನಡೆಸುವ ಸಾಮರ್ಥ್ಯ ಹೊಂದಿವೆ’ ಎಂದು ಹೇಳಿದೆ.

‘ಎಎಸ್–ಎಚ್‌ಎಪಿಎಸ್‌ಗಳನ್ನು ಬೇಹುಗಾರಿಕೆ, ಕಣ್ಗಾವಲು, ಮಿಲಿಟರಿ ಸಂವಹನ ಹಾಗೂ ದೂರಸಂವೇದಿ ಕಾರ್ಯಕ್ಕೆ ಬಳಸಿಕೊಳ್ಳಲಾಗುವುದು ಎಂದು ತಿಳಿಸಿದೆ. ಸೇನೆಗೆ ‘ವೈಭವ್’ ಎಂಬ ಟ್ಯಾಂಕ್ ನಿರೋಧಕ ಸಾಧನಗಳನ್ನು, ಟಿ–72 ಟ್ಯಾಂಕ್‌ಗಳು, ಇನ್‌ಫ್ಯಾಂಟ್ರಿ ಕಂಬ್ಯಾಟ್ ವೆಹಿಕಲ್(ಬಿಎಂಪಿ–2) ಹಾಗೂ ಎಆರ್‌ವಿಯಂತಹ ಅತ್ಯಾಧುನಿಕ ಆಯುಧಗಳನ್ನು ಖರೀದಿಸಲು ಅನುಮೋದನೆ ನೀಡಲಾಗಿದೆ.

ಶತ್ರು ಪಾಳಯದ ಟ್ಯಾಂಕ್‌ಗಳು ಮುನ್ನುಗ್ಗುವುದಕ್ಕೆ ಪ್ರತಿರೋಧ ಒಡ್ಡುವುದಕ್ಕೆ ‘ವೈಭವ್’ ಸಾಧನಗಳನ್ನು ಬಳಸಲಾಗುತ್ತದೆ. ಇನ್ನು ಎಆರ್‌ವಿ, ಟಿ–72 ಟ್ಯಾಂಕ್ ಹಾಗೂ ಬಿಎಂಪಿ–2 ಶಸ್ತ್ರಾಸ್ತ್ರಗಳು ಸೇನೆಯ ಕಾರ್ಯಾಚರಣೆಗೆ ಬಲ ತುಂಬಲಿವೆ ಎಂದು ಸಚಿವಾಲಯ ತಿಳಿಸಿದೆ.

ಭಾರತೀಯ ನೌಕಾಪಡೆಗೆ, ವಿದ್ಯುತ್ ಉತ್ಪಾದನೆಗೆ ನೆರವಾಗಬಲ್ಲ ಎಂಡಬ್ಲು ಮರೀನ್ ಗ್ಯಾಸ್ ಟರ್ಬೈನ್ ಆಧಾರಿತ 4 ಜನರೇಟರ್‌ಗಳು, ಪಿ8ಐ ಯುದ್ಧವಿಮಾನ ಖರೀದಿಗೂ ಡಿಎಸಿ ಅನುಮೋದಿಸಿದೆ. ಈ ಜನರೇಟರ್‌ಗಳ ಸೇರ್ಪಡೆಯಿಂದ ವಿದ್ಯುತ್ ಉತ್ಪಾದನೆಯಲ್ಲಿ ಸ್ವಾಲಂಬನೆ ಸಾಧ್ಯವಾಗಲಿದ್ದು, ವಿದೇಶಿ ತಯಾರಕರ ಮೇಲಿನ ಅವಲಂಬನೆಯೂ ಕಡಿಮೆಯಾಗಲಿದೆ ಎಂದು ಹೇಳಿದೆ. ಯುದ್ಧತಂತ್ರದ ವಿಚಾರದಲ್ಲಿ ‘ಪಿ8ಐ’ ಯುದ್ಧವಿಮಾನ ನಿರ್ಣಾಯಕ ಪಾತ್ರ ವಹಿಸಲಿದೆ ಎಂದೂ ಸಚಿವಾಲಯ ತಿಳಿಸಿದೆ.

114 ರಫೇಲ್ ಖರೀದಿಗೆ ಅಸ್ತು

ಒಂದನೇ ಪುಟದಿಂದ...

ಈ ಭೇಟಿ ವೇಳೆ ಮ್ಯಾಕ್ರನ್ ಅವರು ನವದೆಹಲಿಯಲ್ಲಿ ನಡೆಯಲಿರುವ ‘ಎ.ಐ ಇಂಪ್ಯಾಕ್ಟ್’ ಶೃಂಗಸಭೆಯಲ್ಲಿ ಪಾಲ್ಗೊಳ್ಳುವರು. ಮುಂಬೈನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮಾತುಕತೆ ನಡೆಸುವರು.

ಲಾಕ್‌ಹೀಡ್ ಮಾರ್ಟಿನ್ (ಎಫ್–21), ಬೋಯಿಂಗ್ (ಎಫ್/ಎ–18) ಕಂಪನಿಗಳು ತಾವು ತಯಾರಿಸುವ ಯುದ್ಧವಿಮಾನಗಳ ಪೂರೈಕೆಗೆ ಆಸಕ್ತಿ ತೋರಿಸಿದ್ದವು. ಈ ಯುದ್ಧವಿಮಾನಗಳ ಖರೀದಿಗೆ ರಕ್ಷಣಾ ಸಚಿವಾಲಯವು 13 ವರ್ಷಗಳ ಹಿಂದೆ ಎಲ್ಲ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿತ್ತು. ಹಲವು ಕಾರಣಗಳಿಂದ ಇದಕ್ಕೆ ಅನುಮೋದನೆ ಸಿಕ್ಕಿರಲಿಲ್ಲ. ಇದು, ಇತ್ತೀಚಿನ ದಿನಗಳಲ್ಲಿ ನಡೆದ ವಿಶ್ವದ ಅತ್ಯಂತ ದೊಡ್ಡ ಪ್ರಮಾಣದ ಮಿಲಿಟರಿ ಸಾಮಗ್ರಿಗಳ ಖರೀದಿ ಕಾರ್ಯಕ್ರಮ ಎಂದೇ ಬಣ್ಣಿಸಲಾಗುತ್ತಿದೆ.

ಭಾರತೀಯ ವಾಯುಪಡೆಯ ಆರು ಸ್ಕ್ವಾಡ್ರನ್‌ಗಳಿಗೆ ಮಿಗ್ ಯುದ್ಧವಿಮಾನಗಳ ಬದಲು ಮಧ್ಯಮ ಹಾಗೂ ಬಹುಕಾರ್ಯ ಯುದ್ಧವಿಮಾನಗಳನ್ನು (ಎಂಎಂಆರ್‌ಸಿಎ) ಸೇರ್ಪಡೆ ಮಾಡುವುದಕ್ಕೆ 25 ವರ್ಷಗಳ ಹಿಂದೆ ಪ್ರಕ್ರಿಯೆ ಆರಂಭಿಸಲಾಗಿತ್ತು. ರಾಜಕೀಯ ಜಟಾಪಟಿಯಿಂದಾಗಿ ಇದು ಕಾರ್ಯಗತವಾಗಿರಲಿಲ್ಲ. ಆಗಿನ ಪ್ರಧಾನಿ ಡಾ.ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರವು ತನ್ನ 10 ವರ್ಷಗಳ ಅಧಿಕಾರಾವಧಿಯಲ್ಲಿ ವಿವಿಧ ಸಾಮರ್ಥ್ಯದ ಯುದ್ಧವಿಮಾನಗಳ ಖರೀದಿಯನ್ನು ಅಂತಿಮಗೊಳಿಸಿರಲಿಲ್ಲ. ಆದರೆ, ಜಾಗತಿಕ ಟೆಂಡರ್ ಮೂಲಕ ರಫೇಲ್ ಯುದ್ಧವಿಮಾನಗಳ ಖರೀದಿ ಪ್ರಕ್ರಿಯೆಗೆ ಚಾಲನೆ ನೀಡಿತ್ತು. 2015ರಲ್ಲಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರವು ಎಂಎಂಆರ್‌ಸಿಎ ಖರೀದಿಗೆ ಕರೆದಿದ್ದ ಟೆಂಡರ್‌ಅನ್ನು ರದ್ದು ಮಾಡಿತ್ತು. 2016ರಲ್ಲಿ 36 ರಫೇಲ್ ಯುದ್ಧವಿಮಾನಗಳನ್ನು ಖರೀದಿಸಿತ್ತು.

8 ಡಾರ್ನಿಯರ್ ಖರೀದಿ ಒಪ್ಪಂದ

ಒಂದನೇ ಪುಟದಿಂದ...

‘ಎಚ್‌ಎಎಲ್‌ನ ಕಾನ್ಪುರ ಘಟಕದ ಸಾರಿಗೆ ವಿಮಾನ ವಿಭಾಗದೊಂದಿಗೆ ಈ ಒಪ್ಪಂದ ಮಾಡಿಕೊಳ್ಳಲಾಗಿದೆ’ ಎಂಧು ಸಚಿವಾಲಯ ತಿಳಿಸಿದೆ. ದೇಶದ ಕರಾವಳಿ ಉದ್ದಕ್ಕೂ ಕಣ್ಗಾವಲು ಹಾಗೂ ರಕ್ಷಣಾ ಕಾರ್ಯಕ್ಕಾಗಿ 35ಕ್ಕೂ ಅಧಿಕ ಡಾರ್ನಿಯರ್ ಯುದ್ಧವಿಮಾನಗಳನ್ನು ಐಸಿಜಿ ನಿಯೋಜಿಸಿದೆ

ಚಿಟಿಕೆ ಸುದ್ದಿ

ಸೇವಾ ತೀರ್ಥ, ಕರ್ತವ್ಯ ಭವನ ಉದ್ಘಾಟನೆ ಇಂದು

ನವದೆಹಲಿ: ಸುಮಾರು 126 ವರ್ಷಗಳ ಇತಿಹಾಸವಿದ್ದ ಬ್ರಿಟಿಷ್ ಕಾಲದ ವಾಸ್ತುಶಿಲ್ಪದಲ್ಲಿ ನಿರ್ಮಾಣಗೊಂಡಿದ್ದ ಸಂಸತ್ ಕಾರ್ಯಾಲಯವು ಇತಿಹಾಸದ ಪುಟ ಸೇರಲಿದೆ. ಪ್ರಧಾನ ಮಂತ್ರಿ ಕಚೇರಿಯೂ ಸೇರಿ ಹಲವು ಸಚಿವಾಲಯಗಳ ಕಚೇರಿಯು ಈಗ ಸೇವಾ ತೀರ್ಥ ಮತ್ತು ಕರ್ತವ್ಯ ಭವನಕ್ಕೆ ಸ್ಥಳಾಂತರಗೊಳ್ಳಲಿವೆ.

ಪ್ರಧಾನಿ ಕಚೇರಿ ಒಳಗೊಂಡ ‘ಸೇವಾ ತೀರ್ಥ’ ಮತ್ತು ವಿವಿಧ ಸಚಿವಾಲಯಗಳ ಕಚೇರಿಗಳಿರುವ ಕರ್ತವ್ಯ ಭವನ 1 ಮತ್ತು 2 ಅನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಉದ್ಘಾಟಿಸಲಿದ್ದಾರೆ.

ತಮ್ಮ ಕಚೇರಿಯಲ್ಲಿ ಶುಕ್ರವಾರದಂದು ಪ್ರಧಾನಿ ಮೋದಿ ಅವರು ಕೊನೇ ಸಂಪುಟ ಸಭೆ ನಡೆಸಲಿದ್ದಾರೆ. ಸಭೆ ಬಳಿಕ ಕಚೇರಿಯ ಸ್ಥಳಾಂತರ ಕಾರ್ಯ ಆರಂಭಗೊಳ್ಳಲಿವೆ. ‘ಯುಗೇ ಯುಗೀನ್ ಭಾರತ್ ನ್ಯಾಷನಲ್ ಮ್ಯೂಸಿಯಂ’ ಯೋಜನೆಯ ಭಾಗವಾಗಿ ಹಳೇ ಕಟ್ಟಡಗಳನ್ನೂ ಮ್ಯೂಸಿಯಂ ಆಗಿ ಪರಿವರ್ತಿಸಲಾಗುವುದು.

ಪ್ರೇಮಿಗಳ ದಿನ: ಸಕ್ಕರೆಗೆ ರಿಯಾಯಿತಿ

ತಿರುವನಂತಪುರ: ಕೇರಳದ ಸರ್ಕಾರಿ ನಿಗಮವೊಂದು ಪ್ರೇಮಿಗಳ ದಿನದ ಅಂಗವಾಗಿ ರಿಯಾಯಿತಿ ದರದಲ್ಲಿ ಸಕ್ಕರೆಯನ್ನು ನೀಡಲಿದೆ.

ಕೇರಳ ನಾಗರಿಕ ಸರಬರಾಜು ನಿಗಮವು ತನ್ನ 50ನೇ ವರ್ಷಾಚರಣೆಯ ಪ್ರಯುಕ್ತ ಈ ರಿಯಾಯಿತಿ ಸೌಲಭ್ಯವನ್ನು ಘೋಷಿಸಿದೆ.

ನಿಗಮದ ಮಳಿಗೆಗಳಿಂದ ₹1 ಸಾವಿರ ಮೌಲ್ಯದ ಸಬ್ಸಿಡಿ ರಹಿತ ವಸ್ತುಗಳನ್ನು ಖರೀದಿಸುವವರಿಗೆ ₹14 ದರದಲ್ಲಿ ಒಂದು ಕೆ.ಜಿ ಸಕ್ಕರೆ ಸಿಗಲಿದೆ. ₹500 ಮೌಲ್ಯದ ವಸ್ತುಗಳ ಜೊತೆ 500 ಗ್ರಾಂ ಸಕ್ಕರೆ ದೊರಕಲಿದೆ. ಈ ರಿಯಾಯಿತಿ ಸೌಲಭ್ಯವು ಫೆಬ್ರುವರಿ 14ರಿಂದ 28ರವರೆಗೆ ಜಾರಿಯಲ್ಲಿರಲಿದೆ.

ಜನರನ್ನು ಸೆಳೆಯಲು ಈ ರಿಯಾಯಿತಿ ನೀಡಲಾಗಿದೆ.

ವ್ಯಾಪಾರ ಒಪ್ಪಂದಕ್ಕೆ ವಿರೋಧ

ಪಿಟಿಐ ಚಿತ್ರ



ಭಾರತ–ಅಮೆರಿಕ ನಡುವಿನ ವ್ಯಾಪಾರ ಒಪ್ಪಂದ ವಿರೋಧಿಸಿ ಸಂಸತ್ ಭವನದ ಆವರಣದಲ್ಲಿ ವಿರೋಧ ಪಕ್ಷದ ಸಂಸದರು ಪ್ರತಿಭಟನೆ ನಡೆಸಿದರು

‘ಎಐ171 ವಿಮಾನ ಪತನ: ತನಿಖೆ ಪ್ರಗತಿಯಲ್ಲಿದೆ’



ನವದೆಹಲಿ(ಪಿಟಿಐ): ಅಹಮದಾಬಾದ್‌ನಲ್ಲಿ ಜೂನ್ 12ರಂದು ಸಂಭವಿಸಿದ್ದ ಏರ್ ಇಂಡಿಯಾ ವಿಮಾನ (ಎಐ171) ಅಪಘಾತ ಕುರಿತ ತನಿಖೆ ಪ್ರಗತಿಯಲ್ಲಿದ್ದು, ಯಾವುದೇ ಅಂತಿಮ ತೀರ್ಮಾನವಾಗಿಲ್ಲ ಎಂದು ವಿಮಾನ ಅಪಘಾತ ತನಿಖಾ ಸಂಸ್ಥೆ(ಎಎಐಬಿ) ಗುರುವಾರ ಹೇಳಿದೆ.

ತನಿಖೆಯು ಪೂರ್ಣಗೊಂಡಿದೆ ಎಂಬುದಾಗಿ ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾಗಿರುವ ಕಾರಣಕ್ಕೆ ಈ ಸ್ಪಷ್ಟನೆ ನೀಡಿರುವ ಎಎಐಬಿ,‘ಈ ವಿಚಾರವಾಗಿ ಮಾಧ್ಯಮಗಳಲ್ಲಿನ ವರದಿಗಳು ತಪ್ಪು ಹಾಗೂ ಊಹಾಪೋಹಗಳಿಂದ ಕೂಡಿವೆ’ ಎಂದು ಹೇಳಿದೆ.

‘ವಿಮಾನ ಅಪಘಾತ ಕುರಿತ ತನಿಖೆಯು ತಾಂತ್ರಿಕ ಅಂಶಗಳನ್ನು ಒಳಗೊಂಡಿದೆ. ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದ ಬಳಿಕ ಅಪಘಾತಕ್ಕೆ ಕಾರಣವಾದ ಅಂಶಗಳು ಯಾವುವು ಹಾಗೂ ಸುರಕ್ಷತೆ ಹೆಚ್ಚಿಸಲು ಕೈಗೊಳ್ಳಬೇಕಾದ ಕ್ರಮಗಳೇನು ಎಂಬ ಬಗ್ಗೆ ನಿರ್ಧರಿಸಲಾಗುತ್ತದೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ‘ವಿಮಾನ ಅಪಘಾತ ಕುರಿತು ವರದಿಗಳನ್ನು ಪ್ರಕಟಿಸುವಾಗ ಮಾಧ್ಯಮಗಳು ಸಂಯಮ ಕಾಪಾಡಬೇಕು ಹಾಗೂ ಊಹಾಪೋಹಗಳಿಗೆ ಈಡಾಗಬಾರದು. ಖಚಿತವಲ್ಲದ ವರದಿಗಳು ಜನರಲ್ಲಿ ಅನಗತ್ಯ ಆತಂಕಕ್ಕೆ ಕಾರಣವಾಗುತ್ತವೆ ಹಾಗೂ ತನಿಖೆಯ ವಿಶ್ವಾಸಾರ್ಹತೆ ಮೇಲೂ ಪರಿಣಾಮ ಬೀರಲಿವೆ’ ಎಂದು ಎಎಐಬಿ ಹೇಳಿದೆ.

ಈ ವಿಮಾನ ಅಪಘಾತದಲ್ಲಿ 260 ಜನರು ಮೃತಪಟ್ಟಿದ್ದರು. ಲಂಡನ್‌ಗೆ ಹೊರಟಿದ್ದ ಈ ನತದೃಷ್ಟ ವಿಮಾನ ಅಹಮದಾಬಾದ್ ವಿಮಾನನಿಲ್ದಾಣದಿಂದ ಟೇಕಾಫ್ ಆದ ಕೆಲವೇ ನಿಮಿಷಗಳಲ್ಲಿ ಪತನಗೊಂಡಿತ್ತು.

ಭಾರತಕ್ಕೆ ಬರಲೇಬೇಕು: ಮಲ್ಯಗೆ ಹೈಕೋರ್ಟ್ ಚಾಟಿ

ಮುಂಬೈ: ‘ಲಂಡನ್‌ನಲ್ಲಿ ಇದ್ದುಕೊಂಡು ದೇಶ ಭ್ರಷ್ಟ ಆರ್ಥಿಕ ಅಪರಾಧಿಗಳ ಕಾಯ್ದೆಯ (ಎಫ್‌ಇಒ) ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸುವ ಬದಲು, ಭಾರತಕ್ಕೆ ಬಂದು ನೇರವಾಗಿ ವಿಚಾರಣೆ ಎದುರಿಸಬೇಕು’ ಎಂದು ವಿದೇಶದಲ್ಲಿ ತಲೆಮರೆಸಿಕೊಂಡಿರುವ ಉದ್ಯಮಿ ವಿಜಯ್ ಮಲ್ಯ ಅವರಿಗೆ ಬಾಂಬೆ ಹೈಕೋರ್ಟ್ ಗುರುವಾರ ಚಾಟಿ ಬೀಸಿದೆ.

2016ರಿಂದ ಬ್ರಿಟನ್‌ನಲ್ಲಿ ತಲೆಮರೆಸಿಕೊಂಡಿರುವ ಮಲ್ಯ (70), ತಮ್ಮನ್ನು ಆರ್ಥಿಕ ಅಪರಾಧಿ ಎಂದು ಗುರುತಿಸಿರುವುದು ಮತ್ತು ‘ಎಫ್‌ಇಒ’ನ ಸಿಂಧುತ್ವ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಒಟ್ಟು ಎರಡು ಅರ್ಜಿಗಳನ್ನು ದಾಖಲಿಸಿದ್ದಾರೆ. ವಂಚನೆ, ಹಣ ಅಕ್ರಮ ವರ್ಗಾವಣೆ ಸೇರಿ ಹಲವು ಪ್ರಕರಣಗಳು ಮಲ್ಯ ವಿರುದ್ಧ ಭಾರತದಲ್ಲಿ ದಾಖಲಾಗಿವೆ.

ಮುಖ್ಯ ನ್ಯಾಯಮೂರ್ತಿ ಶ್ರೀ ಚಂದ್ರಶೇಖರ್ ಹಾಗೂ ನ್ಯಾಯಮೂರ್ತಿ ಗೌತಮ್ ಎ. ಅಂಖಡ್ ಅವರ ನ್ಯಾಯಪೀಠವು ಅರ್ಜಿಯ ವಿಚಾರಣೆ ನಡೆಸಲು ನಿರಾಕರಿಸಿ, ‘ನೀವು ಭಾರತಕ್ಕೆ ಬರಲೇಬೇಕು, ಯಾವಾಗ ಬರುತ್ತೀರಿ ಎನ್ನುವುದರ ಬಗ್ಗೆ ಪ್ರಮಾಣಪತ್ರ ಸಲ್ಲಿಸಿ’ ಎಂದು ಮಲ್ಯಗೆ ಕಟ್ಟುನಿಟ್ಟಾಗಿ ಸೂಚಿಸಿದೆ.

‘ಕೋರ್ಟ್‌ಗೆ ಹಾಜರಾಗುವುದನ್ನು ನೀವು ಉದ್ದೇಶಪೂರ್ವಕವಾಗಿಯೇ ತಪ್ಪಿಸುತ್ತಿದ್ದೀರಿ ಎಂದು ನಾವು ಭಾವಿಸುತ್ತೇವೆ. ಸದ್ಯ ನಿಮ್ಮ ಅರ್ಜಿ ವಜಾಗೊಳಿಸುತ್ತಿಲ್ಲ, ಬದಲಿಗೆ ಇನ್ನೊಂದು ಅವಕಾಶ ಕೊಡುತ್ತಿದ್ದೇವೆ’ ಎಂದು ನ್ಯಾಯಪೀಠ ಹೇಳಿತು.

ರಾಜಕೀಯ ಲಾಭಗಳಿಸುವ ಉದ್ದೇಶ: ಟಿಎಂಸಿ
ವಂದೇ ಮಾತರಂ: ಬಂಗಾಳದಲ್ಲಿ ವಾಕ್ಸಮರ

ಕೋಲ್ಕತ್ತ (ಪಿಟಿಐ): ಸರ್ಕಾರಿ ಕಾರ್ಯಕ್ರಮಗಳಲ್ಲಿ ರಾಷ್ಟ್ರ ಗೀತೆ ‘ಜನ ಗಣ ಮನ’ಕ್ಕೂ ಮುನ್ನ ‘ವಂದೇ ಮಾತರಂ’ನ ಎಲ್ಲ ಆರು ಚರಣಗಳನ್ನು ಹಾಡಬೇಕು ಎಂದು ಕೇಂದ್ರ ಸರ್ಕಾರ ಆದೇಶ ಹೊರಡಿಸಿರುವುದು ಪಶ್ಚಿಮ ಬಂಗಾಳದಲ್ಲಿ ತೀವ್ರ ರಾಜಕೀಯ ವಾಕ್ಸಮರಕ್ಕೆ ಕಾರಣವಾಗಿದೆ.

ಕೇಂದ್ರದ ಈ ಆದೇಶವು ರವೀಂದ್ರನಾಥ ಟ್ಯಾಗೋರ್ ಅವರನ್ನು ಅವಮಾನಿಸುವಂತಿದೆ ಮತ್ತು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ರಾಜಕೀಯ ಲಾಭಗಳಿಸುವ ಉದ್ದೇಶವನ್ನು ಹೊಂದಿದೆ ಎಂದು ಟಿಎಂಸಿ ಬಣ್ಣಿಸಿದರೆ, ಕಾಂಗ್ರೆಸ್ ಇದನ್ನು ‘ವಿಭಜಕ ತಂತ್ರ’ ಎಂದು ಜರಿದಿದೆ.

ಆದೇಶವನ್ನು ಸಮರ್ಥಿಸಿಕೊಂಡಿರುವ ಬಿಜೆಪಿ, ‘ಇದು ಐತಿಹಾಸಿಕ ತಪ್ಪನ್ನು ಸರಿಪಡಿಸುತ್ತದೆ ಮತ್ತು ಬಂಕಿಮ ಚಂದ್ರ ಚಟ್ಟೋಪಾಧ್ಯಾಯ ಅವರು ರಚಿಸಿದ ಗೀತೆಗೆ ಪೂರ್ಣ ಗೌರವವನ್ನು ಮರುಸ್ಥಾಪಿಸುತ್ತದೆ’ ಎಂದು ಹೇಳಿದೆ.

> ಕೇಂದ್ರ ಸರ್ಕಾರವು ರಾಷ್ಟ್ರ ಗೀತೆಗೂ ಮುನ್ನ ವಂದೇ ಮಾತರಂ ಹಾಡಲು ಹೊರಡಿಸಿರುವ ಆದೇಶವು ಸಂವಿಧಾನದ ಆಶಯವನ್ನು ಪ್ರತಿಬಿಂಬಿಸುವುದಿಲ್ಲ
> **ಸಿಪಿಎಂ**

‘ಬಂಕಿಮ ಚಂದ್ರ ಅವರ ಕೊಡುಗೆಯನ್ನು ಎತ್ತಿ ತೋರಿಸಲು ಪಕ್ಷಕ್ಕೆ ಯಾವುದೇ ಆಕ್ಷೇಪಣೆ ಇಲ್ಲ. ಆದರೆ ಕೇಂದ್ರ ಸರ್ಕಾರದ ಈ ನಿರ್ದೇಶನವು ಟ್ಯಾಗೋರ್ ಅವರನ್ನು ಕಡೆಗಣಿಸಿದಂತಿದೆ’ ಎಂದು ಟಿಎಂಸಿ ನಾಯಕ, ಪಶ್ಚಿಮ ಬಂಗಾಳದ ಶಿಕ್ಷಣ ಸಚಿವ ಬ್ರಾತ್ಯ ಬಸು ಆರೋಪಿಸಿದ್ದಾರೆ.

‘ಜನ ಗಣ ಮನ’ಕ್ಕೂ ಮೊದಲು ‘ವಂದೇ ಮಾತರಂ’ ಹಾಡಬೇಕು ಎಂದು ಒತ್ತಾಯಿಸುವ ಮೂಲಕ ಶ್ರೇಣಿ ವ್ಯವಸ್ಥೆ ರಚಿಸಲು ಕೇಂದ್ರ ಪ್ರಯತ್ನಿಸಿದೆ. ಈ ಪ್ರಕ್ರಿಯೆಯಲ್ಲಿ ಟ್ಯಾಗೋರ್ ಅವರನ್ನು ಅವಮಾನಿಸಿದೆ’ ಎಂದು ಅವರು ಟೀಕಿಸಿದ್ದಾರೆ.

‘ವಿಧಾನಸಭಾ ಚುನಾವಣೆಗೂ ಮುನ್ನ ಕೇಂದ್ರ ಸರ್ಕಾರ ಹೊರಡಿಸಿರುವ ಈ ಆದೇಶವು ರಾಜಕೀಯ ಲೆಕ್ಕಾಚಾರಗಳನ್ನು ಒಳಗೊಂಡಿದ್ದು, ವಿಭಜನೆಯ ತಂತ್ರವಾಗಿದೆ’ ಎಂದು ಪಶ್ಚಿಮ ಬಂಗಾಳ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಅಧೀರ್ ರಂಜನ್ ಚೌಧರಿ ದೂರಿದ್ದಾರೆ.

ಈ ಆರೋಪಗಳನ್ನು ಬಿಜೆಪಿ ತಿರಸ್ಕರಿಸಿದೆ. ‘ಕೋಮು ಓಲೈಕೆಯಲ್ಲಿ ತೊಡಗಿರುವ ಕಾಂಗ್ರೆಸ್ ವಂದೇ ಮಾತರಂ ಗೀತೆಯ ಕೆಲ ಚರಣಗಳನ್ನು ಕತ್ತರಿಸಿತ್ತು. ಆ ಐತಿಹಾಸಿಕ ತಪ್ಪನ್ನು ಈಗ ಸರಿಪಡಿಸಲಾಗಿದೆ’ ಎಂದು ಕೇಂದ್ರ ಸಚಿವ ಸುಕಾಂತ ಮಜುಂದಾರ್ ಮತ್ತು ಪಶ್ಚಿಮ ಬಂಗಾಳದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸಮಿಕ್ ಭಟ್ಟಾಚಾರ್ಯ ಪ್ರತಿಕ್ರಿಯಿಸಿದ್ದಾರೆ.

‘ಆದೇಶ ಸಂವಿಧಾನ ಬಾಹಿರ’

ನವದೆಹಲಿ (ಪಿಟಿಐ): ವಂದೇ ಮಾತರಂನ ಆರು ಚರಣಗಳನ್ನು ಹಾಡಬೇಕು ಎನ್ನುವ ಕೇಂದ್ರ ಸರ್ಕಾರದ ಆದೇಶ ಸಂವಿಧಾನ ಬಾಹಿರವಾಗಿದ್ದು, ಕೂಡಲೇ ಈ ಆದೇಶವನ್ನು ಹಿಂಪಡೆಯಬೇಕು. ಇಲ್ಲದಿದ್ದರೆ ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದು ಎಂದು ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ (ಎಐಎಂಪಿಎಲ್‌ಬಿ) ಹೇಳಿದೆ.

‘ಈ ಆದೇಶವು ಧಾರ್ಮಿಕ ಸ್ವಾತಂತ್ರ್ಯ ಮತ್ತು ಜಾತ್ಯತೀತ ಮೌಲ್ಯಗಳಿಗೆ ವಿರುದ್ಧವಾಗಿದೆ. ಅಲ್ಲದೆ ಮುಸ್ಲಿಮರ ಧಾರ್ಮಿಕ ನಂಬಿಕೆಗಳಿಗೂ ಧಕ್ಕೆ ತರುತ್ತದೆ’ ಎಂದು ಮಂಡಳಿಯ ಪ್ರಧಾನ ಕಾರ್ಯದರ್ಶಿ ಮೌಲಾನ ಮೊಹಮ್ಮದ್ ಫಜ್ಲುರ್ ರಹೀಂ ಮುಜದ್ದಿದಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 **editpage@prajavani.co.in**

ಅಭಿಮತ



ಸುಭಾಷಿತ

ರಾಜಕಾರಣಿಗೆ ಜನಸೇವೆಯ ಆಸ್ಥೆ ಬರಿಯ ನಾಯಕೇವಾಸ್ತೆ. ಅದು ಹಣ, ಆಸ್ತಿಗಳ ಗುರಿಗೆ ಒಯ್ಯುವ ರಾಜಾರಸ್ತೆ.

-ಕೆ.ಎಸ್. ನಿಸಾರ್ ಅಹಮದ್

ಸಂಪಾದಕೀಯ

ಮಾಸ್ಟರ್ ಪ್ಲಾನ್‌ಗಳ ಭಾರ ದಿಕ್ಕು ತಪ್ಪಿದ ಮಹಾನಗರ

ಬೆಂಗಳೂರು ಮಹಾನಗರವು ಹಿಂದೆಂದೂ ಕಂಡರಿಯದ ರೀತಿಯಲ್ಲಿ ನಗರೀಕರಣಗೊಳ್ಳುತ್ತಿದ್ದರೂ ಅದರ ನಿರ್ವಹಣೆಯು ಮಾತ್ರ ಈ ಪ್ರಮಾಣದ ಬೆಳವಣಿಗೆಯನ್ನು ಊಹಿಸದೆ ಬಲು ಹಿಂದೆಯೇ ರೂಪಿಸಲಾಗಿದ್ದ ಯೋಜನಾ ನಕ್ಷೆಯಂತೆ ನಡೆಯುತ್ತಿದೆ. ಬೆಂಗಳೂರಿನ ನಿರ್ವಹಣೆಗಾಗಿ ತುಂಬಾ ಹಿಂದೆಯೇ ಅನುಮೋದಿಸಲಾಗಿದ್ದ 'ಮಾಸ್ಟರ್ ಪ್ಲಾನ್-2015' ಕೊನೆಯ ಯೋಜನಾ ದಾಖಲೆಯಾಗಿದೆ. ಅದಕ್ಕಿಂತಲೂ ಹಿಂದೆ 'ಮಾಸ್ಟರ್ ಪ್ಲಾನ್-2005' ಇತ್ತು. ಇದರರ್ಥ ಇಷ್ಟೆ: ಬೆಂಗಳೂರು ಮಹಾನಗರವು 21ನೇ ಶತಮಾನದ ಸವಾಲುಗಳನ್ನು ಎದುರಿಸಲು 2000ರ ಆರಂಭದಲ್ಲಿ ರೂಪಿಸಿದ ಯೋಜನಾ ನಕ್ಷೆಯ ಮೇಲೆಯೇ ಇನ್ನೂ ಅವಲಂಬಿತವಾಗಿದೆ. ಪ್ರಸ್ತಾವಿತ 'ನವೀಕೃತ ಮಾಸ್ಟರ್ ಪ್ಲಾನ್-2031' ಅನ್ನು ತಾಂತ್ರಿಕ ಅಡ್ಡಿ ಹಾಗೂ ಸಾರ್ವಜನಿಕರ ಪ್ರತಿರೋಧದ ಕಾರಣದಿಂದ ವಾಪಸ್ ಪಡೆಯಲಾಗಿತ್ತು. 'ನವೀಕೃತ ಮಾಸ್ಟರ್ ಪ್ಲಾನ್-2041'ಕ್ಕೆ ಇದುವರೆಗೆ ಚಾಲನೆ ಸಿಕ್ಕಿಲ್ಲ. ಇಷ್ಟೊಂದು ಬೃಹತ್ ಗಾತ್ರದ ಮಹಾನಗರಕ್ಕೆ ನವೀಕೃತ ಯೋಜನಾ ನಕ್ಷೆಯೇ ಇಲ್ಲದಿರುವುದು ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ದ್ಯೋತಕ. ಮಾತ್ರವಲ್ಲ, ಆಡಳಿತದ ವೈಫಲ್ಯಕ್ಕೂ ಹಿಡಿದ ಕನ್ನಡಿ. ಈಗ ಸರ್ಕಾರ ಹೊಸದೊಂದು ಹಾದಿ ತುಳಿದಿದೆ. ಮುಂದಿನ ಸಮಗ್ರ ಯೋಜನಾ ನಕ್ಷೆ (ಸಿಎಂಪಿ) ಸಿದ್ಧಪಡಿಸುವ ಹೊಣೆಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ನಡುವೆ ಹಂಚಿಕೆ ಮಾಡಿದೆ. ಒಂದೇ ನಗರದ ಒಂದಕ್ಕೊಂದು ಹೊಂದಿಕೊಂಡ ಭಾಗಗಳಿಗೆ ಎರಡೂ ಪ್ರಾಧಿಕಾರಗಳು ಪರಸ್ಪರ ಪ್ರತ್ಯೇಕ ಯೋಜನೆಗಳನ್ನು ರೂಪಿಸುತ್ತಿವೆ. ಇದಲ್ಲದೆ, ಬೆಂಗಳೂರು–ಮೈಸೂರು ಮೂಲಸೌಕರ್ಯ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರವು (ಬಿಎಂಐಸಿಎಪಿಎ) ಕೂಡ ತನ್ನ ಸುಪರ್ದಿಯಲ್ಲಿರುವ 90 ಚದರ ಕಿ.ಮೀ. ವ್ಯಾಪ್ತಿಯ ಪ್ರದೇಶಕ್ಕೆ ಪ್ರತ್ಯೇಕ ಯೋಜನೆಯನ್ನು ಸಿದ್ಧಪಡಿಸುತ್ತಿದೆ. ಅಂದರೆ ಬೆಂಗಳೂರು ನಗರವು ಮೂರು ಪ್ರಾಧಿಕಾರಗಳಿಂದ ಸಿದ್ಧವಾದ ಮೂರು ಪ್ರತ್ಯೇಕ ಯೋಜನೆಗಳ ನಿಯಂತ್ರಣಕ್ಕೆ ಒಳಪಡಲಿದೆ. ಯಾವುದೇ ಸಮಗ್ರ ದೃಷ್ಟಿಕೋನವಿಲ್ಲದೆ ನಡೆದಿರುವ ಯೋಜನೆ ಸಿದ್ಧಪಡಿಸುವ ಈ ಪ್ರಕ್ರಿಯೆಯನ್ನು ಸುಧಾರಣೆ ಎನ್ನಲಾಗದು. ಬದಲಾಗಿ ಆಡಳಿತದ ಪುನರ್‌ರಚನೆ ವೇಷದಲ್ಲಿರುವ ಸಾಂಸ್ಥಿಕ ಅವ್ಯವಸ್ಥೆ ಎಂದೇ ಅರ್ಥೈಸಬೇಕಾಗುತ್ತದೆ.



ಬೆಂಗಳೂರು ಮಹಾನಗರಕ್ಕೆ ನವೀಕೃತ ಯೋಜನಾ ನಕ್ಷೆ ಇಲ್ಲದಿರುವುದು ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಆಡಳಿತ ವೈಫಲ್ಯದ ಸಂಕೇತ.

ಸಮಗ್ರ ದೃಷ್ಟಿಕೋನವಿಲ್ಲದ ತುಂಡು, ತುಂಡಾದ ಯೋಜನೆಗಳು ಅಪಾಯಕಾರಿ ಎನ್ನುವುದು ನಿಸ್ಸಂದೇಹ. 2007ರಲ್ಲಿ 110 ಹಳ್ಳಿಗಳನ್ನು ತೆಕ್ಕೆಗೆ ತೆಗೆದುಕೊಂಡ ನಗರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನೇನೋ (ಬಿಬಿಎಂಪಿ) ಪಡೆಯಿತು. ಹಳ್ಳಿಗಳು ಕಾಗದದಲ್ಲಿ ಒಂದಾದವೇ ಹೊರತು, ಯೋಜನೆಗಳ ವಿಷಯದಲ್ಲಿ ಪ್ರತ್ಯೇಕವಾಗಿಯೇ ಉಳಿದವು. ಮಹಾನಗರದಲ್ಲಿ ಒಂದಾದ ಈ ಹಳ್ಳಿಗಳಲ್ಲಿ ಕುಡಿಯುವ ನೀರಿನ ಪೂರೈಕೆ, ಒಳಚರಂಡಿ ವ್ಯವಸ್ಥೆ, ಸಮರ್ಪಕ ರಸ್ತೆ ಮತ್ತು ಮಳೆ ನೀರಿನ ಕಾಲುವೆ ಮೊದಲಾದ ಸೌಲಭ್ಯಗಳು ಮರೀಚಿಕೆಯಾದವು. ಯೋಜನಾ ಜವಾಬ್ದಾರಿಗಳು ಹರಿದು ಹಂಚಿ ಹೋಗಿದ್ದರಿಂದ ಯಾರಿಗೂ ಉತ್ತರದಾಯಿತ್ವವೇ ಇಲ್ಲವಾಯಿತು. ಆ ಛಿದ್ರಗೊಂಡ ವ್ಯವಸ್ಥೆಯ ಗುರುತುಗಳನ್ನು ನಗರದಲ್ಲಿ ಈಗಲೂ ಕಾಣಬಹುದು.

ಬೆಂಗಳೂರು ಮಹಾನಗರವು ಅನಿಯಂತ್ರಿತವಾಗಿ ಬೆಳೆಯುತ್ತಿದ್ದು, ನೆರೆಯ ಜಿಲ್ಲೆಗಳ ಪ್ರದೇಶಗಳೂ ನಗರದ ವಿಸ್ತರಿತ ಭಾಗಗಳಾಗಿ ಪರಿವರ್ತನೆ ಆಗುತ್ತಿರುವ ಈ ಹೊತ್ತಿನಲ್ಲಿ ಒಂದೊಂದು ಪ್ರಾಧಿಕಾರ ಒಂದೊಂದು ದೃಷ್ಟಿಕೋನದಿಂದ ಸಿಎಂಪಿಯನ್ನು ವ್ಯಾಖ್ಯಾನಿಸುವುದು ಗೊಂದಲಕ್ಕೆ ಕಾರಣವಾಗಲಿದೆ. ಸಂಚಾರ ದಟ್ಟಣೆ, ವಸತಿ ಸಮಸ್ಯೆ, ನಗರ ಮಹಾಪೂರದಂತಹ ಸಮಸ್ಯೆಗಳಿಗೆ ಪ್ರಾಧಿಕಾರದ ಸರಹದ್ದುಗಳು ಅನ್ವಯವಾಗುವುದಿಲ್ಲ. ಬೆಂಗಳೂರಿಗೆ ಬೇಕಾಗಿರುವುದು ಒಂದೇ ಪ್ರಾಧಿಕಾರದ ಉತ್ತರದಾಯಿತ್ವವನ್ನು ಹೊಂದಿದ ಒಂದು ನಗರ ಯೋಜನೆಯೇ ಹೊರತು ಹಲವು ಪ್ರಾಧಿಕಾರಗಳಿಂದಾದ ದಾಖಲೆಗಳ ತೇಪೆಯಲ್ಲ. ಒಂದೇ ಜವಾಬ್ದಾರಿಯನ್ನು ಹಲವು ಪ್ರಾಧಿಕಾರಗಳಿಗೆ ವಹಿಸಿಕೊಟ್ಟರೆ ವಿರೋಧಾಭಾಸಗಳಿಂದ ಕೂಡಿದ ವಲಯ ವರ್ಗೀಕರಣ ಮತ್ತು ಅನುಷ್ಠಾನ ಹಂತದ ಗೊಂದಲಕ್ಕೆ ಕಾರಣವಾಗುತ್ತದೆ. ಅಲ್ಲದೆ, ದೃಢವಾದ ಯೋಜನಾ ವಿನ್ಯಾಸಕ್ಕಿಂತ ತಾತ್ಕಾಲಿಕ ಪರಿಹಾರಗಳ ಕಡೆಗೆ ಒತ್ತು ನೀಡುತ್ತದೆ. ಹಿಂದಿನ ಹದಿನೈದು ವರ್ಷಗಳಿಗಿಂತಲೂ ಹೆಚ್ಚು ಸುಸಂಬದ್ಧವಾಗಿ, ಯೋಜಿತವಾಗಿ ಬೆಂಗಳೂರು ಮುಂದಿನ 30 ವರ್ಷಗಳಲ್ಲಿ ಬೆಳೆಯಬೇಕಾದರೆ ಮೊದಲು ಯೋಜನೆಗಳ ಈ 'ತುಂಡು ಗುತ್ತಿಗೆ'ಯನ್ನು ಬಿಟ್ಟುಕೊಡಬೇಕು. ಓಬಿರಾಯನ ಕಾಲದ ಯೋಜನೆಯನ್ನು ಇಟ್ಟುಕೊಂಡು ಬೆಂಗಳೂರು ನಾಳೆಗಳ ಹೆಜ್ಜೆ ಹಾಕಲು ಸಾಧ್ಯವಿಲ್ಲ. ಹೀಗಾಗಿ ಅದಕ್ಕೊಂದು ನವೀಕೃತ ಸಿಎಂಪಿ ಬೇಕೇಬೇಕು. ಈ ನಗರದ ಭವಿಷ್ಯವನ್ನು ತುಣುಕು ತುಣುಕಾಗಿ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಒಂದಾಗಿ ಯೋಜಿಸಿ ಕಾರ್ಯಗತಗೊಳಿಸಿದಾಗಲೇ ಅದು ಬೆಳಗಲು ಸಾಧ್ಯ.

ಒತ್ತುವರಿ ತೆರವುಗೊಳಿಸಿ...



ಕಂದಾಯ ಮತ್ತು ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಮೊದಲು ತಮ್ಮ ವ್ಯಾಪ್ತಿಯಲ್ಲಿರುವ ಸರ್ಕಾರಿ ಭೂಮಿಯ ಒತ್ತುವರಿ ತೆರವು ಮಾಡಿಸಿ ಆಸ್ತಿಯನ್ನು ರಕ್ಷಿಸಬೇಕು. ಅಧಿಕಾರಿಗಳ ಭ್ರಷ್ಟಾಚಾರ, ಅದಕ್ಷತೆ, ಲಂಚಕೋರತನದಿಂದಾಗಿ ಇಂದು ಊರೂರುಗಳಲ್ಲಿ ಜನ ಬಡಿದಾಡಿಕೊಂಡು ಸಾಯುತ್ತಿದ್ದಾರೆ.

ರವಿ ಕೃಷ್ಣಾರೆಡ್ಡಿ, ಗೌರವಾಧ್ಯಕ್ಷ, ಕೆಆರ್‌ಎಸ್ ರಾಜ್ಯ ಘಟಕ

ಕಿಡಿನುಡಿ



ಎಲ್ಲೆಡೆ ಅರಾಜಕತೆ ಸೃಷ್ಟಿಸುವುದೇ ಕಾಂಗ್ರೆಸ್‌ನ ಒಂದಂಶದ ದುರುದ್ದೇಶ. ದೇಶ, ವಿದೇಶಗಳಲ್ಲಿ ರಾಹುಲ್ ಗಾಂಧಿಯವರ ನುಡಿ–ನಡೆ– ಹಾವಭಾವ ಎಲ್ಲವೂ ಪ್ರಚೋದನಕಾರಿಯಾಗಿದೆ. ಒಬ್ಬ ವಿಫಲನಾಯಕನಿಂದ ಬೇರೇನು ಬಯಸಲು ಸಾಧ್ಯ?

ಎಸ್. ಸುರೇಶ್‌ಕುಮಾರ್, ಶಾಸಕ

25 ವರ್ಷಗಳ ಹಿಂದೆ

ಮಂಗಳವಾರ, 13-2-2001

• ದಳ ಧುರೀಣ ಜೀವರಾಜ್ ಆಳ್ವ ನಿಧನ

ಬೆಂಗಳೂರು, ಫೆ. 12– ರಾಜಕೀಯ ಸಂಘಟನಾ ಚತುರ ಎಂದೇ ಖ್ಯಾತರಾಗಿದ್ದ ಮಾಜಿ ಸಚಿವ ಹಾಗೂ ಜನತಾ ದಳ (ಯು) ಮುಖಂಡ ಡಾ. ಜೀವರಾಜ್ ಆಳ್ವ (54) ಇಂದು ಸಂಜೆ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಆರೋಗ್ಯ ಬಿಗಡಾಯಿಸಿದ ಹಿನ್ನೆಲೆಯಲ್ಲಿ ಅವರನ್ನು ನಿನ್ನೆ ಮಧ್ಯಾಹ್ನ ಖಾಸಗಿ ಆಸ್ಪತ್ರೆಗೆ ಸೇರಿಸಲಾಗಿತ್ತು. ಕೃತಕ ಉಸಿರಾಟ ವ್ಯವಸ್ಥೆಯಲ್ಲಿ ಚಿಕಿತ್ಸೆ ನೀಡುತ್ತಿದ್ದ ವೈದ್ಯರು ಇಂದು ಸಂಜೆ 6.30ರ ವೇಳೆಗೆ ಆಳ್ವ ಅವರು ಮೃತರಾದರು ಎಂದು ಪ್ರಕಟಿಸಿದರು.

• ಬಾಬ್ರಿ ಮಸೀದಿ: ಅಡ್ವಾಣಿ, ಜೋಷಿ, ಉಮಾ ವಿಚಾರಣಾ ಅಧಿಸೂಚನೆ ರದ್ದು

ಲಖನೌ, ಫೆ. 12 (ಪಿಟಿಐ)– ಅಯೋಧ್ಯೆಯ ಬಾಬ್ರಿ ಮಸೀದಿ ಧ್ವಂಸ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವರಾದ ಎಲ್.ಕೆ. ಅಡ್ವಾಣಿ, ಮುರಳಿ ಮನೋಹರ ಜೋಷಿ ಹಾಗೂ ಉಮಾ ಭಾರತಿ ಸೇರಿದಂತೆ ಎಂಟು ಮಂದಿ ಆರೋಪಿಗಳ ವಿಚಾರಣೆ ನಡೆಸುವಂತೆ ಹೊರಡಿಸಿರುವ ಅಧಿಸೂಚನೆ 'ದೋಷಪೂರಿತ' ಎಂದು ಹೇಳುವ ಮೂಲಕ ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠವು ಇಂದು ಅಧಿಸೂಚನೆಯನ್ನು ತಳ್ಳಿಹಾಕಿತು.

75 ವರ್ಷಗಳ ಹಿಂದೆ

ಮಂಗಳವಾರ, 13-2-1951

• ಭಾರತ–ಪಾಕ್ ವ್ಯಾಪಾರ ಮತ್ತೆ ಆರಂಭ ಸಂಭವ

ಮುಂಬಯಿ, ಫೆ. 12– ಬೇಗನೇ ಭಾರತ ಮತ್ತು ಪಾಕಿಸ್ತಾನದ ನಡುವಣ ವ್ಯಾಪಾರ ಪುನಃ ಆರಂಭವಾಗುವ ನಿರೀಕ್ಷೆ ತಮಗಿದೆ ಎಂದು ಕೇಂದ್ರದ ಕೈಗಾರಿಕೆ ಮತ್ತು ವಾಣಿಜ್ಯ ಸಚಿವ ಶ್ರೀ ಹರೆ ಕೃಷ್ಣ ಮೆಹತಾ ಅವರು ಈ ದಿನ ಪತ್ರಿಕಾಗೋಷ್ಠಿಯೊಂದರಲ್ಲಿ ತಿಳಿಸಿದರು.

ಹಾಗಾದಲ್ಲಿ ಭಾರತದ ಬಟ್ಟೆ ಕೈಗಾರಿಕೆಗೆ ಬೇಕಾದ ಒಂದೆರಡು ಲಕ್ಷ ಟನ್‌ಗಳಷ್ಟು ಹತ್ತಿ ಪಾಕಿಸ್ತಾನದಿಂದ ಬರುವ ನಿರೀಕ್ಷೆ ಇದೆಯೆಂದೂ ಅವರು ತಿಳಿಸಿದರು. ದೇಶದಲ್ಲಿ ಬಟ್ಟೆಯ ಬೆಲೆಯನ್ನು ಸ್ಥಿಮಿತದಲ್ಲಿ ಇಡಲು ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಹೈಡ್ರೋ ಸ್ಟೋರೇಜ್ ಪ್ರಸ್ತುತವೇ?



ವಿಶ್ಲೇಷಣೆ

ನಾರಾಯಣ ಮೂರ್ತಿ ಉಳಿಗೆರೆ

> ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಪರ–ವಿರೋಧದ ಚರ್ಚೆಗಳು ನಡೆಯುತ್ತಿವೆ. ಈ ಯೋಜನೆ ಪರಿಸರದ ಮೇಲೆ ಉಂಟುಮಾಡುವ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವ ಪ್ರಯತ್ನಗಳೂ ನಡೆದಿವೆ. ಈ ಚರ್ಚೆಗಳ ಜೊತೆಗೆ, 'ಪಂಪ್ಡ್ ಹೈಡ್ರೋ ಸ್ಟೋರೇಜ್' ಎನ್ನುವ ಪರಿಕಲ್ಪನೆಯೇ ಈಗ ಅಪ್ರಸ್ತುತವಾಗಿದೆ ಹಾಗೂ ಬಿಳಿ ಆನೆಯಾಗಿದೆ ಎನ್ನುವುದನ್ನು ಗಮನಿಸಬೇಕು.

ಸಾಮಾನ್ಯವಾಗಿ ರಾತ್ರಿ ಸಮಯದಲ್ಲಿ ಹೆಚ್ಚಿನ ಕುಟುಂಬಗಳು ನಿದ್ರಾಸ್ಥಿತಿಯಲ್ಲಿ ಇರುವುದರಿಂದ ಹಾಗೂ ಕೈಗಾರಿಕಾ ಚಟುವಟಿಕೆಗಳು ಕಡಿಮೆ ಪ್ರಮಾಣದಲ್ಲಿ ಇರುವುದರಿಂದ ವಿದ್ಯುತ್ ಬೇಡಿಕೆಯೂ ಇಳಿಯುತ್ತದೆ. ಆದರೆ, ವಿದ್ಯುತ್ ಬೇಡಿಕೆ ಕಡಿಮೆಯಾಗಿದೆ ಎಂಬ ಕಾರಣಕ್ಕೆ ವಿದ್ಯುತ್ ಸ್ಥಾವರಗಳನ್ನು ರಾತ್ರಿ ಸಮಯದಲ್ಲಿ ಸಂಪೂರ್ಣವಾಗಿ ಸ್ಥಗಿತಗೊಳಿಸಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲೇ ಕೆಲವು ಪಾಶ್ಚಾತ್ಯ ರಾಷ್ಟ್ರಗಳು ರೂಪಿಸಿಕೊಂಡ ಪರಿಕಲ್ಪನೆಯೇ 'ಪಂಪ್ಡ್ ಹೈಡ್ರೋ ಸ್ಟೋರೇಜ್ ಯೋಜನೆ'.

ವಿದ್ಯುತ್ ಬೇಡಿಕೆ ಕಡಿಮೆ ಇರುವ ಸಮಯದಲ್ಲಿ ಲಭ್ಯವಾಗುವ ಹೆಚ್ಚುವರಿ ವಿದ್ಯುತ್ ಬಳಸಿ, ಕೆಳಭಾಗಕ್ಕೆ ಹರಿದ ನೀರನ್ನು ಮರುಪಂಪ್ ಮಾಡಿ ಜಲಾಶಯಕ್ಕೆ ಪೂರೈಸಲಾಗುತ್ತದೆ. ನಂತರ ಬೇಡಿಕೆ ಹೆಚ್ಚಾದ ಸಮಯದಲ್ಲಿ ಆ ನೀರಿನಿಂದ ವಿದ್ಯುತ್ ಉತ್ಪಾದಿಸಲಾಗುತ್ತದೆ. ಇಲ್ಲಿ ಒಂದು ಮೂಲಭೂತ ಸಂಗತಿಯನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು: ಪಂಪ್ಡ್ ಸ್ಟೋರೇಜ್ ಯೋಜನೆ ಹೊಸದಾಗಿ ವಿದ್ಯುತ್ ಉತ್ಪಾದಿಸುವ ಯೋಜನೆಯಲ್ಲ; ಬದಲಾಗಿ ಈಗಾಗಲೇ ಉತ್ಪಾದಿಸಿದ ವಿದ್ಯುತ್‌ಗೆ ಬಳಸಿದ ನೀರನ್ನು ಮೇಲಕ್ಕೆತ್ತುವ ವ್ಯವಸ್ಥೆ ಮಾತ್ರ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ರಾತ್ರಿ ಸಮಯದಲ್ಲಿ ವಿದ್ಯುತ್ ಅಗ್ಗವಾಗಿದ್ದು, ಹಗಲು ಸಮಯದಲ್ಲಿ ಅದು ಹೆಚ್ಚು ದುಬಾರಿ ಆಗಿರುವುದರಿಂದ ಉಂಟಾಗುತ್ತಿದ್ದ ಬೆಲೆಯ ವ್ಯತ್ಯಾಸವೇ ಈ ಯೋಜನೆಗೆ ಮೂಲ ಆಧಾರವಾಗಿತ್ತು. ಈ ತರ್ಕ ಹಲವು ದಶಕಗಳವರೆಗೆ ಪರಿಣಾಮಕಾರಿಯಾಗಿ ಕೆಲಸ ಮಾಡಿತು; ಆದರೆ, ಇಂದಿನ ಪರಿಸ್ಥಿತಿ ಸಂಪೂರ್ಣವಾಗಿ ಬದಲಾಗಿದೆ.

ಪ್ರಸ್ತುತ ಚೀನಾ ದೇಶದಂತೆ ವಿಶ್ವದಲ್ಲೇ ಅತ್ಯಂತ ಕಡಿಮೆ ವೆಚ್ಚದಲ್ಲಿ ಸೌರ ವಿದ್ಯುತ್ ಉತ್ಪಾದಿಸುವ ದೇಶಗಳಲ್ಲಿ ಭಾರತವೂ ಸೇರಿದೆ. ಪ್ರತಿ ಯೂನಿಟ್‌ಗೆ ಸರಾಸರಿ ₹2ರಿಂದ ₹2.5 ದರದಲ್ಲಿ ಸೌರ ವಿದ್ಯುತ್ ಲಭ್ಯವಾಗುತ್ತಿದೆ. ಇದು ಕಲ್ಲಿದ್ದಲು ಆಧಾರಿತ ವಿದ್ಯುತ್‌ಗಿಂತಲೂ ಅಗ್ಗವಾಗಿದೆ ಎಂಬುದನ್ನು ಗಮನಿಸಬೇಕು.

ಒಂದು ಸಾವಿರ ಮೆಗಾವಾಟ್ ಸಾಮರ್ಥ್ಯದ ಸೌರ ವಿದ್ಯುತ್ ಕೇಂದ್ರ ಸ್ಥಾಪಿಸಲು ಅಂದಾಜು ₹3,500 ಕೋಟಿ ವೆಚ್ಚವಾಗುತ್ತದೆ. ಆದರೆ, ಪಂಪ್ಡ್ ಸ್ಟೋರೇಜ್ ಯೋಜನೆಗಳಿಗೆ ₹10 ಸಾವಿರ ಕೋಟಿಗಿಂತ ಹೆಚ್ಚಿನ ಮೊತ್ತ ಬೇಕಾಗುತ್ತದೆ; ವಾಸ್ತವದಲ್ಲಿ ಇದು ₹13 ಸಾವಿರದಿಂದ ₹15 ಸಾವಿರ ಕೋಟಿಗೆ ತಲಪುವ ಸಾಧ್ಯತೆಯೂ ಇದೆ. ಅಷ್ಟೇ ಹಣದಲ್ಲಿ, ಹೆಚ್ಚು ಬಿಸಿಲು ಬೀಳುವ ಉತ್ತರ ಕರ್ನಾಟಕದಂತಹ ಪ್ರದೇಶಗಳಲ್ಲಿ 3ರಿಂದ 4 ಸಾವಿರ ಮೆಗಾವಾಟ್ ಸಾಮರ್ಥ್ಯದ ಸೌರ ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸಬಹುದು. ಈ ಸೌರ ವಿದ್ಯುತ್ ಕೇಂದ್ರಗಳು ಸಮಗ್ರ ಉತ್ಪಾದನಾ ದಕ್ಷತೆಯ ಆಧಾರದಲ್ಲಿಯೇ ಕಾರ್ಯನಿರ್ವಹಿಸಿದರೂ, 2 ಸಾವಿರ ಮೆಗಾವಾಟ್‌ಗಿಂತ ಹೆಚ್ಚಿನ ನೈಜ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಹೊಂದಿರುತ್ತವೆ. ಇಲ್ಲಿ ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ಮುಖ್ಯ ಅಂಶವೆಂದರೆ, ಪಂಪ್ಡ್ ಸ್ಟೋರೇಜ್ ಯೋಜನೆ ಹೊಸದಾಗಿ ಯಾವುದೇ ವಿದ್ಯುತ್ ಉತ್ಪಾದಿಸುವುದಿಲ್ಲ. ಜೊತೆಗೆ, ಪಂಪ್ಡ್ ಸ್ಟೋರೇಜ್ ಯೋಜನೆಗಳ ವಾರ್ಷಿಕ ನಿರ್ವಹಣಾ ವೆಚ್ಚ ಹೆಚ್ಚು ಹಾಗೂ ಅನುಷ್ಠಾನಕ್ಕೆ ಕನಿಷ್ಠ 8ರಿಂದ 10 ವರ್ಷ ಬೇಕಾಗುತ್ತದೆ. ಜಲಾಶಯಗಳು ಈಗಾಗಲೇ ಸಂಪೂರ್ಣ ಮಟ್ಟದಲ್ಲಿ ತುಂಬಿರುವ ಸಂದರ್ಭಗಳಲ್ಲಿ, ಪಂಪ್ಡ್ ಸ್ಟೋರೇಜ್‌ನಿಂದ ಪಡೆಯಬಹುದಾದ ಹೆಚ್ಚುವರಿ ಪ್ರಯೋಜನವೂ ತೀರಾ ಸೀಮಿತವಾಗಿರುತ್ತದೆ.

ಇಲ್ಲಿ ಇನ್ನೊಂದು ಅತ್ಯಂತ ಮಹತ್ವದ ಪ್ರಶ್ನೆಯನ್ನು ನಾವು ಗಮನಿಸಲೇಬೇಕು; ಅದು ಅವಕಾಶ ವೆಚ್ಚ. ಪಂಪ್ಡ್ ಸ್ಟೋರೇಜ್‌ಗೆ ಖರ್ಚಾಗುವ ₹10 ಸಾವಿರದಿಂದ ₹15 ಸಾವಿರ ಕೋಟಿಯನ್ನು ರಾಜ್ಯದ ವಿದ್ಯುತ್ ವ್ಯವಸ್ಥೆಯ ಇತರೆ ತುರ್ತು ಅಗತ್ಯಗಳಿಗೆ ಬಳಸಿದರೆ, ಹೆಚ್ಚು ವ್ಯಾಪಕ ಮತ್ತು ದೀರ್ಘಕಾಲಿಕ ಲಾಭ ಸಾಧ್ಯ. ಇದೇ ಮೊತ್ತವನ್ನು ವಿದ್ಯುತ್ ಜಾಲದ ಆಧುನೀಕರಣ, ಮನೆಯ ತಾರಸಿ ಮೇಲೆ ಸೌರ ಫಲಕ ಅಳವಡಿಕೆ ಮತ್ತು ಸಂಗ್ರಹಣಾ ವ್ಯವಸ್ಥೆಗಳು, ವಿದ್ಯುತ್ ವಾಹನಗಳ ಚಾರ್ಜಿಂಗ್ ಮೂಲಸೌಕರ್ಯ ಹಾಗೂ ಗ್ರಾಮೀಣ ಫೀಡರ್‌ಗಳ ಬಲವರ್ಧನೆಗೆ ಬಳಸಿದರೆ, ವಿದ್ಯುತ್ ನಷ್ಟ ಕಡಿಮೆಯಾಗುವುದರ ಜೊತೆಗೆ ವ್ಯವಸ್ಥೆಯ ವಿಶ್ವಾಸಾರ್ಹತೆ ಮತ್ತು ಶಕ್ತಿ ಭದ್ರತೆ ಎರಡೂ ಗಣನೀಯವಾಗಿ ಹೆಚ್ಚಾಗುತ್ತವೆ.

ಇಂಧನ ತಂತ್ರಜ್ಞಾನದಲ್ಲಿನ ಹೊಸ ಕ್ರಾಂತಿಯನ್ನು ಬಳಸಿಕೊಂಡು, ವಿದ್ಯುತ್ ಜಾಲವನ್ನು ಆಧುನೀಕರಿಸುವುದು ಸದ್ಯದ ತುರ್ತು. ಇಂದು ಇಂಧನ ಸಂಗ್ರಹಣಾ ತಂತ್ರಜ್ಞಾನಗಳು ಅತ್ಯಂತ ವೇಗವಾಗಿ ಅಭಿವೃದ್ಧಿಯಾಗುತ್ತಿವೆ. ದೊಡ್ಡ ಬ್ಯಾಟರಿಗಳು, ಹೈಡ್ರೋಜನ್ ಆಧಾರಿತ ಸಂಗ್ರಹಣೆ ಹಾಗೂ 'ಲಿಥಿಯಂ ಅಲ್ಲದ' ಹೊಸ ತಲೆಮಾರಿನ ತಂತ್ರಜ್ಞಾನಗಳು ಹೆಚ್ಚು ಸುರಕ್ಷಿತ ಮತ್ತು ಪರಿಣಾಮಕಾರಿಯಾಗಿವೆ. ಇವುಗಳ ಬೆಲೆ ನಿರಂತರವಾಗಿ ಇಳಿಯುತ್ತಿದ್ದು, ವಾಣಿಜ್ಯ ಬಳಕೆಗೆ ವೇಗವಾಗಿ ಲಭ್ಯವಾಗುತ್ತಿವೆ.


ಇಂಧನ ತಂತ್ರಜ್ಞಾನದಲ್ಲಿ ನಡೆಯುತ್ತಿರುವ ಮುಂದಿನ ಹಂತದ ಸಂಶೋಧನೆಗಳು ನಮ್ಮ ಮುಂದೆ ಹೊಸ ಸಾಧ್ಯತೆಗಳ ಬಾಗಿಲು ತೆರೆದಿವೆ. ಚಿಕ್ಕದಾಗಿ ವಿನ್ಯಾಸಗೊಳಿಸಲಾದ, ಸುಮಾರು ಲ್ಯಾಪ್‌ಟಾಪ್ ಗಾತ್ರದ ಅತ್ಯಂತ ಸುರಕ್ಷಿತ ನ್ಯೂಕ್ಲಿಯರ್ ರಿಯಾಕ್ಟರ್‌ಗಳು ಯಾವುದೇ ವಾಯುಮಾಲಿನ್ಯವಿಲ್ಲದೆ ನಗರಗಳಿಗೆ ನಿರಂತರವಾಗಿ, ಹಲವಾರು ದಿನಗಳಿಂದ ವರ್ಷಗಟ್ಟಲೆ ವಿದ್ಯುತ್ ಪೂರೈಸುವ ಸಾಮರ್ಥ್ಯ ಹೊಂದಿವೆ. ಇಂತಹ ತಂತ್ರಜ್ಞಾನಗಳ ಪರೀಕ್ಷೆಗಳು ಈಗಾಗಲೇ ಹಲವು ದೇಶಗಳಲ್ಲಿ ಅಂತಿಮ ಹಂತದಲ್ಲಿದ್ದು, ಈ ವಿದ್ಯಮಾನ ಭವಿಷ್ಯದ ಇಂಧನ ವ್ಯವಸ್ಥೆ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂಬುದನ್ನು ಸ್ಪಷ್ಟವಾಗಿ ಸೂಚಿಸುವಂತಿದೆ.

ರಾಜ್ಯದ ವಿದ್ಯುತ್ ಜಾಲವು ಹಳೆಯದಾಗಿದ್ದು, ನಷ್ಟವು ಶೇ 10ರಿಂದ ಶೇ 14ರವರೆಗೆ ಇರಬಹುದೆಂದು ಅಂದಾಜು ಮಾಡಲಾಗಿದೆ. ಸ್ಮಾರ್ಟ್ ಸ್ವಯಂಚಾಲಿತ ವ್ಯವಸ್ಥೆಗಳು, ವಿಕೇಂದ್ರೀಕೃತ ಸಂಗ್ರಹ, ಕೃತಕ ಬುದ್ಧಿಮತ್ತೆ ಆಧಾರಿತ ಲೋಡ್ ನಿರ್ವಹಣೆ ಮತ್ತು ಬಲಿಷ್ಠ ಪ್ರಸರಣ ಜಾಲಗಳು ವಿದ್ಯುತ್ ವ್ಯರ್ಥವಾಗುವುದನ್ನು ತಡೆಯುವಲ್ಲಿ ಪಂಪ್ಡ್ ಸ್ಟೋರೇಜ್‌ಗಿಂತಲೂ ಹೆಚ್ಚು ಪರಿಣಾಮಕಾರಿ ಆಗಿವೆ.

ರಾತ್ರಿ ವಿದ್ಯುತ್ ಈಗ ಅಗ್ಗವಾಗಿ ಉಳಿದಿಲ್ಲ, ಉಳಿಕೆಯೂ ಅಲ್ಲ ಎನ್ನುವುದನ್ನು ನಾವು ಗಮನಿಸಬೇಕು. ಪಂಪ್ಡ್ ಸ್ಟೋರೇಜ್ ಹಿಂದಿರುವ ಮತ್ತೊಂದು ಪ್ರಮುಖ ಕಲ್ಪನೆಯೂ ಭಾರತದಲ್ಲಿ ನಿಧಾನವಾಗಿ ಕುಸಿಯುತ್ತಿದೆ. ರಾತ್ರಿ ವೇಳೆಯ ವಿದ್ಯುತ್ ಬೇಡಿಕೆ ಈಗಲೂ ಕಡಿಮೆ ಇರಬಹುದು; ಆದರೆ, ವಿದ್ಯುತ್ ಚಾಲಿತ ಬಸ್‌ಗಳು, ಕಾರುಗಳು, ಚಾರ್ಜಿಂಗ್ ಕೇಂದ್ರಗಳು ಹಾಗೂ 24 ಗಂಟೆ ಕಾರ್ಯ ನಿರ್ವಹಿಸುವ ಸ್ವಯಂಚಾಲಿತ ಮತ್ತು ಕೃತಕ ಬುದ್ಧಿಮತ್ತೆ ಆಧಾರಿತ ಕೈಗಾರಿಕೆಗಳು ರಾತ್ರಿ ವಿದ್ಯುತ್ ಬಳಕೆಯನ್ನು ವೇಗವಾಗಿ ಹೆಚ್ಚಿಸುತ್ತಿವೆ. ಅಮೆರಿಕದಲ್ಲಿ ಈ ಬದಲಾವಣೆ ಈಗಾಗಲೇ ಸಂಭವಿಸಿದ್ದು, ಹಗಲು ಮತ್ತು ರಾತ್ರಿ ವಿದ್ಯುತ್ ಬೆಲೆಗಳ ನಡುವಿನ ವ್ಯತ್ಯಾಸ ಗಣನೀಯವಾಗಿ ಕಡಿಮೆಯಾಗಿದೆ. ಭಾರತವೂ ಇದೇ ದಿಕ್ಕಿನಲ್ಲಿ ಸಾಗುತ್ತಿದೆ. ಹಾಗಾಗಿ, ಇನ್ನು ಕೆಲವೇ ವರ್ಷಗಳಲ್ಲಿ ಪಂಪ್ಡ್ ಸ್ಟೋರೇಜ್‌ನ ಮೂಲ ಆರ್ಥಿಕ ತರ್ಕವೇ ಪ್ರಶ್ನಾರ್ಥಕವಾಗಲಿದೆ.

ಆರ್ಥಿಕ ಲೆಕ್ಕಾಚಾರಕ್ಕಿಂತಲೂ ಪಂಪ್ಡ್ ಸ್ಟೋರೇಜ್ ಯೋಜನೆಗಳ ಪರಿಸರ ಪರಿಣಾಮ ಅತ್ಯಂತ ಗಂಭೀರವಾಗಿದೆ. ಅದು ಅಲಕ್ಷಿಸಲು ಸಾಧ್ಯವಿಲ್ಲದ ಮಟ್ಟಗಿನ ಪರಿಸರ ಹಾನಿಯಾಗಿದೆ. ಪ್ರಸ್ತಾವಿತ ಯೋಜನಾ ಪ್ರದೇಶಗಳು ಪಶ್ಚಿಮಘಟ್ಟದಂತಹ ಅತಿ ಸೂಕ್ಷ್ಮ ಪರಿಸರ ವಲಯಗಳಲ್ಲಿ ಇದ್ದು, ವೈವಿಧ್ಯಮಯ ಅರಣ್ಯ, ಜೀವವೈವಿಧ್ಯ ಮತ್ತು ನಾಜೂಕಾದ ಭೌಗೋಳಿಕ ರಚನೆಯನ್ನು ಹೊಂದಿವೆ. ಮೃದು ಮಣ್ಣಿನ ಗುಡ್ಡ–ಪರ್ವತ ಪ್ರದೇಶಗಳಲ್ಲಿ ಸುರಂಗ ತೋಡುವುದು ಮತ್ತು ಸ್ಫೋಟ ಕಾರ್ಯಗಳನ್ನು ನಡೆಸುವುದು ಭೂಕುಸಿತದ ಅಪಾಯವನ್ನು ಹೆಚ್ಚಿಸುತ್ತದೆ. ಶರಾವತಿ ಹಿನ್ನೀರಿನಂತಹ ಪ್ರದೇಶಗಳು ಈಗಾಗಲೇ ಹಲವು ಯೋಜನೆಗಳಿಂದ ಒತ್ತಡದಲ್ಲಿದ್ದು, ಇಂತಹ ಹೆಚ್ಚುವರಿ ಹಸ್ತಕ್ಷೇಪವು ಮಳೆ, ಜಲಾನಯನ ಮತ್ತು ಪರಿಸರ ಸ್ಥಿರತೆಯ ಮೇಲೆ ದೂರಗಾಮಿ ಪರಿಣಾಮ ಬೀರುವ ಸಾಧ್ಯತೆಯನ್ನು ಹೆಚ್ಚಿಸುತ್ತದೆ.

ಪಂಪ್ಡ್ ಸ್ಟೋರೇಜ್‌ಗೆ ಪರ್ಯಾಯಗಳು ಈಗಾಗಲೇ ನಮ್ಮ ಮುಂದೆ ಸ್ಪಷ್ಟವಾಗಿ ಲಭ್ಯವಿವೆ. ದೀರ್ಘಕಾಲಿಕ ಮತ್ತು ಭಾರೀ ವಿದ್ಯುತ್ ಯೋಜನೆಗಳನ್ನು ಇಂದಿನ ವೆಚ್ಚ ಮತ್ತು ಇಂದಿನ ತಂತ್ರಜ್ಞಾನಗಳ ಸೀಮಿತ ಚೌಕಟ್ಟಿನಲ್ಲಿ ಮಾತ್ರ ಅಳೆಯುವುದರಿಂದ ಭವಿಷ್ಯದ ಅಗತ್ಯಗಳನ್ನು ನಾವು ಕಾಣದೆ ಬಿಡುವ ಅಪಾಯವಿದೆ. ಇಂತಹ ಯೋಜನೆಗಳ ಮೌಲ್ಯಮಾಪನವನ್ನು ನಾಳೆಯ ಪ್ರಾಸಂಗಿಕತೆ, ತಾಂತ್ರಿಕ ಪ್ರಗತಿ ಮತ್ತು ಬದಲಾಗುತ್ತಿರುವ ಇಂಧನ ಬಳಕೆಯ ಮಾದರಿಗಳ ಆಧಾರದ ಮೇಲೆ ಮಾಡಬೇಕು. ಈ ಮೌಲ್ಯಮಾಪನದಲ್ಲಿ ಆರ್ಥಿಕತೆ, ಪರಿಸರ ಸಂರಕ್ಷಣೆ, ಮುಂದಿನ ತಲೆಮಾರಿನ ತಂತ್ರಜ್ಞಾನಗಳು ಹಾಗೂ ಜಾಗತಿಕ ಅನುಭವಗಳನ್ನು ಸಮಗ್ರವಾಗಿ ಪರಿಗಣಿಸುವುದು ಅಗತ್ಯ. ಇವೆಲ್ಲವೂ ಒಂದೇ ದಿಕ್ಕನ್ನು ಸ್ಪಷ್ಟವಾಗಿ ಸೂಚಿಸುತ್ತಿರುವಾಗ, ಆ ದಿಕ್ಕನ್ನು ನಿರ್ಲಕ್ಷಿಸುವುದು ಪ್ರಗತಿಯ ಸಂಕೇತವಲ್ಲ; ಅದು ಭವಿಷ್ಯದ ಹೊಣೆಗಾರಿಕೆಯನ್ನು ಕಡೆಗಣಿಸುವ ವಿವೇಕಹೀನ ನಿರ್ಧಾರವಾಗುತ್ತದೆ. ನಾಳೆಯ ಅಗತ್ಯಗಳನ್ನು ಅರಿತು, ಇಂದಿನ ತೀರ್ಮಾನಗಳನ್ನು ಕೈಗೊಳ್ಳುವ ಧೈರ್ಯವೇ ಪ್ರಗತಿಯ ನಿಜವಾದ ಮಾನದಂಡ ಆಗಬೇಕು. ಈ ಅರಿವು 'ಶರಾವತಿ ಪಂಪ್ಡ್ ವಾಟರ್ ಸ್ಟೋರೇಜ್' ಯೋಜನೆಯ ವಕ್ತಾರರದೂ ಆಗಬೇಕು.



ವಾಚಕರ ವಾಣಿ

ನಾಯಕತ್ವ ಗೊಂದಲ: ಜನಹಿತ ಕಡೆಗಣನೆ

ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವ ಕುರಿತಾದ ಚರ್ಚೆಗಳು ಮತ್ತು ಹೈಕಮಾಂಡ್‌ನ ಸರಣಿ ನಿರ್ದೇಶನಗಳು ಆಡಳಿತದ ಮೇಲೆ ಪ್ರಭಾವ ಬೀರುತ್ತಿವೆ. ರಾಜ್ಯ ಹಲವಾರು ದೈನಂದಿನ ಪ್ರಗತಿಯ ಸವಾಲುಗಳನ್ನು ಎದುರಿಸುತ್ತಿದೆ. ಇಂತಹ ಸಂದರ್ಭದಲ್ಲಿ ಅಧಿಕಾರದ ಹಂಚಿಕೆ ಕುರಿತಾದ ಅಸ್ಪಷ್ಟತೆಯು ಜನಕಲ್ಯಾಣ ಕಾರ್ಯಕ್ರಮಗಳಿಂದ ಗಮನವನ್ನು ಬೇರೆಡೆಗೆ ಸೆಳೆಯುತ್ತಿದೆ. ಪಕ್ಷದ ಆಂತರಿಕ ಬೆಳವಣಿಗೆಗಳಿಗಿಂತ ಸಮರ್ಥ ಆಡಳಿತವೇ ಸರ್ಕಾರದ ಆದ್ಯತೆಯಾಗಬೇಕು. ಹಾಗಾಗಿ, ಹೈಕಮಾಂಡ್ ಮಧ್ಯಪ್ರವೇಶಿಸಿ ಜವಾಬ್ದಾರಿಗಳನ್ನು ವಿಂಗಡಿಸುವ ಮೂಲಕ ಆಡಳಿತಾತ್ಮಕ ಸ್ಥಿರತೆ ಕಾಪಾಡಬೇಕಿದೆ. ಜನಸಾಮಾನ್ಯರು ಮತ ನೀಡಿದ್ದು ಸ್ಥಿರ ಮತ್ತು ಅಭಿವೃದ್ಧಿಶೀಲ ಸರ್ಕಾರಕ್ಕಾಗಿ ಎಂಬುದು ನೆನಪಿರಲಿ. ಪಕ್ಷದ ಆಂತರಿಕ ವಿಷಯಗಳಿಗಿಂತ ಜನಹಿತಕ್ಕೆ ಮನ್ನಣೆ ದೊರೆತಾಗಷ್ಟೆ ಕರ್ನಾಟಕದ ಪ್ರಗತಿ ಸಾಧ್ಯ.

ಆನಂದ ಜೇವೂರ್, ಕಲಬುರಗಿ

ದೇವದಾಸಿಯರಿಗೆ ಪ್ಯಾಕೇಜ್ ಸ್ತುತ್ಯರ್ಹ

ಮಾಜಿ ದೇವದಾಸಿಯರಿಗೆ ಪ್ಯಾಕೇಜ್ ಘೋಷಣೆಗೆ ನಿರ್ಧರಿಸಿರುವ ಸರ್ಕಾರದ ಕ್ರಮ ಸ್ವಾಗತಾರ್ಹ. ಮೂರು ತಲೆಮಾರಿನ ಕುಟುಂಬದ ಸದಸ್ಯರನ್ನು ಸಮೀಕ್ಷೆಯಲ್ಲಿ ಸೇರಿಸಿದ ನಡೆಯೂ ಸ್ತುತ್ಯರ್ಹ. ದೇವರ ಹೆಸರಿನಲ್ಲಿ ಮಹಿಳೆಯರನ್ನು ವೇಶ್ಯಾವಾಟಿಕೆಗೆ ತಳ್ಳುವುದು ನಡೆದೇ ಇದೆ. ಇಂತಹ ಕುಕೃತ್ಯ ತಡೆಗಟ್ಟಲು ಮಾಜಿ ದೇವದಾಸಿಯರ ಸಂಘಟನೆಗಳು ಟೊಂಕಕಟ್ಟಿ ನಿಲ್ಲಬೇಕಿದೆ. ದೇವದಾಸಿಯರ ಕುರಿತು ಸರ್ಕಾರ ಎರಡು ಬಾರಿ ಸಮೀಕ್ಷೆ ನಡೆಸಿದಾಗ ತಾಯಿಯ ಹೆಸರು ಸೇರ್ಪಡೆಯಾದರೆ ಮಗಳ ಹೆಸರು ಸೇರಿರಲಿಲ್ಲ. ಮಗಳ ಹೆಸರು ಸೇರಿಸಿದರೆ ತಾಯಿಯ ಹೆಸರು ಸೇರಿರಲಿಲ್ಲ. ಕೆಲವರಂತೂ ಗೋವಾ, ಮಹಾರಾಷ್ಟ್ರಕ್ಕೆ ಗುಳೆ ಹೋಗಿದ್ದರಿಂದ ಸಮೀಕ್ಷೆಯಿಂದ ಹೊರಗುಳಿಯಲು ಕಾರಣವಾಗಿತ್ತು. ಸರ್ಕಾರವು ದೇವದಾಸಿ ಕುಟುಂಬದ ಸದಸ್ಯರನ್ನು ಮುನ್ನೆಲೆಗೆ ತಂದು ಅಭ್ಯುದಯಕ್ಕೆ ನೆರವಾಗಬೇಕಿದೆ.

ಚಂದ್ರಶೇಖರ ಎಸ್. ಚಿನಕೇಕರ, ಚಿಕ್ಕೋಡಿ

ಪರೀಕ್ಷೆ ಒತ್ತಡ ಬೇಡ; ಒತ್ತಾಸೆ ಇರಲಿ

ಎಲ್ಲೆಡೆ ಈಗ ಪರೀಕ್ಷಾ ಸಮಯ. ಪೋಷಕರಿಗೂ ಇದು ನಿಜವಾದ ಪರೀಕ್ಷೆ. ಹಾಗಾಗಿ, ಮಕ್ಕಳ ಮೇಲೆ ಒತ್ತಡ ಹಾಕಿ ಮಾನಸಿಕವಾಗಿ ಕುಗ್ಗುವಂತೆ ಮಾಡುತ್ತಿದ್ದಾರೆ. ಸ್ನೇಹಿತರ ಮಕ್ಕಳು ವೈದ್ಯರು, ಎಂಜಿನಿಯರ್ ಆಗಿದ್ದಾರೆ; ನೀನು ಹಾಗೆ ಓದಬೇಕು ಎಂದು ಒತ್ತಡ ಹೇರುತ್ತಿದ್ದಾರೆ. ಇಂದಿನ ಕೃತಕ ಬುದ್ಧಿಮತ್ತೆ ಯುಗದಲ್ಲಿ ಮಕ್ಕಳ ಮೇಲೆ ಅನಗತ್ಯವಾಗಿ ಒತ್ತಡ ಹೇರುವ ಅಗತ್ಯವಿಲ್ಲ. ಅವರ ಬುದ್ಧಿಗೆ ಅನುಸಾರ ಜೀವನ ರೂಪಿಸಿಕೊಳ್ಳುವ ಬಗ್ಗೆ ಅವರಿಗೆ ತಿಳಿದಿರುತ್ತದೆ. ಅವರಿಗೆ ಮಾನಸಿಕ ಧೈರ್ಯ ತುಂಬುವುದಷ್ಟೆ ಪೋಷಕರ ಕೆಲಸವಾಗಬೇಕಿದೆ. ಅಂಕಗಳಿಂದ ಮಕ್ಕಳ ಬುದ್ಧಿಮತ್ತೆಯನ್ನು ಅಳೆಯಬಾರದು. ಬೇರೆ ಮಕ್ಕಳ ಜೊತೆಗೆ ಹೋಲಿಕೆಯೂ ಸರಿಯಲ್ಲ. ಇದು ಅವರ ಬೆಳವಣಿಗೆಯ ಮೇಲೆ ಪರಿಣಾಮ ಬೀರಲಿದೆ. ಪರೀಕ್ಷೆಗೆ ಮಕ್ಕಳನ್ನು ತಯಾರು ಮಾಡುವಲ್ಲಿ ಪೋಷಕರ ಸಹಕಾರ ಅಗತ್ಯ.

ಎ.ಸಿ. ಪುಷ್ಪ, ಬೆಂಗಳೂರು

ದುಂದುವೆಚ್ಚ: ಆರ್ಥಿಕ ವ್ಯವಸ್ಥೆಗೆ ಮಾರಕ

ನಿಗಮ, ಮಂಡಳಿ ಹಾಗೂ ಪ್ರಾಧಿಕಾರಗಳ ಅಧ್ಯಕ್ಷರಿಗೆ ಬೇಕಾಬಿಟ್ಟಿಯಾಗಿ ಸಚಿವ ಸ್ಥಾನಮಾನ ಹಂಚಿಕೆ ಮಾಡಿರುವುದು ಸರಿಯಲ್ಲ. ಈ ಕುರಿತ ಸಂಪಾದಕೀಯ (ಪ್ರ.ವಾ., ಫೆ. 12) ಸಮಯೋಚಿತವಾಗಿದೆ. ಸಾರ್ವಜನಿಕರಿಂದ ಸಂಗ್ರಹವಾದ ತೆರಿಗೆ ಹಣವನ್ನು ಬಳಸುವಾಗ ಸರ್ಕಾರಕ್ಕೆ ವಿವೇಚನೆ ಮತ್ತು ವಿವೇಕ ಇರಬೇಕು. ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿನಿಯೋಗಿಸಬೇಕಾದ ಹಣವನ್ನು ದುಂದುವೆಚ್ಚ ಮಾಡುವುದು ರಾಜ್ಯದ ಅರ್ಥ ವ್ಯವಸ್ಥೆಗೆ ಮಾರಕವಾಗಲಿದೆ. ಸರ್ಕಾರದ ನಡೆ ಅವೈಜ್ಞಾನಿಕವಾದುದು. ಗ್ಯಾರಂಟಿ ಯೋಜನೆಗಳಿಗೆ ಸಂಪನ್ಮೂಲ ಕ್ರೋಡೀಕರಿಸುವುದರಲ್ಲೇ ಸರ್ಕಾರ ಹೈರಾಣಾಗಿದೆ. ಇದರಿಂದ ಅಭಿವೃದ್ಧಿ ಕೆಲಸಕ್ಕೆ ಹಿನ್ನಡೆಯಾಗಿರುವುದು ಸ್ಪಷ್ಟ. ತೆರಿಗೆ ಹಣದ ಬಳಕೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕಿದೆ.

ಎ.ವಿ. ಶಾಮರಾವ್, ಬೆಂಗಳೂರು

ರಾಜಕೀಯ ಲಾಭಕ್ಕೆ ಅಸ್ಪೃಶ್ಯತೆ ಜೀವಂತ

ಅಸ್ಪೃಶ್ಯತೆಯು ಒಂದು ಸಾಮಾಜಿಕ ಕಳಂಕ. ಸಮಾಜ ಎಷ್ಟೇ ಮುಂದುವರಿದಿದ್ದರೂ ಈ ಅನಿಷ್ಟ ಪದ್ಧತಿ ಇನ್ನೂ ಜೀವಂತವಾಗಿದೆ. ಶರಣರು ತಮ್ಮ ವಚನಗಳ ಮೂಲಕ ಅಸ್ಪೃಶ್ಯತೆಯ ಮೂಲೋತ್ಪಾಟನೆಗೆ ಶ್ರಮಿಸಿದರು. ಆದರೆ, ಇಂದಿನ ರಾಜಕೀಯ ಧುರೀಣರು ತಮ್ಮ ಅಸ್ತಿತ್ವದ ಉಳಿವು ಮತ್ತು ರಾಜಕೀಯ ಲಾಭಕ್ಕಾಗಿ ಅಸ್ಪೃಶ್ಯತೆಯನ್ನು ಜೀವಂತವಾಗಿಟ್ಟಿದ್ದಾರೆ. ಶಿವಶರಣರ ಧರ್ಮದ ಬದಲು ವರ್ಣಾಶ್ರಮ ಧರ್ಮ ಉಳಿಸಿ ಬೆಳೆಸಲು ಶತಪ್ರಯತ್ನ ಮಾಡುತ್ತಿರುವುದು ಕುಚೋದ್ಯ. ಸಮಾಜದಲ್ಲಿ ಅಸ್ಪೃಶ್ಯತೆ ವಿರುದ್ಧ ಜಾಗೃತಿ ಮೂಡಿಸುವ ಕೆಲಸಕ್ಕೆ ಸರ್ಕಾರ ಮುಂದಾಗಬೇಕಿದೆ.


ಪುಟ್ಟಮಾದಯ್ಯ ಎಚ್.ಎಂ., ಮೈಸೂರು

ಆಹಾರದ ಅಪಹಾಸ್ಯ: ವಿಕೃತಿಯ ಪ್ರತೀಕ

ಬೀದಿಬದಿಯ ಹೋಟೆಲ್ ವ್ಯಾಪಾರಿಯೊಬ್ಬ ಪೂರಿಯನ್ನು ತನ್ನ ಹೊಟ್ಟೆಯ ಮೇಲೆ ಹಾಕಿಕೊಂಡು ಅದನ್ನು ಎಣ್ಣೆಯಲ್ಲಿ ಕರಿದ ನಂತರ ಗ್ರಾಹಕರಿಗೆ ನೀಡುತ್ತಾನೆ; ಏನೂ ಅರಿಯದ ಅವರು ತಿನ್ನುತ್ತಾರೆ– ಆಹಾರವನ್ನೇ ಅಪಹಾಸ್ಯ ಮಾಡುವ ಇಂತಹ ಸಾವಿರಾರು ಎ.ಐ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಮನುಷ್ಯ ಆಹಾರವಿಲ್ಲದೆ ಬದುಕಲಾರ. ಆದರೆ, ಆಹಾರದ ಬಗ್ಗೆ ಅಪಹಾಸ್ಯ ಮಾಡುವುದು ವಿಕೃತ ಮನಃಸ್ಥಿತಿಯಲ್ಲದೆ ಬೇರೇನೂ ಅಲ್ಲ. ಇಂತಹ ಎ.ಐ ವಿಡಿಯೊಗಳಿಂದ ಮುಂದಿನ ಪೀಳಿಗೆಗೆ ನೀಡುವ ಸಂದೇಶವಾದರೂ ಏನು ಎಂಬುದು ಸೃಷ್ಟಿಕರ್ತರಿಗೆ ಅರ್ಥವಾಗದಿರುವುದು ದುರದೃಷ್ಟಕರ. ಸಮಾಜದ ಸ್ವಾಸ್ಥ್ಯ ಹದಗೆಡಿಸುವಂತಹ ವಿಡಿಯೊಗಳನ್ನು ಸೃಷ್ಟಿಸುವವರಿಗೆ ಕಾನೂನಿನ ಮೂಗುದಾರ ಹಾಕಬೇಕಿದೆ.

ಮುರುಗೇಶ ಡಿ., ದಾವಣಗೆರೆ

ಚುರುಮುರಿ



ಒಂದು ಸೋಪಿನ ಕತೆ!

• ಬಿ.ಎನ್. ಮಲ್ಲೇಶ್

'ಲೇ ತೆಪರ, ನಿನ್ ಸ್ನಾನದ ಸೋಪು ಯಾವುದಲೆ?' ಹರಟೆಕಟ್ಟೆಯಲ್ಲಿ ದುಬ್ಬೀರ ಕೇಳಿದ.

'ನಂದಾ... ಸಿನಿಮಾ ತಾರೆಯರ ಸೌಂದರ್ಯ ಸಾಬೂನು...' ಎಂದ ತೆಪರೇಸಿ.

'ಹೌದಾ? ಆದ್ರೂ ಎಷ್ಟ್ ಖರಾಬದೀಯಲ್ಲಲೆ, ಎಷ್ಟು ದಿನಕ್ಕೊಂದ್ಸಲ ಸ್ನಾನ ಮಾಡ್ತೀಯ?'

'ಅಂದ್ರೇ ನೀವೇನು ಬೆಳ್ಳಗೆ ಹೊಳೀತಿದೀರ? ನಿಮ್ ಮುಸುಡಿ ಕನ್ನಡೀಲಿ ನೋಡ್ಕಂಡಿದೀರ?' ತೆಪರೇಸಿ ಸಿಟ್ಟಾದ.

'ಹೋಗ್ಲಿ, ಇನ್ಮೇಲೆ ಮೈಸೂರ್ ಸ್ಯಾಂಡ್ಲು ಹಚ್ಕಾ, ತಮ್ಮಣ್ಣ ತರ ಲಕಲಕ ಅಂತೀಯ...' ಗುಡ್ಡೆ ನಕ್ಕ.

'ಲೇಯ್, ಅದು ತಮ್ಮಣ್ಣ ಅಲ್ಲ, ತಮನ್ನಾ... ನಿನ್ ಬಾಯಲ್ಲಿ ನೂರು ಸಲ 'ವಂದೇ ಮಾತರಂ' ಹೇಳಿಸ್ಬೇಕು ನೋಡು, ಆಗ ನಿನ್ ನಾಲಿಗಿ ಶುದ್ಧ ಆಗ್ತತಿ...'

'ಅಲ್ಲ, ಆ ಸೋಪ್‌ನ ನಮ್ ಮಂಜಮ್ಮ ಹಚ್ಕಂಡ್ರೆ ಸಿನಿಮಾ ಹೀರೊಯಿನ್ ಆಗಬೋದಾ?' ದುಬ್ಬೀರ ಮೆಲ್ಲಗೆ ಕಾಲೆಳೆದ.

'ಏಯ್, ನನ್ನ ತಂಟೆಗೆ ಬರಬ್ಯಾಡ್ರಿ, ಕರ್‍ರಗಿರೋರನ್ನ ಬೆಳ್ಳಗೆ ಮಾಡೋ ಸೋಪು ಜಗತ್ತಲ್ಲಿ ಯಾವುದೂ ಇಲ್ಲ, ಸುಮ್ನೆ ಚಾ ಕುಡಿದು ಎದ್ದೋಗಿ' ಎಂದಳು ಮಂಜಮ್ಮ.

'ಅದಿರ್ಲಿ, ಮೈ ಸೋಪಿನ ತರ ಬಾಯಿ ಸೋಪು ಅಂತ ಎಲ್ಲೂ ಇಲ್ವಾ?' ಕೊಟ್ರೇಶಿ ಕೊಕ್ಕೆ.

'ಬಾಯಿ ಸೋಪಾ? ಯಾಕೆ?'

'ಇದ್ದಿದ್ರೆ ಹೊಲಸು ಮಾತಾಡೋ ನಮ್ ರಾಜಕಾರಣಿಗಳ ಬಾಯಿ ತೊಳೀಬೋದಿತ್ತು ಅಂತ...'

'ನಿನ್ತೆಲಿ, ಅವರ ಹೊಲಸು ಬಾಯಿ ತೊಳಿಯೋದು ಯಾವ ಸೋಪ್‌ನಿಂದಾನೂ ಸಾಧ್ಯ ಇಲ್ಲ' ಎಂದ ಗುಡ್ಡೆ.

'ಅವರ ಬಾಯಿ ತೊಳಿಯೋದು ಹಂಗಿರ್ಲಿ, ರಾತ್ರಿ ಸೆರೆ ಕುಡಿದು ನಿನ್ ಬಾಯಿ ಹೊಲಸಾಗಿರುತ್ತಲ್ಲ, ಮೊದ್ಲು ಅದನ್ನ ತೊಳ್ಕಾ' ಎಂದಳು ಮಂಜಮ್ಮ.

'ಒನ್ ಮಿನಿಟ್... ದುಬ್ಬೀರ, ನಿಮ್ಮ ಪೇಸ್ಟಿನಲ್ಲಿ ಫೆವಿಕಾಲ್ ಇದೆಯೆ?'

'ಫೆವಿಕಾಲಾ? ಯಾಕೆ?' ದುಬ್ಬೀರ ಕೇಳಿದ.

'ಇದ್ದಿದ್ರೆ ಈ ಮಂಜಮ್ಮ ಮಾತಾಡದಂಗೆ ಬಾಯಿ ಬಂದ್ ಮಾಡಬೋದಿತ್ತು...'

ಗುಡ್ಡೆ ಕೀಟಲೆಗೆ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಮಕ್ಕಳ ಮಾನಸ ಸರೋವರದಲ್ಲಿ ಸುನಾಮಿ

ಎಳೆಯ ಮನಸ್ಸುಗಳ ಮೇಲಿನ ಮಾತಿನ ದಾಳಿ ಪರಿಣಾಮ ಘೋರವಾಗಿರುತ್ತದೆ. ಈ ಆಘಾತ ಜೀವನದುದ್ದಕ್ಕೂ ಮಕ್ಕಳ ಮನಸ್ಸನ್ನು ಗಾಯದಂತೆ ಕಾಡಬಹುದು.

• ಮನಸಾ ನಾಗಭೂಷಣಂ

ಮಕ್ಕಳನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ಶಿಕ್ಷಿಸುವುದು ಸಹಜ ಮತ್ತು ನ್ಯಾಯಸಮ್ಮತವೆಂದು ಸಮಾಜ ಒಪ್ಪಿಕೊಂಡಿದ್ದ ಕಾಲವೊಂದಿತ್ತು. ನಾನು ಓದುತ್ತಿದ್ದ ಪ್ರತಿಷ್ಠಿತ ಆಂಗ್ಲ ಶಾಲೆಯೊಂದರಲ್ಲಿ, ತಪ್ಪು ಮಾಡಿದ ಮಕ್ಕಳನ್ನು ಬೆತ್ತಲೆ ಮಾಡಿ, ತರಗತಿಯಿಂದ ತರಗತಿಗೆ ಕಳುಹಿಸುವ ಶಿಕ್ಷೆ ಸಾಮಾನ್ಯವಾಗಿತ್ತು. ಪ್ರತಿ ತರಗತಿಗೆ ಅವರು ಕಾಲಿಟ್ಟಾಗ ಉಳಿದ ಮಕ್ಕಳು ಒಕ್ಕೊರಲಿನಲ್ಲಿ 'ಶೇಮ್... ಶೇಮ್...' ಎಂದು ಹಾಡುತ್ತಿದ್ದರು. ದೊಣ್ಣೆಯ ಪೆಟ್ಟಿನ ಶಿಕ್ಷೆಯೂ ಸಿಗುತ್ತಿತ್ತು.

ದೇಹಕ್ಕೆ ಆಗುವ ನೋವು ಕ್ಷಣಿಕವಾಗಿರಬಹುದು. ಆದರೆ, ಮನಸ್ಸಿಗೆ ಆಗುವ ಅವಮಾನ ಮೌನವಾಗಿ ಒಳಗೆ ಇಳಿದು ಬೇರು ಬಿಡುತ್ತಿತ್ತು. ಒಮ್ಮೆ ಈ ರೀತಿಯ ಶಿಕ್ಷೆಗೆ ಒಳಗಾದ ಮಕ್ಕಳು ನಂತರವೂ ಸಹಪಾಠಿಗಳಿಂದ ಪದೇ ಪದೇ ಅವಹೇಳನಕ್ಕೆ ಒಳಗಾಗುತ್ತಿದ್ದರು. ಅವರನ್ನು ನೋಡುವ ದೃಷ್ಟಿಯೇ ಬದಲಾಗುತ್ತಿತ್ತು. ಆ ದೃಷ್ಟಿಯಲ್ಲಿ ಕರುಣೆ ಇರುತ್ತಿರಲಿಲ್ಲ, ತಿರಸ್ಕಾರ ಮತ್ತು ತಮಾಷೆ ಇರುತ್ತಿತ್ತು. ಆ ಅವಮಾನ ಮಗುವಿನ ಆತ್ಮಸ್ಥೈರ್ಯವನ್ನು ಕುಗ್ಗಿಸುತ್ತಿತ್ತು.

ನಾನೊಮ್ಮೆ ನ್ಯೂರೊ ಲಿಂಗ್ವಿಸ್ಟಿಕ್ ಪ್ರೋಗ್ರಾಮಿಂಗ್ (ಎನ್‌ಎಲ್‌ಪಿ) ಪ್ರಯೋಗಿಸುವ ಒಬ್ಬ ಜೀವನ ಮಾರ್ಗದರ್ಶಕರನ್ನು ಭೇಟಿ ಮಾಡಿದ್ದೆ. ಅವರು ಮನಸ್ಸಿನೊಳಗೆ ಹುದುಗಿಕೊಂಡಿರುವ ಭಯ, ತಪ್ಪುಕಲ್ಪನೆಗಳು ಮತ್ತು ನೋವಿನ ನೆನಪುಗಳನ್ನು ಗುರುತಿಸಿ, ವ್ಯಕ್ತಿಯನ್ನು ಮಾನಸಿಕ ಖಿನ್ನತೆಯಿಂದ ಹೊರತರುವ ಕೆಲಸ ಮಾಡುತ್ತಿದ್ದರು. ಮಾತುಕತೆಯ ನಡುವೆ ಅವರು, ನನ್ನ ಬಳಿ ಬರುವ ನೂರು ಪ್ರಕರಣಗಳಲ್ಲಿ ಶೇ 99ರಷ್ಟು ಜನರ ಸಮಸ್ಯೆಗಳ ಮೂಲವು ಅವರ ಶಾಲಾ ದಿನಗಳಲ್ಲಿಯೇ ಇರುತ್ತದೆ ಎಂದರು. ಕೆಲವರು, ಸ್ನೇಹಿತರು ಅಥವಾ ಸಹಪಾಠಿಗಳಿಂದ ನಿರಂತರ ಅವಮಾನಕ್ಕೆ ಗುರಿಯಾಗಿದ್ದರೆ, ಇನ್ನೂ ಕೆಲವರು ಶಿಕ್ಷಕರಿಂದ ತಾರತಮ್ಯ ಮತ್ತು ಮಾನಸಿಕ ಹಿಂಸೆಗೆ ಒಳಗಾಗಿರುತ್ತಾರೆ. ಕೆಲವು ಮಕ್ಕಳು ಚಿಕ್ಕವಯಸ್ಸಿನಲ್ಲೇ ಆತ್ಮಹತ್ಯೆ ಪ್ರಯತ್ನ ಮಾಡಿರುತ್ತಾರೆ.



ಕಹಿ ಅನುಭವಗಳು ಕಾಲದೊಂದಿಗೆ ಮಾಯವಾಗುವುದಿಲ್ಲ. ವ್ಯಕ್ತಿ ದೊಡ್ಡವನಾದ ಮೇಲೂ, ಅನೈಚ್ಛಿಕವಾಗಿ, ತನ್ನ ಇಂದಿನ ಬದುಕಿನ ಸಂದರ್ಭಗಳಿಗೆ ಹಳೆಯ ಪಾತ್ರಗಳು ಮತ್ತು ನೋವಿನ ಅನುಭವಗಳನ್ನು ಅಳವಡಿಸಿಕೊಳ್ಳುತ್ತಾನೆ. ನಾವು ಇಂದು ಮನೆಯಲ್ಲೋ, ಕಚೇರಿಯಲ್ಲೋ ಅಥವಾ ಸಮಾಜದಲ್ಲೋ ಅದೇ ಪಾತ್ರಗಳನ್ನು ಜೋಡಿಸಿಕೊಳ್ಳುತ್ತೇವೆ. ಆಗ ಬಾಲ್ಯದಲ್ಲಿ ಅನುಭವಿಸಿದ ಅದೇ ಭಯ, ಅದೇ ಒತ್ತಡ, ಅದೇ ಖಿನ್ನತೆ ಮತ್ತೆ ಜೀವಂತವಾಗುತ್ತದೆ. ಪರಿಸ್ಥಿತಿ ಬದಲಾಗಿರಬಹುದು, ಆದರೆ ಮನಸ್ಸಿನ ಪ್ರತಿಕ್ರಿಯೆ ಬದಲಾಗುವುದಿಲ್ಲ.

ಇಂದು ದೈಹಿಕ ಶಿಕ್ಷೆಗೆ ಶಾಲೆಗಳಲ್ಲಿ ಅವಕಾಶವಿಲ್ಲ. ಹಾಗೆಂದು, ಹಿಂಸೆ ಸಂಪೂರ್ಣವಾಗಿ ನಿಂತಿದೆಯೇ? ರೂಪ ಬದಲಾಗಿದೆ ಅಷ್ಟೇ. ಇಂದಿನ ದಿನಗಳಲ್ಲಿ, ವಿಶೇಷವಾಗಿ ಸೋಷಿಯಲ್ ಮೀಡಿಯಾದಲ್ಲಿ ಬಾಡಿ ಶೇಮಿಂಗ್ ಎಂಬುದು ಚರ್ಚೆಯ ವಿಷಯವಾಗಿದೆ. ಸಣ್ಣ, ದಪ್ಪ, ಕಪ್ಪು, ಬಿಳಿ, ಎತ್ತರ, ಕುಳ್ಳ, ಮಿತಿ ಮೀರಿದ ಬೆಳವಣಿಗೆ, ತುಂಬಾ ಪೀಚಾಗಿರುವುದು –ಇಂತಹ ಪದಗಳು ಸಾಮಾನ್ಯ ಮಾತಿನಂತೆ ಬಳಕೆಯಾಗುತ್ತಿವೆ. ಇವು ಮಕ್ಕಳನ್ನು ಅಳೆಯುವ ಮಾನದಂಡ ಆಗುವುದು ಆತಂಕಕಾರಿ ವಿಷಯ. ಇಂಥ ಮಾತುಗಳು ಮಕ್ಕಳ ಮನಸ್ಸಿನ ಮೇಲೆ ಬೀರುವ ಪರಿಣಾಮ ಸಾಮಾನ್ಯವಲ್ಲ.

ಒಂದು ಕ್ಷಣದ ಟಿಪ್ಪಣಿ, ಒಂದು ನಗೆಚಟಾಕಿ ಅಥವಾ ಯಾರೋ ಮಾಡಿದ ತಮಾಷೆ, ಒಂದು ಮಗುವಿನ ಆತ್ಮಸ್ಥೈರ್ಯವನ್ನು ಮೌನವಾಗಿ ಕುಗ್ಗಿಸಿಬಿಡುತ್ತದೆ. ಅಂದು ತರಗತಿಗಳಲ್ಲಿ ನಡೆದ ಅವಮಾನಗಳು ಹೇಗೆ ಜೀವನಪೂರ್ತಿ ಮನಸ್ಸಿನಲ್ಲಿ ಉಳಿಯುತ್ತಿದ್ದವೋ, ಅದೇ ರೀತಿ ಇಂದು ಡಿಜಿಟಲ್ ಜಗತ್ತಿನಲ್ಲಿ ನಡೆಯುವ ಬಾಡಿ ಶೇಮಿಂಗ್ ಕೂಡ ಮಕ್ಕಳನ್ನು ಮಾನಸಿಕವಾಗಿ ಕುಗ್ಗಿಸುತ್ತದೆ. ವ್ಯತ್ಯಾಸ ಇಷ್ಟೇ– ದೌರ್ಜನ್ಯ ಎಸಗುವವರು ಅಂದು ಕೈಯಲ್ಲಿ ದೊಣ್ಣೆ ಹಿಡಿದಿದ್ದರು, ಇಂದು ಕೀಬೋರ್ಡ್ ಹಿಡಿದಿದ್ದಾರೆ.

ಮಕ್ಕಳು ತಮ್ಮದೇ ದೇಹವನ್ನು, ತಮ್ಮದೇ ಅಸ್ತಿತ್ವವನ್ನು ತಿರಸ್ಕರಿಸುವ ಹಂತಕ್ಕೆ ತಲಪುವಾಗ, ಅದು ಬರೀ ವೈಯಕ್ತಿಕ ಸಮಸ್ಯೆಯಾಗಿ ಉಳಿಯುವುದಿಲ್ಲ. ಅದು ನಮ್ಮ ಸಮಾಜದ ಸಂವೇದನಾಶೀಲತೆಯ ಕೊರತೆಯ ಪ್ರತಿಬಿಂಬವಾಗುತ್ತದೆ. ದೇಹದ ಬಣ್ಣ, ಆಕಾರ, ಬೆಳವಣಿಗೆ, ಕೂದಲಿನ ಬಣ್ಣ, ಕನ್ನಡಕ, ಹಲ್ಲು –ಇವು ದೇಹ ಬೆಳವಣಿಗೆಯ ಸಹಜ ಭಾಗಗಳು; ಎಲ್ಲರೂ ಒಂದೇ ರೀತಿ ಇರುವುದಿಲ್ಲ. ಅವು ಮೌಲ್ಯಮಾಪನದ ಮಾನದಂಡಗಳಲ್ಲ. ಆದರೆ ನಾವು ಅರಿವಿಲ್ಲದೆ, ನಗುತ್ತಾ, ತಮಾಷೆ ಮಾಡುತ್ತಾ, ಮಕ್ಕಳ ಮನಸ್ಸಿನಲ್ಲಿ ಹೀನಭಾವನೆಗಳನ್ನು ಬಿತ್ತುತ್ತೇವೆ.

ಮಕ್ಕಳನ್ನು ಅರ್ಥಮಾಡಿಕೊಂಡು ಅವರ ಬದುಕನ್ನು ಸರಿಯಾದ ದಿಕ್ಕಿನಲ್ಲಿ ರೂಪಿಸುವ ಜವಾಬ್ದಾರಿ ತಾಯ್ತಂದೆ ಮತ್ತು ಶಿಕ್ಷಕರ ಮೇಲಷ್ಟೇ ಇಲ್ಲ, ಸಮಾಜದ ಮೇಲು ಇದೆ. ಕುಟುಂಬ, ಶಾಲೆ, ಸ್ನೇಹವಲಯ ಮತ್ತು ಸೋಷಿಯಲ್ ಮೀಡಿಯಾ, ಎಲ್ಲವೂ ಮಕ್ಕಳ ಮಾನಸಿಕ ಬೆಳವಣಿಗೆಯಲ್ಲಿ ಪಾತ್ರವಹಿಸುತ್ತವೆ. ಯಾರೋ ಎಂದೋ ಮಾಡಿದ ಒಂದು ಅವಮಾನ ಜೀವನವನ್ನೇ ಮಸುಕಾಗಿಸಬಹುದು.

ನಾವು ಕೈಯಲ್ಲಿ ದೊಣ್ಣೆ ಹಿಡಿಯದೇ ಇರಬಹುದು. ಆದರೆ, ಸಂವೇದನಾಶೀಲರಾಗದೇ ಇದ್ದಾಗ ನಮ್ಮ ಮಾತುಗಳ ಮೂಲಕ ಅದೆಷ್ಟೋ ಮನಸ್ಸುಗಳನ್ನು ಗಾಯಗೊಳಿಸುತ್ತಲೇ ಇರುತ್ತೇವೆ. ಮಕ್ಕಳಿಗೆ ಸುರಕ್ಷಿತ, ಗೌರವಪೂರ್ಣ ಮತ್ತು ಆತ್ಮಸ್ಥೈರ್ಯ ತುಂಬಿದ ಬದುಕನ್ನು ನೀಡಬೇಕೆಂದರೆ, ಬದಲಾವಣೆ ನಮ್ಮ ಮಾತಿನಿಂದಲೇ ಆರಂಭವಾಗಬೇಕು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಬೆಂಗಳೂರು: ಯೋಜನೆಗಳಿಗೆ ಬೇಕು ದಿಕ್ಕು–ದೆಸೆ

• ಶ್ರೀ ಡಿ.ಎನ್.

ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಎರಡೂ ಬೆಂಗಳೂರು ನಗರದ ಅಭಿವೃದ್ಧಿಯ ಹೊಣೆ ಹೊತ್ತಿವೆ. ನಗರದ ಅಭಿವೃದ್ಧಿಗೆ ಇವೆರಡರ ಕಾರ್ಯ, ಎರಡರ ನಡುವಿನ ಸಮನ್ವಯ ಬಹಳ ಮುಖ್ಯವಾದುದು. ಆದರೆ, ಎರಡರ ಪರಿಕಲ್ಪನೆ ಮತ್ತು ಕಾರ್ಯವಿಧಾನದಲ್ಲಿ ಕೆಲವು ತೊಡಕುಗಳಿವೆ. ಈ ಕುರಿತು ನಗರ ಯೋಜನಾ ತಜ್ಞರ ಅಭಿಪ್ರಾಯಗಳನ್ನೊಳಗೊಂಡ ವರದಿ ಇಲ್ಲಿದೆ

ಬೆಂಗಳೂರು ನಗರವು ವರ್ಷಗಳಿಂದಲೂ ನಿರ್ಮಾಣ ಮತ್ತು ಮರುನಿರ್ಮಾಣಗೊಳ್ಳುತ್ತಲೇ ಇದೆ. ಪ್ರಸ್ತುತ ನಗರದ ಅಭಿವೃದ್ಧಿಗೆ ಆಧಾರವಾಗಿರುವುದು 2015ರ ಪರಿಷ್ಕೃತ ಮಾಸ್ಟರ್ ಪ್ಲಾನ್ (ಆರ್‌ಎಂಪಿ). ಅದು ಬಿಡುಗಡೆಯಾಗಿದ್ದು 2007ರಲ್ಲಿ. ಅದಕ್ಕೂ ಹಿಂದೆಯೇ ಅದರ ತಯಾರಿ ನಡೆದಿತ್ತು. ಅಂದರೆ, ಎರಡು ದಶಕಗಳಷ್ಟು ಹಳೆಯ ಯೋಜನೆಯ ಆಧಾರದಲ್ಲಿ ನಗರದ ಅಭಿವೃದ್ಧಿ ನಡೆಯುತ್ತಿದೆ.

ಮುಂದಿನ ಮಾಸ್ಟರ್ ಪ್ಲಾನ್, ಆರ್‌ಎಂಪಿ 2031ರ ಅಧಿಸೂಚನೆ ಪ್ರಕಟವಾಗಿದ್ದು 2020ರಲ್ಲಿ. ಆದರೆ, ನಾಗರಿಕರ ಜೊತೆಗಿನ ಸಮಾಲೋಚನೆಯ ಕೊರತೆ, ನ್ಯಾಯಾಲಯದಲ್ಲಿನ ಪ್ರಕರಣಗಳು ಮುಂತಾದ ಪ್ರಕ್ರಿಯಾ ಸಮಸ್ಯೆಗಳು ಅದಕ್ಕೆ ಅಡ್ಡಿಯಾದವು. ಎಲ್ಲಕ್ಕಿಂತ ಹೆಚ್ಚಾಗಿ, ರಾಜಕೀಯ ಮತ್ತು ಆಡಳಿತಾತ್ಮಕ ಆದ್ಯತೆಗಳು ಬದಲಾದ ಕಾರಣದಿಂದ ಸರ್ಕಾರವು ಅದನ್ನು ರದ್ದುಪಡಿಸಿತು. ನಗರವನ್ನು ವಿಭಾಗಿಸುವ ಪ್ರಕ್ರಿಯೆ ಆರಂಭವಾಯಿತು. ಅದು ಈಗ ಪೂರ್ಣಗೊಂಡಿದೆ.

ಇತ್ತೀಚೆಗೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರವು (ಜಿಬಿಎ) ನಗರ ಕೇಂದ್ರಭಾಗದ ಯೋಜನೆ ರೂಪಿಸಿದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಜಿಬಿಎ ಸುತ್ತಲಿನ ಉಂಗುರಾಕಾರದ ಪ್ರದೇಶ ಅಭಿವೃದ್ಧಿಗೆ ಯೋಜನೆ ರೂಪಿಸುತ್ತಿದೆ. ಈ ಮೂಲಕ ರಾಜ್ಯ ಸರ್ಕಾರವು ನಗರದ ಮಾಸ್ಟರ್ ಪ್ಲಾನ್ ವಿಷಯವನ್ನು ಮತ್ತೊಮ್ಮೆ ಮುನ್ನೆಲೆಗೆ ತಂದಿದೆ.

ಆದಾಗ್ಯೂ, ಇದು ಸರಿಯಾದ ದಿಕ್ಕಿನಲ್ಲಿ ನಡೆಯುತ್ತಿದೆಯೇ?

‘ಅದು ಹೇಗೆ ಸರಿಯಾದ ದಿಕ್ಕಿನಲ್ಲಿದೆ’ ಎಂದು ಪ್ರಶ್ನಿಸುತ್ತಾರೆ ಸಿಟಿಜನ್ ಆ್ಯಕ್ಷನ್ ಫೋರಂನ ಸಂಸ್ಥಾಪಕರಾದ ವಿಜಯನ್ ಮೆನನ್. ‘ಬೆಂಗಳೂರಿನಲ್ಲಿ ನಾವು ಬಿಡಿಎ ಯೋಜನೆಗಳು, ಸರ್ಕಾರದ ಯೋಜನೆಗಳು ಎಲ್ಲವನ್ನೂ ರೂಪಿಸಿದೆವು. ಆದರೆ, ನಾವು ಸಂವಿಧಾನದ ಪ್ರಕಾರ ಯೋಜನೆಗಳನ್ನು ರೂಪಿಸಲಿಲ್ಲ. ಅಂದರೆ, ಜನಪ್ರತಿನಿಧಿಗಳ ಸಂಸ್ಥೆಯ ಅಡಿ ಯೋಜನೆಗಳನ್ನು ರೂಪಿಸಲಿಲ್ಲ. ಜಿಬಿಎ ಜನಪ್ರತಿನಿಧಿಗಳನ್ನು ಒಳಗೊಂಡ ಸಂಸ್ಥೆ ಅಲ್ಲ; ಅದು ರಾಜ್ಯ ಸರ್ಕಾರದ ಒಂದು ಸಂಸ್ಥೆ. ಅದರಲ್ಲಿ ಜನರಿಂದ ಆಯ್ಕೆ ಆದ ಸದಸ್ಯರು ಇರುವುದಿಲ್ಲ. ಇರುವುದು, ಐವರು ಮೇಯರ್‌ಗಳು. ಜತೆಗೆ ಮುಖ್ಯಮಂತ್ರಿಯ ಉಸ್ತುವಾರಿ’ ಎನ್ನುತ್ತಾರೆ ವಿಜಯನ್.

‘ರಾಜ್ಯದ ಐದನೇ ಹಣಕಾಸು ಸಮಿತಿಯು ಜಿಬಿಎ ಅನ್ನು ಜನಪ್ರತಿನಿಧಿಗಳು ಇರುವ ಮಹಾನಗರ ಪಾಲಿಕೆ ಎಂದು ಅಂಗೀಕರಿಸಿಲ್ಲ. ಸಮಿತಿಯು ಅದಕ್ಕೆ ಅನುದಾನವನ್ನೂ ನೀಡುವುದಿಲ್ಲ. ಹಣವು ಐದು ಪಾಲಿಕೆಗಳಿಗೆ ಹೋಗುತ್ತದೆಯೇ ವಿನಾ ಜಿಬಿಎಗೆ ಅಲ್ಲ. ಹಾಗಿದ್ದರೆ, ಅವರು ಎಲ್ಲಿಂದ ಹಣಕಾಸು ಪಡೆಯುತ್ತಾರೆ’ ಎನ್ನುವುದು ಅವರ ಪ್ರಶ್ನೆ.


‘ಇಂಥವೇ ಅನೇಕ ಗೊಂದಲಗಳಿವೆ. ಜಿಬಿಎ ಕಾಯ್ದೆಯ ಪ್ರಕಾರ, ಜಿಬಿಎಯು ಯೋಜನೆಗಳನ್ನು ರೂಪಿಸುವ ಪ್ರಾಧಿಕಾರವಾಗಿದೆ. ಆದರೆ, ಮೆಟ್ರೊಪಾಲಿಟನ್ ಪ್ಲಾನಿಂಗ್ ಕಮಿಟಿ (ಎಂಪಿಸಿ) ಕರಡು ಯೋಜನೆಯನ್ನು ರೂಪಿಸುತ್ತದೆ. ಯೋಜನೆ ರೂಪಿಸುವುದಕ್ಕೆ ಸಂಬಂಧಿಸಿದ ಈ ಅಂಶವನ್ನು ನಾವು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದೇವೆ’ ಎಂದರು.

ಬೇಕಿರುವುದು ತಳಮಟ್ಟದ ಯೋಜನೆಗಳು

‘ಸಂವಿಧಾನದ ಪ್ರಕಾರ, ನಗರದ ಯೋಜನೆಗಳನ್ನು ಎಂಪಿಸಿ ಮಾಡಬೇಕು. ಪಾಲಿಕೆಗಳು ಐದು ಇರಬಹುದು. ಆದರೆ, ಎಂಪಿಸಿ ಒಂದೇ ಇರಲು ಸಾಧ್ಯ. ಐವರು ಮೇಯರ್‌ಗಳು ಮತ್ತು ಚುನಾಯಿತ ಪ್ರತಿನಿಧಿಗಳನ್ನು ಅದು ಒಳಗೊಳ್ಳಬೇಕು. ಮತ್ತು ಅಗತ್ಯ ಕಂಡುಬಂದರೆ, ಎಲ್ಲಿಂದಲಾದರೂ, ಎಷ್ಟು ಮಂದಿ ತಜ್ಞರನ್ನಾದರೂ ಎಂಪಿಸಿ ಕರೆತರಬಹುದು. ಅದಕ್ಕೆ ಅಡ್ಡಿ ಏನು’ ಎಂದು ಪ್ರಶ್ನಿಸಿದರು ವಿಜಯನ್.

‘ಹೀಗೆ ಅದು ಸಮರ್ಥವಾಗಿ ಯೋಜನೆಗಳನ್ನು ರೂಪಿಸಬಲ್ಲ ಸ್ಥಳೀಯ ಚುನಾಯಿತ ಸಂಸ್ಥೆಯಾಗುತ್ತದೆ. ನಾವು ಎಂಪಿಸಿಗೆ ಹತ್ತಿರವಾಗುತ್ತೇವೆ. ಪ್ರಜೆಗಳು ರಾಜ್ಯ ಸರ್ಕಾರ ಅಥವಾ ಅಧಿಕಾರಶಾಹಿಗಿಂತ ಚುನಾಯಿತ ಪ್ರತಿನಿಧಿಗಳಿಗೆ ಹತ್ತಿರವಾಗುತ್ತಾರೆ’ ಎಂದು ವಿವರಿಸಿದರು.

‘ಜಿಬಿಎ ಯೋಜನೆಗಳು ಕೇಂದ್ರೀಕೃತ ಆಗಿರಬಾರದು. ಯೋಜನೆಗಳು ಸದಾ ತಳಮಟ್ಟದಲ್ಲಿ ರೂಪುಗೊಳ್ಳಬೇಕು. ಯೋಜನೆಗಳು ಜನಪ್ರತಿನಿಧಿಗಳನ್ನು ಒಳಗೊಂಡ ಸಂಸ್ಥೆಯ ಮೂಲಕ ಆಗದೇ ಹೋದರೆ, ಅದಕ್ಕೆ ತಳಮಟ್ಟದ ಕಣ್ನೋಟ ಇರುವುದಿಲ್ಲ. ಅದು ಹೇಗಿರುತ್ತದೆ ಅಂದರೆ, ಕೆಲವು ಆಡಳಿತಾಧಿಕಾರಿಗಳು ಕುಳಿತು ಬೆಂಗಳೂರಿಗೆ ಏನು ಬೇಕು ಎನ್ನುವುದನ್ನು ತೀರ್ಮಾನಿಸಿದಂತಾಗುತ್ತದೆ. ಈ ಮಾದರಿಯನ್ನು ಹಲವು ಬಾರಿ ಪ್ರಯತ್ನಿಸಿದ್ದೇವೆ. ಅದು ಫಲ ನೀಡಲಿಲ್ಲ. ಈಗ ಬೆಂಗಳೂರಿನಲ್ಲಿ ಕಾಣುತ್ತಿರುವ ಅಸ್ತವ್ಯಸ್ತ ವ್ಯವಸ್ಥೆಗೆ ಆ ಮಾದರಿಯೇ ಕಾರಣ’ ಎನ್ನುತ್ತಾರೆ ವಿಜಯನ್.



ಬಿಡಿಎಗೆ ಹೆಚ್ಚು ಪ್ರದೇಶ ಸೇರ್ಪಡೆ?

ಒಂದು ವೇಳೆ ಜಿಬಿಎ ವ್ಯಾಪ್ತಿ ವಿಸ್ತಾರವಾದರೆ ಬಿಡಿಎಯ ಪಾತ್ರ ಏನು ಎಂಬುದು ಹಲವು ಸಾಮಾಜಿಕ ಕಾರ್ಯಕರ್ತರು ಕೇಳುತ್ತಿರುವ ಪ್ರಶ್ನೆ.

‘ಬಿಡಿಎ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳು ಕುಗ್ಗುವುದರಿಂದ ಬೆಂಗಳೂರಿನ ಹೊರವಲಯದಲ್ಲಿ ಅಭಿವೃದ್ಧಿಶೀಲ ಪ್ರದೇಶಗಳನ್ನು ಬಿಡಿಎಗೆ ಸೇರಿಸಬೇಕು ಎಂದು ನಾವು ಬಯಸಿದ್ದೇವೆ. ಬೆಂಗಳೂರಿನ ಗ್ರಾಮೀಣ ಭಾಗಗಳು ವೇಗವಾಗಿ ವಿಸ್ತಾರಗೊಳ್ಳುತ್ತಿದ್ದು, ಅಲ್ಲಿಗೆ ಯೋಜನೆಗಳ ಅಗತ್ಯವಿದೆ’ ಎಂದು ಹೇಳುತ್ತಾರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎನ್.ಎ.ಹ್ಯಾರಿಸ್.

ಬಿಡಿಎ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸುವ ಚಿಂತನೆಗೆ ವಿವಿಧ ವಲಯಗಳಿಂದ ಬೆಂಬಲ ವ್ಯಕ್ತವಾಗಿದೆ. ಪ್ರಾಧಿಕಾರವು ರಾಜ್ಯ ಸರ್ಕಾರದಿಂದ ಸ್ಪಷ್ಟನೆಗಾಗಿ ಕಾಯುತ್ತಿದೆ ಎನ್ನುತ್ತಾರೆ ಅವರು.

‘ಬೆಂಗಳೂರಿಗಾಗಿ, ಯೋಜನಾ ಪ್ರಕ್ರಿಯೆಯನ್ನು ಒಂದು ಸಂಸ್ಥೆ ನಿರ್ವಹಿಸಬೇಕು ಎಂಬುದು ನನ್ನ ಅನಿಸಿಕೆ. ಅದು ಜಿಬಿಎ ಆಗಿರಬಹುದು ಅಥವಾ ಬಿಡಿಎಯೂ ಆಗಿರಬಹುದು. ಆದರೆ, ಸರ್ಕಾರದ ಮಟ್ಟದಲ್ಲಿ ಯೋಜನಾ ಪ್ರಕ್ರಿಯೆಯನ್ನು ಎರಡು ಸಂಸ್ಥೆಗಳ ನಡುವೆ ವಿಭಜಿಸಲು ತೀರ್ಮಾನಿಸಲಾಗಿದೆ. ನಾವು ಅದರ ಅನುಸಾರ ನಡೆಯಲೇಬೇಕು’ ಎಂದು ಅವರು ಅಭಿಪ್ರಾಯ ಪಡುತ್ತಾರೆ.

‘ಮಾಸ್ಟರ್ ಪ್ಲಾನಿಂಗ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸರ್ಕಾರ ಇನ್ನೂ ಗಡುವು ನಿಗದಿಪಡಿಸಿಲ್ಲ. ಪ್ರಕ್ರಿಯೆ ಶುರುವಾದ ನಂತರ ಪ್ರಾಧಿಕಾರವು ಜಿಬಿಎನೊಂದಿಗೆ ಸಮನ್ವಯ ಸಭೆಗಳನ್ನು ನಡೆಸಲಿದೆ’ ಎಂದು ಹ್ಯಾರಿಸ್ ಹೇಳುತ್ತಾರೆ.

ಐವರು ಮೇಯರ್‌ಗಳು ಜಿಬಿಎನಲ್ಲಿ ಇದ್ದರೂ, ಸಂಸ್ಥೆಯ 75 ಸದಸ್ಯ ಬಲಕ್ಕೆ ಹೋಲಿಸಿದರೆ, ಅವರ ಸಂಖ್ಯೆ ತೀರಾ ಅಲ್ಪ. ಯೋಜನೆಗಳನ್ನು ರೂಪಿಸುವುದರಲ್ಲಿನ ವಿಳಂಬ ಮತ್ತು ವಿವಿಧ ನ್ಯಾಯಾಲಯಗಳಲ್ಲಿನ ಪ್ರಕರಣಗಳು ನಗರ ಯೋಜನೆಯನ್ನು ಮುಗ್ಗರಿಸುವಂತೆ ಮಾಡಿವೆ. ‘2007ರಲ್ಲಿ ಬಿಡುಗಡೆಯಾದ, 2015ರ ಮಾಸ್ಟರ್ ಪ್ಲಾನ್ ಪ್ರಕಾರವೇ ಈಗಲೂ ಯೋಜನೆಗಳು ಕಾರ್ಯಗತಗೊಳ್ಳುತ್ತಿರುವುದು ತೀರಾ ಅವಿವೇಕದ ವಿಚಾರ. ಸೂಕ್ತ ಮಾಸ್ಟರ್ ಪ್ಲಾನ್ ಇಲ್ಲದೇ ಸುರಂಗ ರಸ್ತೆಯಂಥ ಯೋಜನೆಗಳು ಬರುತ್ತಿವೆ’ ಎನ್ನುವುದು ಅವರ ವಿಶ್ಲೇಷಣೆ.

> ಮಾಸ್ಟರ್ ಪ್ಲಾನಿಂಗ್‌ಗೆ ಸಂಬಂಧಿಸಿದಂತೆ ಬಿಡಿಎ ಮತ್ತು ಜಿಬಿಎ ನಡುವೆ ಸಮನ್ವಯ ಪ್ರಕ್ರಿಯೆ ನಡೆಯುತ್ತಿದೆಯೇ ಎಂದು ಕೇಳಲು ‘ಪ್ರಜಾವಾಣಿ’ ಜಿಬಿಎ ಅಧಿಕಾರಿಗಳನ್ನು ಸಂಪರ್ಕಿಸಿತು. ಅವರು ಪ್ರತಿಕ್ರಿಯೆ ನೀಡಲಿಲ್ಲ. ಆದರೆ, ಈ ವಿಚಾರದಲ್ಲಿ ಈಗಲೇ ಏನೂ ಹೇಳಲು ಸಾಧ್ಯವಿಲ್ಲ ಎಂದು ಮೂಲಗಳು ತಿಳಿಸಿವೆ.

‘ರಾಜ್ಯ ಸರ್ಕಾರಕ್ಕೆ ನಿಯಂತ್ರಣ ಸಾಧಿಸಬೇಕಿದೆ ಮತ್ತು ತನಗೆ ಬೇಕಾದುದನ್ನು ಮಾಡಬೇಕಿದೆ. ಹೀಗಾಗಿ ಅದಕ್ಕೆ ಮಾಸ್ಟರ್ ಪ್ಲಾನ್ ಆಗಲಿ, ನಾಗರಿಕರೊಂದಿಗೆ ಸಮಾಲೋಚನೆ ಆಗಲಿ ಬೇಕಿಲ್ಲ. ನಾವು ಅವರೊಂದಿಗೆ ಮಾತನಾಡಲು ಪ್ರಯತ್ನಿಸಿದೆವು. ‘ನಿಮಗೆ ಬೇಕಿದ್ದರೆ ನ್ಯಾಯಾಲಯಕ್ಕೆ ಹೋಗಿ’ ಎನ್ನುವುದು ಅವರ ಉತ್ತರವಾಗಿತ್ತು. ಎಲ್ಲ ಪಕ್ಷಗಳದ್ದೂ ಇದೇ ಕಥೆ. ಎಲ್ಲರಿಗೂ ಬೆಂಗಳೂರಿನ ಮೇಲೆ ನಿಯಂತ್ರಣ ಬೇಕು’ ಎನ್ನುವುದು ವಿಜಯನ್ ನುಡಿ.

‘ಸಂವಿಧಾನದ 74ನೇ ತಿದ್ದುಪಡಿ ಮತ್ತು ಎಂಪಿಸಿ... ಎರಡೂ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಹೇಳುತ್ತವೆ. ಯೋಜನೆ ಎನ್ನುವುದು ಕೇವಲ ಒಂದು ಆಯಾಮ ಮಾತ್ರ. ಅಧಿಕಾರ ವಿಕೇಂದ್ರೀಕರಣ ಎನ್ನುವುದು ಕೇಂದ್ರ, ರಾಜ್ಯ ಮತ್ತು ನಗರ ಪಾಲಿಕೆಗಳಿಗೆ ಕಾರಣವಾಗುತ್ತದೆ. ಪ್ರತಿಯೊಂದೂ ಮುಂದಿನ ಹಂತಕ್ಕೆ ಅಧಿಕಾರವನ್ನು ವರ್ಗಾಯಿಸುತ್ತದೆ. ಆದರೆ, ಪ್ರಸ್ತುತ ಯಾವುದೇ ಪಕ್ಷ, ಯಾವುದೇ ಸಂಸದ, ಯಾವುದೇ ಶಾಸಕ ತಮ್ಮ ಅಧಿಕಾರವನ್ನು ವರ್ಗಾಯಿಸಲು ಬಯಸುತ್ತಿಲ್ಲ ಮತ್ತು ಅವರಿಗೆ ಚಿನ್ನದ ಮೊಟ್ಟೆಯಾಗಿರುವ ಬೆಂಗಳೂರಿನ ಮೇಲೆ ನಿಯಂತ್ರಣ ಬೇಕು. ಬೆಂಗಳೂರು, ಕರ್ನಾಟಕದಲ್ಲೇ ಅತಿಹೆಚ್ಚು ಆದಾಯ ತಂದುಕೊಡುವ ಸ್ಥಳವಾಗಿದೆ. ಇದು ವಾಸ್ತವ’ ಎನ್ನುವುದು ಅವರ ಸ್ಪಷ್ಟ ನುಡಿ.

‘ಪ್ರಸ್ತುತ ನಡೆಯುತ್ತಿರುವ ಬೆಳವಣಿಗೆಗಳು ಆಡಳಿತವನ್ನು ಹೆಚ್ಚಿನ ಕೇಂದ್ರೀಕರಣದತ್ತ ಒಯ್ಯುತ್ತಿವೆ, 74ನೇ ತಿದ್ದುಪಡಿಯಿಂದ ದೂರ ಒಯ್ಯುತ್ತಿವೆ’ ಎನ್ನುವ ವಿಜಯನ್, ‘ಸಾಮಾಜಿಕ ಕಾರ್ಯಕರ್ತರ ಬೆಂಬಲ ಬೇಕು ಎಂದರೆ, ಸರ್ಕಾರವು ಸರಿಯಾದ ಹೆಜ್ಜೆಗಳನ್ನು ಇಡಬೇಕು’ ಎಂದರು.

‘ಆದರ್ಶಯುತವಾದ, ಪರಿಪೂರ್ಣವಾದ ಪರಿಹಾರ ರಾತ್ರೋರಾತ್ರಿ ಬೇಕು ಎಂದು ನಾವು ಹೇಳುತ್ತಿಲ್ಲ. ಆದರೆ, ಸರಿಯಾದ ದಿಕ್ಕಿನಲ್ಲಿ ಹೆಜ್ಜೆ ಹಾಕಿ ಎನ್ನುತ್ತಿದ್ದೇವೆ. ಅದನ್ನು ನಾವು ವಾಸ್ತವಿಕ ನೆಲೆಯಿಂದ ಬೆಂಬಲಿಸುತ್ತೇವೆ. ನಾವು ಪ್ರತಿಭಟಿಸುತ್ತೇವೆ. ಆದರೂ ನಾವು ಅದನ್ನು ಬೆಂಬಲಿಸುತ್ತೇವೆ. ಆದರೆ, ಪ್ರಸ್ತುತ ನಡೆಯುತ್ತಿರುವುದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಇದು ಸಂವಿಧಾನದ ಕಗ್ಗೊಲೆ’ ಎಂದು ವಿಜಯನ್ ಹೇಳಿದರು.

ಜಿಬಿಎ ಯೋಜನೆಯ ಸವಾಲು

ಸರ್ಕಾರ ಯೋಜನೆಗಳನ್ನು ರೂಪಿಸಲು ಹೊರಡುವಾಗ ಎದುರಾಗುವ ಪ್ರಮುಖ ಸಮಸ್ಯೆ ಎಂದರೆ, ವಿವಿಧ ಯೋಜನೆಗಳ ನಡುವೆ ಸಮನ್ವಯ ಸಾಧಿಸುವುದು.

‘ಜಿಬಿಎಯು ಕೂಡಿಕೊಂಡಿರುವ ಪ್ರದೇಶ. ಆದರೆ, ಬಿಡಿಎ ಯೋಜನಾ ಪ್ರದೇಶವು ಈಗ ಉಂಗುರದ ಆಕಾರದಲ್ಲಿದೆ. ಯೋಜನೆಗಳನ್ನು ರೂಪಿಸುವ ಸವಾಲುಗಳ ವಿಚಾರದಲ್ಲಿ ಇದು ವಿಶಿಷ್ಟ ಸಂಗತಿಯಾಗಿದೆ’ ಎಂದು ಹೇಳುತ್ತಾರೆ ಬ್ರ್ಯಾಂಡ್ ಬೆಂಗಳೂರು ಸಮಿತಿಯ ಸದಸ್ಯ ರವಿಚಂದರ್ ವಿ. ಬಿಬಿಎಂಪಿಯನ್ನು ಐದು ಪಾಲಿಕೆಗಳನ್ನಾಗಿ ವಿಭಜಿಸುವುದರಲ್ಲಿ ಇವರು ಪ್ರಮುಖ ಪಾತ್ರವಹಿಸಿದ್ದಾರೆ.

‘ಜಿಬಿಎ ಯೋಜನೆ ಸಮಸ್ಯೆ ಅಲ್ಲ. 74ನೇ ತಿದ್ದುಪಡಿ ಅನುಸಾರ ಅವರು ಪಾಲಿಕೆಗಳ ಮೂಲಕ ತಳಮಟ್ಟದಿಂದ ಯೋಜನೆಗಳನ್ನು ರೂಪಿಸಬೇಕು. ಆದಾಗ್ಯೂ ಆ ಯೋಜನೆಗಳು ಬಿಡಿಎ ಪ್ರದೇಶಕ್ಕೆ ರೂಪಿಸಿರುವ ಯೋಜನೆಗಳೊಂದಿಗೆ ಹೊಂದಿಕೆಯಾಗಬೇಕು. ಬಿಡಿಎ ವ್ಯಾಪ್ತಿಯು ಜಿಬಿಎ ವ್ಯಾಪ್ತಿಗಿಂತಲೂ ಜಾಸ್ತಿ ಇದ್ದು, ಹೊರವಲಯದಲ್ಲಿ ಅದರ ಗಡಿ ಬರುತ್ತದೆ. ಈಗ ನಮ್ಮ ಮುಂದಿರುವ ಪ್ರಶ್ನೆ ಎಂದರೆ, ಜಿಬಿಎ ಮತ್ತು ಬಿಡಿಎ ರೂಪಿಸುವ ಯೋಜನೆಗಳನ್ನು ಸಮನ್ವಯಗೊಳಿಸಲು ಇರುವ ವ್ಯವಸ್ಥೆಯಾವುದು’ ಎಂದು ಕೇಳುತ್ತಾರೆ ರವಿಚಂದರ್.

ಬೆಂಗಳೂರು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಸಿಂಹಪಾಲು ಸಮಸ್ಯೆಗಳು ಅದರ ಹೊರವಲಯಗಳಲ್ಲಿವೆ ಎಂಬುದು ಅವರ ಮಾತು.

‘ಜಿಬಿಎ ಪ್ರದೇಶದ ಪರಿಧಿಯ ಹೊರಗಡೆ ತುಂಬಾ ಸಮಸ್ಯೆಗಳಿವೆ. ಅಲ್ಲಿ ಗ್ರಾಮ ಪಂಚಾಯಿತಿಗಳು, ಜಿಲ್ಲಾ ಪಂಚಾಯಿತಿಗಳು, ನಗರಸಭೆಗಳು, ಪಟ್ಟಣ ಪಂಚಾಯಿತಿಗಳು ಬರುತ್ತವೆ. ಈ ಪ್ರದೇಶಗಳಲ್ಲಿ ಅನಿಯಂತ್ರಿತವಾಗಿ ಕಟ್ಟಡಗಳ ನಿರ್ಮಾಣವೂ ನಡೆಯುತ್ತಿದೆ. ಹಾಗಾಗಿ, ಜಿಬಿಎ ಪ್ರದೇಶಕ್ಕೆ ಹೋಲಿಸಿದರೆ, ಅದರ ಹೊರವಲಯಕ್ಕೆ ಪ್ರತ್ಯೇಕವಾಗಿ ಗಮನ ನೀಡುವ ಅವಶ್ಯಕತೆ ಇದೆ. ಇದು ಹೊಸದಾದ ಮತ್ತು ನಾವು ಹಿಂದೆಂದೂ ಎದುರಿಸದ ಸವಾಲು. ಇದನ್ನು ಹೇಗೆ ಬಗೆಹರಿಸುವುದು ಎಂಬುದರ ಬಗ್ಗೆ ನಮ್ಮಲ್ಲಿ ಸ್ಪಷ್ಟತೆ ಇರಬೇಕಾಗುತ್ತದೆ’ ಎನ್ನುವುದು ಅವರ ಅಭಿಪ್ರಾಯ.

ಎಂಪಿಸಿ ಮತ್ತು ಯೋಜನಾ ನಿಯಮಗಳ ಅಡಿಯಲ್ಲಿ ಜಿಬಿಎ ರೂಪಿಸುವ ಯೋಜನೆಗಳು ಐದೂ ಪಾಲಿಕೆಗಳಿಗೆ ಸಂಬಂಧಿಸಿದ, ಹೆಚ್ಚು ವಿಸ್ತೃತವಾದ ಮತ್ತು ಸಮಗ್ರವಾದ ಜಂಟಿ ಯೋಜನೆಗಳಾಗಿರಬೇಕು. ಹಾಗಾಗಿ, ಜಿಬಿಎ ಮುಂದೆ ಇಲ್ಲಿ ಎರಡು ಸವಾಲುಗಳಿವೆ; ಒಂದು, ಐದು ಪಾಲಿಕೆಗಳ ವೈಯಕ್ತಿಕ ಯೋಜನೆಗಳ ನಡುವೆ ಸಮನ್ವಯ ಸಾಧಿಸುವುದು ಮತ್ತು ಈ ಯೋಜನೆಗಳನ್ನು ಬಿಡಿಎ ವ್ಯಾಪ್ತಿಗೆ ಬರುವ ಜಿಬಿಎಯ ಹೊರವಲಯಕ್ಕೆ ಮೀಸಲಾದ ಯೋಜನೆಗಳೊಂದಿಗೆ ಸಮನ್ವಯಗೊಳಿಸುವುದು. ಯೋಜನೆಯ ಚೌಕಟ್ಟು ಇನ್ನೊಂದು ದೊಡ್ಡ ಸಮಸ್ಯೆ’ ಎಂಬುದು ರವಿಚಂದರ್ ಅವರ ವಿಶ್ಲೇಷಣೆ.

‘ಅಭಿವೃದ್ಧಿ ಯೋಜನೆಯ ವಿಚಾರದಲ್ಲಿ ನಾವು ಇನ್ನೂ ಹಳೆಯ ಮಾಸ್ಟರ್ ಪ್ಲಾನ್‌ಗೆ ಅಂಟಿಕೊಂಡಿರುತ್ತೇವೆಯೇ? ನಾವು ನಿಜವಾಗಿಯೂ ಏನು ಮಾಡಬೇಕು ಎಂದರೆ, ಪ್ರದೇಶಕ್ಕೆ ಸೀಮಿತವಾದ ಯೋಜನಾ ಚೌಕಟ್ಟುಗಳನ್ನು ರೂಪಿಸಬೇಕು’ ಎನ್ನುವುದು ಅವರ ಸಲಹೆ.


‘ಭೂಮಿಯ ಬಳಕೆ ಮತ್ತು ಅಭಿವೃದ್ಧಿಯ ನಿಯಮಗಳನ್ನೊಳಗೊಂಡ ವ್ಯವಸ್ಥೆಯನ್ನು ರೂಪಿಸಿದರೆ, ಪರಿಣಾಮಕಾರಿ ಫಲಿತಾಂಶವನ್ನು ಪಡೆಯಬಹುದು. ಆದರೆ, ಅದಕ್ಕಾಗಿ ನಮಗೆ ಒಂದು ಸಮರ್ಥ ಯೋಜನೆ ಬೇಕು. ಸುಮ್ಮನೆ ಕುಳಿತುಕೊಂಡು, ‘ನಾನೀಗ ಮುಂದಿನ 15 ವರ್ಷಗಳಿಗೆ ಯೋಜನೆ ರೂಪಿಸಿದ್ದೇನೆ. ಅದನ್ನು ಬಿಟ್ಟು ಬೇರೇನೂ ಮಾಡಬೇಕಾಗಿಲ್ಲ’ ಎಂದು ಹೇಳಲು ಸಾಧ್ಯವಿಲ್ಲ. ನನ್ನ ಪ್ರಕಾರ, ನಿರಂತರವಾಗಿ ಬದಲಾವಣೆ ಸಾಧ್ಯವಿರುವ ಯೋಜನೆ ಬೇಕು. ಅದು ಪ್ರತಿ ವರ್ಷ ಅಥವಾ ಎರಡು ವರ್ಷಗಳಿಗೊಮ್ಮೆ ಪರಿಷ್ಕರಣೆಗೊಳ್ಳುತ್ತಿರಬೇಕು’ ಎಂದು ರವಿಚಂದರ್ ಪ್ರತಿಪಾದಿಸುತ್ತಾರೆ.

‘ಮಾರ್ಗದರ್ಶಿ ತತ್ವಗಳನ್ನು ರೂಪಿಸಿ ಅದರ ಅಡಿಯಲ್ಲಿ ಯೋಜನೆಗಳನ್ನು ರೂಪಿಸುವುದು ಇದಕ್ಕೆ ಉತ್ತಮವಾದ ದಾರಿ. ಪ್ರಾದೇಶಿಕ ಕಾರ್ಯತಂತ್ರದ ಚೌಕಟ್ಟನ್ನು ಅಳವಡಿಸಿಕೊಳ್ಳಲು ನಾವು ಸಿದ್ಧರಿದ್ದೇವೆಯೇ? ಅದನ್ನು ಸಮರ್ಥವಾಗಿರುವಂತೆ ಮತ್ತು ಪರಿಷ್ಕರಿಸಲು ಸಾಧ್ಯವಾಗುವಂತೆ ನೋಡಿಕೊಳ್ಳುವ ಮೂಲಕ ಆ ಚೌಕಟ್ಟನ್ನು ಪರಿಣಾಮಕಾರಿಯನ್ನಾಗಿ ಮಾಡಬಹುದಾಗಿದೆ’ ಎಂದು ವಿವರಿಸುತ್ತಾರೆ ಅವರು.

‘ಜಿಬಿಎ ವ್ಯಾಪ್ತಿಗೆ ಹೊಸ ಪ್ರದೇಶಗಳನ್ನು ಸೇರಿಸುವ ಸಂಬಂಧ ಶಿಫಾರಸು ಮಾಡುವಂತೆ ಬ್ರ್ಯಾಂಡ್ ಬೆಂಗಳೂರು ಸಮಿತಿಗೆ ಸೂಚಿಸಲಾಗಿದೆ. ಸರ್ಕಾರವು ಸಮಿತಿಯ ಸಲಹೆಗಳನ್ನು ಸ್ವೀಕರಿಸಿದ ನಂತರ ಅದಕ್ಕೆ ಸಂಬಂಧಿಸಿದ ವರದಿ ಮತ್ತು ಅಧಿಸೂಚನೆ ಹೊರಡಿಸುವ ಪ್ರಕ್ರಿಯೆಗೆ ಹೆಚ್ಚು ಸಮಯ ಬೇಕಾಗುತ್ತದೆ. ವ್ಯಾಪ್ತಿಯು ಬದಲಾಗುವುದರಿಂದ ಯೋಜನೆಗಳನ್ನು ಸಮನ್ವಯಗೊಳಿಸುವುದು ಮತ್ತು ಅವುಗಳನ್ನು ಜಾರಿಗೆ ತರುವುದು ಮತ್ತೊಂದು ಸವಾಲಿನ ಕೆಲಸವಾಗಲಿದೆ’ ಎಂಬುದು ಅವರ ಹೇಳಿಕೆ.

ಆ ಪ್ರಕ್ರಿಯೆ ಹೀಗಿದ್ದರೆ ಚೆನ್ನಾಗಿರುತ್ತದೆ ಎಂದು ಹೇಳುತ್ತಾರೆ ರವಿಚಂದರ್...

1. ಪ್ರಾಥಮಿಕ ಹಂತದಲ್ಲಿ ಐದು ಪಾಲಿಕೆಗಳ ವ್ಯಾಪ್ತಿಗೆ ಬರುವ ಹಾಲಿ ಪ್ರದೇಶಗಳನ್ನು ಜಿಬಿಎ ಗುರುತಿಸಬೇಕು
2. ಐದು ಪಾಲಿಕೆಗಳು, ನಗರಸಭೆಗಳು, ಪಟ್ಟಣ ಪಂಚಾಯಿತಿಗಳು, ಜಿಲ್ಲಾ ಪಂಚಾಯಿತಿಗಳು ಮತ್ತು ಗ್ರಾಮ ಪಂಚಾಯಿತಿಗಳನ್ನು ಒಳಗೊಂಡ ಹೊಸ ಜಿಬಿಎ ಪ್ರದೇಶವನ್ನು ಸರ್ಕಾರ ಅಂಗೀಕರಿಸಬೇಕು
3. ನಂತರ ಜಿಬಿಎಯು ತನ್ನ ಹೊರವಲಯದಲ್ಲಿರುವ ಹೆಚ್ಚುವರಿ ಪ್ರದೇಶಗಳನ್ನು ಗುರುತಿಸಬೇಕು
4. ಬಿಡಿಎ ವ್ಯಾಪ್ತಿಗೆ ಹೊಸ ಪ್ರದೇಶಗಳು ಸೇರ್ಪಡೆಗೊಂಡು, ಅಲ್ಲಿನ ಅಭಿವೃದ್ಧಿಗೆ ಯೋಜನೆ ರೂಪಿಸಬೇಕು.



ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮಹಾರಾಷ್ಟ್ರದ ಠಾಣೆಯ ಮೀರಾ ಭಾಯಂದರ್ ನಗರದಲ್ಲಿ ಹೊಸದಾಗಿ ನಿರ್ಮಾಣಗೊಂಡಿರುವ ಮೇಲ್ಸೇತುವೆಯಲ್ಲಿ ಇತ್ತೀಚೆಗೆ ಬಸ್ ಒಂದು ಸಿಕ್ಕಿಹಾಕಿಕೊಂಡಿದೆ ಎಂದು ಪ್ರತಿಪಾದಿಸುತ್ತಾ ಚಿತ್ರವೊಂದನ್ನು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಲಾಗಿದೆ. ‘ಮುಂಬೈನಲ್ಲಿ ಗುಜರಾತ್ ಮಾದರಿಯ ಅಭಿವೃದ್ಧಿ’ ಎಂದು ಅದಕ್ಕೆ ಒಕ್ಕಣೆ ನೀಡಲಾಗಿದೆ. ಕೇರಳದ ಕಾಂಗ್ರೆಸ್ ಘಟಕದ ಖಾತೆಯಲ್ಲೂ ಆ ಚಿತ್ರವನ್ನು ಹಂಚಿಕೊಳ್ಳಲಾಗಿದೆ. ಇತ್ತೀಚೆಗೆ ಈ ಮೇಲ್ಸೇತುವೆಯ ವಿನ್ಯಾಸ ತೀವ್ರ ಟೀಕೆಗೆ ಗುರಿಯಾಗಿತ್ತು ಎನ್ನುವುದು ನಿಜ. ಆದರೆ, ಬಸ್ ಅಲ್ಲಿ ಸಿಕ್ಕಿಹಾಕಿಕೊಂಡಿದೆ ಎಂಬುದು ಸುಳ್ಳು ಮಾಹಿತಿ.



ಚಿತ್ರವನ್ನು ಕೂಲಂಕಷವಾಗಿ ಪರಿಶೀಲನೆ ನಡೆಸಿದಾಗ ಅದರ ಅಸಲಿತನದ ಬಗ್ಗೆ ಅನುಮಾನ ಬಂತು. ಹೈವ್ ಮಾಡರೇಷನ್ ಎಂಬ ಎಐ ಪತ್ತೆ ಟೂಲ್ ಮೂಲಕ ಪರಿಶೀಲನೆಗೆ ಒಳಪಡಿಸಿದಾಗ ಅದು ಎಐ ಮೂಲಕ ಸೃಷ್ಟಿಸಿದ ಚಿತ್ರ ಎಂಬುದು ಖಚಿತವಾಯಿತು. ಚಿತ್ರವನ್ನು ಇನ್ನಷ್ಟು ಸೂಕ್ಷ್ಮವಾಗಿ ಗಮನಿಸಿದಾಗ, ಗೂಗಲ್‌ನ ಎಐ ಟೂಲ್ ಆಗಿರುವ ಜೆಮಿನಿಯ ವಾಟರ್ ಮಾರ್ಕ್ ಕೂಡ ಅದರಲ್ಲಿತ್ತು. ಜೆಮಿನಿ ಎಐ ಟೂಲ್ ಬಳಸಿ ಚಿತ್ರವನ್ನು ಮಾರ್ಪಡಿಸಿರುವುದು ದೃಢಪಟ್ಟಿತು. ಮತ್ತೊಮ್ಮೆ ಖಚಿತಪಡಿಸಿಕೊಳ್ಳುವುದಕ್ಕಾಗಿ ಗೂಗಲ್ ಜೆಮಿನಿ ಪ್ರೊ ಟೂಲ್ ಮೂಲಕ ಚಿತ್ರವನ್ನು ಪರಿಶೀಲನೆಗೆ ಒಳಪಡಿಸಿದಾಗ ಗೂಗಲ್‌ನ ಎಐ ಟೂಲ್ ಬಳಸಿ ಈ ಚಿತ್ರವನ್ನು ಸೃಷ್ಟಿಸಿರುವುದು/ಎಡಿಟ್ ಮಾಡಿರುವುದು ಪತ್ತೆಯಾಯಿತು ಎಂದು ಬೂಮ್ ಲೈವ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಪದಬಂಧ 6314


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ವನದಲ್ಲಿ ದೊರೆತಿರುವ ಆದಾಯ (4)
3. ಕಾಡು ಪ್ರಾಣಿ ಇಲ್ಲಿದೆ (4)
5. ದುಃಖಕ್ಕೆ ಮೂಲವಾದ ಅತೀ ಆಸೆ (3)
6. ಒಂದು ಕಡೆಯಿಂದ ಇನ್ನೊಂದಡೆಗೆ ಸಾಗಿಸುವಿಕೆ (3)
8. ತವರಿನವರು ಕೊಟ್ಟಿರುವ ಲೋಹ (3)
10. ಮಂಕ ಹೊತ್ತಿರುವ ಬುಟ್ಟಿ (3)
11. ಸರದ ಜೊತೆಯಿರಿಸಿದ ಸಾಮಾನು (3)
13. ದೇವಾಲಯದ ಗೋಪುರದ ತುದಿ (3)
15. ಈಕೆ ಒಡಹುಟ್ಟಿದವಳು (4)
16. ಪಟದಲ್ಲಿಯೇ ಈ ತೊಳಲಾಟ (4)

ಮೇಲಿಂದ ಕೆಳಕ್ಕೆ

1. ವರ ಪಡೆದಿರುವ ಬೇಡ (4)
2. ನನಗದು ಬೇಕು ಎಂದವನ ಕೈಯಲ್ಲಿನ ದುಡ್ಡು (3)
3. ಮದುವೆ ಗಂಡು ತೋರಿರುವ ವ್ಯಾಯಾಮದ ಪಟ್ಟು (3)
4. ಗರದೊಳಗೆ ಅನ್ಯ ಮಾರ್ಗ (4)
7. ಈತ ಓದುಗ (3)
9. ನಡುವಿದ್ದು ಜೀ ಎನ್ನುತ್ತಿರುವ ಮಂತ್ರಿ (3)
10. ಮಂದ ಬುದ್ಧಿಯವನ ಮುಗುಳುನಗೆ (4)
12. ಕುಡಿಗಣ್ಣಲ್ಲಿ ನೋಡಿದ ನೋಟ (4)
13. ಪಾಪ! ಕರಿಯ ಮರಿ ಬಿದ್ದಿದೆಯಲ್ಲಾ ಈ ಪ್ರಪಾತದಲ್ಲಿ! (3)
14. ಸರಸದ ಮಾತುಕತೆ (3)



6313ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮಧುಮಾಸ 3.ಪರಾಭವ 5.ಬಡತನ 7.ಆಭರಣ 9.ವನಪಾಲಕ 12.ಮದಕರಿ 13.ನವರಂಗ 15.ಸಬಕಾರ 16.ಪರಿಚಿತ

ಮೇಲಿಂದ ಕೆಳಕ್ಕೆ: 1.ಮನೋಬಲ 2.ಮಾವುತ 4.ವರುಣ 6.ನವೀನ 8.ಭಕ್ಷಕ 9.ವರ್ತಕ 10.ಲಶುನ 11.ಅಂಗಜಾತ 12.ಮಟ್ಟಸ 14.ವೈಯಾರಿ

ಸುಡೊಕು 6698

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

				2	7		1	
8		7	6		4	2		9
	2		3				5	
2	4			1		9		
						6	7	
7	5			9		3	4	
	8							3
			4		8	5		
9		4			2		6	

6697 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಭೂಲೋಕದ ಅಮೃತ

ನುಡಿ ಬೆಳಗು

ರೇಣುಕಾ ನಿಡಗುಂದಿ



ಅದೊಂದು ದಿನ ಒಬ್ಬ ಕುರುಡ ತನ್ನ ಗೆಳೆಯನ ಮನೆಗೆ ಬಂದಿದ್ದ. ಕೆಲಕಾಲ ಗೆಳೆಯನೊಂದಿಗೆ ಮಾತುಕತೆಯಾಡಿ ತನ್ನ ಮನೆಗೆ ಹೋಗಲು ಸಿದ್ಧನಾದ. ಆಗಲೇ ಕತ್ತಲಾಗಿತ್ತು. ಹೊರಗೆ ಬೀದಿಯಲ್ಲಿ ದೀಪಗಳಿರಲಿಲ್ಲ. ಬೆಳದಿಂಗಳೂ ಇರಲಿಲ್ಲ. ರಸ್ತೆಯಲ್ಲಿ ಓಡಾಡುವವರಿಗೆ ಬಹಳ ಕಷ್ಟವಾಗುತ್ತಿತ್ತು. ಗೆಳೆಯ, ಹೊರಗಡೆ ಬಹಳ ಕತ್ತಲಿದೆ, ಹೇಗೆ ಹೋಗುತ್ತಿ ಎಂದು ಕೇಳಲಿಲ್ಲ. ಇಲ್ಲಿಯೇ ಉಳಿದುಕೊಂಡು ನಾಳೆ ಬೆಳಕಿನಲ್ಲಿ ಹೊರಡು ಎನ್ನಲಿಲ್ಲ. ಕುರುಡನೇ ತನ್ನ ಗೆಳಯನಿಗೆ ‘ಗೆಳೆಯಾ, ಹೊರಗೆ ರಸ್ತೆಯಲ್ಲಿ ಹೋಗಲು ಅನುಕೂಲವಾಗುವಂತೆ ಒಂದು ದೀಪವನ್ನು ಕೊಡು’ ಎಂದು ಕೇಳುತ್ತಾನೆ. ಗೆಳೆಯ, ‘ಅಯ್ಯಾ, ನಿನಗೇಕೆ ದೀಪ, ಅದು ನಿನ್ನಲ್ಲಿ ಇದ್ದರೂ ಒಂದೇ, ಇಲ್ಲದಿದ್ದರೂ ಒಂದೇ. ನಿನಗಂತೂ ಅದರ ಬೆಳಕಿನಿಂದ ಬೀದಿ ಕಾಣಿಸುವುದಿಲ್ಲವಲ್ಲ. ಹೀಗಿರುವಾಗ ದೀಪ ಏಕೆ ಬೇಕು’ ಎಂಬ ಉಡಾಫೆಯ ಮಾತುಗಳನ್ನು ಆಡುತ್ತಾನೆ. ಆಗ ಕುರುಡ ಹೇಳುತ್ತಾನೆ: ‘ಮಿತ್ರಾ, ದೀಪದಿಂದ ನನಗೇನೂ ಉಪಯೋಗವಾಗುವುದಿಲ್ಲ ನಿಜ. ಆದರೆ ನಾನು ದೀಪ ತೆಗೆದುಕೊಂಡು ಹೋಗುವುದು ನನಗಲ್ಲ. ಹಾದಿಯಲ್ಲಿ ಹೋಗುವಾಗ ನನ್ನ ಎದುರಿನಿಂದ ಬರುವವರು ನನಗೆ ಡಿಕ್ಕಿ ಹೊಡೆಯಬಾರದಲ್ಲ, ಅದಕ್ಕಾಗಿ ಈ ದೀಪ ನನ್ನ ಬಳಿ ಇದ್ದರೆ ಒಳ್ಳೆಯದಲ್ಲವೇ’.

ಬಳಿಕ ಗೆಳೆಯ ನೀಡಿದ ದೀಪವನ್ನು ಕೋಲಿಗೆ ಸಿಕ್ಕಿಸಿಕೊಂಡು ಕುರುಡ ಮನುಷ್ಯ ನಡೆದ. ತುಸು ದೂರ ಸಾಗುತ್ತಲೂ ದಾರಿಯಲ್ಲಿ ಒಬ್ಬ ಇವನಿಗೆದುರಾಗಿ ಬಂದು ಡಿಕ್ಕಿ ಹೊಡೆದ. ಕುರುಡನಿಗೆ ತುಂಬಾ ಕೋಪ ಬಂತು. ರೇಗಿ ಕೇಳಿದ: ‘ಏನಯ್ಯಾ, ನಾನಂತೂ ಕುರುಡ. ನನಗೆದುರಾಗಿ ಯಾರು ಬರುತ್ತಾರೆ ಎನ್ನುವುದು ನನಗೆ ಕಾಣಿಸುವುದಿಲ್ಲ. ಆದರೆ ನೀನು ಕಣ್ಣುಳ್ಳವನು ತಾನೆ? ನಿನಗಾದರೂ ನಾನು ಎದುರಾಗಿ ಬರುತ್ತಿರುವುದು ಕಾಣಬೇಡವೇ? ಹಾಗೆ ಬೇರೆಯವರಿಗೆ ಕಾಣಲೆಂದೇ ತಾನೇ ನಾನು ದೀಪ ಹಿಡಿದು ಹೊರಟಿರುವುದು? ಅಥವಾ ನೀನೂ ನನ್ನಂತೆ ಕಣ್ಣುಕಾಣದ ಕುರುಡನೋ?’ ಎನ್ನುತ್ತಾನೆ. ಆಗ ಎದುರು ಬಂದು ಈ ಕುರುಡನಿಗೆ ಡಿಕ್ಕಿ ಹೊಡೆದವನು ಈ ಮಾತು ಕೇಳಿ ‘ಅಪ್ಪಾ, ನಾನು ಕುರುಡನಲ್ಲ. ಕತ್ತಲಲ್ಲಿ ಹಾದಿ ಕಾಣಿಸುತ್ತಿಲ್ಲ ನಿಜ. ಹಾಗೆ ಕಾಣಿಸಲೆಂದು ನೀನು ದೀಪ ಒಯ್ಯುತ್ತಿರುವುದೇನೋ ಒಳ್ಳೆಯದೇ ಸರಿ. ಆದರೆ ಆ ದೀಪವನ್ನು ಹತ್ತಿಸಿಕೊಂಡು ತರಬಾರದೇ? ನೀನು ಒಯ್ಯುತ್ತಿರುವುದು ಉರಿಯದೇ ಇರುವ ದೀಪವನ್ನು’ ಎಂದನು. ಕುರುಡನಿಗೆ ಬಹಳ ನೋವಾಗುತ್ತದೆ.

ಇಂಥ ದುಷ್ಟ ಗುಣದ ಗೆಳೆಯರು ಇದ್ದರೆಷ್ಟು, ಬಿಟ್ಟರೆಷ್ಟು ಈ ಬದುಕಿನಲ್ಲಿ ಎನಿಸುವುದಲ್ಲವೇ?

**ಹೇಗೋ ಹೇಗೋ ಹೆಗಲುಗೊಟ್ಟು ಬಂದಿಹ ಕೂರ್ಪು
ಆಗುಹೋಗುಗಳಿಗೆ ಬಾಗದಂತೆ ಸುಖಕೆ ಸಂತಸಪಟ್ಟು
ದುಃಖದಲಿ ಸಹಭಾಗಿಯಾಗೆ ಜೀವನರಸದ ಪಾಕದಂತೆ
ಸರಸ ವಿರಸವನೆಲ್ಲ ಅಪ್ಪು ಕಯ್ಯು
ಬಾಳುವರು ಗಂಧದೊಲು ಜೀವ ತೇಯ್ದು**

ಕವಿ ಚೆನ್ನವೀರ ಕಣವಿ ಗೆಳೆತನವನ್ನು ಇಹಲೋಕದ ಅಮೃತವೆನ್ನುತ್ತಾರೆ. ‘ಹೆಗಲಿಗೆ ಹೆಗಲು ಕೊಟ್ಟು ಸಹಕರಿಸುವ, ಏನೇ ಬಂದರೂ ಪ್ರೀತಿಯಿಂದ ಸಂತೈಸುವ, ಸುಖದಲ್ಲಿ ಸಂತಸಪಟ್ಟು, ದುಃಖದಲ್ಲಿ ಸಹಭಾಗಿಯಾಗುವ ಗೆಳೆಯ ದೊರೆತಾಗ ಜೀವನ ರಸಪಾಕವಾಗುವುದು, ಬಾಳುವರು ಗಂಧದೊಲು ಜೀವತೇಯ್ದು. ಗಂಧವು ತೀಡಿದಷ್ಟೂ ಸುವಾಸನೆ ಬೀರುತ್ತದೆ, ಹಾಗೆ ಪಕ್ವಗೊಂಡಷ್ಟೂ ಸ್ನೇಹವು’ ಎನ್ನುತ್ತಾರೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

13 ಫೆಬ್ರುವರಿ 2026 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ಏಕಾದಶಿ ಗಂ 14-26 ನಕ್ಷತ್ರ: ಮೂಲ ಗಂ. 16-13 ಯೋಗ: ವಜ್ರ ಗಂ. 27-24 ಕರಣ: ಬಾಲವ ಗಂ 14-26 ಕುಂಭ ಮಾಸದ 01 ನೇ ದಿನ. ಮಳೆ ನಕ್ಷತ್ರ : ಧನಿಷ್ಠ 3 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-57 ಸೂರ್ಯಾಸ್ತ : 06-32,, ಮುಸ್ಲಿಂ ದಿನಾಂಕ : 24 ಶಬನ್, ಅದೃಷ್ಟ ಸಂಖ್ಯೆ : 8, 3

ಮೇಷ: ಸಣ್ಣಪುಟ್ಟ ವಿಚಾರಗಳನ್ನೂ ಉಪೇಕ್ಷಿಸದೆ ಮನೆಯವರೊಂದಿಗೆ ಮಾತನಾಡುವಿರಿ. ಸಾಧು ಸಂತರ ದರ್ಶನದಿಂದ ಮನಸ್ಸಿಗೆ ಸಮಾಧಾನ ಕಂಡುಬರಲಿದೆ. ಮನೆಯಲ್ಲಿ ಜವಾಬ್ದಾರಿ ಹೆಚ್ಚಲಿದೆ.

ವೃಷಭ: ಬರಹಗಾರರಿಗೆ ತಮ್ಮ ಬರವಣಿಗೆಯ ಮೇಲೆ ಆಕ್ಷೇಪ ವ್ಯಕ್ತಪಡಿಸುವ ಜನರ ಮಧ್ಯದಲ್ಲಿ ಇರಬೇಕಾದ ಪರಿಸ್ಥಿತಿ ಎದುರಾಗಬಹುದು. ಸರಿ ತಪ್ಪುಗಳ ಬಗ್ಗೆ ತಿಳಿಯುವ ಪ್ರಯತ್ನವನ್ನು ಮಾಡಿ.

ಮಿಥುನ: ಆದರ್ಶವಾದಿ ಗುಂಪಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ವ್ಯಕ್ತಿತ್ವದಲ್ಲಿ ಒಳ್ಳೆಯ ಬದಲಾವಣೆಗಳಾಗುವುದು. ಫ್ಯಾಷನ್ ಡಿಸೈನರ್‌ಗಳು ಧನಲಾಭವನ್ನೂ ಪಡೆಯುವರು.

ಕರ್ಕಾಟಕ: ವೃತ್ತಿಗೆ ಸಂಬಂಧಿಸಿದಂತೆ ಶತ್ರುಬಾಧೆ ಎದುರಾಗಲಿದೆ. ದೈಹಿಕ ಮತ್ತು ಧಾರ್ಮಿಕ ಪ್ರಯತ್ನದಿಂದ ಸುಧಾರಿಸಿಕೊಳ್ಳಬಹುದು. ರಾಜಕೀಯ ಸನ್ನಿವೇಶಗಳು ಅನುಕೂಲವಾಗಿರುವುದು.

ಸಿಂಹ: ಮಕ್ಕಳ ಅಭಿವೃದ್ಧಿ ಅಥವಾ ಅವರ ಕೆಲಸಗಳ ಬಗ್ಗೆ ನೆರೆಯವರಿಂದ ಪ್ರಶಂಸೆಯ ಮಾತು ಕೇಳಿ ಬರುತ್ತದೆ. ಹೊಸ ವಿದ್ಯುತ್ ಉಪಕರಣಗಳನ್ನು ಅಳವಡಿಸುವಲ್ಲಿ ಅಧಿಕ ಬಂಡವಾಳ ಹೂಡುವಿರಿ.

ಕನ್ಯಾ: ತಿಂಡಿ-ತಿನಿಸುಗಳ ವ್ಯಾಪಾರದಲ್ಲಿನ ಲಾಭ ಇನ್ನೊಂದು ವ್ಯವಹಾರದ ಅಭಿವೃದ್ಧಿಗೆ ಸಹಕಾರಿ . ಕೆಲಸದ ಒತ್ತಡವನ್ನು ಅಥವಾ ಒಂದು ಸಂಘ ಸಂಸ್ಥೆಯ ಹೊಣೆಗಾರಿಕೆ ನಿಭಾಯಿಸುವಂತಾಗುವುದು.

ತುಲಾ: ಸ್ವರ್ಣ, ಲೋಹ ಹಾಗೂ ಗೃಹೋಪಕರಣಗಳ ವ್ಯವಹಾರಗಳಲ್ಲಿ ಆದಾಯ ಸಿಗಲಿದೆ. ಮಗಳಿಗೆ ಹೊಸ ಕೆಲಸ ಸಿಕ್ಕಿ ಸಂತೋಷವಾಗುವುದು. ಸಾಮಾಜಿಕ ಕಾರ್ಯಕ್ರಮದಲ್ಲಿ ಭಾಗವಹಿಸುವಿರಿ.

ವೃಶ್ಚಿಕ: ಶುಭಕಾರ್ಯಗಳಲ್ಲಿ ಹೆಚ್ಚಿನ ಜವಾಬ್ದಾರಿ ಮತ್ತು ಓಡಾಟವಿರುವುದು. ಸಮೀಪವರ್ತಿಗಳ ಸಹಾಯದಿಂದ ಬಾಕಿ ಇದ್ದ ಕೆಲಸಗಳನ್ನು ಪೂರ್ತಿಗೊಳಿಸುವಿರಿ. ಒಂಟಿತನದ ಚಿಂತೆ ಕಾಡಲಿದೆ.


ಧನು: ಮುಕ್ತ ಮನಸ್ಸಿನ ಮಾತುಕತೆಗಳಿಂದ ಸರಿಪಡಿಸಿಕೊಳ್ಳಬಹುದು. ನವ ದಂಪತಿಗೆ ಹರ್ಷದ ಸಮಾಚಾರ ಕೇಳಿ ಬರುವುದರಿಂದ ನೆಮ್ಮದಿ ಇರುವುದು. ಯೋಜನೆಯನ್ನು ಕಾರ್ಯರೂಪಕ್ಕೆ ತನ್ನಿ.

ಮಕರ: ಮಗಳ ಆರೋಗ್ಯದಲ್ಲಿನ ವ್ಯತ್ಯಾಸಗಳು ದುರ್ಬಲಗೊಳಿಸುವುದು. ಧೈರ್ಯದಿಂದ ಮಾತ್ರವೇ ಆಕೆ ಚೇತರಿಕೊಳ್ಳಲು ಸಾಧ್ಯ ಆದ್ದರಿಂದ ಹೊಸ ಸ್ಫೂರ್ತಿಯಿಂದ ಕಾರ್ಯನಿರ್ವಹಿಸಿ.

ಕುಂಭ: ಆಡಳಿತಾತ್ಮಕ ವಿಚಾರದಲ್ಲಿ ಭಾರಿ ಬದಲಾವಣೆಗಳ ಅಗತ್ಯಗಳನ್ನು ಸಂಸ್ಥಾಪಕರಿಗೆ ಮನವರಿಕೆ ಮಾಡಿಕೊಡುವಿರಿ. ಹಿರಿಯರಿಂದ ತಿಳಿದುಕೊಂಡಿದ್ದ ಕೆಲ ವಿಷಯಗಳು ಉಪಯೋಗಕ್ಕೆ ಬರಲಿದೆ.

ಮೀನ: ರಾಜಕೀಯ ರಂಗದಲ್ಲಿ ದಾಳ ಉರುಳಿದ್ದೇ ಗೊತ್ತಾಗದಂತೆ ವಿರುದ್ಧವಾಗಿ ಸಂಚು ನಡೆಯಲಿದೆ. ಅನಿರೀಕ್ಷಿತವಾಗಿ ರಾಜಕೀಯದಲ್ಲಿ ಸ್ಥಾನ ದೊರೆತು ರಾಜಕೀಯ ರಂಗದ ಉದ್ದ ಅಗಲದ ಅರಿವಾಗುತ್ತದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,953
ಇಂದಿನ ಅಂತ್ಯ: 25,807
ದಿನದ ಕನಿಷ್ಠ: 25,752
146

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು
100 ಕ್ಕೆ ₹570
12 ಕ್ಕೆ ₹80
ಮೈಸೂರು: 100 ಕ್ಕೆ ₹572

ಎನ್.ಆರ್.ಪುರ ರಬ್ಬರ್ (ಪ್ರತಿ ಕೆಜಿ)
ಆರ್‌ಎಸ್‌ಎಸ್-4 ₹206.50
ಆರ್‌ಎಸ್‌ಎಸ್-5 ₹201.50
ಗುಡ್ ಲಾಟ್ ₹189.50

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಕೆ.ಜಿ) ₹556-805
ದ್ವಿತಳಿ (ಕೆ.ಜಿ) ₹315-993

ಮುದ್ರೆಮನೆ ಕಾಫಿ
ಎಪಿ ₹23500
ಎಸಿ ₹12800
ಆರ್‌ಪಿ ₹18100
ಆರ್‌ಸಿ ₹10025

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ) (10 ಕೆಜಿಗೆ)
ಶೇಂಗಾ (ರಿಫೈನ್ಡ್) ₹1770 (1740)
ಸೋಯಾ (ರಿಫೈನ್ಡ್) ₹1390 (1405)
ಸೂರ್ಯಕಾಂತಿ (ರಿಫೈನ್ಡ್) ₹1615 (1615)
ಪಾಮೋಲಿನ್ ₹1310 (1320)

ಮುಂಬೈ ಧಾರಣೆ (ಶೇಂಗಾ)

12-02-2026	
ಜಾವಾ 70/80(ಹೊಸ)	11500-11600
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9800-9900
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1780 (1750)
ಒಂದು ವಾರದ ಡೆಲಿವರಿ	1775 (1745)
ಪಾಮ್ ವಾರದ ಡೆಲಿವರಿ	1308 (1318)
ಸೂರ್ಯಕಾಂತಿ ಎಣ್ಣೆ ಕಚ್ಚಾ	1520 (1525)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,55,300 (1,55,900)
ಬೆಳ್ಳಿ ಕೆ.ಜಿಗೆ	2,59,700 (2,64,700)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ನ್ಯಾಯಾಂಗದ ಖಾಲಿ ಹುದ್ದೆಗೆ ನಿವೃತ್ತ ನ್ಯಾಯಮೂರ್ತಿಗಳನ್ನು ನೇಮಕ ಮಾಡುವುದು ಸರಿಯೇ?

ಸರಿ ತಪ್ಪು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಜನವರಿಯಲ್ಲಿ ಹಣದುಬ್ಬರ ಶೇ 2.75

ಹಣದುಬ್ಬರ ಅಳೆಯಲು 2024 ಅನ್ನು ಮೂಲ ವರ್ಷ ಆಗಿಸಿಕೊಂಡ ಹೊಸ ಕ್ರಮ



ನವದೆಹಲಿ (ಪಿಟಿಐ): ಗ್ರಾಹಕ ಬೆಲೆ ಸೂಚ್ಯಂಕ ಆಧರಿಸಿದ ಚಿಲ್ಲರೆ ಹಣದುಬ್ಬರ ಪ್ರಮಾಣವು ಜನವರಿಯಲ್ಲಿ ಶೇಕಡ 2.75ರಷ್ಟು ಆಗಿದೆ. ಈ ಬಾರಿಯಿಂದ ಸೂಚ್ಯಂಕಕ್ಕೆ 2024ನೇ ಇಸವಿಯನ್ನು ಮೂಲ ವರ್ಷವನ್ನಾಗಿ ಇರಿಸಿಕೊಳ್ಳಲಾಗುತ್ತಿದೆ.

ಚಿಲ್ಲರೆ ಹಣದುಬ್ಬರ ಅಳೆಯಲು 2024ನೇ ಇಸವಿಯನ್ನು ಮೂಲ ವರ್ಷವನ್ನಾಗಿಸಿಕೊಂಡ ಹೊಸ ಕ್ರಮವನ್ನು ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯದ ಅಧೀನದಲ್ಲಿ ಕಾರ್ಯ ನಿರ್ವಹಿಸುವ ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಗುರುವಾರ ಅನಾವರಣ ಮಾಡಿದೆ.

ಇದರಲ್ಲಿ ಸರಕುಗಳ ಸಂಖ್ಯೆಯನ್ನು 259ರಿಂದ 308ಕ್ಕೆ ಹೆಚ್ಚಿಸಲಾಗಿದೆ. ಸೇವೆಗಳ ಸಂಖ್ಯೆಯನ್ನು 40ರಿಂದ 50ಕ್ಕೆ ಜಾಸ್ತಿ ಮಾಡಲಾಗಿದೆ.

ಜನವರಿಯಲ್ಲಿ ಆಹಾರ ವಸ್ತುಗಳ ಬೆಲೆ ಏರಿಕೆ ಪ್ರಮಾಣ ಶೇ 2.13ರಷ್ಟು, ಮನೆಗಳ ಬೆಲೆ ಏರಿಕೆಯು ಶೇ 2.05ರಷ್ಟು ಇತ್ತು. 2012 ಅನ್ನು ಮೂಲ ವರ್ಷವನ್ನಾಗಿ ಇರಿಸಿಕೊಂಡಿದ್ದ ಹಳೆಯ ಕ್ರಮದಲ್ಲಿ ಕಳೆದ ವರ್ಷದ ಜನವರಿಯ ಹಣದುಬ್ಬರ ಪ್ರಮಾಣ ಶೇ 4.26 ಹಾಗೂ ಡಿಸೆಂಬರ್‌ನಲ್ಲಿ ಶೇ 1.33ರಷ್ಟಿತ್ತು.

ಜನವರಿಯಲ್ಲಿ ಹಣದುಬ್ಬರ ಪ್ರಮಾಣವು ಗ್ರಾಮಾಂತರ ಪ್ರದೇಶಗಳಲ್ಲಿ ಶೇ 2.73ರಷ್ಟು, ನಗರ ಪ್ರದೇಶಗಳಲ್ಲಿ ಶೇ 2.77ರಷ್ಟು ಇತ್ತು.

ಹೊಸ ಕ್ರಮದಲ್ಲಿ ಗ್ರಾಮೀಣ ಪ್ರದೇಶಗಳ ಮನೆ ದರ, ಆನ್‌ಲೈನ್ ಮಾಧ್ಯಮ ಸೇವೆಗಳು ಹಾಗೂ ಒಟಿಟಿ ಸ್ಟ್ರೀಮಿಂಗ್ ಸೇವೆಗಳು, ಮೌಲ್ಯವರ್ಧಿತ ಡೇರಿ ಉತ್ಪನ್ನಗಳು, ಬಾರ್ಲಿ ಹಾಗೂ ಅದರ ಉತ್ಪನ್ನಗಳು, ಪೆನ್‌ಡ್ರೈವ್ ಮತ್ತು ಎಕ್ಸ್‌ಟರ್ನಲ್ ಹಾರ್ಡ್‌ಡಿಸ್ಕ್‌ನಂತಹ ಉತ್ಪನ್ನಗಳನ್ನು ಸೇರ್ಪಡೆ ಮಾಡಲಾಗಿದೆ.

ವಿಸಿಆರ್, ವಿಸಿಡಿ ಮತ್ತು ಡಿವಿಡಿ ಪ್ಲೇಯರ್‌ಗಳು; ರೇಡಿಯೊ, ಟೇಪ್ ರೆಕಾರ್ಡರ್, ಸಿಡಿ/ಡಿವಿಡಿ ಕ್ಯಾಸೆಟ್‌ಗಳನ್ನು ಕೈಬಿಡಲಾಗಿದೆ.

ಬೇರೆ ಬೇರೆ ಉತ್ಪನ್ನಗಳಿಗೆ ಸೂಚ್ಯಂಕದಲ್ಲಿ ನೀಡಿರುವ ಪ್ರಾಧಾನ್ಯವನ್ನು 2023-24ರ ಕುಟುಂಬಗಳ ಗ್ರಾಹಕ ವೆಚ್ಚ ಸಮೀಕ್ಷೆಯನ್ನು ಆಧರಿಸಿ ಬದಲಾಯಿಸಲಾಗಿದೆ. 2012ರ ಕ್ರಮದಲ್ಲಿ ಆಹಾರ ಮತ್ತು ಪಾನೀಯಗಳಿಗೆ ಶೇ 45.86ರಷ್ಟು ಪಾಲು ಇತ್ತು. ಅದನ್ನು ಈಗ ಶೇ 36.75ಕ್ಕೆ ಇಳಿಕೆ ಮಾಡಲಾಗಿದೆ.

ದತ್ತಾಂಶ ಗುಣಮಟ್ಟ ಸುಧಾರಣೆ: ನಾಗೇಶ್ವರನ್

2024ನೇ ಇಸವಿಯನ್ನು ಮೂಲವರ್ಷವನ್ನಾಗಿ ಇರಿಸಿಕೊಂಡಿರುವ ಹೊಸ ಸಿಪಿಐ ಸೂಚ್ಯಂಕವು ಹಣಕಾಸು ಮತ್ತು ವಿತ್ತೀಯ ನೀತಿ ರೂಪಿಸಲು ಬಳಸುವ ದತ್ತಾಂಶಗಳ ಗುಣಮಟ್ಟ ಸುಧಾರಿಸುತ್ತದೆ ಎಂದು ಕೇಂದ್ರ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ಹೇಳಿದ್ದಾರೆ.

ಹೊಸ ಕ್ರಮವು ಸೇವಾ ಮಾರುಕಟ್ಟೆ ಹಾಗೂ ಡಿಜಿಟಲ್ ಮಾರುಕಟ್ಟೆಯನ್ನು ಹೆಚ್ಚು ವ್ಯಾಪಕವಾಗಿ ಒಳಗೊಂಡಿದೆ. ಇದು ಜನರ ನೈಜ ಆದಾಯ ಮತ್ತು ಖರೀದಿ ಚಿತ್ರಣವನ್ನು ತಿಳಿಯುವ ನೀತಿ ನಿರೂಪಕರಿಗೆ ಹೆಚ್ಚು ನಿಖರವಾದ ಆಧಾರವನ್ನು ಒದಗಿಸುತ್ತದೆ ಎಂದು ಅವರು ಹೇಳಿದ್ದಾರೆ.

ಹಣಕಾಸಿನ ನೀತಿಯ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಾಗ ಆರ್‌ಬಿಐ ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಪರಿಗಣಿಸುತ್ತದೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹20000-20000
ದಾವಣಗೆರೆ ₹13500-13150
ತಿಪಟೂರು ₹28500-30050

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)
ದೊಡ್ಡ ₹1400-2100
ಮಧ್ಯಮ ₹800-1400
ಸಣ್ಣ ₹400-800

‘ಜವಳಿ ಉತ್ಪನ್ನ: ಅಮೆರಿಕದಲ್ಲಿ ಶೂನ್ಯ ಸುಂಕ’

ನವದೆಹಲಿ (ಪಿಟಿಐ): ‘ಅಮೆರಿಕದ ಜೊತೆಗಿನ ವ್ಯಾಪಾರ ಒಪ್ಪಂದದ ಅಡಿಯಲ್ಲಿ ಭಾರತಕ್ಕೆ, ಬಾಂಗ್ಲಾದೇಶದ ಜವಳಿ ಉತ್ಪನ್ನಗಳಿಗೆ ಸಿಕ್ಕಂತಹ ಪ್ರಯೋಜನವೇ ಸಿಗಲಿದೆ’ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.


ಪೀಯೂಷ್ ಗೋಯಲ್

ಅಮೆರಿಕವು, ಬಾಂಗ್ಲಾದೇಶದ ಸರಕುಗಳ ಮೇಲಿನ ಪ್ರತಿಸುಂಕವನ್ನು ಶೇ 19ಕ್ಕೆ ಇಳಿಸಲಿದೆ. ಆದರೆ, ಅಮೆರಿಕದ ಹತ್ತಿ ಬಳಸಿ, ಯಂತ್ರಗಳ ನೆರವಿಲ್ಲದೆ ಸಿದ್ಧಪಡಿಸಿದ ನೂಲಿನಿಂದ ತಯಾರಿಸಿದ ಜವಳಿ ಉತ್ಪನ್ನಗಳಿಗೆ ಮಾತ್ರ ಶೂನ್ಯ ಸುಂಕ ವಿಧಿಸಲಿದೆ. ಈಗ ಬಾಂಗ್ಲಾದೇಶದ ಜವಳಿ ಉತ್ಪನ್ನಕ್ಕೆ ಅಮೆರಿಕದಲ್ಲಿ ಶೇ 31ರಷ್ಟು ಸುಂಕ (ಅತ್ಯಂತ ನೆಚ್ಚಿನ ರಾಷ್ಟ್ರವೆಂಬ ಕಾರಣಕ್ಕೆ ಶೇ 12ರಷ್ಟು ಸುಂಕ ಮತ್ತು ಪ್ರತಿಸುಂಕದ ರೂಪದಲ್ಲಿ ಶೇ 19ರಷ್ಟು ಸುಂಕ) ಇದೆ. ಬಾಂಗ್ಲಾದೇಶವು ಅಮೆರಿಕದ ನೂಲು ಬಳಸಿದರೆ ಸುಂಕವು ಶೇ 12ಕ್ಕೆ ಇಳಿಕೆ ಆಗಲಿದೆ.

ಅಮೆರಿಕ–ಭಾರತದ ಅಂತಿಮ ವ್ಯಾಪಾರ ಒಪ್ಪಂದದಲ್ಲಿ ಬಾಂಗ್ಲಾದೇಶವು ಪಡೆದ ಪ್ರಯೋಜನವನ್ನೇ ಭಾರತವು ಸಹ ಪಡೆಯಲಿದೆ ಎಂದು ಗೋಯಲ್ ಹೇಳಿದ್ದಾರೆ.

ಭಾರತದ ಕಂಪನಿಗಳು ಅಮೆರಿಕದಿಂದ ನೂಲು ಮತ್ತು ಹತ್ತಿಯನ್ನು ಖರೀದಿಸಿ, ಉತ್ಪನ್ನಗಳನ್ನು ತಯಾರಿಸಿ ಅಮೆರಿಕಕ್ಕೆ ರಫ್ತು ಮಾಡಿದರೆ, ಅಮೆರಿಕದಲ್ಲಿ ಶೂನ್ಯ ಸುಂಕದ ಪ್ರಯೋಜನ ದೊರೆಯಲಿದೆ ಎಂದು ಹೇಳಿದ್ದಾರೆ.

ಇದು ದೇಶದ ಹತ್ತಿ ಬೆಳೆಗಾರರ ಮೇಲೆ ಯಾವುದೇ ಪರಿಣಾಮ ಬೀರದು ಎಂದು ತಿಳಿಸಿದ್ದಾರೆ.

‘ಭಾರತದೊಂದಿಗಿನ ಒಪ್ಪಂದ ಐತಿಹಾಸಿಕ’

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ‘ಭಾರತದೊಂದಿಗೆ ಮಾಡಿಕೊಂಡ ವ್ಯಾಪಾರ ಒಪ್ಪಂದವು ಐತಿಹಾಸಿಕವಾದುದು. ಭಾರತವೂ ಸೇರಿ ವ್ಯಾಪಾರ ಒಪ್ಪಂದ ಮಾಡಿಕೊಂಡ ಇತರ ಹಲವು ದೇಶಗಳಿಗೆ ಅಮೆರಿಕವು ಭಾರಿ ಪ್ರಮಾಣದ ಕಲ್ಲಿದ್ದಲನ್ನು ರಫ್ತು ಮಾಡಲಿದೆ’ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಹೇಳಿದರು.

‘ಚಾಂಪಿಯನ್ ಆಫ್ ಕೋಲ್’ ಎಂಬ ಹೆಸರಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ‘ನಮ್ಮ ನಾಯಕತ್ವದಲ್ಲಿ ಅಮೆರಿಕವು ಹೆಚ್ಚಿನ ಪ್ರಮಾಣದ ಇಂಧನ ರಫ್ತು ಮಾಡುವ ದೇಶವಾಗಿ ಹೊರಹೊಮ್ಮಲಿದೆ. ಜಪಾನ್, ಕೊರಿಯಾ, ಭಾರತ ಮತ್ತು ಇತರ ದೇಶಗಳಿಗೆ ನಮ್ಮ ಕಲ್ಲಿದ್ದಲನ್ನು ಭಾರಿ ಪ್ರಮಾಣದಲ್ಲಿ ರಫ್ತು ಮಾಡಲಿದ್ದೇವೆ’ ಎಂದರು.

‘ನಾವು ಈಗ ಜಗತ್ತಿನ ಎಲ್ಲೆಡೆಗೂ ಕಲ್ಲಿದ್ದಲು ರಫ್ತು ಮಾಡುತ್ತೇವೆ. ನಮ್ಮ ಕಲ್ಲಿದ್ದಲಿನ ಗುಣಮಟ್ಟವು ಬೇರೆ ದೇಶಗಳ ಕಲ್ಲಿದ್ದಲಿನ ಗುಣಮಟ್ಟಕ್ಕಿಂತ ಅತ್ಯುತ್ತಮವಾಗಿರಲಿದೆ’ ಎಂದರು.

ಭಾರತೀಯ ವಿದ್ಯಾರ್ಥಿನಿ ಕುಟುಂಬಕ್ಕೆ ₹262 ಕೋಟಿ ಪರಿಹಾರ ಘೋಷಣೆ


ಜಾಹ್ನವಿ

ಸಿಯಾಟಲ್ (ಎಪಿ): ಪೊಲೀಸ್ ಅಧಿಕಾರಿ ಚಲಾಯಿಸುತ್ತಿದ್ದ ವಾಹನ ಡಿಕ್ಕಿ ಹೊಡೆದು ಮೃತಪಟ್ಟಿದ್ದ ಭಾರತೀಯ ವಿದ್ಯಾರ್ಥಿನಿ ಜಾಹ್ನವಿ ಕಂದುಲ (23) ಅವರ ಕುಟುಂಬಕ್ಕೆ ಅಮೆರಿಕದ ಸಿಯಾಟಲ್‌ನ ಸ್ಥಳೀಯಾಡಳಿತ 2.9 ಕೋಟಿ ಡಾಲರ್ (₹262 ಕೋಟಿ) ಪರಿಹಾರ ಘೋಷಿಸಿದೆ.

2023ರಲ್ಲಿ ಈ ಘಟನೆ ನಡೆದಿತ್ತು. ಗಂಟೆಗೆ 40 ಕಿ.ಮೀ. ವೇಗದಲ್ಲಿ ಚಲಿಸಬೇಕಿದ್ದ ವಲಯದಲ್ಲಿ ಪೊಲೀಸ್ ಅಧಿಕಾರಿ ಕೆವಿನ್ ಡೇವ್ ಅವರು 119 ಕಿ.ಮೀ. ವೇಗದಲ್ಲಿ ವಾಹನ ಚಲಾಯಿಸಿದ್ದರಿಂದ ಅಪಘಾತ ಸಂಭವಿಸಿತ್ತು.

ವಿದ್ಯಾರ್ಥಿನಿಯ ಸಾವು ಹೃದಯವಿದ್ರಾವಕವಾಗಿತ್ತು. ಈಗಿನ ಪರಿಹಾರವು, ಅವರ ಕುಟುಂಬಕ್ಕೆ ಸ್ವಲ್ಪ ಮಟ್ಟಿಗಿನ ನೆಮ್ಮದಿಯನ್ನಾದರೂ ತಂದುಕೊಡುತ್ತದೆ ಎಂದು ಆಶಿಸುತ್ತೇವೆ’ ಎಂದು ಸಿಯಾಟಲ್‌ನ ಅಟಾರ್ನಿ ಎರಿಕಾ ಇವಾನ್ಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಾಹ್ನವಿ ಅವರು ಸಿಯಾಟಲ್‌ನ ನಾರ್ಥ್ ಈಸ್ಟರ್ನ್ ವಿಶ್ವವಿದ್ಯಾಲಯದಲ್ಲಿ ಇನ್‌ಫಾರ್ಮೇಷನ್ ಸಿಸ್ಟಮ್ಸ್‌ನಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡುತ್ತಿದ್ದರು.

‘ಅಪಘಾತ ನಡೆದ ನಂತರ, ‘ಆಕೆಯ ಜೀವಕ್ಕೆ ಸೀಮಿತ ಮೌಲ್ಯವಿತ್ತು. ಈ ನಗರವು ಇನ್ನೊಂದು ಪರಿಹಾರದ ಚೆಕ್ ಬರೆಯಬೇಕಷ್ಟೇ’ ಎಂದು ಇನ್ನೊಬ್ಬ ಅಧಿಕಾರಿ, ಡೇನಿಯಲ್ ಆಡರರ್ ನೀಡಿದ್ದ ಹೇಳಿಕೆ ಸಾರ್ವಜನಿಕ ಆಕ್ರೋಶಕ್ಕೆ ಕಾರಣವಾಗಿತ್ತು. ಅಮೆರಿಕದಲ್ಲಿನ ಭಾರತದ ರಾಯಭಾರ ಕಚೇರಿಯೂ ಪ್ರಕರಣದ ತನಿಖೆಗೆ ಒತ್ತಾಯಿಸಿತ್ತು. ಅಮೆರಿಕದ ಪೊಲೀಸ್ ಇಲಾಖೆಯು ಈ ಇಬ್ಬರನ್ನೂ ಕೆಲಸದಿಂದ ವಜಾಗೊಳಿಸಿತ್ತು. ಘೋಷಣೆ ಆಗಿರುವ ಪರಿಹಾರದ ಬಗ್ಗೆ ಜಾಹ್ನವಿ ಅವರ ಕುಟುಂಬವು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಟ್ರಂಪ್ ‘ಶಾಂತಿ ಮಂಡಳಿ’ ಸೇರಿದ ಇಸ್ರೇಲ್

ವಾಷಿಂಗ್ಟನ್ (ಪಿಟಿಐ): ಗಾಜಾ ಆಡಳಿತದ ಮೇಲ್ವಿಚಾರಣೆ ನಡೆಸಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸ್ಥಾಪಿಸಿರುವ ‘ಶಾಂತಿ ಮಂಡಳಿ’ಗೆ ಇಸ್ರೇಲ್ ಸೇರ್ಪಡೆಗೊಂಡಿದೆ ಎಂದು ಅಲ್ಲಿನ ಪ್ರಧಾನಿ ಬೆಂಜಮಿನ್ ನೆತನ್ಯಾಹು ಬುಧವಾರ ಹೇಳಿದರು.

ವಾಷಿಂಗ್ಟನ್‌ಗೆ ಭೇಟಿ ನೀಡಿದ್ದ ನೆತನ್ಯಾಹು ಅವರು ಟ್ರಂಪ್ ಹಾಗೂ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರೊಂದಿಗೆ ಮಾತುಕತೆ ನಡೆಸಿದರು. ‘ಶಾಂತಿ ಮಂಡಳಿ’ಯ ಸದಸ್ಯನಾಗಿ ಇಸ್ರೇಲ್‌ನ ಸೇರ್ಪಡೆಗೆ ಸಹಿ ಮಾಡಿದ್ದೇನೆ’ ಎಂದು ನೆತನ್ಯಾಹು ಈ ವೇಳೆ ತಿಳಿಸಿದರು.

ಹಮಾಸ್ – ಇಸ್ರೇಲ್ ಕದನ ವಿರಾಮ ಒಪ್ಪಂದದ 2ನೇ ಹಂತದ ಅನ್ವಯ ರೂಪಿಸಲಾಗಿರುವ ‘ಗಾಜಾ ಶಾಂತಿ ಮಂಡಳಿ’ ಸೇರಲು ವಿವಿಧ ದೇಶಗಳ ನಾಯಕರಿಗೆ ಟ್ರಂಪ್ ಆಹ್ವಾನ ನೀಡಿದ್ದರು. ಪಾಕಿಸ್ತಾನ, ಯುಎಇ, ಸೌದಿ ಅರೇಬಿಯಾ, ಈಜಿಪ್ಟ್ ಸೇರಿ ಹಲವು ರಾಷ್ಟ್ರಗಳು ಈ ಮಂಡಳಿ ಸೇರಿವೆ.

ಗಾಜಾ ಪುನರ್‌ನಿರ್ಮಾಣದ ಕುರಿತು ಚರ್ಚಿಸಲು ಫೆ.19ರಂದು ಮಂಡಳಿಯ ಸದಸ್ಯ ರಾಷ್ಟ್ರಗಳು ಮೊದಲ ಸಭೆ ಸೇರಲಿವೆ.

ಹಮಾಸ್ – ಇಸ್ರೇಲ್ ನಡುವಿನ ಯುದ್ಧದಲ್ಲಿ ಈವರೆಗೆ 72 ಸಾವಿರಕ್ಕೂ ಅಧಿಕ ಪ್ಯಾಲೆಸ್ಟೀನಿಯರು ಸಾವಿಗೀಡಾಗಿದ್ದಾರೆ ಎಂದು ಗಾಜಾದ ಆರೋಗ್ಯ ಅಧಿಕಾರಿಗಳು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಎಕ್ಸ್‌ಪ್ರೆಸ್‌ವೇ ಶುಲ್ಕ ನಿಯಮ ಬದಲು

ನವದೆಹಲಿ (ಪಿಟಿಐ): ಬಳಕೆಗೆ ಭಾಗಶಃ ಮುಕ್ತವಾಗಿರುವ ರಾಷ್ಟ್ರೀಯ ಎಕ್ಸ್‌ಪ್ರೆಸ್‌ವೇ ಶುಲ್ಕವನ್ನು ಕಡಿಮೆ ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿ ಶುಲ್ಕ ನಿಯಮಗಳನ್ನು ತಿದ್ದುಪಡಿ ಮಾಡಿದೆ.

ತಿದ್ದುಪಡಿ ಕಂಡಿರುವ ನಿಯಮಗಳು ಭಾನುವಾರದಿಂದ ಜಾರಿಗೆ ಬರಲಿವೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಗುರುವಾರ ಹೇಳಿದೆ.

ಇದರ ಪ್ರಕಾರ, ರಾಷ್ಟ್ರೀಯ ಎಕ್ಸ್‌ಪ್ರೆಸ್‌ವೇ ಪೂರ್ಣವಾಗಿ (ಅಂದರೆ ಶುರುವಿನಿಂದ ಕೊನೆಯವರೆಗೆ) ಬಳಕೆಗೆ ಮುಕ್ತವಾಗಿರದಿದ್ದಾಗ, ಅದರ ಶುಲ್ಕವನ್ನು ರಾಷ್ಟ್ರೀಯ ಹೆದ್ದಾರಿಗಳಿಗೆ ಅನ್ವಯವಾಗುವ ಕಡಿಮೆ ದರದಲ್ಲಿ, ಪೂರ್ಣಗೊಂಡಷ್ಟು ಭಾಗಕ್ಕೆ ಮಾತ್ರ ನಿಗದಿ ಮಾಡಲಾಗುತ್ತದೆ ಎಂದು ಸಚಿವಾಲಯ ಹೇಳಿದೆ.

ಈಗಿನ ನಿಯಮಗಳ ಪ್ರಕಾರ, ರಾಷ್ಟ್ರೀಯ ಎಕ್ಸ್‌ಪ್ರೆಸ್‌ವೇ ಬಳಕೆದಾರರಿಗೆ, ಪೂರ್ಣಗೊಂಡಷ್ಟು ಭಾಗಕ್ಕೆ ಅನ್ವಯವಾಗುವ ಶುಲ್ಕವನ್ನು ರಾಷ್ಟ್ರೀಯ ಹೆದ್ದಾರಿಗಳ ಶುಲ್ಕದ ಶೇ 25ರಷ್ಟು ಹೆಚ್ಚಿನ ದರದಲ್ಲಿ ವಿಧಿಸಲಾಗುತ್ತಿದೆ.



ಹೊಸ ನಿಯಮವು ಜಾರಿಗೆ ಬಂದ ದಿನದಿಂದ ಒಂದು ವರ್ಷದವರೆಗೆ ಅಥವಾ ಎಕ್ಸ್‌ಪ್ರೆಸ್‌ವೇ ಪೂರ್ತಿಯಾಗಿ ಬಳಕೆಗೆ ಮುಕ್ತವಾಗುವವರೆಗೆ ಅನ್ವಯವಾಗಲಿದೆ.

ಷೇರುಪೇಟೆ ಸೂಚ್ಯಂಕ ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಗುರುವಾರ ನಡೆದ ವಹಿವಾಟುಗಳಲ್ಲಿ ಮಾಹಿತಿ ತಂತ್ರಜ್ಞಾನ ವಲಯದ ಷೇರುಗಳ ಮೌಲ್ಯವು ತೀವ್ರವಾಗಿ ಕುಸಿದಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಬಿಎಸ್‌ಇ ಸೆನ್ಸೆಕ್ಸ್ 558 ಅಂಶ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ಎನ್‌ಎಸ್‌ಇ ನಿಫ್ಟಿ 146ರಷ್ಟು ಕುಸಿದಿವೆ.

ಟಿಸಿಎಸ್ ಕಂಪನಿಯ ಷೇರುಮೌಲ್ಯವು ಶೇ 5.41ರಷ್ಟು ಕುಸಿದಿದ್ದು, ಇದರ ಪರಿಣಾಮವಾಗಿ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ₹10 ಲಕ್ಷ ಕೋಟಿಗಿಂತ ಕಡಿಮೆ ಆಗಿದೆ. ದೇಶದ ಅತ್ಯಂತ ಮೌಲ್ಯಯುತ ಕಂಪನಿಗಳ ಪಟ್ಟಿಯಲ್ಲಿ ಟಿಸಿಎಸ್ ಈಗ ಆರನೆಯ ಸ್ಥಾನದಲ್ಲಿದೆ.

‘ಎ.ಐ. ಕಾರಣದಿಂದಾಗಿ ಉಂಟಾಗಬಹುದಾದ ಪಲ್ಲಟಗಳಿಗೆ ಸಂಬಂಧಿಸಿದ ಕಳವಳಗಳು ಹೆಚ್ಚಾಗುತ್ತಿವೆ. ಇದರ ಜೊತೆಯಲ್ಲಿ, ಅಮೆರಿಕದ ಕೇಂದ್ರೀಯ ಬ್ಯಾಂಕ್ ಬಡ್ಡಿ ದರವನ್ನು ತಗ್ಗಿಸಬಹುದು ಎಂಬ ನಿರೀಕ್ಷೆಯು ಕಡಿಮೆ ಆಗಿದೆ. ಹೀಗಾಗಿ ಐ.ಟಿ. ಕಂಪನಿಗಳ ಸೂಚ್ಯಂಕವು ಕುಸಿದಿದೆ’ ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ರಾಜ್ಯದ ತೆಂಗು ರೈತರಿಗೆ ಹೆಚ್ಚುವರಿ ಅನುದಾನ: ದೇವೇಗೌಡ ಮನವಿ

ಪ್ರಜಾವಾಣಿ ವಾರ್ತೆ


ಎಚ್‌.ಡಿ. ದೇವೇಗೌಡ

ನವದೆಹಲಿ: ಮಾರುಕಟ್ಟೆಯಲ್ಲಿ ತೆಂಗಿನಕಾಯಿ ಮತ್ತು ಅದರ ಉತ್ಪನ್ನಗಳಿಗೆ ಭಾರೀ ಬೇಡಿಕೆ ವ್ಯಕ್ತವಾಗುತ್ತಿದೆ. ಇದರಿಂದಾಗಿ, ತೆಂಗು ಬೆಳೆಯುವ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳ ಜೊತೆಗೆ ವಿವಿಧ ಉತ್ಪನ್ನಗಳು ಮತ್ತು ಉಪ ಉತ್ಪನ್ನಗಳಿಗೂ ಬೇಡಿಕೆ ಹೆಚ್ಚಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ತೆಂಗು ಬೆಳೆಗಾರರಿಗೆ ಬಜೆಟ್ ಹಂಚಿಕೆಯನ್ನು ಹೆಚ್ಚಿಸುವ ಅವಶ್ಯಕತೆಯಿದೆ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕವೂ ಸೇರಿ ವಿವಿಧ ರಾಜ್ಯಗಳಲ್ಲಿ ಯಥೇಚ್ಛವಾಗಿ ಬೆಳೆಯಲಾಗುತ್ತಿರುವ ಹಲಸು, ಹುಣಸೆ ಮತ್ತು ನೇರಳೆಗೆ ಉತ್ತೇಜನ ನೀಡುವುದಕ್ಕೆ ಪ್ರತ್ಯೇಕ ರಾಷ್ಟ್ರೀಯ ಮಂಡಳಿ ರಚಿಸಬೇಕು ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಮನವಿ ಮಾಡಿದ್ದಾರೆ.

ತೆಂಗಿನ ರಫ್ತು ವಹಿವಾಟು 2008-09ರಲ್ಲಿ ₹179.81 ಕೋಟಿ ಇತ್ತು. 2024-25ರಲ್ಲಿ ₹4349.01 ಕೋಟಿಗಳಿಗೆ ಏರಿದೆ. ಇದು ಅಖಿಲ ಭಾರತ ಮಟ್ಟದಲ್ಲಿ ಕಳೆದ 15 ವರ್ಷಗಳಲ್ಲಿ 20 ಪಟ್ಟು ಹೆಚ್ಚಾಗಿದೆ. ಕರ್ನಾಟಕದಲ್ಲಿಯೂ ಇದೇ ರೀತಿಯ ಬೆಳವಣಿಗೆ ಕಂಡುಬಂದಿದೆ. ಆದ್ದರಿಂದ, 2030ರ ವೇಳೆಗೆ ತೆಂಗಿನಕಾಯಿ ಕ್ಷೇತ್ರದಲ್ಲಿ ಬಲವಾದ ಬೆಳವಣಿಗೆ ಸಾಧಿಸಲು ಬಜೆಟ್ ಹಂಚಿಕೆಯನ್ನು ಹೆಚ್ಚಿಸಬೇಕಾಗಿದೆ ಎಂದು ಅವರು ಸಲಹೆ ಮಾಡಿದರು.

ಮೌಲ್ಯವರ್ಧನೆ ಮತ್ತು ಸಂಸ್ಕರಣೆಗೆ ₹150 ಕೋಟಿ ಮೀಸಲಿಡಬೇಕು ಎಂದೂ ಆಗ್ರಹಿಸಿದರು.

ಅಡಿಕೆ ಧಾರಣೆ

ಕುಮಟಾ	
ಚಾಲಿ	36969-50893
ಚಿಪ್ಪು	17291-41669
ಕೋಕ	15800-38159
ಹೊಸಚಾಲಿ	31270-49069
ಪುತ್ತೂರು	
ಕೋಕ	28000-36500
ಹೊಸತು	26000-46000
ಸಾಗರ	
ಬಿಳಿಗೋಟು	22214-35599
ಚಾಲಿ	23189-45130
ಕೋಕ	13299-36199
ಕೆಂಪುಗೋಟು	24989-42499
ರಾಶಿ	31139-57669
ಸಿಪ್ಪೆಗೋಟು	10119-24199
ಶಿವಮೊಗ್ಗ	
ಬೆಟ್ಟೆ	50040-66619
ಗೊರಬಲು	19162-43669
ರಾಶಿ	46009-58409
ಸರಕು	50159-98140
ಸಿದ್ದಾಪುರ	
ಬಿಳಿಗೋಟು	27319-40119
ಚಾಲಿ	43819-49899
ಕೋಕ	22699-32289
ಕೆಂಪುಗೋಟು	32089-35789
ರಾಶಿ	49899-55399
ತಟ್ಟಿಬೆಟ್ಟೆ	37899-52119
ಶಿರಸಿ	
ಬೆಟ್ಟೆ	46099-53498
ಬಿಳಿಗೋಟು	31890-41723
ಚಾಲಿ	44131-48399
ಕೆಂಪುಗೋಟು	26899-40099
ರಾಶಿ	52698-56999

ಕೈಗಾರಿಕಾ ಎಫ್‌ಎಆರ್: ಶೇ 75ಕ್ಕೆ ಹೆಚ್ಚಳ

ವಸತಿ ಸೌಕರ್ಯ, ಕೈಗಾರಿಕಾ ಟೌನ್‌ಶಿಪ್ ಅಭಿವೃದ್ಧಿಗೆ ಸಮ್ಮತಿ: ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ನಿವೇಶನಗಳಲ್ಲಿ ಮಹಡಿ ವಿಸ್ತೀರ್ಣ ಅನುಪಾತವನ್ನು (ಎಫ್‌ಎಆರ್) ಕೈಗಾರಿಕಾ ಸ್ನೇಹಿಯಾಗಿ ಮಾರ್ಪಡಿಸಿ ಆದೇಶ ಹೊರಡಿಸಲಾಗಿದೆ. ಈ ಕ್ರಮದಿಂದ ಕೈಗಾರಿಕಾ ಪ್ರದೇಶಗಳಲ್ಲಿ ರಿಯಲ್ ಎಸ್ಟೇಟ್ ಚಟುವಟಿಕೆಗಳು ಗರಿಗೆದರಲಿವೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

ಇದುವರೆಗೂ ಕೈಗಾರಿಕಾ ನಿವೇಶನಗಳಲ್ಲಿ ಶೇಕಡ 65ರಷ್ಟು ಭೂಮಿಯನ್ನು ಮಾತ್ರ ಉದ್ಯಮದ ಕಟ್ಟಡ ನಿರ್ಮಾಣಕ್ಕೆ ಬಳಸಿಕೊಳ್ಳಲು ಅವಕಾಶವಿತ್ತು. ಈಗ ಶೇ 75ಕ್ಕೆ ಹೆಚ್ಚಿಸಲಾಗಿದೆ. ಇದರಿಂದ ಕೈಗಾರಿಕೆಗಳಿಗೋಸ್ಕರ ಹೆಚ್ಚು ಜಮೀನು ಸ್ವಾಧೀನ ಪಡಿಸಿಕೊಳ್ಳುವುದು ತಪ್ಪಲಿದೆ. ಆರ್ಥಿಕ ಹೊರೆಯೂ ತಗ್ಗಲಿದೆ. ರೈತರಿಗೂ ಅನುಕೂಲವಾಗಲಿದೆ ಎಂದಿದ್ದಾರೆ.

ಹಳೆಯ ಎಫ್‌ಎಆರ್ ಪ್ರಮಾಣದಲ್ಲಿ ಹೂಡಿಕೆದಾರರಿಗೆ ಅಡಚಣೆಗಳಿದ್ದವು. ಒಂದು ಉದ್ಯಮಕ್ಕೆ 10 ಎಕರೆ ಜಾಗ ಕೊಟ್ಟರೆ ಅದರಲ್ಲಿ 6.5 ಎಕರೆಯನ್ನು ಮಾತ್ರ ಬಳಸಿಕೊಳ್ಳಬಹುದಿತ್ತು. ಉಳಿದ ಜಾಗವನ್ನು ಪಾರ್ಕಿಂಗ್, ಕಟ್ಟಡದ ನಾಲ್ಕೂ ಬದಿಗಳಲ್ಲಿ ಸೆಟ್ ಬ್ಯಾಕ್‌ಗೆ ಬಿಡಬೇಕಿತ್ತು. 7 ಮೀಟರ್ ಎತ್ತರದ ಕೈಗಾರಿಕಾ ಕಟ್ಟಡಗಳಲ್ಲಿ ಸೆಟ್-ಬ್ಯಾಕ್‌ಗಾಗಿ ಮುಂಭಾಗದಲ್ಲಿ 1.5 ಮೀಟರ್, ಹಿಂಭಾಗ, ಎಡ ಮತ್ತು ಬಲ ಬದಿಗಳಲ್ಲಿ ತಲಾ 1 ಮೀಟರ್ ಜಾಗ ಬಿಡಬೇಕಿತ್ತು. ಹೊಸ ನಿಯಮದಿಂದಾಗಿ 1.5 ಮೀಟರ್ ಮತ್ತು ಯಾವುದಾದರೂ ಒಂದು ಪಾರ್ಶ್ವದಲ್ಲಿ (ಎಡ/ಬಲ) 1 ಮೀಟರ್ ಬಿಟ್ಟರೆ ಸಾಕು. ಇದೇ ರೀತಿ 15 ಮೀಟರ್ ಎತ್ತರದ ಕಟ್ಟಡಗಳಿಗೆ ಮುಂಬದಿಯಲ್ಲಿ 3ರಿಂದ 10 ಮೀಟರ್ ಮತ್ತು ಉಳಿದ ಮೂರು ಕಡೆಗಳಲ್ಲಿ 1.5 ಮೀಟರ್‌ನಿಂದ 8 ಮೀಟರ್ ಜಾಗವನ್ನು ಖಾಲಿ ಬಿಡಬೇಕಿತ್ತು. ಈಗ ಕ್ರಮವಾಗಿ 2ರಿಂದ 6 ಮೀಟರ್ ಮತ್ತು 1.5 ಮೀಟರ್‌ನಿಂದ 6 ಮೀಟರ್‌ಗೆ ಇಳಿಸಲಾಗಿದೆ ಎಂದು ಹೇಳಿದ್ದಾರೆ.

ಹಳೆಯ ನಿಯಮಾವಳಿಗಳಲ್ಲಿ ಉದ್ಯೋಗಿಗಳ ವಸತಿ ಸೌಕರ್ಯ ಮತ್ತು ಕೈಗಾರಿಕಾ ಟೌನ್‌ಶಿಪ್ ಅಭಿವೃದ್ಧಿಯನ್ನು ನಿರ್ಬಂಧಿಸಲಾಗಿತ್ತು. ಪರಿಷ್ಕೃತದಲ್ಲಿ ಸಾಮಾನ್ಯ ಕೈಗಾರಿಕಾ ಪ್ಲಾಟ್‌ಗಳಲ್ಲಿ ಶೇ 15ರಷ್ಟು ಪ್ರದೇಶ ವಸತಿ ಸೌಕರ್ಯ ಕಲ್ಪಿಸಲು ಮತ್ತು ಕನಿಷ್ಠ 50 ಎಕರೆ ವಿಸ್ತೀರ್ಣದ ಕೈಗಾರಿಕಾ ಪ್ಲಾಟ್‌ಗಳಲ್ಲಿ ಶೇ 10ರಷ್ಟು ಪ್ರದೇಶ ವಸತಿ ಮತ್ತು ವಾಣಿಜ್ಯ ಉದ್ದೇಶದ ಕಟ್ಟಡಗಳ ನಿರ್ಮಾಣಕ್ಕೆ ಬಳಸಿಕೊಳ್ಳಬಹುದು ಎಂದು ವಿವರ ನೀಡಿದ್ದಾರೆ.

ಪ್ರೀಮಿಯಂ ದರ್ಜೆಯ ಕೈಗಾರಿಕಾ ನಿವೇಶನಗಳಲ್ಲಿ ಎಫ್‌ಎಆರ್ ಅನ್ನು 5.2ಕ್ಕೆ ಏರಿಸಲಾಗಿದೆ. ಈ ನಿಯಮಗಳು ಕೈಗಾರಿಕಾ ಪ್ರದೇಶಗಳು, ವಿಶೇಷ ಹೂಡಿಕೆ ವಲಯಗಳು, ಏಕಘಟಕ ಸಂಕೀರ್ಣಗಳು, ಕೈಗಾರಿಕಾ ಪ್ರದೇಶಗಳ ವ್ಯಾಪ್ತಿಯಲ್ಲಿನ ವಸತಿ ಮತ್ತು ವಾಣಿಜ್ಯ ಉದ್ದೇಶದ ಕಟ್ಟಡ ನಿರ್ಮಾಣ ಯೋಜನೆಗಳಿಗೆ ಅನ್ವಯಿಸಲಿವೆ ಎಂದರು.

ರೈತರಿಗೂ ಅನುಕೂಲ

ಪರಿಷ್ಕೃತ ನಿಯಮಗಳಿಂದ ಭೂ ಸ್ವಾಧೀನ ಕಡಿಮೆ ಮಾಡಬಹುದು. ಭೂಮಿ ಕಳೆದುಕೊಳ್ಳುವ ಕೆಲವು ರೈತರು ನಗದು ಪರಿಹಾರಕ್ಕೆ ಪರ್ಯಾಯವಾಗಿ ಅಭಿವೃದ್ಧಿಪಡಿಸಿದ ಭೂಮಿಯನ್ನು ಪರಿಹಾರ ರೂಪದಲ್ಲಿ ಪಡೆಯಲಿದ್ದು, ಅಂತಹವರಿಗೂ ಇದರಿಂದ ಹೆಚ್ಚಿನ ಲಾಭವಾಗಲಿದೆ ಎಂದು ಎಂ.ಬಿ.ಪಾಟೀಲ ಹೇಳಿದ್ದಾರೆ.

ವಾಹನ ನಿಲುಗಡೆಗೆ ಕಡ್ಡಾಯವಾಗಿ ಬಿಡಬೇಕಿದ್ದ ಜಾಗದ ಪ್ರಮಾಣವನ್ನು ಇಳಿಕೆ ಮಾಡಲಾಗಿದೆ. ಕೈಗಾರಿಕಾ ನಿವೇಶನದ ಒಟ್ಟು ಜಾಗದಲ್ಲಿ ಶೇ 5ರಷ್ಟು ಜಾಗವನ್ನು ವಾಹನ ನಿಲುಗಡೆಗೆ ಮೀಸಲಿಡಬೇಕಿತ್ತು. ಈಗ ಶೇ 3ಕ್ಕೆ ಇಳಿಸಲಾಗಿದೆ ಎಂದಿದ್ದಾರೆ.

ಕೆನಡಾ: ದಾಳಿ ನಡೆಸಿದ್ದು ಮಾನಸಿಕ ಅಸ್ವಸ್ಥೆ

ಟಂಬ್ಲರ್ ರಿಡ್ಜ್ (ಕೆನಡಾ) (ಎಎಫ್‌ಪಿ): ಕೆನಡಾದ ಟಂಬ್ಲರ್ ರಿಡ್ಜ್ ನಗರದಲ್ಲಿರುವ ‘ಟಂಬ್ಲರ್ ರಿಡ್ಜ್’ ಹೈಸ್ಕೂಲ್‌ನಲ್ಲಿ ನಡೆದ ಗುಂಡಿನ ದಾಳಿಗೆ ಸಂಬಂಧಿಸಿದಂತೆ ಸ್ಥಳೀಯ ಪೊಲೀಸರು ಬುಧವಾರ ಹೆಚ್ಚಿನ ಮಾಹಿತಿ ಹಂಚಿಕೊಂಡಿದ್ದು, ‘18 ವರ್ಷ ವಯಸ್ಸಿನ ಲಿಂಗತ್ವ ಅಲ್ಪಸಂಖ್ಯಾತೆ ಈ ದಾಳಿ ನಡೆಸಿದ್ದು, ಅವರು ಮಾನಸಿಕ ಅಸ್ವಸ್ಥರು’ ಎಂದು ಹೇಳಿದ್ದಾರೆ.

‘ಜೆಸ್ಸಿ ವ್ಯಾನ್ ರೂಟ್‌ಸೆಲ್ಲಾ ಅವರು ಗುಂಡಿನ ದಾಳಿ ನಡೆಸಿದ್ದಾರೆ. ಲಿಂಗತ್ವ ಅಲ್ಪಸಂಖ್ಯಾತರಾಗಿರುವ ಇವರನ್ನು ನಾಲ್ಕು ವರ್ಷಗಳ ಹಿಂದೆ ಇದೇ ಟಂಬ್ಲರ್ ರಿಡ್ಜ್ ಹೈಸ್ಕೂಲ್‌ನಿಂದ ಹೊರಹಾಕಲಾಗಿತ್ತು. ದಾಳಿಯ ಹಿಂದಿನ ನಿಖರ ಕಾರಣ ತಿಳಿದುಬಂದಿಲ್ಲ’ ಎಂದು ಪೊಲೀಸರು ಮಾಹಿತಿ ನೀಡಿದರು.

‘ಜೆಸ್ಸಿ ಅವರು ಮೊದಲು ತಮ್ಮ ಮನೆಯಲ್ಲಿ ತಾಯಿ ಹಾಗೂ ಸಹೋದರನನ್ನು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ. ಆ ಬಳಿಕ ಶಾಲೆಗೆ ತೆರಳಿ ಗುಂಡಿನ ದಾಳಿ ನಡೆಸಿದ್ದಾರೆ’ ಎಂದರು.

‘ಜೆಸ್ಸಿ ಅವರು ಮಾನಸಿಕ ಅಸ್ವಸ್ಥರು ಎಂಬುದು ಮೊದಲೇ ತಿಳಿದಿತ್ತು. ಅವರ ಮಾನಸಿಕ ಸ್ಥಿತಿಯ ಬಗ್ಗೆ ನಮಗೆ ಹಲವು ಕರೆಗಳು ಬಂದಿದ್ದವು. ಆದ್ದರಿಂದ ನಾವು ಈ ಹಿಂದೆ ಹಲವು ಬಾರಿ ಅವರ ಮನೆಗೂ ಹೋಗಿದ್ದೆವು. ಜೆಸ್ಸಿ ಅವರ ಆರೋಗ್ಯದ ಸರಿಯಾದ ಮಾಹಿತಿ ಪಡೆಯಲು ಆರೋಗ್ಯ ಇಲಾಖೆಯೊಂದಿಗೆ ಮಾತುಕತೆ ನಡೆಸುತ್ತಿದ್ದೇವೆ’ ಎಂದರು.

‘ಒಂಬತ್ತಲ್ಲ, ಎಂಟು ಸಾವು’: ‘ದಾಳಿಯಲ್ಲಿ ಒಂಬತ್ತು ಸಾವು ಸಂಭವಿಸಿದೆ ಎಂದು ಹೇಳಲಾಗಿತ್ತು. ಆದರೆ, ಘಟನೆಯಲ್ಲಿ 8 ಮಂದಿ ಮೃತಪಟ್ಟಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಒಬ್ಬರ ಆರೋಗ್ಯದ ಕುರಿತು ಗೊಂದಲಗಳಿತ್ತು’ ಎಂದು ಪೊಲೀಸರು ಹೇಳಿದರು.

‘ದಾಳಿಯಲ್ಲಿ 39 ವರ್ಷದ ಶಿಕ್ಷಕಿ ಮೃತಪಟ್ಟಿದ್ದಾರೆ. ಜೊತೆಗೆ, ಐವರು ವಿದ್ಯಾರ್ಥಿಗಳು– ಈ ಪೈಕಿ 12 ವರ್ಷ ವಯಸ್ಸಿನ ಮೂವರು ವಿದ್ಯಾರ್ಥಿನಿಯರು ಮತ್ತು 13 ಹಾಗೂ 12 ವರ್ಷ ವಯಸ್ಸಿನ ಇಬ್ಬರು ವಿದ್ಯಾರ್ಥಿಗಳು ಸೇರಿದ್ದಾರೆ’ ಎಂದು ಪೊಲೀಸರು ವಿವರಿಸಿದರು.

ಬಾಂಗ್ಲಾದೇಶ ಚುನಾವಣೆ: ಬಹುತೇಕ ಶಾಂತಿಯುತ ಮತದಾನ

ಫಲಿತಾಂಶ ಘೋಷಣೆ ಇಂದು

ಢಾಕಾ (ಪಿಟಿಐ): 2024ರ ಆಗಸ್ಟ್‌ನಲ್ಲಿ ವಿದ್ಯಾರ್ಥಿಗಳು ದೇಶದಾದ್ಯಂತ ಪ್ರತಿಭಟನೆ ನಡೆಸಿ ಶೇಖ್ ಹಸೀನಾ ನೇತೃತ್ವದ ಸರ್ಕಾರವನ್ನು ಕಿತ್ತುಹಾಕಿದ ಬಳಿಕ ಬಾಂಗ್ಲಾದೇಶದಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯ ಮತದಾನ ಪ್ರಕ್ರಿಯೆ ಗುರುವಾರ ನಡೆಯಿತು.

ಕೆಲವೊಂದು ಸಣ್ಣ ಅಹಿತಕರ ಘಟನೆಗಳು ಹೊರತುಪಡಿಸಿದರೆ, ಮತದಾನ ಬಹುತೇಕ ಶಾಂತಿಯುತವಾಗಿತ್ತು. ಸಂಜೆ 4.30ಕ್ಕೆ ಮತದಾನ ಪೂರ್ಣಗೊಂಡ ಬೆನ್ನಲ್ಲೇ, ಮತ ಎಣಿಕೆಗೆ ಚಾಲನೆ ನೀಡಲಾಯಿತು. ಶುಕ್ರವಾರ ಬೆಳಿಗ್ಗೆ ಅಧಿಕೃತ ಫಲಿತಾಂಶ ಹೊರಬೀಳುವ ಸಾಧ್ಯತೆಯಿದೆ.

ಒಟ್ಟು 300 ಕ್ಷೇತ್ರಗಳ ಪೈಕಿ 299 ಕ್ಷೇತ್ರಗಳಿಗೆ ಗುರುವಾರ ಬೆಳಿಗ್ಗೆ 7.30ರಿಂದ ಬಿಗಿ ಭದ್ರತೆಯಲ್ಲಿ ಮತದಾನ ನಡೆಯಿತು. ಭದ್ರತೆಗೆ 1 ಲಕ್ಷಕ್ಕೂ ಹೆಚ್ಚು ಸಿಬ್ಬಂದಿ ನಿಯೋಜಿಸಲಾಗಿತ್ತು. ಮತದಾನದ ಸಮಯ ಮುಗಿದರೂ, ಕೆಲವು ಕಡೆ ಮತದಾನ ಕೇಂದ್ರದಲ್ಲಿ ಜನರು ಹಕ್ಕು ಚಲಾಯಿಸಲು ಸರತಿಯಲ್ಲಿ ನಿಂತಿದ್ದರು.

ಶೇರ್‌ಪುರ್-3 ಕ್ಷೇತ್ರದ ಅಭ್ಯರ್ಥಿಯೊಬ್ಬರು ಮೃತಪಟ್ಟಿರುವ ಕಾರಣ ಅಲ್ಲಿನ ಮತದಾನ ಮುಂದೂಡಲಾಗಿದೆ.


ಚುನಾವಣೆ ಪೂರ್ಣಗೊಂಡ ಬೆನ್ನಲ್ಲೇ, ಗುರುವಾರ ಸಂಜೆ ಢಾಕಾದ ಮತಗಟ್ಟೆಯೊಂದರಲ್ಲಿ ಮತ ಎಣಿಕೆಗಾಗಿ ಅಧಿಕಾರಿಗಳು ಮತಪತ್ರಗಳನ್ನು ವಿಂಗಡಿಸಿದರು – ಎಎಫ್‌ಪಿ ಚಿತ್ರ

ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನುಸ್ ಅವರು ಅವಾಮಿ ಲೀಗ್ ಪಕ್ಷವನ್ನು ವಿಸರ್ಜಿಸಿ, ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ನಿಷೇಧಿಸಿದ್ದರು. ಹೀಗಾಗಿ ಈ ಬಾರಿ ಚುನಾವಣೆಯಲ್ಲಿ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ) ಮತ್ತು ಜಮಾತ್‌–ಎ–ಇಸ್ಲಾಮಿ ನಡುವೆ ನೇರ ಸ್ಪರ್ಧೆ ಏರ್ಪಟ್ಟಿದೆ.

ಶೇ 48ರಷ್ಟು ಮತದಾನ
ಗುರುವಾರ ಮಧ್ಯಾಹ್ನ 2 ಗಂಟೆಯವರೆಗೆ ದೇಶದಾದ್ಯಂತ ಶೇ 48ರಷ್ಟು ಮತದಾನ ದಾಖಲಾಗಿದೆ. 12.7 ಕೋಟಿ ಮತದಾರರು, 42,779 ಮತದಾನ ಕೇಂದ್ರಗಳಲ್ಲಿ ಹಕ್ಕು ಚಲಾಯಿಸಿದ್ದಾರೆ ಎಂದು ಬಾಂಗ್ಲಾದೇಶ ಚುನಾವಣಾ ಆಯೋಗದ ಕಾರ್ಯದರ್ಶಿ ಅಖ್ತರ್ ಅಹಮದ್ ತಿಳಿಸಿದ್ದಾರೆ.

ಗೋಪಾಲ್‌ಗಂಜ್‌ನ ನಿಚುಪುರಾ ಮತಗಟ್ಟೆ ಸಮೀಪ ಕಚ್ಚಾ ಬಾಂಬ್ ದಾಳಿ ಸೇರಿದಂತೆ ದೇಶದ ಕೆಲವೆಡೆ ಸಣ್ಣ ಪುಟ್ಟ ಘರ್ಷಣೆಗಳು ವರದಿಯಾಗಿವೆ. ಮತ ಎಣಿಕೆ ಪ್ರಕ್ರಿಯೆ ಸುಸೂತ್ರವಾಗಿ ನಡೆಯಲು ಸಕಲ ಸಿದ್ಧತೆ ಕೈಗೊಳ್ಳಲಾಗಿದೆ.

> **ಚುನಾವಣಾ ಫಲಿತಾಂಶ ನ್ಯಾಯೋಚಿತವಾಗಿರಬೇಕು. ಜನರ ತೀರ್ಪು ಏನೇ ಇದ್ದರೂ ನಾವು ಒಪ್ಪಿಕೊಳ್ಳುತ್ತೇವೆ. ಇದುವೇ ಪ್ರಜಾಪ್ರಭುತ್ವದ ಸೌಂದರ್ಯ**
> **ಶಫೀಕ್ ಉರ್ ರಹಮಾನ್,** ಜಮಾತ್‌–ಎ–ಇಸ್ಲಾಮಿ ಪಕ್ಷದ ಅಧ್ಯಕ್ಷ

> **ಇಂದಿನಿಂದ ದೇಶದಲ್ಲಿ ಪ್ರಜಾಪ್ರಭುತ್ವ ಆರಂಭಗೊಂಡಿದೆ. ಚುನಾವಣೆ ನ್ಯಾಯಯುತವಾಗಿ, ನಿಷ್ಪಕ್ಷಪಾತವಾಗಿ ನಡೆದರೆ ಜನರ ತೀರ್ಪನ್ನು ಒಪ್ಪಿಕೊಳ್ಳುತ್ತೇವೆ**
> **ತಾರಿಕ್ ರಹಮಾನ್,** ಬಿಎನ್‌ಪಿ ಅಧ್ಯಕ್ಷ

ಕ್ರೀಡಾ ಸಂಕೀರ್ಣ ಉದ್ಘಾಟನೆಗೆ ಸಿದ್ಧ

ಸ್ಮಾರ್ಟ್ ಸಿಟಿ ಯೋಜನೆ ಅನುದಾನದಲ್ಲಿ ನಿರ್ಮಾಣ • 22 ಕ್ರೀಡೆಗಳಿಗೆ ಅಂಕಣ

• ಸತೀಶ ಬಿ.

ಹುಬ್ಬಳ್ಳಿ: ಇಲ್ಲಿನ ಲೋಹಿಯಾ ನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ಬೃಹತ್ ಕ್ರೀಡಾ ಸಂಕೀರ್ಣ ನಿರ್ಮಿಸಲಾಗಿದ್ದು, ಉದ್ಘಾಟನೆಗೆ ಸಿದ್ಧವಾಗಿದೆ. ಸ್ಮಾರ್ಟ್ ಸಿಟಿ ಯೋಜನೆಯ ₹175 ಕೋಟಿ ಮತ್ತು ಖೇಲೊ ಇಂಡಿಯಾ ಯೋಜನೆಯ ₹8 ಕೋಟಿ ಸೇರಿ ಒಟ್ಟು ₹183 ಕೋಟಿ ಅನುದಾನದಲ್ಲಿ ಒಟ್ಟು 16 ಎಕರೆ ಜಾಗದಲ್ಲಿ ಈ ಸಂಕೀರ್ಣವನ್ನು ಅಭಿವೃದ್ಧಿಪಡಿಸಲಾಗಿದೆ.

2022ರ ಏಪ್ರಿಲ್‌ನಲ್ಲಿ ಆರಂಭಗೊಂಡ ಕಾಮಗಾರಿಯನ್ನು ಹೈದರಾಬಾದ್‌ನ ಕೆಎಂವಿ ಕಂಪನಿ ನಿರ್ವಹಿಸಿದೆ. ನಾಮಫಲಕ ಅಳವಡಿಕೆ, ಲಾನ್, ಲ್ಯಾಂಡ್‌ಸ್ಕೇಪ್ ಕಾಮಗಾರಿ ಮಾತ್ರ ಬಾಕಿ ಇದೆ. ಇದರ ಒಟ್ಟಾರೆ ನಿರ್ವಹಣೆಗೆ ಶೀಘ್ರವೇ ಟೆಂಡರ್ ಕರೆಯಲಾಗುವುದು.

ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ನಿಯಮಗಳಿಗೆ ಅನುಗುಣವಾಗಿ ಹಾಕಿ ಟರ್ಫ್ ಮತ್ತು ಫಿಫಾ ನಿಯಮದಂತೆ ಫುಟ್‌ಬಾಲ್ ಮೈದಾನಗಳನ್ನು ನಿರ್ಮಿಸಲಾಗಿದೆ.

400 ಮೀಟರ್ ದೂರದ ನಾಲ್ಕು ಲೇನ್‌ಗಳ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್, 100 ಮೀಟರ್ ದೂರದ ಆರು ಲೇನ್‌ಗಳ ಸಿಂಥೆಟಿಕ್ ಟ್ರ್ಯಾಕ್, ಬ್ಯಾಡ್ಮಿಂಟನ್, ಸ್ಕ್ವಾಷ್, ಕೊಕ್ಕೊ, ಟೆನಿಸ್, ವಾಲಿಬಾಲ್, ಟೇಬಲ್ ಟೆನಿಸ್, ಆರ್ಚರಿ, ಶೂಟಿಂಗ್, ಈಜು, ಬ್ಯಾಸ್ಕೆಟ್‌ಬಾಲ್, ಕುಸ್ತಿ, ಜೂಡೊ ಸೇರಿ ಒಟ್ಟು 22 ಕ್ರೀಡೆಗಳಿಗೆ ವೈಜ್ಞಾನಿಕವಾಗಿ, ಅಂತರರಾಷ್ಟ್ರೀಯ ಗುಣಮಟ್ಟದ ಅಂಕಣಗಳನ್ನು ನಿರ್ಮಿಸಲಾಗಿದೆ.

> ಕ್ರೀಡಾ ಸಂಕೀರ್ಣದಿಂದ ಉತ್ತರ ಕರ್ನಾಟಕ ಭಾಗದ ಕ್ರೀಡಾಪಟುಗಳಿಗೆ ಅನುಕೂಲವಾಗಲಿದೆ. ಬೇಗ ಉದ್ಘಾಟಿಸಿ, ತರಬೇತುದಾರರನ್ನು ನೇಮಿಸಬೇಕು
> **ಹರೀಶ್ ಎಸ್.ಗೌಡ**, ಅಂತರರಾಷ್ಟ್ರೀಯ ಅಥ್ಲೀಟ್

ಎರಡು ಸಾವಿರ ಆಸನಗಳ ಸಾಮರ್ಥ್ಯದ ಒಳಾಂಗಣ ಕ್ರೀಡಾಂಗಣ, ಸಭಾಂಗಣ, ಆಡಳಿತ ಸೌಧ, ರೆಸ್ಟೊರೆಂಟ್ ಮತ್ತು ಆರು ವಾಣಿಜ್ಯ ಮಳಿಗೆಗಳು ಸಹ ಇಲ್ಲಿವೆ. 40 ಕೆಎಲ್‌ಡಿ ಸಾಮರ್ಥ್ಯದ ಕೊಳಚೆ ನೀರು ಸಂಸ್ಕರಣಾ ಘಟಕವೂ ತಲೆಯೆತ್ತಿದೆ. ಇಲ್ಲಿ ಶುದ್ಧೀಕರಣವಾದ ನೀರನ್ನು ಮೈದಾನ ನಿರ್ವಹಣೆ ಮತ್ತು ಇನ್ನಿತರ ಕಾರ್ಯಗಳಿಗೆ ಬಳಸಲು ಯೋಜನೆ ರೂಪಿಸಲಾಗಿದೆ.

ನಿರ್ವಹಣೆಗೆ ₹3.50 ಕೋಟಿ ವೆಚ್ಚ: 'ಸ್ವಚ್ಛತೆ, ವಿದ್ಯುತ್ ಶುಲ್ಕ, ತರಬೇತುದಾರರ ನೇಮಕ ಸೇರಿ ಕ್ರೀಡಾ ಸಂಕೀರ್ಣದ ನಿರ್ವಹಣೆಗೆ ವಾರ್ಷಿಕ ₹3.50 ಕೋಟಿಗೂ ಹೆಚ್ಚು ವೆಚ್ಚವಾಗುತ್ತದೆ. ಕ್ರೀಡಾ ಸಂಕೀರ್ಣ ನಿರ್ವಹಣೆ ಮಾಡಿ ಅನುಭವವುಳ್ಳ ಸಂಸ್ಥೆಗೆ ಈ ಸಂಕೀರ್ಣದ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಟೆಂಡರ್ ನೀಡಲಾಗುವುದು. ಬೆಂಗಳೂರು, ಪುಣೆ, ಮುಂಬೈ ಸೇರಿ ವಿವಿಧ ನಗರಗಳ ಸಂಸ್ಥೆಗಳು ಸಂಪರ್ಕದಲ್ಲಿವೆ' ಎಂದು ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಅಧಿಕಾರಿಯೊಬ್ಬರು ತಿಳಿಸಿದರು.

> ದೇಶದಲ್ಲೇ ಮಾದರಿ ಕ್ರೀಡಾ ಸಂಕೀರ್ಣ ನಿರ್ಮಾಣವಾಗಿದೆ. ನಿರ್ವಹಣೆಗೆ ಖಾಸಗಿಯವರನ್ನು ನೇಮಕ ಮಾಡುವ ಕುರಿತು ರಾಜ್ಯ ಉನ್ನತಾಧಿಕಾರ ಸಮಿತಿಯಲ್ಲಿ ಚರ್ಚೆಯಾಗಿದೆ
> **ರುದ್ರೇಶ ಘಾಳಿ**, ಆಯುಕ್ತ, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ



ಹುಬ್ಬಳ್ಳಿಯ ಲೋಹಿಯಾ ನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ನಿರ್ಮಾಣವಾದ ಕ್ರೀಡಾ ಸಂಕೀರ್ಣ
ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

'ಎಂಟು ಲೇನ್ ಟ್ರ್ಯಾಕ್ ನಿರ್ಮಿಸಿ'

'ಕ್ರೀಡಾ ಸಂಕೀರ್ಣವನ್ನು ಸುಸಜ್ಜಿತವಾಗಿ ನಿರ್ಮಿಸಲಾಗಿದೆ. ಆದರೆ, 400 ಮೀಟರ್ ದೂರದ ನಾಲ್ಕು ಲೇನ್‌ಗಳ ಸಿಂಥೆಟಿಕ್ ಟ್ರ್ಯಾಕ್, 100 ಮೀ. ದೂರದ ಆರು ಲೇನ್‌ಗಳ ಟ್ರ್ಯಾಕ್ ಮಾತ್ರ ನಿರ್ಮಿಸಲಾಗಿದೆ. ಇದರಿಂದ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆ ಆಯೋಜಿಸಲು ಆಗುವುದಿಲ್ಲ. ಕೇವಲ ಅಭ್ಯಾಸಕ್ಕಾಗಿ ಮಾತ್ರ ಇದು ಬಳಕೆಯಾಗಲಿದೆ. ಎಂಟು ಲೇನ್ ಟ್ರ್ಯಾಕ್ ನಿರ್ಮಿಸಿದರೆ, ಉಪಯುಕ್ತವಾಗುತ್ತದೆ.

ವಿಲಾಸ ನೀಲಗುಂದ
ಕಾರ್ಯದರ್ಶಿ, ಧಾರವಾಡ ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆ

'ಜಿಮ್ ಸಲಕರಣೆ, ಪೀಠೋಪಕರಣ ಸೇರಿ ಇನ್ನಿತರ ಸೌಲಭ್ಯಕ್ಕೆ ಇನ್ನೂ ₹4 ಕೋಟಿ ಹಣವನ್ನು ಟೆಂಡರ್ ಪಡೆದ ಸಂಸ್ಥೆ ಹೂಡಬೇಕು. ಕೆಲ ಸಂಸ್ಥೆಗಳು ಒಂದೊಂದೇ ಅಂಕಣವನ್ನು ಮಾತ್ರ ಟೆಂಡರ್ ನೀಡುವಂತೆ ಕೇಳುತ್ತಿವೆ. ಕ್ರೀಡಾ ಸಂಕೀರ್ಣದ ಸಮಗ್ರ ನಿರ್ವಹಣೆ ಜವಾಬ್ದಾರಿಯನ್ನು ಒಂದೇ ಕಂಪನಿಗೆ ಟೆಂಡರ್ ಮೂಲಕ ನೀಡಲಾಗುವುದು' ಎಂದರು.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ

ಐಪಿಎಲ್ ಪಂದ್ಯಕ್ಕೆ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಪಂದ್ಯಗಳನ್ನು ಆಯೋಜಿಸಲು ರಾಜ್ಯ ಸರ್ಕಾರವು, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ (ಕೆಎಸ್‌ಸಿಎ) ಷರತ್ತುಬದ್ಧ ಅನುಮತಿ ನೀಡಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ, 'ನ್ಯಾಯಮೂರ್ತಿ ಮೈಕಲ್ ಕುನ್ಹ ತನಿಖಾ ಆಯೋಗ ಮತ್ತು ಮಹೇಶ್ವರರಾವ್ ನೇತೃತ್ವದ ತಜ್ಞರ ಸಮಿತಿ ಸಲ್ಲಿಸಿದ್ದ ವರದಿಗಳನ್ನು ಪರಿಶೀಲಿಸಿ, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯಗಳನ್ನು ಆಯೋಜಿಸಲು ಅವಕಾಶ ನೀಡಲು ನಿರ್ಧರಿಸಲಾಗಿದೆ' ಎಂದು ತಿಳಿಸಿದರು.

'ಈ ಸಂಬಂಧ ವಿಶೇಷ ಆದೇಶ ಹೊರಡಿಸಲು ಗೃಹ ಇಲಾಖೆಗೆ ಅಧಿಕಾರ ನೀಡಲಾಗಿದೆ. ತನಿಖಾ ಆಯೋಗ ಮತ್ತು ತಜ್ಞರ ಸಮಿತಿಯ ಶಿಫಾರಸುಗಳನ್ನು ಗಮನದಲ್ಲಿ ಇರಿಸಿಕೊಂಡು ಗೃಹ ಇಲಾಖೆಯು ಷರತ್ತುಗಳನ್ನು ರೂಪಿಸಲಿದೆ. ಮುಂದಿನ ಎರಡು-ಮೂರು ದಿನಗಳಲ್ಲಿ ಷರತ್ತುಬದ್ಧ ಆದೇಶವನ್ನು ಇಲಾಖೆಯು ಹೊರಡಿಸಲಿದೆ' ಎಂದು ಮಾಹಿತಿ ನೀಡಿದರು.



ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ಹಿಂದಿನ ಐಪಿಎಲ್ ಪಂದ್ಯಾವಳಿಯ ಫೈನಲ್‌ನಲ್ಲಿ ಮೇ 3ರಂದು ಜಯ ಸಾಧಿಸಿತ್ತು. 18 ವರ್ಷಗಳ ಐಪಿಎಲ್ ಇತಿಹಾಸದಲ್ಲಿ ಆರ್‌ಸಿಬಿ ತಂಡವು ಮೊದಲ ಬಾರಿ ಕಪ್ ಗೆದ್ದ ಸಂಭ್ರಮಾಚರಣೆಗೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿತ್ತು. ಆ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ 11 ಮಂದಿ ಆರ್‌ಸಿಬಿ ಅಭಿಮಾನಿಗಳು ಮೃತಪಟ್ಟಿದ್ದರು.

ಭಾರಿ ರಾಜಕೀಯ ಜಟಾಪಟಿಗೆ ಕಾರಣವಾಗಿದ್ದ ಈ ಅವಘಡದ ನಂತರ ಸರ್ಕಾರವು, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯಗಳನ್ನು ಆಯೋಜಿಸುವ ಅನುಮತಿಯನ್ನು ವಾಪಸ್ ಪಡೆದಿತ್ತು.

ಗುರುವಾರ ಮಧ್ಯಾಹ್ನ ಗೃಹ ಸಚಿವ ಪರಮೇಶ್ವರ್ ಅವರೊಂದಿಗೆ ನಡೆದ ಸಭೆಯಲ್ಲಿ ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್, ಕಾರ್ಯದರ್ಶಿ ಸಂತೋಷ್ ಮೆನನ್, ವಕ್ತಾರ ವಿನಯ್ ಮೃತ್ಯುಂಜಯ, ಆರ್‌ಸಿಬಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ರಾಜೇಶ್ ಮೆನನ್ ಹಾಜರಿದ್ದರು.

ಪ್ರೊ ಲೀಗ್: ಭಾರತ ವಿರುದ್ಧ ಅರ್ಜೆಂಟೀನಾಕ್ಕೆ 8–0 ಜಯ

ರೂರ್ಕೆಲಾ (ಪಿಟಿಐ): ಫಾರ್ವರ್ಡ್ ಆಟಗಾರ ಥಾಮಸ್ ಡೊಮೀನ್ ಗಳಿಸಿದ ನಾಲ್ಕು ಗೋಲುಗಳ ನೆರವಿನಿಂದ ಅರ್ಜೆಂಟೀನಾ ತಂಡ, ಪ್ರೊ ಲೀಗ್ ಹಾಕಿ ಪಂದ್ಯದಲ್ಲಿ ಗುರುವಾರ ಆತಿಥೇಯ ಭಾರತ ತಂಡದ ಮೇಲೆ 8–0 ಗೋಲುಗಳ ಭಾರಿ ಜಯ ದಾಖಲಿಸಿತು.

ಪ್ರೊ ಲೀಗ್ ಋತುವಿನ ತನ್ನ ಮೊದಲ ಪಂದ್ಯದಲ್ಲಿ ಬುಧವಾರ ಪ್ರಬಲ ಬೆಲ್ಜಿಯಂ ಎದುರು 3–1 ಗೋಲುಗಳಿಂದ ಸೋತಿದ್ದ ಭಾರತಕ್ಕೆ ಗುರುವಾರ ಎದುರಾದ ಮುಖಭಂಗ ದೊಡ್ಡ ಹಿನ್ನಡೆ ಎನಿಸಿತು. ತಂಡದ ಮೇಲೆ ಒತ್ತಡವನ್ನೂ ಹೇರಿದೆ.

ಡೊಮೀನ್ ಅತ್ಯುತ್ತಮ ಲಯದಲ್ಲಿದ್ದು ಈ ಪಂದ್ಯಕ್ಕೆ ಮೊದಲೇ ಹಾಲಿ ಋತುವಿನ 4 ಪಂದ್ಯಗಳಿಂದ ಆರು ಗೋಲುಗಳನ್ನು ಗಳಿಸಿದ್ದರು.

ಬಿರ್ಸಾ ಮುಂಡಾ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಅವರು 15ನೇ, 20ನೇ, 26ನೇ ಮತ್ತು 60ನೇ ನಿಮಿಷ ಗೋಲು ಗಳಿಸಿದರು. ಥಾಮಸ್ ರುಯಿರ್ಝ್ (14ನೇ ನಿಮಿಷ), ಲೂಸಿಯೊ ಮೆಂಡೆರ್ಝ್ (22ನೇ ನಿಮಿಷ), ಇಗ್ನೇಸಿಯೊ ಇಬಾರಾ (25ನೇ ನಿಮಿಷ), ನಿಕೋಲಸ್ ಡೆಲ್ಲಾ ಟೊರೆ (30 ನೇ ನಿಮಿಷ) ಅವರು ಉಳಿದ ಗೋಲುಗಳನ್ನು ಗಳಿಸಿದರು.



ಭಾರತ ಮತ್ತು ಅರ್ಜೆಂಟೀನಾ ತಂಡದ ಆಟಗಾರರ ಸೆಣಸಾಟ

ಭಾರತ ತಂಡಕ್ಕೆ ಮೊದಲ ಕ್ವಾರ್ಟರ್‌ನ ಕೊನೆಯಲ್ಲಿ ಮುನ್ನಡೆ ಪಡೆಯುವ ಸುವರ್ಣಾವಕಾಶ ದೊರಕಿತ್ತು. ಆದರೆ ಪೆನಾಲ್ಟಿ ಸ್ಟ್ರೋಕ್‌ನಲ್ಲಿ ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರ ಪ್ರಯತ್ನವನ್ನು ಅರ್ಜೆಂಟೀನಾ ಗೋಲ್ ಕೀಪರ್ ಯಶಸ್ವಿಯಾಗಿ ತಡೆದರು. ಇದಾದ ನಂತರ ಅರ್ಜೆಂಟೀನಾದ್ದೇ ಕಾರುಬಾರು.

ಏಷ್ಯನ್ ಶೂಟಿಂಗ್: ಮುಂದುವರಿದ ಭಾರತದ ಪ್ರಾಬಲ್ಯ

ಐಶ್ವರಿಗೆ ಸ್ವರ್ಣ; ನೀರಜ್‌ಗೆ ರಜತ

ನವದೆಹಲಿ (ಪಿಟಿಐ): ಭಾರತದ ಐಶ್ವರಿ ಪ್ರತಾಪ್‌ಸಿಂಗ್ ತೋಮರ್ ಅವರು ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಪುರುಷರ 50 ಮೀ. ರೈಫಲ್ ತ್ರೀ ಪೊಸಿಷನ್ಸ್ ಸ್ಪರ್ಧೆಯಲ್ಲಿ ಗುರುವಾರ ಸ್ವರ್ಣಕ್ಕೆ ಗುರಿಯಿಟ್ಟರು. ಅವರು ಫೈನಲ್ ಸುತ್ತಿನಲ್ಲಿ 362 ಅಂಕ ಸಂಪಾದಿಸಿ ವಿಶ್ವದಾಖಲೆಯನ್ನೂ ಸ್ಥಾಪಿಸಿದರು.

ತೋಮರ್ ಅವರಿಗೆ ನಿಕಟ ಪೈಪೋಟಿ ಒಡ್ಡಿದ ನೀರಜ್ ಕುಮಾರ್ (361.8) ಬೆಳ್ಳಿ ಪದಕ ಗೆದ್ದರೆ, ಅಖಿಲ್ ಶ್ಯೋರಾಣ್ (343.5) ಕಂಚು ತಮ್ಮದಾಗಿಸಿಕೊಂಡರು. ಆ ಮೂಲಕ ಭಾರತದ ಶೂಟರ್‌ಗಳು ಸ್ಪರ್ಧೆಯ ಮೂರೂ ಪದಕಗಳನ್ನು ಜಯಿಸಿ, ಪಾರಮ್ಯ ಮೆರೆದರು.

ಫೈನಲ್‌ಗೆ ಮುನ್ನ ನಡೆದ ಅರ್ಹತಾ ಸುತ್ತಿನಲ್ಲಿ ನೀರಜ್ (593) ಅಗ್ರಸ್ಥಾನ ಪಡೆದಿದ್ದರು. ಮಹಾರಾಷ್ಟ್ರದ ರುದ್ರಾಂಕ್ಷ್ ಪಾಟೀಲ್ (591) ಎರಡನೇ ಸ್ಥಾನ ಪಡೆದರಾದರೂ ಅವರು ರ‍್ಯಾಂಕಿಂಗ್ ಪಾಯಿಂಟ್ಸ್‌ಗಾಗಿ ಮಾತ್ರ ಸ್ಪರ್ಧಿಸಿದ್ದರು. ತೋಮರ್ ಹಾಗೂ ನಿಖಿಲ್ ತಲಾ 588 ಪಾಯಿಂಟ್ಸ್ ಪಡೆದು ಫೈನಲ್‌ಗೆ ಅರ್ಹತೆ ಗಿಟ್ಟಿಸಿಕೊಂಡರು. ನೀರಜ್, ತೋಮರ್ ಮತ್ತು ನಿಖಿಲ್ ಜೋಡಿಗೆ (1,769 ಅಂಕ) ಟೀಮ್ ವಿಭಾಗದಲ್ಲಿಯೂ ಚಿನ್ನದ ಪದಕ ಒಲಿಯಿತು. ಜಪಾನ್ (1,754) ಹಾಗೂ ಕಜಾಕಸ್ತಾನ (1,748) ತಂಡಗಳು ಕ್ರಮವಾಗಿ ರಜತ ಹಾಗೂ ಕಂಚು ಜಯಿಸಿದವು.



ಪುರುಷರ 50 ಮೀ. ರೈಫಲ್ ತ್ರೀ ಪೊಸಿಷನ್ಸ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಐಶ್ವರಿ ಪ್ರತಾಪ್‌ಸಿಂಗ್ ತೋಮರ್ (ಮಧ್ಯ), ಬೆಳ್ಳಿ ಗೆದ್ದ ನೀರಜ್ ಕುಮಾರ್ (ಎಡ) ಹಾಗೂ ಕಂಚು ಜಯಿಸಿದ ಅಖಿಲ್ ಶ್ಯೋರಣ್ –ಎನ್‌ಆರ್‌ಎಐ ಚಿತ್ರ

ಒಲಿಂಪಿಯನ್ ಜಾಯ್‌ದೀಪ್ ಕರ್ಮಾಕರ್ ಅವರ ಪುತ್ರ ಅದ್ರಿಯಾನ್ ಜೂನಿಯರ್ ವಿಭಾಗದಲ್ಲಿ ಸ್ವರ್ಣ ಗೆದ್ದುಕೊಂಡರು. ಫೈನಲ್ ಸುತ್ತಿನಲ್ಲಿ 353.2 ಅಂಕ ಸಂಪಾದಿಸಿ ವಿಶ್ವ ಜೂನಿಯರ್ ದಾಖಲೆ ಹಾಗೂ ಏಷ್ಯನ್ ಜೂನಿಯರ್ ದಾಖಲೆಯನ್ನು ನಿರ್ಮಿಸಿದರು. ಕಜಾಕಸ್ತಾನದ ಕಿಮ್ ಡಿಮಿತ್ರ (348.5) ರಜತ ಗೆದ್ದರೆ, ಭಾರತದ ಮಾನ್ವೇಂದ್ರ ಸಿಂಗ್ ಶೇಖಾವತ್ (338.6) ಕಂಚು ತಮ್ಮದಾಗಿಸಿಕೊಂಡರು.

ಚಾಂಪಿಯನ್‌ಷಿಪ್‌ನ ಕೊನೆಯ ದಿನವಾದ ಶುಕ್ರವಾರ ಮಹಿಳೆಯರ 50 ಮೀ. ರೈಫಲ್ ಪ್ರೋನ್ ಹಾಗೂ ಪುರುಷರ 25 ಮೀ. ಸೆಂಟರ್ ಫೈರ್ ಪಿಸ್ತೂಲ್ ಸ್ಪರ್ಧೆಗಳು ನಡೆಯಲಿವೆ. ಭಾರತವು ಈವರೆಗೆ 38 ಚಿನ್ನ ಸೇರಿ 70 ಪದಕ ಗೆದ್ದಿದ್ದು, ಪದಕ ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿದೆ. ಉಜ್ಬೇಕಿಸ್ತಾನ (4 ಪದಕ; 3 ಚಿನ್ನ) ಜಯಿಸಿದ್ದು ಎರಡನೇ ಸ್ಥಾನದಲ್ಲಿದೆ.

ಕರ್ನಾಟಕ ವನಿತೆಯರಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಲ್‌ರೌಂಡ್ ಪ್ರದರ್ಶನ ತೋರಿದ ಕರ್ನಾಟಕ ತಂಡವು ಬಿಸಿಸಿಐ ಸೀನಿಯರ್ ಮಹಿಳಾ ಏಕದಿನ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಗುರುವಾರ 92 ರನ್‌ಗಳಿಂದ ಒಡಿಶಾ ತಂಡವನ್ನು ನಿರಾಯಾಸವಾಗಿ ಮಣಿಸಿತು.

ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಕರ್ನಾಟಕ ತಂಡಕ್ಕೆ ನಾಯಕಿ ಶುಭಾ ಹಾಗೂ ನಿಕಿ ಪ್ರಸಾದ್ ಅವರು ಅರ್ಧಶತಕಗಳೊಂದಿಗೆ ಆಸರೆಯಾದರು. ಅಮೋಘ ಲಯದಲ್ಲಿರುವ ಶುಭಾ ಅವರು 101 ಎಸೆತಗಳಲ್ಲಿ 8 ಬೌಂಡರಿ ಹಾಗೂ ಒಂದು ಸಿಕ್ಸರ್ ಸಹಿತ 90 ರನ್ ಹೊಡೆದರು. ಶಿಶಿರಾ ಎ. ಗೌಡ (49;75ಎ, 4x6) ಅವರೊಂದಿಗೆ ಮೊದಲ ವಿಕೆಟ್ ಜೊತೆಯಾಟದಲ್ಲಿ 112 ರನ್ ಸೇರಿಸಿ, ಭದ್ರ ಬುನಾದಿ ಹಾಕಿಕೊಟ್ಟರು. ನಂತರ, ನಿಕಿ (79; 52ಎ, 4x8, 6x2) ಅವರು ಬಿರುಸಿನ ಅರ್ಧಶತಕ ಸಿಡಿಸಿ ಮೊತ್ತವನ್ನು ಹಿಗ್ಗಿಸಿದರು. ರಾಜ್ಯ ತಂಡವು ನಿಗದಿತ ಓವರ್‌ಗಳಲ್ಲಿ 7 ವಿಕೆಟ್‌ಗೆ 326 ರನ್ ಪೇರಿಸಿತು.

ಕಠಿಣ ಗುರಿ ಬೆನ್ನಟ್ಟಿದ ಒಡಿಶಾ 9 ವಿಕೆಟ್‌ಗೆ 234 ರನ್ ಗಳಿಸಿ ಓವರ್ ಪೂರೈಸಿತು. ಮಾಧುರಿ ಮೆಹ್ತಾ (78; 102ಎ, 4x9) ಹಾಗೂ ಸರಿತಾ ಮೆಹರ್ (56; 66ಎ, 4x7) ಹೋರಾಟ ತೋರಿದ್ದು ಬಿಟ್ಟರೆ ಉಳಿದ ಬ್ಯಾಟರ್‌ಗಳಿಂದ ಅಗತ್ಯ ಆಟ ಮೂಡಿಬರಲಿಲ್ಲ. ರಾಜೇಶ್ವರಿ ಗಾಯಕ್ವಾಡ್ (29ಕ್ಕೆ3) ಹಾಗೂ ಬಿ.ಜಿ. ತೇಜಸ್ವಿನಿ (30ಕ್ಕೆ2) ಪರಿಣಾಮಕಾರಿ ಬೌಲಿಂಗ್ ದಾಳಿ ಮಾಡಿದರು.



ನಿಕಿ ಪ್ರಸಾದ್

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 50 ಓವರ್‌ಗಳಲ್ಲಿ 7 ವಿಕೆಟ್‌ಗೆ 326 (ಶುಭಾ ಸತೀಶ್ 90, ಶಿಶಿರಾ ಎ. ಗೌಡ 49, ನಿಕಿ ಪ್ರಸಾದ್ 79, ಸೌಮ್ಯ ವರ್ಮಾ 58; ಜ್ಯೋತಿ ಕೆ. ಪ್ರಸಾದ್ 64ಕ್ಕೆ3). ಒಡಿಶಾ: 50 ಓವರ್‌ಗಳಲ್ಲಿ 9 ವಿಕೆಟ್‌ಗೆ 234 (ಮಾಧುರಿ ಮೆಹ್ತಾ 78, ಸರಿತಾ ಮೆಹೆರ್ 56; ರಾಜೇಶ್ವರಿ ಗಾಯಕವಾಡ್ 29ಕ್ಕೆ3, ಬಿ.ಜಿ.ತೇಜಸ್ವಿನಿ 30ಕ್ಕೆ2). ಪಂದ್ಯದ ಆಟಗಾರ್ತಿ: ನಿಕಿ ಪ್ರಸಾದ್.

ಪಾವತಿಸದ ಬುಕ್ಕಿಂಗ್ ಹಣ ಪಾಕ್ ಹಾಕಿ ತಂಡ ಬೀದಿಗೆ

ಕರಾಚಿ (ಪಿಟಿಐ): ಆಸ್ಟ್ರೇಲಿಯಾದ ಕೆನ್‌ಬೆರಾದಲ್ಲಿ ಪಾಕಿಸ್ತಾನದ ಹಾಕಿ ತಂಡ ವಾಸ್ತವ್ಯ ಹೂಡಬೇಕಿದ್ದ ಹೋಟೆಲ್‌ಗೆ ಪಾಕಿಸ್ತಾನ ಹಾಕಿ ಫೆಡರೇಷನ್ ಹಣ ಪಾವತಿಸದ ಕಾರಣ ಬುಕ್ಕಿಂಗ್ ರದ್ದುಮಾಡಲಾಯಿತು. ಪರಿಣಾಮ ರಾಜಧಾನಿ ಕೆನ್‌ಬೆರಾ ತಲುಪಿದ ಆಟಗಾರರು ಗಂಟೆಗಟ್ಟಲೆ ರಸ್ತೆ ಬದಿ ಕಳೆಯಬೇಕಾಯಿತು.

ಆರ್ಥಿಕ ಮುಗ್ಗಟ್ಟಿನ ಕಾರಣ ಪಾಕಿಸ್ತಾನ ಹಾಕಿ ಫೆಡರೇಷನ್ ಹಣ ಪಾವತಿಸಿರಲಿಲ್ಲ. ತಂಡ ಮತ್ತು ಸಿಬ್ಬಂದಿ ಕಳೆದ ವಾರ ಆಸ್ಟ್ರೇಲಿಯಾಕ್ಕೆ ಹೊರಟಾಗ ಕೆನ್‌ಬೆರಾದಲ್ಲಿ ಬುಕ್ ಮಾಡಲಾಗಿದ್ದ ಫೋರ್‌ಸ್ಟಾರ್ ಹೋಟೆಲ್‌ಗೆ ಪಾಕಿಸ್ತಾನದ ಕ್ರೀಡಾ ಮಂಡಳಿ ಮತ್ತು ಪಾಕಿಸ್ತಾನ ಹಾಕಿ ಫೆಡರೇಷನ್ ಹಣ ಪಾವತಿಸಲಿದೆ ಎಂದು ಹೇಳಲಾಗಿತ್ತು. ಆದರೆ ಹಣ ಪಾವತಿಸದ ಕಾರಣ ಬೀದಿಬದಿ ಓಡಾಡಿ ಸಮಯ ಕಳೆದರು ಎಂದು ತಂಡದ ಆಪ್ತ ಮೂಲಗಳು ತಿಳಿಸಿವೆ. ಕೊನೆಗೂ ತಂಡಕ್ಕೆ ಅಲ್ಲಿ ವ್ಯವಸ್ಥೆ ಮಾಡಲಾಯಿತು.

ಹೋಬಾರ್ಟ್‌ನಲ್ಲಿ ನಡೆಯಲಿರುವ ಎಫ್‌ಐಎಚ್ ಪ್ರೊ ಲೀಗ್ ಎರಡನೇ ಲೆಗ್‌ನಲ್ಲಿ ಆಡಲು ಪಾಕಿಸ್ತಾನ ತಂಡವು, ಆಸ್ಟ್ರೇಲಿಯಾಕ್ಕೆ ಬಂದಿದೆ.

ತಂಡವು ಕೆನ್‌ಬೆರಾ ತಲುಪಿದಾಗ ಹೋಟೆಲ್‌ನಲ್ಲಿ ಬುಕಿಂಗ್ ಆಗಿರಲಿಲ್ಲ. ತಂಡದ ಹೆಡ್ ಕೋಚ್ ತಾಹಿರ್ ಜಮಾನ್ ಅವರು ಕಾಲಮಾನ ವ್ಯತ್ಯಾಸದ ಕಾರಣ ಪಿಎಸ್‌ಬಿ ಮತ್ತು ಪಿಎಚ್‌ಎಫ್ ಅಧಿಕಾರಿಗಳ ಜೊತೆ ಸಂಪರ್ಕ ಸಾಧಿಸಲು ಸಮಸ್ಯೆಗಳನ್ನು ಎದುರಿಸಬೇಕಾಯಿತು ಎನ್ನಲಾಗಿದೆ. ನಂತರ ಅವರು ಮೊಬೈಲ್ ಸಂದೇಶ ಕಳುಹಿಸಿದರು.

ಈ ಪ್ರಕರಣ ಪಾಕಿಸ್ತಾನದ ರಾಷ್ಟ್ರೀಯ ಕ್ರೀಡೆಗೆ ಇರಿಸುಮುರಿಸು ಉಂಟುಮಾಡಿದೆ. ತಂಡವು ಪ್ರವಾಸದಲ್ಲಿ ಆಸ್ಟ್ರೇಲಿಯಾ, ಜರ್ಮನಿ ವಿರುದ್ಧ ಆಡಬೇಕಾಗಿದೆ.

ಹಣ ಪಾವತಿಸುವುದಾಗಿ ಮನವರಿಕೆಯಾದ ಮೇಲೆ ಹೋಟೆಲ್ ಆಡಳಿತವು ಆಟಗಾರರಿಗೆ ಕೆಲವು ಕೊಠಡಿಗಳನ್ನು ನೀಡಿತು.

ಪಾಕಿಸ್ತಾನ ಪ್ರೊ ಲೀಗ್‌ನಲ್ಲಿ ಆಡಿರುವ ಎಲ್ಲ ಆರೂ ಪಂದ್ಯಗಳನ್ನು ಸೋತಿದೆ.

ನ್ಯಾಷನಲ್ ಎಸ್.ಸಿ ಮೈಸೂರು ತಂಡಕ್ಕೆ ಗೆಲುವು

ಬೆಂಗಳೂರು: ಸುಮನ್ ಮತ್ತು ರೋನಕ್ ಅವರ ಅಮೋಘ ಆಟದ ಬಲದಿಂದ ನ್ಯಾಷನಲ್ ಎಸ್.ಸಿ ಮೈಸೂರು ತಂಡವು ಕರ್ನಾಟಕ ಗ್ರಾಮೀಣ ಲೀಗ್ ಪುರುಷರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಸೂಪರ್ ಲೀಗ್ ಹಂತದ ಪಂದ್ಯದಲ್ಲಿ 78–62ರಿಂದ ಚಿನ್ನದಾನಡು ಬಿ.ಸಿ. ಕೋಲಾರ ತಂಡವನ್ನು ಮಣಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ವಿರಾಮದ ವೇಳೆಗೆ ನ್ಯಾಷನಲ್ ತಂಡವು 33–35ರಿಂದ ಹಿನ್ನಡೆಯಲ್ಲಿತ್ತು. ಉತ್ತರಾರ್ಧದಲ್ಲಿ ಚುರುಕಿನ ಆಟದ ಮೂಲಕ ಗೆಲುವು ಸಾಧಿಸಿತು. ಸುಮನ್ ಮತ್ತು ರೋನಕ್ ಕ್ರಮವಾಗಿ 27 ಮತ್ತು 22 ಅಂಕ ಗಳಿಸಿದರು. ಕೋಲಾರ ತಂಡದ ಪರ ಹೇಮಂತ್ 20 ಅಂಕ ತಂದಿತ್ತರು.

ಇತರ ಪಂದ್ಯಗಳಲ್ಲಿ ಮಂಗಳೂರು ಬಿ.ಸಿ 58–34ರಿಂದ ಸಾಯ್ ಧಾರವಾಡ ವಿರುದ್ಧ; ಪ್ರೊಟೆಕ್ ಅಸೋಸಿಯೇಷನ್ ಮೈಸೂರು 76–59ರಿಂದ ಚಿನ್ನದಾನಡು ಬಿ.ಸಿ. ಕೋಲಾರ ಎದುರು; ಮರಿಯನ್ಸ್ ಬಿ.ಸಿ ಚಿಕ್ಕಮಗಳೂರು 67–43ರಿಂದ ಸಾಯ್ ಧಾರವಾಡ ವಿರುದ್ಧ ಗೆಲುವು ಸಾಧಿಸಿದವು. ಪ್ರಶಸ್ತಿ ಸುತ್ತಿನ ಹಣಾಹಣಿ ಶುಕ್ರವಾರ ನಡೆಯಲಿದೆ.

ದೃಷ್ಟಿದೋಷವುಳ್ಳವರ ಚೆಸ್: ಸೋಮೇಂದ್ರಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೆಹಲಿಯ ಸೋಮೇಂದ್ರ ಅವರು ನಗರದ ರಾಮಯ್ಯ ಅನ್ವಯಿಕ ವಿಜ್ಞಾನ ವಿವಿಯಲ್ಲಿ ದೃಷ್ಟಿದೋಷವುಳ್ಳವರಿಗೆ ನಡೆದ 19ನೇ ಎಐಸಿಎಫ್‌ಬಿ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ಪ್ರಶಸ್ತಿ ಗೆದ್ದುಕೊಂಡರು.

ಸೋಮೇಂದ್ರ, ಕರ್ನಾಟಕದ ಕಿಶನ್ ಗಂಗೊಳ್ಳಿ, ತೆಲಂಗಾಣದ ರಿತ್ವಿಕ್ ಎಂ., ಮಹಾರಾಷ್ಟ್ರದ ಆರ್ಯನ್ ಜೋಶಿ ಮತ್ತು ಒಡಿಶಾದ ಪಾತ್ರ ಸುಭೇಂದ್ರ ಕುಮಾರ್ ಅವರು 9 ಸುತ್ತುಗಳಿಂದ ತಲಾ 6.5 ಪಾಯಿಂಟ್ಸ್ ಗಳಿಸಿದರು. ಆದರೆ ಟೈಬ್ರೇಕ್‌ನಲ್ಲಿ ಉತ್ತಮ ಸ್ಕೋರ್ ಆಧಾರದಲ್ಲಿ ಸೋಮೇಂದ್ರ ಅವರಿಗೆ ಪ್ರಶಸ್ತಿ ಒಲಿಯಿತು.



ಸೋಮೇಂದ್ರ

ಬೆಂಗಳೂರು ರೋಟರಿ ಕ್ಲಬ್, ರಾಮಯ್ಯ ವಿಶ್ವವಿದ್ಯಾಲಯ ಸಂಯುಕ್ತ ಆಶ್ರಯದಲ್ಲಿ ಐದು ದಿನಗಳ ಈ ಟೂರ್ನಿ ನಡೆಯಿತು. ಮಾಂಟೆನಿಗ್ರೊದ ಪೆಟ್ರೊವಾಕ್‌ನಲ್ಲಿ ಈ ವರ್ಷ ನಡೆಯಲಿರುವ ಐಬಿಸಿಎ ದೃಷ್ಟಿದೋಷವುಳ್ಳವರ ವಿಶ್ವ ಟೀಮ್ ಚಾಂಪಿಯನ್‌ಷಿಪ್‌ಗೆ ಭಾರತ ತಂಡವನ್ನು ಆಯ್ಕೆ ಮಾಡಲು ಈ ಟೂರ್ನಿ ಟ್ರಯಲ್ಸ್ ಆಗಿತ್ತು.

13 ರಾಜ್ಯಗಳ 49 ಆಟಗಾರರು ಟೂರ್ನಿಯಲ್ಲಿ ಭಾಗವಹಿಸಿದ್ದರು. ಎಂಟು ಬಾರಿಯ ರಾಷ್ಟ್ರೀಯ ಚಾಂಪಿಯನ್ ಕಿಶನ್ ಗಂಗೊಳ್ಳಿ ಎರಡನೇ ಮತ್ತು ರಿತ್ವಿಕ್ ವರು ಮೂರನೇ ಸ್ಥಾನ ಗಳಿಸಿದರು. ಮೊದಲ ಐದು ಸ್ಥಾನ ಪಡೆದವರು ಭಾರತ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಸೂರ್ಯ ಪಡೆಗೆ ಎರಡನೇ ಜಯ

ಹಾರ್ದಿಕ್ ಆಲ್‌ರೌಂಡ್ ಆಟ • ಇಶಾನ್ ಅರ್ಧಶತಕ • ಗಮನ ಸೆಳೆದ ಎರಸ್‌ಮಸ್

ನವದೆಹಲಿ (ಪಿಟಿಐ): ಹಾರ್ದಿಕ್ ಪಾಂಡ್ಯ ಅವರ ಆಲ್‌ರೌಂಡ್ ಆಟದ ಬಲದಿಂದ ಹಾಲಿ ಚಾಂಪಿಯನ್ ಭಾರತ ತಂಡವು ಗುರುವಾರ ನಮೀಬಿಯಾ ಎದುರಿನ ಪಂದ್ಯದಲ್ಲಿ ಸುಲಭ ಜಯ ಸಾಧಿಸಿತು.

ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆತಿಥೇಯ ಭಾರತ ತಂಡಕ್ಕೆ ಇದು ಎರಡನೇ ಜಯವಾಗಿದೆ. ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ನಮೀಬಿಯಾ ಎದುರು 90 ರನ್‌ಗಳಿಂದ ಗೆದ್ದಿತು.

ಅಭಿಷೇಕ್ ಶರ್ಮಾ ಅವರಿಲ್ಲದೇ ಕಣಕ್ಕಿಳಿದ ಭಾರತಕ್ಕೆ ಸಂಜು ಸ್ಯಾಮ್ಸನ್ ದೀರ್ಘ ಇನಿಂಗ್ಸ್ ಕಟ್ಟಿ ಕೊಡಲಿಲ್ಲ. ಅವರ ಮೂರು ಸಿಕ್ಸರ್‌ಗಳ ಇನಿಂಗ್ಸ್ ಇನ್‌ಸ್ಟಾಗ್ರಾಮ್ ರೀಲ್‌ನಷ್ಟೇ ಅಲ್ಪಾಯುಷಿಯಾಯಿತು. ಆದರೆ ಇಶಾನ್ ಕಿಶನ್ ಅವರ ಬ್ಯಾಟಿಂಗ್ ವೆಬ್ ಸರಣಿಯಂತೆ ಪರಿಪೂರ್ಣ ಡ್ರಾಮಾ, ಸಾಹಸಗಳಿಂದ ಕೂಡಿತ್ತು. ಕಿಶನ್ ನಮೀಬಿಯಾ ದಾಳಿಯನ್ನು ಹುಡಿ ಗಟ್ಟಿದರು. 24 ಎಸೆತಗಳಲ್ಲಿ 61 ರನ್ ಗಳಿಸಿದರು. ಆದರೆ, ನಮೀಬಿಯಾ ತಂಡದ ನಾಯಕ ಜೆರಾರ್ಡ್ ಎರಸ್‌ಮಸ್ ಅವರ ಸೈಡ್ ಆರ್ಮ್ ಆಫ್‌ಬ್ರೇಕ್ ಬೌಲಿಂಗ್ ಮುಂದೆ ಆತಿಥೇಯ ಬ್ಯಾಟರ್‌ಗಳು ಪರದಾಡಿದ್ದು ಕೂಡ ನಿಜ. ಭಾರತ ತಂಡವು 9 ವಿಕೆಟ್‌ಗಳಿಗೆ 209 ರನ್ ಗಳಿಸಿತು. ಇಶಾನ್ ಕೇವಲ 20 ಎಸೆತಗಳಲ್ಲಿ 50 ರನ್ ಸೇರಿಸಿದರು.

ಈ ಅಡಿಪಾಯದ ಮೇಲೆ ಮಧ್ಯಮ ಕ್ರಮಾಂಕದ ಬ್ಯಾಟರ್ ಹಾರ್ದಿಕ್ ಪಾಂಡ್ಯ (52; 28ಎ) ಅವರು ದೊಡ್ಡ ಮೊತ್ತ ಪೇರಿಸಲು ಶಕ್ತಿ ತುಂಬಿದರು. ಅವರು (21ಕ್ಕೆ2) ಬೌಲಿಂಗ್‌ನಲ್ಲಿಯೂ ಮಿಂಚಿದರು. ನಮೀಬಿಯಾ ತಂಡವು 18.2 ಓವರ್‌ಗಳಲ್ಲಿ 116 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ವರುಣ್ ಚಕ್ರವರ್ತಿ (7ಕ್ಕೆ3) ಮತ್ತು ಅಕ್ಷರ್ ಪಟೇಲ್ (20ಕ್ಕೆ2) ಚೆಂದದ ಬೌಲಿಂಗ್ ಮಾಡಿದರು.

ಎರಸ್‌ಮಸ್ ಮಿಂಚು: ಭಾರತದ ಬಲಿಷ್ಠ ಬ್ಯಾಟಿಂಗ್ ಕ್ರಮಾಂಕದ ಎದುರು ನಮೀಬಿಯಾದ ಎರಸ್‌ಮಸ್ (20ಕ್ಕೆ4) ಅವರು ಅಮೋಘವಾದ ಬೌಲಿಂಗ್ ಮಾಡಿದರು. ಎರಸ್‌ಮಸ್ ಅವರು ಸೈಡ್ ಆರ್ಮ್ ಎಸೆತಗಳನ್ನೂ ಹಾಕಿದರು. ಅಲ್ಲದೇ ಕೆಲವು ಎಸೆತಗಳನ್ನು ಕ್ರೀಸ್‌ಗಿಂತ ಸುಮಾರು ಎರಡು ಯಾರ್ಡ್‌ಗಳನ್ನು ಹಿಂದಿನಿಂದಲೇ ಬೌಲಿಂಗ್ ಮಾಡಿದರು. ಇಂತಹದೇ ಒಂದು ಲೆಂತ್ ಕಡಿಮೆಯಾದ ಎಸೆತದಲ್ಲಿ ಮುನ್ನುಗ್ಗಿ ಹೊಡೆಯಲು ಹೋದ ತಿಲಕ್ ವರ್ಮಾ (25 ರನ್) ಔಟಾದರು.

ಅರುಣ್ ಜೇಟ್ಲಿ ಕ್ರೀಡಾಂಗಣದ ಸಪಾಟಾದ ಪಿಚ್‌ನಲ್ಲಿ ಸಂಜು ಸ್ಯಾಮ್ಸನ್ ಆಡಿದ್ದು 8 ಎಸೆತಗಳನ್ನು ಮಾತ್ರ. ಅದರಲ್ಲಿ 3 ಸಿಕ್ಸರ್ ಮತ್ತು 1 ಬೌಂಡರಿಯಿದ್ದ 22 ರನ್ ಗಳಿಸಿದರು. ಉತ್ತಮ ಲಯದಲ್ಲಿ ಸಾಗುತ್ತಿದ್ದ ಅವರು ಬೆನ್ ಶಿಕೊಂಗೊ ಎಸೆತವನ್ನು ತಪ್ಪಾಗಿ ಅಂದಾಜಿಸಿ ದೊಡ್ಡ ಹೊಡೆತ ಆಡಿದರು. ಲಾರೆನ್ ಸ್ಟೀನ್‌ಕ್ಯಾಂಪ್ ಕ್ಯಾಚ್ ಪಡೆದರು.

ನಾಯಕ ಸೂರ್ಯಕುಮಾರ್ ಯಾದವ್ ಇನಿಂಗ್ಸ್‌ನ ಶ್ರೇಷ್ಠ ಎಸೆತದಲ್ಲಿ ದಂಡ ತೆತ್ತರು. ಎಡಗೈ ಸ್ಪಿನ್ನರ್ ಬರ್ನಾಡ್ ಸ್ಕೋಲ್ಜ್ ಅವರ ಎಸೆತವೊಂದು ಡಿಪ್ ಆಗಿ ತಿರುವು ಪಡೆಯಿತು. ಸೂರ್ಯ ಅದನ್ನು ಮುಂದಡಿ ಇಟ್ಟು ಆಡಲು ಯತ್ನಿಸಿ ಬೀಟ್ ಆದರು. ವಿಕೆಟ್‌ಕೀಪರ್ ಝೇನ್ ಗ್ರೀನ್ ಚುರುಕಾಗಿ ಸ್ಟಂಪಿಂಗ್ ಮಾಡಿದರು. ಸೂರ್ಯ ಒಂದು ಸಿಕ್ಸರ್ ಸಹಿತ 12 ರನ್ ಬಾರಿಸಿದರು.

ಹಾರ್ದಿಕ್ ಮತ್ತು ಶಿವಂ ದುಬೆ (23; 16ಎ, 4X1, 6X1) ಜೊತೆಗೂಡಿ 5ನೇ ವಿಕೆಟ್ ಜೊತೆಯಾಟದಲ್ಲಿ 81 (39ಎ) ರನ್ ಸೇರಿಸಿದರು. ಇದರಿಂದಾಗಿ ತಂಡದ ಮೊತ್ತವು 'ದ್ವಿಶತಕ'ದ ಗಡಿ ದಾಟಿತು.

ಈ ಹಂತದಲ್ಲಿ ಮತ್ತೊಮ್ಮೆ ಕೈಚಳಕ ಮೆರೆದ ಎರಸ್‌ಮಸ್ ಒಂದೇ ಓವರ್‌ನಲ್ಲಿ ಹಾರ್ದಿಕ್ ಹಾಗೂ ಅಕ್ಷರ್ ಪಟೇಲ್ ವಿಕೆಟ್ ಗಳಿಸಿದರು. ದುಬೆ ರನ್‌ಔಟ್ ಆಗಲೂ ಪ್ರಮುಖ ಪಾತ್ರ ವಹಿಸಿದರು.

ಟಿ20 ವಿಶ್ವಕಪ್ ಸತತ ಅತಿಹೆಚ್ಚು ಗೆಲುವು

ಗೆಲುವು	ತಂಡ	ವರ್ಷ
10*	ಭಾರತ	2024-26
8	ದಕ್ಷಿಣ ಆಫ್ರಿಕಾ	2024
8	ಆಸ್ಟ್ರೇಲಿಯಾ	2022-24
7	ಇಂಗ್ಲೆಂಡ್	2010-12
7	ಭಾರತ	2012-14

ಟಿ20 ವಿಶ್ವಕಪ್: ಭಾರತಕ್ಕೆ ಅತಿಹೆಚ್ಚು ಅಂತರದ ಗೆಲುವು (ರನ್‌ಗಳಿಂದ)

ರನ್	ಎದುರಾಳಿ	ತಾಣ	ವರ್ಷ
93	ನಮೀಬಿಯಾ	ದೆಹಲಿ	2026
90	ಇಂಗ್ಲೆಂಡ್	ಕೊಲಂಬೊ	2012
73	ಆಸ್ಟ್ರೇಲಿಯಾ	ಮೀರ್‌ಪುರ	2014
71	ಜಿಂಬಾಬ್ವೆ	ಮೆಲ್ಬರ್ನ್	2022


ಇಶಾನ್ ಕಿಶನ್


ಹಾರ್ದಿಕ್ ಪಾಂಡ್ಯ
ಪಿಟಿಐ ಚಿತ್ರಗಳು

ಸ್ಕೋರ್ ಕಾರ್ಡ್

ಭಾರತ: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 209
ಇಶಾನ್ ಸಿ ಶಿಕೊಂಗೊ ಬಿ ಎರಸ್‌ಮಸ್ 61 (24ಎ, 4x6, 6x5)
ಸಂಜು ಸಿ ಸ್ಟೀನ್‌ಕ್ಯಾಂಪ್ ಬಿ ಶಿಕೊಂಗೊ 22 (8ಎ, 4x1, 6x3)
ತಿಲಕ್ ಸಿ ಸ್ಮಿತ್ ಬಿ ಎರಸ್‌ಮಸ್ 25 (21ಎ, 4x3)
ಸೂರ್ಯಕುಮಾರ್ ಸ್ಟಂಪ್ ಗ್ರೀನ್ ಬಿ ಸ್ಕೋಲ್ಜ್ 12 (13ಎ, 6x1)
ಹಾರ್ದಿಕ್ ಸಿ ಲೀಚೆರ ಬಿ ಎರಸ್‌ಮಸ್ 52 (28ಎ, 4x4, 6x4)
ಶಿವಂ ರನೌಟ್ (ಶಿಕೊಂಗೊ/ಎರಸ್‌ಮಸ್) 23 (16ಎ, 4x1, 6x1)
ರಿಂಕು ಸಿ ಎರಸ್‌ಮಸ್ ಬಿ ಸ್ಮಿತ್ 1 (6ಎ)
ಅಕ್ಷರ್ ಸಿ ಎರಸ್‌ಮಸ್ 0 (1ಎ)
ವರುಣ್ ಚಕ್ರವರ್ತಿ ಔಟಾಗದೇ 1 (1ಎ)
ಅರ್ಷದೀಪ್ ರನೌಟ್ (ಕ್ರುಗರ್/ಗ್ರೀನ್) 2 (2ಎ)
ಇತರೆ: 10 (ಲೆಗ್‌ಬೈ 1, ವೈಡ್ 9)
ವಿಕೆಟ್ ಪತನ: 1-25 (ಸಂಜು ಸ್ಯಾಮ್ಸನ್, 1.6), 2-104 (ಇಶನ್ ಕಿಶನ್, 7.1), 3-120 (ಸೂರ್ಯಕುಮಾರ್ ಯಾದವ್, 10.1), 4-124 (ತಿಲಕ್ ವರ್ಮಾ, 11.5), 5-205 (ಹಾರ್ದಿಕ್ ಪಾಂಡ್ಯ, 18.2), 6-205 (ಶಿವಂ ದುಬೆ, 18.3), 7-206 (ಅಕ್ಷರ್ ಪಟೇಲ್, 18.6), 8-206 (ರಿಂಕು ಸಿಂಗ್, 19.3), 9-209 (ಅರ್ಷದೀಪ್ ಸಿಂಗ್ 19.6)
ಬೌಲಿಂಗ್: ರುಬೆನ್ ಟ್ರಂಪಲ್ ಮ್ಯಾನ್ 4-0-38-0, ಬೆನ್ ಶಿಕೊಂಗೊ 3-0-41-1, ಜೆ.ಜೆ. ಸ್ಮಿತ್ 4-0-50-1, ಮ್ಯಾಕ್ಸ್ ಹಿಂಗೊ 1-0-18-0, ಜೆರಾರ್ಡ್ ಎರಸ್‌ಮಸ್ 4-0-20-4, ಬೆನಾಡ್ ಸ್ಕೋಲ್ಜ್ 4-0-41-1

ನಮೀಬಿಯಾ: 18.2 ಓವರ್‌ಗಳಲ್ಲಿ 116
ಸ್ಟೀನ್‌ಕ್ಯಾಂಪ್ ಬಿ ವರುಣ್ 29 (20ಎ, 4x3, 6x1)
ಫ್ರೈಲಿಂಕ್ ಸಿ ದುಬೆ ಬಿ ಅರ್ಷದೀಪ್ 22 (15ಎ, 4x3, 6x1)
ಈಟನ್ ಸಿ ಅಕ್ಷರ್ ಬಿ ವರುಣ್ 13 (13ಎ, 4x1)
ಎರಸ್‌ಮಸ್ ಸಿ ತಿಲಕ್ ಬಿ ಅಕ್ಷರ್ 18 (11ಎ, 6x2)
ಜೆ.ಜೆ. ಸ್ಮಿತ್ ಬಿ ವರುಣ್ 0 (2ಎ)
ಗ್ರೀನ್ ಹಿಟ್‌ವಿಕೆಟ್ ಬಿ ದುಬೆ 11 (19ಎ)
ಕ್ರುಗರ್ ಸಿ ಬೂಮ್ರಾ ಬಿ ಅಕ್ಷರ್ 5 (10ಎ, 4x1)
ಟ್ರಂಪಲ್‌ಮ್ಯಾನ್ ಬಿ ಬೂಮ್ರಾ 6 (16ಎ)
ಸ್ಕೋಲ್ಜ್ ಸಿ ಅಕ್ಷರ್ ಬಿ ಹಾರ್ದಿಕ್ 4 (4ಎ, 4x1)
ಶಿಕೊಂಗೊ ಎಲ್‌ಬಿಡಬ್ಲ್ಯು ಬಿ ಹಾರ್ದಿಕ್ 0 (1ಎ)
ಹಿಂಗೊ ಔಟಾಗದೇ 0 (2ಎ)
ಇತರೆ: 8 (ಬೈ 1, ನೋಬಾಲ್ 3, ವೈಡ್ 4).
ವಿಕೆಟ್ ಪತನ: 1-33 (ಜಾನ್ ಫ್ರೈಲಿಂಕ್, 3.4), 2-67 (ಲಾರೆನ್ ಸ್ಟೀನ್‌ಕ್ಯಾಂಪ್, 7.1), 3-86 (ಲಾಫ್ಟಿ ಈಟನ್, 9.2), 4-86 (ಜೆ.ಜೆ.ಸ್ಮಿತ್, 9.4), 5-88 (ಜೆರಾರ್ಡ್ ಎರಸ್‌ಮಸ್, 10.1), 6-94 (ಮಲಾನ್ ಕ್ರುಗರ್, 12.3), 7-111 (ರುಬೆನ್ ಟ್ರಂಪಲ್‌ಮ್ಯಾನ್, 16.4), 8-116 (ಬೆನಾಡ್ ಸ್ಕೋಲ್ಜ್, 17.3), 9-116 (ಬೆನ್ ಶಿಕೊಂಗೊ, 17.4), 10-116 (ಝೇನ್ ಗ್ರೀನ್, 18.2).
ಬೌಲಿಂಗ್: ಹಾರ್ದಿಕ್ ಪಾಂಡ್ಯ 4-0-21-2, ಅರ್ಷದೀಪ್ ಸಿಂಗ್ 3-0-36-1, ಶಿವಂ ದುಬೆ 2.2-0-11-1, ಜಸ್‌ಪ್ರೀತ್ ಬೂಮ್ರಾ 4-0-20-1, ವರುಣ್ ಚಕ್ರವರ್ತಿ 2-0-7-3, ಅಕ್ಷರ್ ಪಟೇಲ್ 3-1-20-2.
ಪಂದ್ಯದ ಆಟಗಾರ: ಹಾರ್ದಿಕ್ ಪಾಂಡ್ಯ

ಫಲಿತಾಂಶ: ಭಾರತ ತಂಡಕ್ಕೆ 93 ರನ್‌ಗಳ ಜಯ

ಮೆಂಡಿಸ್, ರತ್ನಾಯಕೆ, ದಸುನ್ ಅರ್ಧಶತಕ

ಲಂಕಾ ಅಬ್ಬರ, ಒಮಾನ್ ತತ್ತರ

ಕ್ಯಾಂಡಿ (ಎಎಫ್‌ಪಿ): ಕುಸಲ್ ಮೆಂಡಿಸ್, ಪವನ್ ರತ್ನಾಯಕೆ ಮತ್ತು ದಸುನ್ ಶನಕ ಅವರ ಬಿರುಸಿನ ಅರ್ಧ ಶತಕಗಳ ನೆರವಿನಿಂದ ಶ್ರೀಲಂಕಾ ತಂಡ, ಪಲ್ಲೆಕೆಲೆ ಯಲ್ಲಿ ಗುರುವಾರ ನಡೆದ ಟಿ20 ವಿಶ್ವಕಪ್ 'ಬಿ' ಗುಂಪಿನ ಲೀಗ್ ಪಂದ್ಯದಲ್ಲಿ ದುರ್ಬಲ ಒಮಾನ್ ತಂಡವನ್ನು 105 ರನ್‌ಗಳಿಂದ ನಿರಾಯಾಸವಾಗಿ ಸೋಲಿಸಿತು.

ಈ ಮೂವರಲ್ಲಿ, ನಾಯಕ ಶನಕ ಕೇವಲ 19 ಎಸೆತಗಳಲ್ಲಿ 50 ರನ್ ಬಾರಿಸಿ, ಶ್ರೀಲಂಕಾ ಪರ ಟಿ20 ಅಂತರ ರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತಿ ವೇಗದ ಅರ್ಧ ಶತಕ ದಾಖಲಿಸಿದ ಗೌರವಕ್ಕೆ ಪಾತ್ರರಾದರು. ಜಂಟಿ ಆತಿಥೇಯ ತಂಡ 5 ವಿಕೆಟ್‌ಗೆ 225 ರನ್ ಹೊಡೆಯಿತು. ಇದು ಹಾಲಿ ಟಿ20 ವಿಶ್ವಕಪ್‌ನಲ್ಲಿ ದಾಖಲಾದ ಗರಿಷ್ಠ ಮೊತ್ತವೆನಿಸಿತು. ಉತ್ತರವಾಗಿ ಒಮಾನ್ 9 ವಿಕೆಟ್‌ಗೆ 120 ರನ್ ಗಳಿಸಿ ಸುಲಭವಾಗಿ ಶರಣಾಯಿತು.

ಶನಕ ಅವರು ಐದು ಭರ್ಜರಿ ಸಿಕ್ಸರ್‌ಗಳ ಜೊತೆ ಎರಡು ಬೌಂಡರಿಗಳನ್ನು ಬಾರಿಸಿದರು. ಅವರು ಮೂರು ವರ್ಷ ಹಿಂದೆ ಪುಣೆಯಲ್ಲಿ ಭಾರತದ ವಿರುದ್ಧ 29 ಎಸೆತಗಳಲ್ಲಿ 50 ರನ್ ಗಳಿಸಿದ್ದು ಇದುವರೆಗಿನ ವೇಗದ ಅರ್ಧಶತಕ ಎನಿಸಿತ್ತು. ಈ ಮೈಲಿಗಲ್ಲು ತಲುಪಿದ ತಕ್ಷಣ ಅವರು ಜಿತೇನ್ ರಾಮನಂದಿ ಬೌಲಿಂಗ್‌ನಲ್ಲಿ ಬೌಂಡರಿಗೆರೆಯ ಬಳಿ ಕ್ಯಾಚಿತ್ತರು.

ಪಥುಮ್ ನಿಸಾಂಕ (13) ಮತ್ತು ಕಮಿಲ್ ಮಿಶಾರ (8) ವಿಫಲರಾದರೂ ಲಂಕಾದ ರನ್‌ವೇಗ ತಗ್ಗಲಿಲ್ಲ. ಕುಸಲ್ ಮೆಂಡಿಸ್ 45 ಎಸೆತಗಳಲ್ಲಿ 7 ಬೌಂಡರಿಗಳಿದ್ದ 61 ರನ್ ಗಳಿಸಿದರೆ, ಪವನ್ ರತ್ನಾಯಕೆ ಕೇವಲ 28 ಎಸೆತಗಳಲ್ಲಿ 60 ರನ್ (4x8, 6x1) ಸಿಡಿಸಿದರು. ರತ್ನಾಯಕೆ ಮತ್ತು ಮೆಂಡಿಸ್ ಮೂರನೇ ವಿಕೆಟ್‌ಗೆ 94 ರನ್ ಜೊತೆಯಾಟದ ಉತ್ತಮ ಮೊತ್ತಕ್ಕೆ ಅಡಿಪಾಯ ಹಾಕಿಕೊಟ್ಟಿದ್ದರು.

ಸ್ಪಿನ್ನರ್ ವನಿಂದು ಹಸರಂಗ ಗಾಯಾ ಳಾಗಿದ್ದರೂ, ಲಂಕನ್ನರ ಬೌಲಿಂಗ್ ಪಡೆ ಒಮಾನ್ ಆಟಗಾರರಿಗೆ ಹೋರಾಟದ ಅವಕಾಶ ನೀಡಲಿಲ್ಲ. ಒಮಾನ್ ಪರ ಏಕಾಂಗಿಯಾಗಿ ಹೋರಾಟ ನಡೆಸಿದ ಮೊಹಮ್ಮದ್ ನದೀಂ ಅಜೇಯ 53 ರನ್ ಗಳಿಸಿದರು. 43 ವರ್ಷ ವಯಸ್ಸಿನ ನದೀಂ, ಟಿ20 ವಿಶ್ವಕಪ್‌ನಲ್ಲಿ ಅರ್ಧ ಶತಕ ಬಾರಿಸಿದ ಅತಿ ಹಿರಿಯ ಆಟಗಾರ ಎನಿಸಿದರು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 20 ಓವರುಗಳಲ್ಲಿ 5 ವಿಕೆಟ್‌ಗೆ 225 (ಕುಸಲ್ ಮೆಂಡಿಸ್ 61, ಪವನ್ ರತ್ನಾಯಕೆ 60, ದಸುನ್ ಶನಕ 50; ಜಿತೇನ್ ರಾಮನಂದಿ 41ಕ್ಕೆ2); ಒಮಾನ್: 20 ಓವರುಗಳಲ್ಲಿ 9 ವಿಕೆಟ್‌ಗೆ 120 (ಮೊಹಮ್ಮದ್ ನದೀಮ್ ಔಟಾಗದೇ 53, ವಸೀಂ ಅಲಿ 27; ದುಶ್ಮಂತ ಚಮೀರ 19ಕ್ಕೆ2, ಮಹೀಷ ತೀಕ್ಷಣ 11ಕ್ಕೆ2). ಪಂದ್ಯದ ಆಟಗಾರ: ಪವನ್ ರತ್ನಾಯಕೆ.


ಶ್ರೀಲಂಕಾ ತಂಡದ ಪವನ್ ರತ್ನಾಯಕೆ ಎಎಫ್‌ಪಿ ಚಿತ್ರ

ಜಿಂಬಾಬ್ವೆ ವಿರುದ್ಧ ಬಿ ಗುಂಪಿನ ಪಂದ್ಯ ಇಂದು

ಆಸ್ಟ್ರೇಲಿಯಾಕ್ಕೆ ಮಾರ್ಷ್ ಫಿಟ್ನೆಸ್ ಚಿಂತೆ

ಕೊಲಂಬೊ (ಪಿಟಿಐ): ಆಸ್ಟ್ರೇಲಿಯಾ ತಂಡವು ಶುಕ್ರವಾರ ಟಿ20 ವಿಶ್ವಕಪ್ 'ಬಿ ಗುಂಪಿನ ಪಂದ್ಯದಲ್ಲಿ ಅಚ್ಚರಿಯ ಫಲಿತಾಂಶ ನೀಡಬಲ್ಲ ಜಿಂಬಾಬ್ವೆ ತಂಡವನ್ನು ಎದುರಿಸಲಿದೆ.

ಈ ಪಂದ್ಯ ಗೆದ್ದು ಸೂಪರ್ ಎಂಟರ ಹಂತ ತಲುಪುವ ಗುರಿಯಲ್ಲಿರುವ ಆಸ್ಟ್ರೇಲಿಯಾ ತಂಡವು ನಾಯಕ ಮಿಚೆಲ್ ಮಾರ್ಷ್ ಅವರ ಫಿಟ್ನೆಸ್ ಮೇಲೆ ನಿಗಾ ಇಟ್ಟಿದೆ.

ಐರ್ಲೆಂಡ್ ತಂಡದ ವಿರುದ್ಧ ಬುಧವಾರ ವಿಶ್ವಕಪ್‌ನ ಮೊದಲ ಪಂದ್ಯ ಆಡಿದ್ದ ಆಸ್ಟ್ರೇಲಿಯಾ ತಂಡದಲ್ಲಿ ಆಡಲು ಮಾರ್ಷ್ ಅವರಿಗೆ ಸಾಧ್ಯವಾಗಿರಲಿಲ್ಲ. ಅವರಿಗೆ ಆರೋಗ್ಯದ ಸಮಸ್ಯೆಯಿದ್ದು, ಚೇತರಿಕೆಗೆ ಸಮಯ ತಗಲುತ್ತಿದೆ. ಹೀಗಾಗಿ ಮಾಜಿ ನಾಯಕ ಸ್ಟೀವ್ ಸ್ಮಿತ್ ಅವರನ್ನು ತಂಡ ಕರೆಸಿಕೊಂಡಿದೆ.

ಮಾರ್ಷ್ ಆಡದಿದ್ದರೂ, ಆಸ್ಟ್ರೇಲಿಯಾ ತಂಡ ಕೊಲಂಬೊದಲ್ಲಿ ನಡೆದ ಪಂದ್ಯದಲ್ಲಿ ಆಲ್‌ರೌಂಡ್ ಪ್ರದರ್ಶನ ನೀಡಿ 67 ರನ್‌ಗಳಿಂದ ಸುಲಭವಾಗಿ ಜಯಗಳಿಸಿತ್ತು. ಮೊದಲು ಆಡಿ 182 ರನ್ ಪೇರಿಸಿದ ಮೇಲೆ ವೇಗದ ಬೌಲರ್ ನೇಥನ್ ಎಲಿಸ್ ಮತ್ತು ಸ್ಪಿನ್ನರ್ ಆ್ಯಡಂ ಜಂಪಾ ಅವರು ತಲಾ ನಾಲ್ಕು ವಿಕೆಟ್ ಉರುಳಿಸಿ ಗೆಲುವನ್ನು ತ್ವರಿತಗೊಳಿಸಿದ್ದರು.

ಆದರೆ ಅನುಭವಿ ಬ್ಯಾಟರ್‌ಗಳಾದ ಟ್ರಾವಿಸ್ ಹೆಡ್, ಗ್ಲೆನ್ ಮ್ಯಾಕ್ಸ್‌ವೆಲ್ ಅವರಿಂದ ತಂಡವು ಹೆಚ್ಚಿನ ಕೊಡುಗೆ ನಿರೀಕ್ಷಿಸುತ್ತಿದೆ. ಸ್ಮಿತ್ ಅವರು ಬಿಗ್ ಬ್ಯಾಷ್‌ನಲ್ಲಿ ಸಿಡ್ನಿ ಸಿಕ್ಸರ್ ಪರ ಉತ್ತಮವಾಗಿ ಆಡಿರುವುದು ತಂಡಕ್ಕೆ ಸಮಾಧಾನ ಮೂಡಿಸಿದೆ. 6 ಇನಿಂಗ್ಸ್ ಗಳಲ್ಲಿ ಅವರು 299 ರನ್ ಕಲೆಹಾಕಿದ್ದರು.

ಸಿಕಂದರ್ ರಝಾ ನಾಯಕತ್ವದ ಜಿಂಬಾಬ್ವೆ ಈ ಹಿಂದೆ ಪ್ರಬಲ ತಂಡಗಳಿಗೆ ಬಿಸಿಮುಟ್ಟಿಸಿದ ನಿದರ್ಶನಗಳು ಇರುವ ಕಾರಣ ಆಸ್ಟ್ರೇಲಿಯಾ ತಂಡವು ಅನುಭವಿ ಆಟಗಾರರಿಂದ ಉತ್ತಮ ಪ್ರದರ್ಶನ ನಿರೀಕ್ಷಿಸಿದೆ. ಒಮಾನ್ ತಂಡ ದುರ್ಬಲವಾದರೂ, ಮೊದಲ ಪಂದ್ಯದಲ್ಲಿ ಜಿಂಬಾಬ್ವೆ ಆ ತಂಡವನ್ನು ಸದೆಬಡಿದ ರೀತಿ ಗಮನ ಸೆಳೆದಿದೆ.


ಮಿಚೆಲ್ ಮಾರ್ಷ್

ಇಂದಿನ ಪಂದ್ಯ

ಆಸ್ಟ್ರೇಲಿಯಾ V/s ಜಿಂಬಾಬ್ವೆ
ತಾಣ: ಕೊಲಂಬೊ, ಬೆಳಿಗ್ಗೆ 11ರಿಂದ
ಕೆನಡಾ V/s ಯುಎಇ
ತಾಣ: ದೆಹಲಿ, ಮಧ್ಯಾಹ್ನ 3ರಿಂದ
ಅಮೆರಿಕ V/s ನೆದರ್ಲೆಂಡ್ಸ್
ತಾಣ: ಮುಂಬೈ, ರಾತ್ರಿ 7ರಿಂದ
ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ಟಿ20 ವಿಶ್ವಕಪ್: ಪಾಯಿಂಟ್ಸ್ ಪಟ್ಟಿ

	ತಂಡಗಳು	ಪಂದ್ಯಗಳು	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಗುಂಪು ಎ						
1	ಭಾರತ	2	2	0	4	3.050
2	ಪಾಕಿಸ್ತಾನ	2	2	0	4	0.932
3	ನೆದರ್ಲೆಂಡ್ಸ್	2	1	1	2	0.356
4	ಅಮೆರಿಕ	2	0	2	0	-1.525
5	ನಮೀಬಿಯಾ	2	0	2	0	-2.884
ಗುಂಪು ಬಿ						
1	ಶ್ರೀಲಂಕಾ	2	2	0	4	3.125
2	ಆಸ್ಟ್ರೇಲಿಯಾ	1	1	0	2	3.350
3	ಜಿಂಬಾಬ್ವೆ	1	1	0	2	2.702
4	ಐರ್ಲೆಂಡ್	2	0	2	0	-2.175
5	ಒಮಾನ್	2	0	2	0	-4.306
ಗುಂಪು ಸಿ						
1	ವೆಸ್ಟ್ ಇಂಡೀಸ್	2	2	0	4	1.625
2	ಸ್ಕಾಟ್ಲೆಂಡ್	2	1	1	2	0.950
3	ಇಟಲಿ	2	1	1	2	-0.352
4	ಇಂಗ್ಲೆಂಡ್	2	1	1	2	-0.650
5	ನೇಪಾಳ	2	0	2	0	-1.854
ಗುಂಪು ಡಿ						
1	ನ್ಯೂಜಿಲೆಂಡ್	2	2	0	4	1.919
2	ದಕ್ಷಿಣ ಆಫ್ರಿಕಾ	2	2	0	4	1.425
3	ಅಫ್ಗಾನಿಸ್ತಾನ	2	0	2	0	-0.555
4	ಯುಎಇ	1	0	1	0	-2.763
5	ಕೆನಡಾ	1	0	1	0	-2.850

ಕ್ರಿಶನ್ ಅಮೋಘ ದಾಳಿ, ಮೊಸ್ಕಾ ಸಹೋದರರ ಮಿಂಚು

ಇಟಲಿ ತಂಡಕ್ಕೆ ಚೊಚ್ಚಲ ಜಯ

ಮುಂಬೈ (ಪಿಟಿಐ): ಲೆಗ್‌ಬ್ರೇಕ್ ಬೌಲರ್ ಕ್ರಿಶನ್ ಕಲುಗಮಗೆ ಪರಿಣಾಮಕಾರಿ ದಾಳಿ ಹಾಗೂ ಮೊಸ್ಕಾ ಸಹೋದರರ ಅಮೋಘ ಬ್ಯಾಟಿಂಗ್‌ನಿಂದಾಗಿ ಇಟಲಿ ತಂಡವು ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಚೊಚ್ಚಲ ಜಯ ದಾಖಲಿಸಿತು.

ಗುರುವಾರ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಸಿ ಗುಂಪಿನ ಪಂದ್ಯದಲ್ಲಿ ಇಟಲಿ 10 ವಿಕೆಟ್‌ಗಳ ಭರ್ಜರಿ ಜಯ ದಾಖಲಿಸಿತು.

ಇದೇ ಮೊದಲ ಬಾರಿ ವಿಶ್ವಕಪ್ ಟೂರ್ನಿಯಲ್ಲಿ ಆಡಲು ಅರ್ಹತೆ ಪಡೆದಿರುವ ಇಟಲಿ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸ್ಪಿನ್ನರ್ ಕ್ರಿಶನ್ (18ಕ್ಕೆ3) ಅವರ ದಾಳಿಯ ಮುಂದೆ ನೇಪಾಳ ತಂಡವು 19.3 ಓವರ್‌ಗಳಲ್ಲಿ 123 ರನ್‌ಗಳ ಸಣ್ಣ ಮೊತ್ತ ಗಳಿಸಿತು. ಕ್ರಿಶನ್ ಅವರು ಶ್ರೀಲಂಕಾದವರು. ಇಟಲಿಯಲ್ಲಿ ನೆಲೆಸಿದ್ದಾರೆ.

ಈಚೆಗೆ ಇಂಗ್ಲೆಂಡ್ ವಿರುದ್ಧ ಅಮೋಘ ಆಟವಾಡಿದ್ದ ನೇಪಾಳ ತಂಡದ ಬ್ಯಾಟರ್‌ಗಳು ಇಟಲಿಯ ಮುಂದೆ ವಿಫಲರಾದರು. ಆರಿಫ್ ಶೇಖ್ (27 ರನ್) ಅವರದ್ದೇ ವೈಯಕ್ತಿಕ ಗರಿಷ್ಠ ಸ್ಕೋರ್ ಎನಿಸಿತು.

ಈ ಗುರಿಯನ್ನು ಬೆನ್ನಟ್ಟಿದ ಇಟಲಿ ತಂಡವು ಕೇವಲ 12.4 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 124 ರನ್ ಗಳಿಸಿತು. ಯಾವುದೇ ಧಾವಂತಕ್ಕೊಳ-ಗಾದ ಆರಂಭಿಕ ಜೋಡಿ ಮತ್ತು ಸಹೋದರರಾದ ಜಸ್ಟಿನ್ ಮೊಸ್ಕಾ (ಅಜೇಯ 60; 44ಎ, 4X5, 6X3) ಮತ್ತು ಅಂಥೋಣಿ ಮೊಸ್ಕಾ (ಅಜೇಯ 62; 32ಎ, 4X3, 6X6) ಅವರು ತಂಡವನ್ನು ಗೆಲುವಿನ ದಡ ಸೇರಿಸಿದರು. 34 ವರ್ಷದ ಅಂಥೋಣಿ ಮತ್ತು 31 ವರ್ಷದ ಜಸ್ಟಿನ್ ಅವರು ಮುರಿಯದ ಮೊದಲ ವಿಕೆಟ್ ಜೊತೆಯಾಟದಲ್ಲಿ ಕೇವಲ 76 ಎಸೆತಗಳಲ್ಲಿ ಗೆಲುವಿನ ಮೊತ್ತ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ನೇಪಾಳ: 19.3 ಓವರ್‌ಗಳಲ್ಲಿ 123 (ಆಸಿಫ್ ಶೇಖ್ 20, ರೋಹಿತ್ ಪಾಡೆಲ್ 23, ಆರಿಫ್ ಶೇಖ್ 27, ಕೆ.ಸಿ. ಕರಣ್ ಔಟಾಗದೇ 18, ಬೆನ್ ಮ್ಯಾನೇಂಟಿ 9ಕ್ಕೆ2, ಕ್ರಿಷನ್ ಕಲುಗಮಗೆ 18ಕ್ಕೆ3) ಇಟಲಿ: 12.4 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 124 (ಜಸ್ಟಿನ್ ಮೊಸ್ಕಾ ಔಟಾಗದೇ 60, ಅಂಥೋಣಿ ಮೊಸ್ಕಾ ಔಟಾಗದೇ 62) ಫಲಿತಾಂಶ:ಇಟಲಿ ತಂಡಕ್ಕೆ 10 ವಿಕೆಟ್ ಜಯ. ಪಂದ್ಯದ ಆಟಗಾರ: ಕ್ರಿಷನ್ ಕಲುಗಮಗೆ.


ಇಟಲಿ ತಂಡದ ಆಟಗಾರ ಕ್ರಿಶನ್ ಕಲುಗಮಗೆ
ಎಎಫ್‌ಪಿ ಚಿತ್ರ

ಪಾಕಿಸ್ತಾನ ಎದುರಿನ ಪಂದ್ಯಕ್ಕೆ ಅಭಿಷೇಕ್ ಶರ್ಮಾ ಅನುಮಾನ?

ಪ್ರಜಾವಾಣಿ ವಾರ್ತೆ

ನವದೆಹಲಿ: ಹೊಟ್ಟೆನೋವಿನಿಂದ ಚೇತರಿಸಿಕೊಳ್ಳುತ್ತಿರುವ ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಅವರು ಭಾನುವಾರ ನಡೆಯಲಿರುವ ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಆಡುವುದು ಖಚಿತವಾಗಿಲ್ಲ.

ಮೂರು ದಿನಗಳ ನಂತರ ಅವರು ಗುರುವಾರ ತಂಡದೊಂದಿಗೆ ಕಾಣಿಸಿಕೊಂಡರು. ಇದು ತಂಡಕ್ಕೆ ಆಶಾದಾಯಕವಾಗಿದೆ. ಅವರು ಸೋಮವಾರ ಹೊಟ್ಟೆನೋವಿನಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದರು. ಬುಧವಾರ ಮತ್ತೆ ತಂಡಕ್ಕೆ ಮರಳಿದ್ದರು.

ಆದರೆ ತರಬೇತಿ, ತಾಲೀಮಿನಲ್ಲಿ ಭಾಗಿಯಾಗಲಿಲ್ಲ. ನಮೀಬಿಯಾ ಎದುರಿನ ಪಂದ್ಯಕ್ಕೂ ಮುನ್ನ ಅವರು ಕ್ರೀಡಾಂಗಣದಲ್ಲಿ ಕಾಣಿಸಿಕೊಂಡರು. ನಿಧಾನಗತಿಯಲ್ಲಿ ಮತ್ತು ಎಚ್ಚರಿಕೆಯಿಂದ ನಡೆಯುತ್ತಿದ್ದರು. ನಿಸ್ತೇಜರಾಗಿ ಕಾಣುತ್ತಿದ್ದರು. ರಾಷ್ಟ್ರಗೀತೆ ನುಡಿಸುವಾಗ ಅವರು ತಂಡದೊಂದಿಗೆ ಸೇರಿಕೊಳ್ಳಲಿಲ್ಲ.

'ಅಭಿಷೇಕ್ ಶರ್ಮಾ ಅವರು ಇನ್ನೂ ಚೇತರಿಸಿಕೊಳ್ಳುತ್ತಿದ್ದಾರೆ. ಇಂದಿನ ಪಂದ್ಯಕ್ಕೆ ಅವರು ಆಯ್ಕೆಗೆ ಲಭ್ಯರಿರಲಿಲ್ಲ. ಬಿಸಿಸಿಐ ವೈದ್ಯಕೀಯ ತಂಡವು ನಿಗಾ ವಹಿಸಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಟಾಸ್ ಸಂದರ್ಭದಲ್ಲಿ ಕಾಮೆಂಟೇಟರ್ ರವಿಶಾಸ್ತ್ರಿ ಅವರೊಂದಿಗೆ ಮಾತನಾಡಿದ ನಾಯಕ ಸೂರ್ಯಕುಮಾರ್ ಯಾದವ್, 'ಅವರು (ಅಭಿಷೇಕ್) ಒಂದು ಅಥವಾ ಎರಡು ಪಂದ್ಯಗಳಿಗೆ ವಿಶ್ರಾಂತಿ ಪಡೆಯಬಹುದು. ಆ ಮೂಲಕ ಪೂರ್ಣ ಚೇತರಿಸಿಕೊಳ್ಳಬಹುದು' ಎಂದರು.


ಅಭಿಷೇಕ್ ಶರ್ಮಾ

ಮೊಹಮ್ಮದ್ ನಬಿಗೆ ದಂಡ



ಅಹಮದಾಬಾದ್ (ಪಿಟಿಐ): ದಕ್ಷಿಣ ಆಫ್ರಿಕಾ ವಿರುದ್ಧ ರೋಚಕ ಪಂದ್ಯದ ವೇಳೆ ಅಂಪೈರ್ ನಿರ್ಧಾರ ಪ್ರಶ್ನಿಸಿದ ಅಫ್ಗಾನಿಸ್ತಾನದ ಅನುಭವಿ ಆಲ್‌ರೌಂಡರ್ ಮೊಹಮ್ಮದ್ ನಬಿ ಅವರಿಗೆ ಪಂದ್ಯ ಸಂಭಾವನೆಯ ಶೇ 15ರಷ್ಟು ಮೊತ್ತವನ್ನು ದಂಡವನ್ನಾಗಿ ವಿಧಿಸಲಾಗಿದೆ.

ಬುಧವಾರ ನಡೆದ ಪಂದ್ಯದಲ್ಲಿ ಅಫ್ಗಾನಿಸ್ತಾನ ಇನಿಂಗ್ಸ್‌ನ 14ನೇ ಓವರ್ ಆರಂಭದಲ್ಲಿ ದಕ್ಷಿಣ ಆಫ್ರಿಕಾದ ವೇಗದ ಬೌಲರ್ ಲುಂಗಿ ಎನ್‌ಗಿಡಿ ಅವರ ರಿಸ್ಟ್ ಬ್ಯಾಂಡ್‌ಗೆ ಸಂಬಂಧಿಸಿದಂತೆ ನಬಿ ಅವರು ಅಂಪೈರ್ ಜೊತೆ ಕೆಲಹೊತ್ತು ವಾಗ್ವಾದ ನಡೆಸಿದ್ದರು.

'ನಬಿ ಅವರು ಐಸಿಸಿ ಶಿಸ್ತುಸಂಹಿತೆಯ 2.4ನೇ ವಿಧಿ ಉಲ್ಲಂಘಿಸಿದ್ದು ಸಾಬೀತಾಗಿದೆ. ಇದು ಅಂತರರಾಷ್ಟ್ರೀಯ ಪಂದ್ಯದಲ್ಲಿ ಅಂಪೈರ್ ಸೂಚನೆಗೆ ಅವಿಧೇಯತೆ ಪ್ರದರ್ಶನಕ್ಕೆ ಸಂಬಂಧಿಸಿದೆ' ಎಂದು ಐಸಿಸಿ ಹೇಳಿಕೆ ತಿಳಿಸಿದೆ. ನಬಿ ಅವರಿಗೆ ಶಿಸ್ತುದಾಖಲೆಗೆ 1 ಡಿಮೆರಿಟ್ ಪಾಯಿಂಟ್ ಸಹ ವಿಧಿಸಲಾಗಿದೆ.

ಫುಟ್‌ಬಾಲ್: ಟರ್ಕಿಗೆ ಮಣಿದ ಭಾರತ

ನವದೆಹಲಿ (ಪಿಟಿಐ): ಭಾರತ 17 ವರ್ಷದೊಳಗಿನ ಪುರುಷರ ಫುಟ್‌ಬಾಲ್ ತಂಡವು ಗುರುವಾರ ನಡೆದ ಎರಡನೇ ಸ್ನೇಹಪರ ಪಂದ್ಯದಲ್ಲಿ 1-6ರಿಂದ ಟರ್ಕಿ ತಂಡಕ್ಕೆ ಮಣಿಯಿತು.

ಮೊದಲ ಪಂದ್ಯದಲ್ಲಿ ಭಾರತ 0-1 ಅಂತರದಿಂದ ಸೋತಿತ್ತು. ಟರ್ಕಿಯ ಅಂಟಲ್ಯದಲ್ಲಿ ನಡೆದ ಎರಡನೇ ಪಂದ್ಯದಲ್ಲೂ ನಿರಾಸೆ ಅನುಭವಿಸಿತು. ಭಾರತದ ಪರ ಏಕೈಕ ಗೋಲನ್ನು ಡೆನ್ನಿ ಸಿಂಗ್ ವಾಂಗ್ಖೇಮ್ (47ನೇ ನಿಮಿಷ) ದಾಖಲಿಸಿದರು.

ಸೌದಿ ಅರೇಬಿಯಾದಲ್ಲಿ ಮೇ ತಿಂಗಳಲ್ಲಿ ನಡೆಯಲಿರುವ ಎಎಫ್‌ಸಿ 17 ವರ್ಷದೊಳಗಿನ ಏಷ್ಯನ್ ಕಪ್ ಟೂರ್ನಿಯ ಸಿದ್ಧತೆಯ ಭಾಗವಾಗಿ ಈ ಪಂದ್ಯಗಳು ನಡೆದಿತ್ತು.

ಏಷ್ಯನ್ ಕಪ್: ಪ್ರಬಲ ಗುಂಪಿನಲ್ಲಿ ಭಾರತ

ನವದೆಹಲಿ (ಪಿಟಿಐ): ಭಾರತ ತಂಡವು, ಎಎಫ್‌ಸಿ 17 ವರ್ಷದೊಳಗಿನವರ ಏಷ್ಯನ್ ಕಪ್ ಟೂರ್ನಿಯಲ್ಲಿ 'ಡಿ' ಗುಂಪಿನಲ್ಲಿ ಸ್ಥಾನ ಪಡೆದಿದೆ. ಡ್ರಾ ಸಮಾರಂಭ ಕ್ವಾಲಾಲಂಪುರದಲ್ಲಿರುವ ಎಎಫ್‌ಸಿ ಹೌಸ್‌ನಲ್ಲಿ ಗುರುವಾರ ನಡೆಯಿತು.

ಭಾರತದ ಜೊತೆಗೆ ಉಜ್ಬೇಕಿಸ್ತಾನ, ಆಸ್ಟ್ರೇಲಿಯಾ ಮತ್ತು ಉತ್ತರ ಕೊರಿಯಾ ತಂಡಗಳೂ ಡಿ ಗುಂಪಿನಲ್ಲಿವೆ. ಟೂರ್ನಿಯು ಮೇ 5 ರಿಂದ 22ರವರೆಗೆ ಸೌದಿ ಅರೇಬಿಯಾದಲ್ಲಿ ನಡೆಯಲಿದೆ.

ಅರ್ಹತಾ ಸುತ್ತಿನಲ್ಲಿ ಇರಾನ್, ಲೆಬನಾನ್, ಪ್ಯಾಲಸ್ತೀನ್ ಮತ್ತು ತೈವಾನ್ ತಂಡಗಳಿಗಿಂತ ಮೇಲಿನ ಸ್ಥಾನ ಪಡೆದ ಆಧಾರದಲ್ಲಿ ಭಾರತ ತಂಡವು ಈ ಟೂರ್ನಿಯ ಇತಿಹಾಸದಲ್ಲಿ 10ನೇ ಬಾರಿ ಆಡುವ ಅವಕಾಶ ಪಡೆಯಿತು.

'ಬ್ಲೂ ಕೋಲ್ಟ್ಸ್' ತಂಡವು ಆಸ್ಟ್ರೇಲಿಯಾ ವಿರುದ್ಧ ಆಡುವ ಮೂಲಕ ಅಭಿಯಾನ ಆರಂಭಿಸಲಿದೆ. ಇದರ ನಂತರ ಉಜ್ಬೇಕಿಸ್ತಾನ ಮತ್ತು ಕೊರಿಯಾ ವಿರುದ್ಧ ಆಡಲಿದೆ.